ವಿಶ್ವವಾಣಿ
ವಿಶ್ವಾಸವೇ ವಿಶ್ವ

ಬೆಂಗಳೂರಿನಲ್ಲಿ ಕೂಲಿ ಧ್ಯಾನ

ಸೂಪರ್‌ಸ್ಟಾರ್ ರಜನಿಕಾಂತ್ ಅವರ ಬಹು ತಾರಾಗಣದ ಚಿತ್ರ 'ಕೂಲಿ' ಇಂದು ವಿಶ್ವಾದ್ಯಂತ ತೆರೆ ಕಾಣಲಿದೆ. ಈ ಮಧ್ಯೆ, ಬುಧವಾರ ಸಂಜೆ ರಜನಿಕಾಂತ್ ಬೆಂಗಳೂರಿನಲ್ಲಿ ಕಾಣಿಸಿಕೊಂಡು ಅಭಿಮಾನಿಗಳಲ್ಲಿ ಪುಳಕ ಮೂಡಿಸಿದ್ದಾರೆ. ರಜನಿಕಾಂತ್ ಬೆಂಗಳೂರಿನ ರಾಮಕೃಷ್ಣ ಮಠಕ್ಕೆ ಭೇಟಿ ನೀಡಿ, ಅಲ್ಲಿನ ಪ್ರಶಾಂತ ವಾತಾವರಣದಲ್ಲಿ ಧ್ಯಾನಸ್ಥರಾಗಿ ಪ್ರಾರ್ಥನೆ ಸಲ್ಲಿಸಿದರು. ಬೆಂಗಳೂರಿನ ಜಿಟಿಜಿಟಿ ಮಳೆಯ ಮಧ್ಯೆ ಯಾವ ಸದ್ದು ಗದ್ದಲಗಳಿಲ್ಲದೆ ರಜನಿ ಆಶ್ರಮಕ್ಕೆ ಭೇಟಿ ನೀಡಿ ತೆರಳಿದ್ದಾರೆ.

ವ್ಯಕ್ತಿತ್ವವಿರುವುದು ಮನಸ್ಸಿನ ವಿಸ್ತಾರದಲ್ಲಿ, ದೇಹದ ಗಾತ್ರದಲ್ಲಲ್ಲ

ನೂರೆಂಟು ವಿಶ್ವ
ವಿಶ್ವೇಶ್ವರ ಭಟ್ 6

ಶಾಪದ ಅಗ್ನಿಕುಂಡದಲ್ಲಿ ಅರಳಿದ ಕೆಂಡಗಳು

ಕಾಡುದಾರಿ
ಹರೀಶ್ ಕೇರ 7

ದಾರಿದೀಪೋಕ್ತಿ

ಬೆಳಗ್ಗೆ ಎದ್ದ ತಕ್ಷಣ ಯೋಚಿಸುವ ಒಂದು ಸಕಾರಾತ್ಮಕ ಚಿಂತನೆ, ಆ ನಿಟ್ಟಿನಲ್ಲಿ ತೆಗೆದುಕೊಳ್ಳುವ ಒಂದು ನಿರ್ಧಾರ, ಇಡೀ ದಿನವನ್ನು ಅತ್ಯಂತ ಫಲದಾಯಕವಾಗಿ ಪರಿವರ್ತಿಸಬಲ್ಲುದು. ಬೆಳಗಿನ ಉತ್ತಮ ಯೋಚನೆ ಆ ದಿನವನ್ನು ಸಾರ್ಥಕವಾಗಿಸಬಲ್ಲುದು.

ವಕ್ರತುಂಡೋಕ್ತಿ



ಪ್ರಾಣಿ ಮತ್ತು ಮನುಷ್ಯರು ಬೇರೆ ಅಲ್ಲ. ಹುಲಿ ಮತ್ತು ಹೆಂಡತಿಯನ್ನು ಯಾವತ್ತೂ ಕೆಣಕಬಾರದು.

ಗೂಗಲ್ ಕ್ರೋಮ್ ಖರೀದಿಗೆ ಮುಂದಾದ ಭಾರತೀಯ

ದೆಹಲಿ: ಭಾರತ ಮೂಲದ ಐಟಿ ಕಂಪೆನಿ ಮುಖ್ಯ ನಿರ್ವಹಣಾಧಿಕಾರಿ ಅರವಿಂದ್ ಶ್ರೀನಿವಾಸ ಗೂಗಲ್ ಕ್ರೋಮ್ ಖರೀದಿಗೆ ಮುಂದಾಗಿದ್ದಾರೆ. ಈ ಸಂಬಂಧ ಗೂಗಲ್ ಕಂಪೆನಿಗೆ 3,450 ಕೋಟಿ ಡಾಲರ್ (3.02 ಲಕ್ಷ ಕೋಟಿ ರು) ನಗದು ನೀಡುವ ಪ್ರಸ್ತಾವವನ್ನು ಸಲ್ಲಿಸಿದ್ದಾರೆ. ತ.ನಾಡು ಮೂಲದ ಐಐಟಿ ಮದ್ರಾಸ್ ವಿದ್ಯಾರ್ಥಿ ಅರವಿಂದ್, ಈ ಮೊದಲು ಗೂಗಲ್ ಕಂಪೆನಿಯಲ್ಲಿ ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿ perplexity ಎಂಬ ಸ್ಟಾರ್ಟ್ ಅಪ್ ಕಂಪನಿ ಸ್ಥಾಪಿಸಿದ್ದರು. ಕೇವಲ 3 ವರ್ಷದ ಈ ಕಂಪನಿ ಈಗಾಗಲೇ ಶತಕೋಟಿ ಡಾಲರ್ ಮೌಲ್ಯಕ್ಕೆ ಬೆಳೆದು ನಿಂತಿದೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ವಿಧಾನಸಭೆಯಲ್ಲಿ ಬೀದಿ ನಾಯಿ ಕುರಿತು ಸ್ವಾರಸ್ಯಕರ ಚರ್ಚೆ



ಬುರುಡೆ ತನಿಖೆಗೆ ಹೊಸ ರೂಪ

ಮುಂದಿನ ಹೆಜ್ಜೆಯ ಬಗ್ಗೆ ಸಿಎಂ, ಪರಂ ಜತೆ ಎಸ್‌ಐಟಿ ಮುಖ್ಯಸ್ಥ ಮೊಹಂತಿ ಚರ್ಚೆ
ಹೊಸ ದೂರು, ಅಹವಾಲು ಬಂದರೆ, ಸೂಕ್ತ ಸಾಕ್ಷ್ಯ ಕೇಳಿ ಮುಂದುವರಿಯಲು ತೀರ್ಮಾನ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ರಾಜ್ಯದಲ್ಲಿ ದಿನದಿಂದ ದಿನಕ್ಕೆ ತೀವ್ರ ವಿರೋಧಕ್ಕೆ ಕಾರಣವಾಗುತ್ತಿರುವ ಧರ್ಮಸ್ಥಳ ಬುರುಡೆ ಪ್ರಕರಣದ ತನಿಖಾ ಸ್ವರೂಪವನ್ನು ಬದಲಾಯಿಸಲು ವಿಶೇಷ ತನಿಖಾ ತಂಡ ತೀರ್ಮಾನಿಸಿದ್ದು, ಹೊಸ ಗುಂಡಿ ಅಗೆಯುವ ಮೊದಲು ಪೂರ್ವಾಪರ ಯೋಚಿಸಲು ತೀರ್ಮಾನಿಸಿದ್ದಾರೆ.

ಕಳೆದ ಎರಡು ವಾರಗಳಿಂದ ಅನಾಮಧೇಯ ವ್ಯಕ್ತಿ ತೋರಿಸಿದ ಕಡೆಯಲ್ಲ ಗುಂಡಿ ಅಗೆದಿದ್ದ ಎಸ್‌ಐಟಿ ತಂಡಕ್ಕೆ ಯಾವುದೇ 'ಸಾಕ್ಷ್ಯ' ಸಿಕ್ಕಿಲ್ಲ. ಆದ್ದರಿಂದ ಇನ್ನು ಮುಂದೆ ಅನಾಮಧೇಯ ವ್ಯಕ್ತಿ ಅಥವಾ ಬೇರೆ ಯಾರೇ ಹೊಸ ಆರೋಪಗಳನ್ನು ಮಾಡಿದರೆ ಅದಕ್ಕೆ ಸೂಕ್ತ ದಾಖಲೆಗಳನ್ನು ಪಡೆದು, ಪರಿಶೀಲಿಸಿ ಬಳಿಕ ಕಾರ್ಯಚರಣೆ ನಡೆಸಲು ತೀರ್ಮಾನಿಸಿದ್ದಾರೆ. ಇದರೊಂದಿಗೆ ಎಸ್‌ಐಟಿ ತನಿಖಾ ತಂಡವನ್ನು ಇನ್ನು ಎಷ್ಟು ದಿನಗಳ ಕಾಲ ಮುಂದುವರಿಸಬೇಕು ಎನ್ನುವ ಬಗ್ಗೆ ಚರ್ಚೆಗಳು ನಡೆದಿವೆ ಎಂದು ಮೂಲಗಳು ತಿಳಿಸಿವೆ.

ವಿಶೇಷ ತನಿಖಾ ತಂಡದ ಮುಖ್ಯಸ್ಥ ಪ್ರಣಬ್ ಮೊಹಂತಿ ಅವರು ಬುಧವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹ ಸಚಿವ ಡಾ.ಜಿ. ಪರಮೇಶ್ವರ ಅವರನ್ನು ಭೇಟಿಯಾಗಿ ಚರ್ಚಿಸಿದರು. ಈ ವೇಳೆ ಮಧ್ಯಂತರ ವರದಿಯನ್ನು ಸಲ್ಲಿಸಲಿದ್ದಾರೆ ಎಂದು ಹೇಳಲಾಗಿತ್ತು. ಆದರೆ ಬುಧವಾರದ ಭೇಟಿಯಲ್ಲಿ ಯಾವುದೇ ಅಧಿಕೃತ ವರದಿಯನ್ನು ಸಲ್ಲಿಸಿಲ್ಲ. ಬದಲಿಗೆ ಮುಂದೆ ಯಾವ ರೀತಿಯಲ್ಲಿ ತನಿಖೆ ನಡೆಸಬೇಕು? ಎಂದು ಚರ್ಚಿಸಿದ್ದಾರೆ. ಒಂದು ಹಂತದಲ್ಲಿ ಎಸ್‌ಐಟಿಯನ್ನು ಸ್ಥಗಿತಗೊಳಿಸುವ ವಿಷಯದ ಬಗ್ಗೆಯೂ ಚರ್ಚೆಯಾಗಿದೆ. ಆದರೆ ಅನಾಮಧೇಯ ವ್ಯಕ್ತಿ ನ್ಯಾಯಾಧೀಶರ ಮುಂದೆ ಹೇಳಿಕೆ ದಾಖಲಿಸಿರುವುದರಿಂದ, ಏಕಾಏಕಿ ಈ ತೀರ್ಮಾನ ತೆಗೆದುಕೊಂಡರೆ ವ್ಯತಿರಿಕ್ತ ಪರಿಣಾಮ ಎದುರಿಸಬೇಕಾಗುತ್ತದೆ ಎನ್ನುವ ಆಯಾಮದಲ್ಲಿಯೂ ಚರ್ಚೆಗಳು ನಡೆದಿವೆ ಎಂದು ಹೇಳಲಾಗಿದೆ.

ಸರಕಾರದ ಮುಂದಿರುವ ಗೊಂದಲವೇನು?

- ವಿಶೇಷ ತನಿಖಾ ತಂಡಕ್ಕೆ ಇನ್ನಷ್ಟು ಸಮಯಾವಕಾಶ ನೀಡಬೇಕೆ ಬೇಡವೇ?
- ಸಾಕ್ಷ್ಯವಿಲ್ಲದೇ ತನಿಖೆ ಮುಂದುವರೆಸಿದರೆ ಭಕ್ತರ ಆಕ್ರೋಶಕ್ಕೆ ಗುರಿ ಸಾಧ್ಯತೆ
- ತೋರಿಸಿದ ಕಡೆಯಲ್ಲೆಲ್ಲ ಉತ್ಖನನ ಮಾಡಿದರೆ ತನಿಖೆ ಇನ್ನಷ್ಟು ವಿಳಂಬ ಸಾಧ್ಯತೆ
- ಅನಾಮಧೇಯ ವ್ಯಕ್ತಿ ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿರುವುದರಿಂದ, ಏಕಾಏಕಿ ನಿಲ್ಲಿಸಿದರೆ ಕೋರ್ಟ್ ಏನು ಹೇಳಬಹುದು ಎನ್ನುವ ಆತಂಕ

ಭಾನುವಾರ ಧರ್ಮಸ್ಥಳಕ್ಕೆ ಬಿಜೆಪಿ ನಿಯೋಗ

ಆಗಸ್ಟ್ 17ರಂದು ಧರ್ಮಸ್ಥಳಕ್ಕೆ ಬಿಜೆಪಿ ನಿಯೋಗ ತೆರಳಲು ತೀರ್ಮಾನಿಸಿದೆ. ಈ ಬಗ್ಗೆ ಮಾತನಾಡಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಪಕ್ಷದ ಶಾಸಕರು, ಹಿರಿಯರ ನೇತೃತ್ವದಲ್ಲಿ ಧರ್ಮಸ್ಥಳಕ್ಕೆ ಆ.17 ರಂದು ಭೇಟಿ ಕೊಟ್ಟು ಶ್ರೀ ಮಂಜುನಾಥೇಶ್ವರನ ದರ್ಶನ ಪಡೆದು ಬರಲಿದ್ದೇವೆ. ನಾವು ಬಿಜೆಪಿ ಕಾರ್ಯಕರ್ತರು ಎಂಬುದಕ್ಕಿಂತ ಹೆಚ್ಚಾಗಿ ಧರ್ಮಸ್ಥಳ ಶ್ರೀ ಮಂಜುನಾಥೇಶ್ವರನ ಭಕ್ತರಾಗಿ ಅಲ್ಲಿಗೆ ತೆರಳಲಿದ್ದೇವೆ. ಬಿಜೆಪಿ ನಿಲುವು ಸ್ಪಷ್ಟವಿದೆ. ಎಸ್‌ಐಟಿ ತನಿಖೆ ಶೀಘ್ರದಲ್ಲಿ ಮುಗಿಯಬೇಕು. ಇದನ್ನು ದೀರ್ಘಾವಧಿಗೆ ಎಳೆದುಕೊಂಡು ಹೋಗಲು ಸಾಧ್ಯವಿಲ್ಲ. ಸತ್ಯಾಸತ್ಯತೆ ಬಹಿರಂಗ ಆಗಬೇಕು. ಗೊಂದಲಗಳಿಗೆ ಅತಿ ಶೀಘ್ರವೇ ತೆರೆ ಬೀಳಬೇಕಿದೆ. ಈ ತನಿಖೆಯ ಹಿಂದೆ ಕೆಲವು ಸಮಾಜಘಾತುಕ ಶಕ್ತಿಗಳು, ಎಸ್‌ಡಿಪಿಐ, ಬೇರೆ ಬೇರೆ ಕುತಂತ್ರಗಳು ನಡೆಯುತ್ತಿವೆ ಎಂಬ ಚರ್ಚೆಗಳು ಜನಸಾಮಾನ್ಯರಲ್ಲಿ ನಡೆಯುತ್ತಿವೆ ಎಂದರು.

ಪರಂ, ಸಿದ್ದು ಭೇಟಿಯಾದ ಎಸ್‌ಐಟಿ ಅಧಿಕಾರಿಗಳು

ಕಳೆದ ಎರಡು ವಾರದಿಂದ ಧರ್ಮಸ್ಥಳದಲ್ಲಿಯೇ ಬೀಡು ಬಿಟ್ಟಿದ್ದ ಎಸ್‌ಐಟಿ ಮುಖ್ಯಸ್ಥ ಪ್ರಣಬ್ ಮೊಹಂತಿ, ಬುಧವಾರ ಬೆಂಗಳೂರಿಗೆ ವಾಪಸಾಗಿದ್ದಾರೆ. 15ರಿಂದ 16 ಕಡೆ ಗುಂಡಿ ತೋಡಿದರೂ, ಅನಾಮಿಕ ವ್ಯಕ್ತಿ ಮಾಡಿರುವ ಆರೋಪಕ್ಕೆ ಸಂಬಂಧಿಸಿದ ಯಾವುದೇ ಸಾಕ್ಷ್ಯ ಸಿಗದಿರುವುದರಿಂದ ಮುಂದೇನು ಮಾಡಬೇಕು ಎನ್ನುವ ಬಗ್ಗೆ ಚರ್ಚಿಸಲು ಬೆಂಗಳೂರಿಗೆ ಆಗಮಿಸಿದರು. ಬುಧವಾರ ಬೆಳಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹ ಸಚಿವ ಡಾ.ಜಿ. ಪರಮೇಶ್ವರ ಅವರಿಗೆ ಎಸ್‌ಐಟಿ ತನಿಖೆಯ ಸದ್ಯದ ಪರಿಸ್ಥಿತಿ, ಈವರೆಗೆ ಆಗಿರುವ ವೆಚ್ಚ, ಸಿಕ್ಕಿರುವ ಸಾಕ್ಷ್ಯ, ಅನಾಮಿಕ ವ್ಯಕ್ತಿಯ ನಡೆ ಸೇರಿದಂತೆ ಹಲವು ಮಾಹಿತಿಯನ್ನು ಹಂಚಿಕೊಂಡಿದ್ದಾರೆ. ಇದುವರೆಗೆ ಯಾವುದೇ ಸಾಕ್ಷ್ಯ ಸಿಗದಿದ್ದರೂ ಅನಾಮಿಕ ವ್ಯಕ್ತಿ ಮತ್ತಷ್ಟು ಹೊಸ ಜಾಗಗಳನ್ನು ತೋರಿಸುತ್ತಿದ್ದಾನೆ. ಇದನ್ನು ಯಾವ ರೀತಿಯಲ್ಲಿ ಮುಂದುವರಿಸಬೇಕು ಎನ್ನುವ ಬಗ್ಗೆ ಚರ್ಚಿಸಿದ್ದಾರೆ ಎನ್ನಲಾಗಿದೆ.

ಧರ್ಮಸ್ಥಳ ವಿರುದ್ಧ ಅಪಪ್ರಚಾರ ಖಂಡಿಸಿ ರಾಜ್ಯವ್ಯಾಪಿ ಪ್ರತಿಭಟನೆ

ಭುಗಿಲೆದ್ದ ಆಕ್ರೋಶ ಬೀದಿಗಿಳಿದ ಭಕ್ತರು

ಬಾಗಲಕೋಟೆಯ ಜಿಲ್ಲಾಡಳಿತ ಭವನದ ಎದುರು ಧರ್ಮಸ್ಥಳ ಭಕ್ತಾಭಿಮಾನಿಗಳ ಪ್ರತಿಭಟನೆ.

ಬೆಂಗಳೂರು: ಶ್ರೀ ಕ್ಷೇತ್ರ ಧರ್ಮಸ್ಥಳ ಮಂಜುನಾಥ ಸ್ವಾಮಿ ದೇವಾಲಯ ಹಾಗೂ ಧರ್ಮಾಧಿಕಾರಿಗಳಾದ ಡಿ. ವೀರೇಂದ್ರ ಹೆಗ್ಗಡೆಯವರ ವಿರುದ್ಧ ಅಪಪ್ರಚಾರ ನಡೆಯುತ್ತಿದ್ದು ಕ್ಷೇತ್ರದ ಹೆಸರಿಗೆ ಕಳಂಕ ತರಲು ಷಡ್ಯಂತ್ರ ನಡೆಸುತ್ತಿರುವವರಿಗೆ ತಕ್ಕ ಶಿಕ್ಷೆಯಾಗಬೇಕು ಎಂದು ಆಗ್ರಹಿಸಿ ಬುಧವಾರ ಧರ್ಮಸ್ಥಳ ಪರ ಭಕ್ತರು ರಾಜ್ಯವ್ಯಾಪಿ ಬೀದಿಗಿಳಿದು ಪ್ರತಿಭಟನೆ ನಡೆಸಿದ್ದಾರೆ.

ಅನಾಮಿಕನ ದೂರಿನ ಮೇರೆಗೆ ಧರ್ಮಸ್ಥಳದಲ್ಲಿ ಎಸ್‌ಐಟಿ ನಡೆಸುತ್ತಿರುವ ತನಿಖೆಯನ್ನು ಕಾಲಮಿತಿಯೊಳಗೆ ಮುಗಿಸಿ ಸತ್ಯಾಂಶವನ್ನು ಬಹಿರಂಗಗೊಳಿಸಬೇಕು. ತಲೆಬುರುಡೆ ಹೆಸರಿನಲ್ಲಿ ಕ್ಷೇತ್ರಕ್ಕೆ ಕಳಂಕ ತರಲು ಯತ್ನಿಸಿದವರನ್ನು ತನಿಖೆಗೊಳಪಡಿಸಿ ಕಠಿಣ ಶಿಕ್ಷೆಗೆ ಗುರಿಪಡಿಸಬೇಕೆಂದು ಆಗ್ರಹಿಸಿ ಉಡುಪಿ, ಕೊಡಗು, ಉತ್ತರಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಮಂಡ್ಯ, ಮೈಸೂರು, ಚಾಮರಾಜನಗರ, ರಾಮನಗರ, ಬೆಳಗಾವಿ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ಹಾವೇರಿ, ಹುಬ್ಬಳ್ಳಿ-ಧಾರವಾಡ, ಗದಗ, ಬಾಗಲಕೋಟೆ, ವಿಜಯಪುರ, ರಾಯಚೂರು, ಕೊಪ್ಪಳ, ಬಳ್ಳಾರಿ, ಬೀದರ್, ಯಾದಗಿರಿ, ಕಲ್ಬುರ್ಗಿ ಸೇರಿದಂತೆ ರಾಜ್ಯದ ಬಹುತೇಕ ಎಲ್ಲ ಜಿಲ್ಲೆಗಳಲ್ಲಿ ಪ್ರತಿಭಟನೆ ನಡೆಸಲಾಯಿತು. ಮಹಿಳೆಯರೂ ಸೇರಿದಂತೆ ಸಾವಿರಾರು ಮಂದಿ ಪ್ರತಿಭಟನೆಯಲ್ಲಿ ಪಾಲ್ಗೊಂಡು ಜಾಥಾ, ಮೆರವಣಿಗೆ, ಮಾನವ ಸರಪಳಿಯನ್ನು ರಚಿಸಿ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ. ಕೆಲವೆಡೆ ಅನ್ಯಧರ್ಮಿಯರೂ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು.

ಮತ್ತಿಬ್ಬರಿಂದ ದೂರು

ಬೆಳ್ತಂಗಡಿ: ಧರ್ಮಸ್ಥಳದಲ್ಲಿ ಎಸ್‌ಐಟಿ ಶವ ಶೋಧ ನಡೆಸುತ್ತಿರುವ ನಡುವೆಯೇ ಬುಧವಾರ ಸ್ಥಳೀಯ ಇಬ್ಬರು ವ್ಯಕ್ತಿಗಳು ಶವ ಹೂತಿರುವುದನ್ನು ನೋಡಿರುವುದಾಗಿ ಎಸ್‌ಐಟಿ ಮುಂದೆ ಹೇಳಿಕೆ ನೀಡಿದ್ದಾರೆ. ಪುರಂದರ ಗೌಡ ಎಂಬ ದೂರುದಾರರು ನೇತ್ರಾವತಿ ನದಿ ತೀರದಲ್ಲಿ 2017ರ ತನಕ ಅಂಗಡಿ ನಡೆಸಿಕೊಂಡು ಬಂದಿದ್ದು ಸ್ಪಾಟ್ ನಂಬರ್ 1 ಮತ್ತು 13ರಲ್ಲಿ ಹೆಣ ಹೂತು ಹಾಕಿರುವುದನ್ನು ನೋಡಿದ್ದಾಗಿ ತಿಳಿಸಿದ್ದಾರೆ. ಹೆಣ ಹೂತವರ ಪೈಕಿ ಭೀಮನನ್ನು ಹೋಲುವ ವ್ಯಕ್ತಿ ಇದ್ದ ಎಂದು ತಿಳಿಸಿದ್ದಾರೆ. ಮತ್ತೊಬ್ಬ ದೂರುದಾರ ತುಕರಾಮ, ತಾವು ಧರ್ಮಸ್ಥಳದ ನಿವಾಸಿಯಾಗಿದ್ದು ಹೆಣ ತೆಗೆದುಕೊಂಡು ಬಂದು ಹಾಕಿದ್ದನ್ನು ನಾನು ನೋಡಿದ್ದೇನೆ ಎಂದು ತಿಳಿಸಿದ್ದಾರೆ. ಈ ಇಬ್ಬರ ಹೇಳಿಕೆಯಿಂದ ಎಸ್‌ಐಟಿ ಅಧಿಕಾರಿಗಳಿಗೆ ಗೊಂದಲವಾಗಿದ್ದು ಅಗತ್ಯ ಬಿದ್ದರೆ ವಾಪಸ್ ಕರೆಸಿಕೊಳ್ಳುತ್ತೇವೆ ಎಂದು ಹೇಳಿ ಇಬ್ಬರನ್ನು ಕಳುಹಿಸಿದ್ದಾರೆ.

13ರಲ್ಲಿ ಅಗೆದಿದ್ದೇ ಬಂತು...!: ಪ್ರಣಬ್ ಮೊಹಾಂತಿ ನೇತೃತ್ವದ ಎಸ್‌ಐಟಿ ತಂಡ ನೇತ್ರಾವತಿ ನದಿ ಬಳಿ ಸತತ 2ನೇ ದಿನ ಪಾಯಿಂಟ್ 13ರಲ್ಲಿ ಶೋಧ ಕಾರ್ಯಾಚರಣೆ ನಡೆಸಿದ್ದು, ಬುಧವಾರ 32 ಅಡಿ ಆಳದವರೆಗೆ ಅಗೆದರೂ ಯಾವುದೇ ಅಸ್ಥಿಪಂಜರದ ಕುರುಹುಗಳು ಪತ್ತೆ ಆಗಲಿಲ್ಲ. → 4

ದರ್ಶನ್, ಪವಿತ್ರಾಗೆ ಆತಂಕ

ಸುಪ್ರೀಂಕೋರ್ಟ್‌ನಲ್ಲಿ ಇಂದು ಜಾಮೀನು ಭವಿಷ್ಯ ನಿರ್ಧಾರ

ದೆಹಲಿ: ರೇಣುಕಾ ಸ್ವಾಮಿ ಹತ್ಯೆ ಪ್ರಕರಣದಲ್ಲಿ ದರ್ಶನ್ ಸೇರಿದಂತೆ ಪ್ರಮುಖ ಆರೋಪಿಗಳಿಗೆ ರಾಜ್ಯ ಹೈಕೋರ್ಟ್ ನೀಡಿರುವ ಜಾಮೀನು ರದ್ದು ಕೋರಿ ರಾಜ್ಯ ಸರಕಾರ ಸಲ್ಲಿಸಿರುವ ಅರ್ಜಿ ಸಂಬಂಧ ಸುಪ್ರೀಂ ಕೋರ್ಟ್ ಗುರುವಾರ ತೀರ್ಪು ನೀಡುವ ನಿರೀಕ್ಷೆ ಇದೆ.

ಜಸ್ಟೀಸ್ ಜೆ.ಬಿ.ಪರ್ದಿವಾಲಾ, ಜಸ್ಟೀಸ್ ಮಹದೇವನ್ ಅವರ ಪೀಠ ವಿಚಾರಣೆ ಸಂದರ್ಭದಲ್ಲಿ ಹೈಕೋರ್ಟ್ ನಡೆಯ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿತ್ತು. ಈ ಹಿನ್ನೆಲೆಯಲ್ಲಿ ದರ್ಶನ್ ಅವರ ಜಾಮೀನು ಭವಿಷ್ಯದ ಬಗ್ಗೆ ತೀವ್ರ ಕುತೂಹಲ ನಿರ್ಮಾಣವಾಗಿದೆ.

ಈಗಾಗಲೆ ದರ್ಶನ್, ಪವಿತ್ರಾಗೌಡ ಮತ್ತು ಇತರ ಆರೋಪಿಗಳ ಹಾಗೂ ರಾಜ್ಯ ಸರಕಾರದ ವಾದ-ಪ್ರತಿವಾದವನ್ನು ಆಲಿಸಿರುವ ಸುಪ್ರೀಂಕೋರ್ಟ್ ಆದೇಶವನ್ನು ಕಾಯ್ದಿರಿಸಿದೆ. ಆರೋಪಿಗಳಿಗೆ ಮತ್ತೆ ಜೈಲು ಸೇರುವ ಆತಂಕ ಎದುರಾಗಿದ್ದು, ಇದೇ ಕಾರಣಕ್ಕೆ ದರ್ಶನ್ ಪರ ವಕೀಲರು ಜಾಮೀನು ರದ್ದು ಮಾಡದಿರಲು ಲಿಖಿತ ಕಾರಣಗಳನ್ನು ನೀಡಿ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದಾರೆ.

ವಿಶ್ವಸಂಸ್ಥೆ ಅಧಿವೇಶನದ ವೇಳೆ ಟ್ರಂಪ್ ಜತೆ ಮಾತುಕತೆ ನಿರೀಕ್ಷೆ

ಸೆಪ್ಟೆಂಬರ್‌ನಲ್ಲಿ ಮೋದಿ ಅಮೆರಿಕಕ್ಕೆ

ದೆಹಲಿ: ಭಾರತ-ಅಮೆರಿಕ ನಡುವಣ ಸುಂಕ ಸಮರದ ಮಧ್ಯೆ ಮುಂದಿನ ತಿಂಗಳು ಪ್ರಧಾನಿ ನರೇಂದ್ರ ಮೋದಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯನ್ನು ಉದ್ದೇಶಿಸಿ ಮಾತನಾಡಲು ನ್ಯೂಯಾರ್ಕ್‌ಗೆ ತೆರಳುತ್ತಿದ್ದು, ಈ ಸಂದರ್ಭದಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಜತೆ ದ್ವಿಪಕ್ಷೀಯ ಮಾತುಕತೆ ನಡೆಸುವ ನಿರೀಕ್ಷೆ ಇದೆ. ಭಾರತದ ಮೇಲೆ ಆರಂಭಿಕ ಶೇಕಡಾ 25ರಷ್ಟು ಸುಂಕ ಮತ್ತು ಭಾರತ ರಷ್ಯಾದ ತೈಲ ಖರೀದಿಯ ಮೇಲೆ ಹೆಚ್ಚುವರಿ ಶೇಕಡಾ 25ರಷ್ಟು ಸುಂಕ ವಿಧಿಸುವ ಅಮೆರಿಕ ನಿರ್ಧಾರದ ಹಿನ್ನೆಲೆಯಲ್ಲಿ ಈ ಮಾತುಕತೆಗಳು ನಡೆಯುತ್ತವೆ, ಒಟ್ಟಾರೆಯಾಗಿ ಅಮೆರಿಕ ಭಾರತದ ಮೇಲೆ ಶೇಕಡಾ 50ರಷ್ಟು ಸುಂಕ ವಿಧಿಸಿದೆ. ಯುಎನ್ ಜಿಎಯ ವಾರ್ಷಿಕ ಉನ್ನತ ಮಟ್ಟದ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಲು ಮೋದಿ ಮುಂದಿನ ತಿಂಗಳು ನ್ಯೂಯಾರ್ಕ್‌ನಲ್ಲಿರುತ್ತಾರೆ ಎಂದು ವಿಶ್ವಸಂಸ್ಥೆ ಬಿಡುಗಡೆ ಮಾಡಿದ ಭಾಷಣಕಾರರ ತಾತ್ಕಾಲಿಕ ಪಟ್ಟಿ ತಿಳಿಸಿದೆ. ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ 80ನೇ ಅಧಿವೇಶನವು ಸೆಪ್ಟೆಂಬರ್ 9 ರಂದು ಪ್ರಾರಂಭವಾಗುತ್ತದೆ.

ಧಾರವಾಡಕ್ಕೆ ಎಸ್‌ಇಝಡ್ ಗರಿ

ಎಲೆಕ್ಟ್ರಾನಿಕ್ ಹಬ್‌ಗೆ ಕೇಂದ್ರ ಒಪ್ಪಿಗೆ, ಸಚಿವ ಪ್ರಲ್ಹಾದ್ ಜೋಶಿ ಪರಿಶ್ರಮಕ್ಕೆ ಫಲ

ಬೆಂಗಳೂರು: ಹುಬ್ಬಳ್ಳಿ-ಧಾರವಾಡಕ್ಕೆ ಕೇಂದ್ರ ಸರಕಾರ ಸಿಹಿ ಸುದ್ದಿ ನೀಡಿದ್ದು, ಧಾರವಾಡದ ಇಟಗಟ್ಟಿಯನ್ನು ಎಲೆಕ್ಟ್ರಾನಿಕ್ ಅಥವಾ ಸೆಮಿ ಕಂಡಕ್ಟರ್ ಕೈಗಾರಿಕೆಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ವಿಶೇಷ ಆರ್ಥಿಕ ವಲಯವನ್ನಾಗಿ ಘೋಷಿಸಿದೆ.

ಉತ್ತರ ಕರ್ನಾಟಕ ಭಾಗದಲ್ಲಿ ಕೈಗಾರಿಕೆಗಳನ್ನು ಸೆಳೆಯುವ ನಿಟ್ಟಿನಲ್ಲಿ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರ ನಿರಂತರ ಶ್ರಮದ ಫಲವಾಗಿ ಧಾರವಾಡಕ್ಕೆ ಎಸ್‌ಇಝಡ್ ಘೋಷಿಸಲಾಗಿದ್ದು, ಈ ಬಗ್ಗೆ ಕೇಂದ್ರ ಸರಕಾರ ಬುಧವಾರ ಗೆಜೆಟ್ ನೋಟಿಫಿಕೇಷನ್ ಹೊರಡಿಸಿದೆ.

ಧಾರವಾಡದ ಇಟ್ಟಿಗಟ್ಟಿಯಲ್ಲಿ ಏಕಸ್ ಇನ್ಫ್ರಾದ ಹುಬ್ಬಳ್ಳಿ ಡ್ಯೂರೆಬಲ್ ಗೂಡ್ಸ್ ಕ್ಲಸ್ಟರ್ ಪ್ರೈವೇಟ್ ಲಿಮಿಟೆಡ್ ಪ್ರಸ್ತಾಪಿಸಿದ ಎಲೆಕ್ಟ್ರಾನಿಕ್ ಘಟಕಗಳಿಗಾಗಿ ವಿಶೇಷ ಆರ್ಥಿಕ ವಲಯವನ್ನು ಘೋಷಿಸಿದೆ. ಈ ಭಾಗದಲ್ಲಿ ಎಲೆಕ್ಟ್ರಾನಿಕ್ಸ್ ಘಟಕಗಳ ಅವಶ್ಯಕತೆಯನ್ನು ಗಮನಿಸಿ ಪ್ರಲ್ಹಾದ್ ಜೋಶಿ ಅವರು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಅವರಿಗೆ ಮನವಿ ಮಾಡಿದ್ದರು. → 4

ನಮ್ಮ ಹುಬ್ಬಳ್ಳಿ -ಧಾರವಾಡದ ಕೈಗಾರಿಕಾ ಪ್ರದೇಶದಲ್ಲಿ ಎಲೆಕ್ಟ್ರಾನಿಕ್ ಉತ್ಪನ್ನಗಳ ಉತ್ಪಾದನೆಗೆ ಈ ವಿಶೇಷ ಆರ್ಥಿಕ ವಲಯ ಉತ್ತೇಜನ ನೀಡಲಿದೆ. ಇದು ಹುಬ್ಬಳ್ಳಿಯನ್ನು ಜಾಗತಿಕ ಎಲೆಕ್ಟ್ರಾನಿಕ್ಸ್ ಉತ್ಪಾದನೆಯ ಶಕ್ತಿ ಕೇಂದ್ರವಾಗಿ ಪರಿವರ್ತಿಸುವ ನಿರ್ಣಾಯಕ ಹೆಜ್ಜೆಯಾಗಲಿದೆ. ಹುಬ್ಬಳ್ಳಿ- ಧಾರವಾಡವು ತನ್ನ ಕಾರ್ಯತಂತ್ರದ ಸ್ಥಳ ಮತ್ತು ಕೌಶಲ್ಯಪೂರ್ಣ ಕಾರ್ಮಿಕರ ತಂಡದೊಂದಿಗೆ ತ್ವರಿತ ಕೈಗಾರಿಕಾ ಬೆಳವಣಿಗೆ, ಗುಣಮಟ್ಟದ ಉದ್ಯೋಗ ಸೃಷ್ಟಿ ಮತ್ತು ಆರ್ಥಿಕ ಪ್ರಗತಿಗೆ ಸಿದ್ಧವಾಗಿದೆ.
- **ಪ್ರಲ್ಹಾದ್ ಜೋಶಿ**, ಕೇಂದ್ರ ಸಚಿವ

ಮಹತ್ವದ ಮೈಲುಗಲ್ಲು

ಧಾರವಾಡದ ವಿಶೇಷ ಆರ್ಥಿಕ ವಲಯ ಆತ್ಮನಿರ್ಭರ ಭಾರತಕ್ಕೆ ಮತ್ತೊಂದು ಮಹತ್ವದ ಮೈಲುಗಲ್ಲು. ಇದರಿಂದಾಗಿ ಭಾರತದ ಉತ್ಪಾದನಾ ಸಾಮರ್ಥ್ಯವನ್ನು ಮತ್ತಷ್ಟು ಹೆಚ್ಚಾಗಲಿದೆ.
- ಪ್ರಧಾನಿ ನರೇಂದ್ರ ಮೋದಿ ಟ್ವೀಟ್

ಶಾಸಕ ಸೈಲ್ ಸೇರಿ ಗಣಿ ಧಣಿಗಳಿಗೆ ಇ.ಡಿ ಬಿಸಿ

ಬೆಂಗಳೂರು/ ಕಾರವಾರ: ಬೇಲೆಕೇರಿ ಅದಿರು ನಾಪತ್ತೆ ಮತ್ತು ವಿದೇಶಕ್ಕೆ ಅದಿರು ರಫ್ತು ಮಾಡಿದ ಪ್ರಕರಣ ಸಂಬಂಧ ಕಾರವಾರ- ಅಂಕೋಲಾ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಸತೀಶ್ ಸೈಲ್ ಅವರ ಬೆಂಗಳೂರು ನಿವಾಸ ಸೇರಿಂದಂತೆ ಕಚೇರಿಗಳ ಮೇಲೆ ಜಾರಿ ನಿರ್ದೇಶನಾಲಯ(ಇಡಿ)ದ ಅಧಿಕಾರಿಗಳು ಏಕಾಏಕಿ ದಾಳಿ ನಡೆಸಿ ಕೆಲವು ಮಹತ್ವದ ದಾಖಲೆಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಇದೇ ಪ್ರಕರಣಕ್ಕೆ ಸಂಬಂಧಿಸಿ ವಿಜಯನಗರ ಜಿಲ್ಲೆಯ ಹೊಸಪೇಟೆ ನಗರದಲ್ಲಿರುವ ಇಬ್ಬರು ಉದ್ಯಮಿಗಳಾದ ಸ್ವಸ್ತಿಕ್ ನಾಗರಾಜ್, ಖಾರದಪುಡಿ ಮಹೇಶ್ ನಿವಾಸ, ಕಚೇರಿಗಳ ಮೇಲೂ ಇಡಿ ಅಧಿಕಾರಿಗಳು ದಾಳಿ ನಡೆಸಿ ಪರಿಶೀಲನೆ ನಡೆಸಿದ್ದಾರೆ.

ಕಾರವಾರದ ಸದಾಶಿವಘಡದಲ್ಲಿರುವ ಶಾಸಕ ಸೈಲ್ ಅವರ ನಿವಾಸದ ಮೇಲೆ ಅಧಿಕಾರಿ ಕೇಶವ್ ರಾವ್ ನೇತೃತ್ವದಲ್ಲಿ 24 ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಇಡಿ ಅಧಿಕಾರಿಗಳು ದಾಳಿ ನಡೆಸಿದ ಸಂದರ್ಭದಲ್ಲಿ ಸತೀಶ್ ಸೈಲ್ ಮನೆಯಲ್ಲಿಲ್ಲ. ಬೆಂಗಳೂರಿನಲ್ಲಿ ಮಳೆಗಾಲದ ಅಧಿವೇಶನ ನಡೆಯುತ್ತಿರುವ ಕಾರಣ ಅವರು ಇಲ್ಲಿಗೆ ಬಂದಿದ್ದರು. ಶಾಸಕರ ಬೆಂಗಳೂರು ನಿವಾಸದ ಮೇಲೂ ದಾಳಿ ನಡೆದಿದೆ. ಅಕ್ರಮ ಅದಿರು ಸಾಗಾಟ ಪ್ರಕರಣದಲ್ಲಿ ಜೈಲು ಶಿಕ್ಷೆಗೊಳಗಾಗಿದ್ದ ಸೈಲ್ ಹೈಕೋರ್ಟ್‌ನಲ್ಲಿ ಜಾಮೀನು ಪಡೆದುಕೊಂಡಿದ್ದಾರೆ.

ಬೆಂಗಳೂರಿನಲ್ಲಿಯೇ ಎರಡು ಲಕ್ಷ ಜನರ ಮೇಲೆ ನಾಯಿ ದಾಳಿಪ್ರಕರಣ, ಸದನದಲ್ಲಿ ಕಳವಳ

ಬೀದಿ ನಾಯಿಗಳ ಸ್ಥಳಾಂತರಕ್ಕೆ ಶಾಸಕರ ಆಗ್ರಹ

ವಿಧಾನಸಭೆ: ದೆಹಲಿಯಲ್ಲಿ ಬೀದಿ ನಾಯಿಗಳ ಸ್ಥಳಾಂತರಕ್ಕೆ ಸುಪ್ರೀಂಕೋರ್ಟ್ ಆದೇಶಿಸಿದ ಬೆನ್ನಿಗೇ ವಿಧಾನಸಭೆಯಲ್ಲೂ ಬುಧವಾರ ಬೀದಿ ನಾಯಿಗಳ ಹಾವಳಿ ಬಗ್ಗೆ ಗಂಭೀರ ಚರ್ಚೆಯಾಗಿದ್ದು, ಬೆಂಗಳೂರಿನಲ್ಲೂ ಬೀದಿ ನಾಯಿಗಳನ್ನು 'ಶೆಡ್'ಗೆ ಕಳುಹಿಸಬೇಕೆಂಬ ಆಗ್ರಹ ಕೇಳಿಬಂದಿದೆ.

ಬೀದಿನಾಯಿ ಸಮಸ್ಯೆಯ ವಿಷಯವನ್ನು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು ಅವರು ಬುಧವಾರ ಸದನದಲ್ಲಿ ಪ್ರಸ್ತಾಪಿಸಿದರು. ಇತರೆ ನಗರಗಳಲ್ಲಿರುವಂತೆ ಬೆಂಗಳೂರು ಸೇರಿದಂತೆ ರಾಜ್ಯದ ಹಲವು ನಗರಗಳಲ್ಲಿ ಬೀದಿ ನಾಯಿಗಳ ಉಪಟಳ ಮಿತಿ ಮೀರಿದೆ. ಆದ್ದರಿಂದ ಸುಪ್ರೀಂ ಕೋರ್ಟ್ ನಿರ್ದೇಶನವನ್ನು ರಾಜ್ಯಕ್ಕೂ ವಿಸ್ತರಿಸಬೇಕು ಎಂದು ಆಗ್ರಹಿಸಿದರು.

ಬೀದಿ ನಾಯಿಗಳ ಹಾವಳಿ ನಿಯಂತ್ರಣಕ್ಕೆ ಸುಪ್ರಿಂಕೋರ್ಟ್ ಮೂರು ನಗರಗಳಿಗೆ ಸೀಮಿತವಾಗಿ ತೀರ್ಪು ನೀಡಿದೆ. ಅದನ್ನು ನಮ್ಮ ರಾಜ್ಯ ಸರಕಾರವೂ ಅಳವಡಿಸಿಕೊಳ್ಳಬೇಕು. ಬೆಂಗಳೂರು ಸೇರಿದಂತೆ ಇತರ ಕಡೆಗಳಲ್ಲಿ ಬೀದಿ ನಾಯಿಗಳ ಹಾವಳಿ ನಿಯಂತ್ರಿಸಬೇಕು ಎಂದರು. ಈ ವೇಳೆ ಮಧ್ಯಪ್ರವೇಶಿಸಿದ ಶಾಸಕ ಸುರೇಶ್ ಕುಮಾರ್, ಬೆಂಗಳೂರಿನಲ್ಲಿ ಎರಡು ಲಕ್ಷ ಜನರಿಗೆ ಬೀದಿ ನಾಯಿ ಕಡಿತವಾಗಿದೆ. 18 ಮಂದಿ ರೇಬಿಸ್ ನಂತಹ ಮಾರಕ ರೋಗಗಳಿಗೆ ತುತ್ತಾಗಿದ್ದಾರೆ. ಶೀಘ್ರವೇ ನಾಯಿಗಳ ಹಾವಳಿ ವಿರುದ್ಧ ಕ್ರಮ ಜರುಗಿಸಬೇಕು. ಇಲ್ಲವಾದಲ್ಲಿ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ವಿದ್ಯಾರ್ಥಿನಿ ಗಂಭೀರ

ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ಬೀದಿ ನಾಯಿ ಕಡಿತದಿಂದ ಮಂಗಳವಾರ ಇಬ್ಬರು ವಿದ್ಯಾರ್ಥಿಗಳು ಗಾಯಗೊಂಡಿದ್ದು, ಅವರಲ್ಲಿ ಒಬ್ಬ ವಿದ್ಯಾರ್ಥಿನಿಯ ಸ್ಥಿತಿ ಗಂಭೀರವಾಗಿದೆ ಎಂದು ತಿಳಿದುಬಂದಿದೆ. ಹಾವೇರಿಯ ಸೌಜನ್ಯ ಜಿಜಿ ಮತ್ತು ತೆಲಂಗಾಣದ ರೇಗಾ ನಿಕ್ಷಿತಾ ಇಬ್ಬರೂ ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯದ ಇಂಟಿಗ್ರೇಟೆಡ್ ಎಂಎಸ್ಸಿ ಇನ್ ಎಕನಾಮಿಕ್ಸ್ ಕೋರ್ಸ್‌ನ ಮೂರನೇ ವರ್ಷದ ವಿದ್ಯಾರ್ಥಿಗಳು. ಇಬ್ಬರ ಮೇಲೂ ನಾಯಿಗಳು ದಾಳಿ ಮಾಡಿ ಕಚ್ಚಿ ಗಾಯಗೊಳಿಸಿವೆ. ತೀವ್ರ ಗಾಯಗೊಂಡಿರುವ ಸೌಜನ್ಯ ಖಾಸಗಿ ಆಸ್ಪತ್ರೆಯ ಐಸಿಯುಗೆ ದಾಖಲಾಗಿದ್ದಾರೆ.

ಸುಪ್ರೀಂ ತ್ರಿಸದಸ್ಯ ಪೀಠ ವಿಚಾರಣೆ

ರಾಷ್ಟ್ರ ರಾಜಧಾನಿಯ ಸುತ್ತಮುತ್ತಲ ಬೀದಿ ನಾಯಿಗಳನ್ನು ಹಿಡಿದು ಆಶ್ರಯ ತಾಣಗಳಿಗೆ ಸ್ಥಳಾಂತರಿಸಬೇಕೆಂಬ ಸುಪ್ರೀಂ ಕೋರ್ಟ್ ಆದೇಶದ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತವಾದ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್ ಮುಖ್ಯ ನ್ಯಾ. ಬಿ.ಆರ್. ಗವಾಯಿ ಅವರು ಪ್ರಕರಣವನ್ನು ತ್ರಿಸದಸ್ಯ ಪೀಠಕ್ಕೆ ವರ್ಗಾಯಿಸಿ ದ್ದಾರೆ. ಸ್ಥಳಾಂತರ ಕುರಿತ ಸುಪ್ರೀಂ ಕೋರ್ಟ್ ತೀರ್ಪಿಗೆ ಆಕ್ಷೇಪಣೆ ವ್ಯಕ್ತಪಡಿಸಿ ಸಲ್ಲಿಸಿದ್ದ ಅರ್ಜಿಯನ್ನು ತುರ್ತು ವಿಚಾರಣೆಗೆ ಸ್ವೀಕರಿಸಿದ ಮುಖ್ಯ ನ್ಯಾಯಮೂರ್ತಿ, ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್, ಸಂದೀಪ್ ಮೆಹ್ತಾ ಮತ್ತು ಎನ್.ವಿ. ಅಂಜಾರಿಯಾ ಅವರನ್ನೊಳಗೊಂಡ ಪೀಠಕ್ಕೆ ಪ್ರಕರಣದ ವಿಚಾರಣೆಯನ್ನು ವರ್ಗಾಯಿಸಿದ್ದಾರೆ. ಆರರಿಂದ ಎಂಟು ವಾರಗಳಲ್ಲಿ ಸುಮಾರು 5,000 ನಾಯಿಗಳನ್ನು ಸ್ಥಳಾಂತರಿಸಲು ದ್ವಿಸದಸ್ಯ ಪೀಠ ಆದೇಶಿಸಿತ್ತು.



ಆಗಸ್ಟ್ 15ರ ಸ್ವಾತಂತ್ರ್ಯೋತ್ಸವದ ಹಿನ್ನೆಲೆಯಲ್ಲಿ ಜನಮುಖಿ ಪ್ರತಿಷ್ಠಾನದ ವತಿಯಿಂದ ಸ್ವಾತಂತ್ರ್ಯ ಹೋರಾಟಗಾರ ಗೋಪಾಲ್ ಅವರನ್ನು ಸನ್ಮಾನಿಸಲಾಯಿತು. ಪ್ರತಿಷ್ಠಾನದ ಅಧ್ಯಕ್ಷರಾದ ದಿನೇಶ್ ಎ.ಎಸ್., ಟ್ರಸ್ಟಿಗಳಾದ ಜಯದೇವ್ ಸಿ.ಎಂ., ಮಂಜುನಾಥಚಾಂದ್, ನಾಗರಾಜು ಎಚ್. ಎನ್., ಚಂದ್ರಕಾಂತ್ ಕೊಡ್ವಾಡಿ, ಎ.ಎಸ್. ನಾಗರಾಜಸ್ವಾಮಿ, ಸವಿತಾ ಭಟ್ ಹಾಗೂ ಗೋಪಾಲ್ ಅವರ ಸೊಸೆ ಸುನಂದಾ ಪ್ರಸಾದ್ ಉಪಸ್ಥಿತರಿದ್ದರು.

ಬಿಎಂಟಿಸಿಯಿಂದ ಫೀಡರ್‌ಬಸ್ ಸೌಲಭ್ಯ

ಬೆಂಗಳೂರು: ಆಗಸ್ಟ್ 11ರಿಂದ ಸಾರ್ವಜನಿಕರ ಪ್ರಯಾಣಕ್ಕೆ ಮುಕ್ತವಾಗಿರುವ ಹಳದಿ ಮೆಟ್ರೋ ಮಾರ್ಗದ ಪ್ರಯಾಣಿಕರ ಅನುಕೂಲಕ್ಕಾಗಿ ಆರಂಭಿಸಿದ ಬಿಎಂಟಿಸಿ ಫೀಡರ್ ಬಸ್ ಸೇವೆಗೆ ಸಚಿವ ರಾಮಲಿಂಗಾರೆಡ್ಡಿ ಚಾಲನೆ ನೀಡಿದ್ದಾರೆ.

ಆರ್‌ವಿ ರಸ್ತೆ ಹಾಗೂ ಬೊಮ್ಮಸಂದ್ರದ ಮಾರ್ಗದಲ್ಲಿ ಬಿಎಂಟಿಸಿಯು ಹೊಸದಾಗಿ ಫೀಡರ್ ಬಸ್‌ಗಳ ಕಾರ್ಯಾಚರಣೆಯನ್ನು ಆರಂಭಿಸಿದ್ದು, ಒಟ್ಟು ನಾಲ್ಕು ಮಾರ್ಗಗಳಲ್ಲಿ 12 ಬಸ್‌ಗಳು 96 ಟ್ರಿಪ್ ಕಾರ್ಯಾಚರಣೆ ನಡೆಸುತ್ತಿದೆ.

ಹಳದಿ ಮಾರ್ಗದ 6 ನಿಲ್ದಾಣಗಳಿಂದ ಫೀಡರ್ ಬಸ್: ಹೊಸ ರೋಡ್, ಬೆರಟೇನ ಅಗ್ರಹಾರ, ಎಲೆಕ್ಟ್ರಾನಿಕ್ ಸಿಟಿ, ಇನ್ಫೋಸಿಸ್ ಫೌಂಡೇಶನ್, ಕೋನಪ್ಪನ ಅಗ್ರಹಾರ, ಹೆಬ್ಬಗೋಡಿ ಹಾಗೂ ಬೊಮ್ಮಸಂದ್ರ ಸೇರಿದಂತೆ ಒಟ್ಟು 6 ಮೆಟ್ರೊ ನಿಲ್ದಾಣಗಳಿಗೆ ಫೀಡರ್ ಸೇವೆಗಳ ಸೌಲಭ್ಯ ಇದೆ. ಪ್ರತಿದಿನ 12 ಬಿಎಂಟಿಸಿ ಬಸ್‌ಗಳು, ಪ್ರತಿದಿನ 96 ಟ್ರಿಪ್ ಮಾಡಲಿವೆ. ಇದರಿಂದ ಮೆಟ್ರೋ ನಿಲ್ದಾಣದಿಂದ ಅಥವಾ ಬೇರೆ ಕಡೆಯಿಂದ ಈ ಮಾರ್ಗದ ಮೆಟ್ರೋಗೆ ಹೋಗಬೇಕಾದವರಿಗೆ ತುಂಬ ಅನುಕೂಲವಾಗಲಿದೆ ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಮಾಹಿತಿ ನೀಡಿದ್ದಾರೆ.

ಬೆಲೆಕೇರಿ ಅದಿರು ನಾಪತ್ತೆ ಪ್ರಕರಣ ಸಂಬಂಧ ದಾಳಿ | ಹಲವು ದಾಖಲೆಗಳು ವಶಕ್ಕೆ

ಸತೀಶ್ ಸೈಲ್, ಉದ್ಯಮಿಗಳಿಗೆ ಇಡಿ ಶಾಕ್

ಬೆಂಗಳೂರು: ಕಾನೂನು ಬಾಹಿರವಾಗಿ ವಿದೇಶಕ್ಕೆ ಅದಿರು ರಫ್ತುಮಾಡಿದ ಪ್ರಕರಣದಲ್ಲಿ ಕಾರವಾರ–ಅಂಕೋಲಾ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಸತೀಶ್ ಸೈಲ್ ಅವರ ಬೆಂಗಳೂರು ನಿವಾಸ ಸೇರಿದಂತೆ ಕಚೇರಿಗಳ ಮೇಲೆ ಜಾರಿ ನಿರ್ದೇಶನಾಲಯ(ಇಡಿ)ದ ಅಧಿಕಾರಿಗಳು ಏಕಾಏಕಿ ದಾಳಿ ನಡೆಸಿ ಕೆಲವು ಮಹತ್ವದ ದಾಖಲೆಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ ಎನ್ನಲಾಗಿದೆ.

ಕಾರವಾರದ ಸದಾ ಶಿವಘಡದಲ್ಲಿರುವ ಸೈಲ್ ಅವರ ನಿವಾಸದ ಮೇಲೆ ಅಧಿಕಾರಿ ಕೇಶವ್ ರಾವ್ ನೇತೃತ್ವದಲ್ಲಿ 24 ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಇಡಿ ಅಧಿಕಾರಿಗಳು ದಾಳಿ ನಡೆಸಿದ ಸಂದರ್ಭದಲ್ಲಿ ಸತೀಶ್ ಸೈಲ್ ಮನೆಯಲ್ಲಿಲ್ಲ. ಬೆಂಗಳೂರಿನಲ್ಲಿ ಮಳೆಗಾಲದ ಅಧಿವೇಶನ ನಡೆಯುತ್ತಿರುವ ಕಾರಣ ಅವರು ಇಲ್ಲಿಗೆ ಬಂದಿದ್ದರು. ದಾಳಿಯ ಸಂದರ್ಭದಲ್ಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಲವು ದಾಖಲೆಗಳು ಲಭ್ಯವಾಗಿದ್ದು, ವಶಕ್ಕೆ ಪಡೆದುಕೊಂಡಿದ್ದಾರೆ. ದಾಳಿ ನಡೆಸಿದ ತಂಡದಲ್ಲಿ ಸುಮಾರು 6ರಿಂದ 7 ಇ.ಡಿ ಅಧಿಕಾರಿಗಳು ಇದ್ದು, ಅವರೊಂದಿಗೆ ಇಬ್ಬರು ಅರೆಮಿಲಿಟರಿ ಸಿಬ್ಬಂದಿ ಸಹ ಸೇರಿದ್ದರು. ಬೆಂಗಳೂರು ನಿವಾಸದಲ್ಲೂ ದಾಳಿ ನಡೆದಿದೆ. ಅಕ್ರಮ ಅದಿರು ಸಾಗಾಟ ಪ್ರಕರಣದಲ್ಲಿ ಜೈಲು ಶಿಕ್ಷೆಗೊಳಗಾಗಿದ್ದ ಸೈಲ್ ಸದ್ಯ ಜಾಮೀನಿನ ಮೇಲೆ ಹೊರಗಿದ್ದಾರೆ. ಮಲ್ಲಿಕಾರ್ಜುನ ಶಿಪ್ಪಿಂಗ್ ಕಂಪನಿ ಮೂಲಕ ಅಕ್ರಮ ಅದಿರು ಸಾಗಾಟ ಮಾಡಿದ್ದ ಪ್ರಕರಣದಲ್ಲಿ ನಿವೃತ್ತ ಲೋಕಾಯುಕ್ತ ನ್ಯಾ. ಸಂತೋಷ್ ಹೆಗ್ಡೆ ಅವರ ತಂಡ ಸೈಲ್ ವಿರುದ್ಧ ದೂರು ದಾಖಲಿಸಿತ್ತು. ಸತೀಶ್ ಸೈಲ್‌ಗೆ ಜನಪ್ರತಿನಿಧಿಗಳ ನ್ಯಾಯಾಲಯ ಜೈಲು ಶಿಕ್ಷೆ ವಿಧಿಸಿತ್ತು. ನಂತರ ಅವರು ಹೈಕೋರ್ಟ್‌ನಲ್ಲಿ ಜಾಮೀನು ಪಡೆದುಕೊಂಡಿದ್ದರು.

ಬೇಲೆಕೇರಿ ಬಂದರಿನಿಂದ ಅದಿರನ್ನು ಅಕ್ರಮವಾಗಿ ವಿದೇಶಕ್ಕೆ ಸಾಗಾಟ ಮಾಡಿದ ಪ್ರಕರಣದಲ್ಲಿ ಸತೀಶ್ ಸೈಲ್ ಅವರನ್ನು ದೋಷಿ ಎಂದು ಕಳೆದ ವರ್ಷ ಅಕ್ಟೋಬರ್‌ನಲ್ಲಿ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತೀರ್ಪು ನೀಡಿತ್ತು. ನಂತರ ಬೇಲೆಕೇರಿ ಅದಿರು ಸಾಗಾಟ ಪ್ರಕರಣ ಸಂಬಂಧಿತ 6 ಪ್ರಕರಣಗಳಲ್ಲಿ ಅವರಿಗೆ 7 ವರ್ಷ ಜೈಲು ಶಿಕ್ಷೆ ಹಾಗೂ 44 ಕೋಟಿ ರು. ಹೆಚ್ಚು ಮೊತ್ತದ ದಂಡ ವಿಧಿಸಲಾಗಿತ್ತು. ಆನಂತರ ಜೈಲು ಪಾಲಾಗಿದ್ದ ಅವರು ಶಾಸಕ ಸ್ಥಾನದಿಂದ ಅನರ್ಹರಾಗುವ ಭೀತಿ ಎದುರಿಸುತ್ತಿದ್ದರು.

ನಂತರ ಜನಪ್ರತಿನಿಧಿಗಳ ನ್ಯಾಯಾಲಯದ ತೀರ್ಪಿನ ವಿರುದ್ಧ ಸೈಲ್ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದರು. ನವೆಂಬರ್‌ನಲ್ಲಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಎಂ ನಾಗಪ್ರಸನ್ನ ಅವರಿದ್ದ ಪೀಠ, ಸೈಲ್‌ಗೆ ವಿಧಿಸಿರುವ ಶಿಕ್ಷೆಯ ಆದೇಶವನ್ನು ಅಮಾನತಿನಲ್ಲಿಡಲು ಸೂಚಿಸಿತ್ತು. ದಂಡ ಮೊತ್ತದ ಶೇ.25 ರಷ್ಟನ್ನು ಠೇವಣಿ ಇಡುವಂತೆ ಸೂಚನೆ ನೀಡಿದ್ದ ಹೈಕೋರ್ಟ್ ಸೈಲ್‌ಗೆ ಜಾಮೀನು ನೀಡಿತ್ತು.

ಉದ್ಯಮಿಗಳ ಮನೆ ಮೇಲೂ ಇಡಿ ದಾಳಿ

ಬೆಲೆಕೇರಿ ಅದಿರು ನಾಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಜಯನಗರ ಜಿಲ್ಲೆಯ ಹೊಸಪೇಟೆ ನಗರದಲ್ಲಿರುವ ಇಬ್ಬರು ಉದ್ಯಮಿಗಳಾದ ಸ್ವಸ್ತಿಕ್ ನಾಗರಾಜ್, ಖಾರದಪುಡಿ ಮಹೇಶ್ ನಿವಾಸ, ಕಚೇರಿಗಳ ಮೇಲೆ ಇಡಿ ಅಧಿಕಾರಿಗಳು ದಾಳಿ ನಡೆಸಿ ಪರಿಶೀಲನೆ ನಡೆಸಿದ್ದಾರೆ. ಮಾಜಿ ನಗರಸಭಾ ಸದಸ್ಯರಾದ ಖಾರದಪುಡಿ ಮಹೇಶ್ ಮತ್ತು ಸ್ವಸ್ತಿಕ್ ನಾಗರಾಜ್ ಮನೆ ಹಾಗೂ ಕಚೇರಿಗಳ ಮೇಲೆ ಬುಧವಾರ ಬೆಳಿಗ್ಗೆ 5.30ರ ವೇಳೆಗೆ ದಾಳಿ ಮಾಡಿ ಕಡತಗಳನ್ನು ಜಾಲಾಡಿದ್ದಾರೆ. ಖಾರದಪುಡಿ ಮಹೇಶ್ ನಗರಸಭೆ ಸದಸ್ಯರಾಗಿದ್ದು, ಜೆಪಿ ನಗರದಲ್ಲೂ ಅವರ ನಿವಾಸವಿದೆ. ಬಳ್ಳಾರಿ ಸರ್ಕಲ್‌ನಲ್ಲಿ 'ಸರ್ವ ಭವ ಸುಖಿನೋ ಭವಂತು' ಟ್ರಸ್ಟ್ ಸ್ಥಾಪಿಸುವ ಮೂಲಕ ಸಮಾಜಮುಖಿ ಕಾರ್ಯದಲ್ಲಿ ತೊಡಗಿದ್ದು, ಉಚಿತ ಶುದ್ಧ ನೀರಿನ ಘಟಕ ಹೊಂದಿದ್ದಾರೆ. ಅಲ್ಲಿ ಅವರಿಗೆ ಸಂಬಂಧಿಸಿದ ಕಚೇರಿ, ಸ್ಟೀಲ್ ಅಂಗಡಿಯೂ ಇದೆ. ಈ ಮೂರೂ ಕಡೆಗಳಲ್ಲಿ ಇಡಿ ಅಧಿಕಾರಿಗಳು ದಾಳಿ ಮಾಡಿ ಪರಿಶೀಲನೆ ನಡೆಸಿದ್ದಾರೆ. ರಾಜೀವ್ ನಗರದಲ್ಲಿರುವ ಸ್ವಸ್ತಿಕ್ ನಾಗರಾಜ್ ನಿವಾಸ ಎಪಿಎಂಸಿ ಬಳಿ ಅವರ ಕಚೇರಿ ಮತ್ತು ಸ್ಟೀಲ್ ಅಂಗಡಿಗಳಲ್ಲೂ ಇಡಿ ಅಧಿಕಾರಿಗಳು ತಪಾಸಣೆ ನಡೆಸಿದ್ದಾರೆ. ಇಬ್ಬರೂ ಉದ್ಯಮಿಗಳು ಅಕ್ರಮ ಗಣಿ ಪ್ರಕರಣದಲ್ಲಿ ಜೈಲುವಾಸ ಅನುಭವಿಸಿದ್ದು, ಈಗ ಇಡಿ ಅಧಿಕಾರಿಗಳು ವಿಚಾರಣೆ ಹಿನ್ನೆಲೆಯಲ್ಲಿ ದಾಳಿ ಮಾಡಿದ್ದಾರೆ.

ಏನಿದು ಪ್ರಕರಣ?

ಅಕ್ರಮ ಗಣಿಗಾರಿಕೆ ಮೂಲಕ ವಿದೇಶಕ್ಕೆ ಸಾಗಿಸಲು ಕಾರವಾರದ ಬೇಲೆಕೇರಿ ಬಂದರಿಯಲ್ಲಿ 11,312 ಮೆಟ್ರಿಕ್ ಟನ್ ಅದಿರನ್ನು ಸಂಗ್ರಹಿಸಲಾಗಿತ್ತು. ಇದನ್ನು ಅಧಿಕಾರಿಗಳು ಜಪ್ತಿ ಮಾಡಿದ್ದರು. ಅನುಮತಿ ಇಲ್ಲದೇ ಮಲ್ಲಿಕಾರ್ಜುನ ಶಿಪ್ಪಿಂಗ್ ಕಾರ್ಪೊರೇಷನ್ ಮಾಲೀಕರಾಗಿದ್ದ ಸತೀಶ್ ಸೈಲ್ ಅವರು ಇದನ್ನು ವಿದೇಶಕ್ಕೆ ಸಾಗಣೆ ಮಾಡಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ ಪ್ರತ್ಯೇಕ 6 ಪ್ರಕರಣ ದಾಖಲಾಗಿದ್ದವು. ಲೋಕಾಯುಕ್ತ ಮತ್ತು ಸಿಬಿಐ ತನಿಖೆ ನಡೆಸಿ ಕೋರ್ಟ್‌ಗೆ ಆರೋಪ ಪಟ್ಟಿ ಸಲ್ಲಿಸಿದ್ದವು. ಅರಣ್ಯಾಧಿಕಾರಿಗಳು ವಶಪಡಿಸಿಕೊಂಡ 5,00,000 ಮೆಟ್ರಿಕ್ ಟನ್ ಅದಿರಿನ ಪೈಕಿ 1,29,553.54 ಮೆಟ್ರಿಕ್ ಟನ್ ಅದಿರು ಕಳ್ಳತನವಾಗಿದೆ ಎಂದು ಸಿಬಿಐ ಹೇಳಿತ್ತು. ಬೆಲೆಕೇರಿ ಅದಿರು ಸಾಗಾಟ ಪ್ರಕರಣ ಸಂಬಂಧಿತ 6 ಪ್ರಕರಣಗಳಲ್ಲಿ ಅವರಿಗೆ 7 ವರ್ಷ ಜೈಲು ಶಿಕ್ಷೆ ಹಾಗೂ 44 ಕೋಟಿ ರು. ಗೂ ಹೆಚ್ಚು ಮೊತ್ತದ ದಂಡ ವಿಧಿಸಲಾಗಿತ್ತು. ಆನಂತರ ಜೈಲು ಪಾಲಾಗಿದ್ದ ಅವರು ಶಾಸಕ ಸ್ಥಾನದಿಂದ ಅನರ್ಹರಾಗುವ ಭೀತಿ ಎದುರಿಸುತ್ತಿದ್ದರು.

PRESIDENT

ಸ್ನೇಯ್ಡರ್ ಎಲೆಕ್ಟ್ರಿಕ್ ಪ್ರೆಸಿಡೆಂಟ್ ಸಿಸ್ಟಮ್ಸ್ ಲಿಮಿಟೆಡ್

CIN: L32109KA1984PLC079103
ನೋಂದಾಯಿತ ಕಚೇರಿ: 5ಸಿ/1, ಕೆಐಎಡಿಬಿ ಕೈಗಾರಿಕಾ ಪ್ರದೇಶ, ಅತ್ತಿಬೆಲೆ, ಬೆಂಗಳೂರು–562107, ಕರ್ನಾಟಕ, ಭಾರತ
ಕಾರ್ಪೊರೇಟ್ ಕಚೇರಿ: ಬಿಜಿಆರ್‌ಟಿ, 6ನೇ ಮಹಡಿ, ಸರ್ವೆ ನಂ.63/3ಬಿ, ಗೊರ್ವಿಗೆರೆ ಗ್ರಾಮ, ಬಿದರಹಳ್ಳಿ ಹೋಬಳಿ, ವೈಟ್‌ಫೀಲ್ಡ್ ಹೊಸಕೋಟೆ ರಸ್ತೆ, ಬೆಂಗಳೂರು–560115, ಕರ್ನಾಟಕ, ಭಾರತ.
ದೂರವಾಣಿ: + 91 8067888300; +91 8045540000
ವೆಬ್‌ಸೈಟ್: www.schneiderelectricpresident.com; **ಇ–ಮೇಲ್:** companysecretary@se.com

ಜೂನ್ 30, 2025ಕ್ಕೆ ಅಂತ್ಯಗೊಂಡ ಮೊದಲನೆ ತ್ರೈಮಾಸಿಕ ಮುಕ್ತಾಯದ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಹೇಳಿಕೆಗಳು

ಜೂನ್ 30, 2025ಕ್ಕೆ ಅಂತ್ಯಗೊಂಡ ಮೊದಲ ತ್ರೈಮಾಸಿಕ ಮುಕ್ತಾಯದ ಅಪರಿಶೋಧಿತ ಆರ್ಥಿಕ ಫಲಿತಾಂಶಗಳನ್ನು ಲೆಕ್ಕ ಪರಿಶೋಧಕ ಮತ್ತು ಅಪಾಯ ನಿರ್ವಹಣಾ ಸಮಿತಿಯು ಪರಿಶೀಲನೆ ನಡೆಸಿದ್ದು, ಮತ್ತು ನಿರ್ದೇಶಕರ ಮಂಡಳಿಯು ಆಗಸ್ಟ್ 12, 2025 ರಂದು ನಡೆದ ತಮ್ಮ ಸಭೆಯಲ್ಲಿ ಅನುಮೋದಿಸಿದೆ. ಈ ಫಲಿತಾಂಶಗಳನ್ನು ಮೆಟ್ರೋಪಾಲಿಟನ್ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ನಿಯಂತ್ರಣ 33 ರ ಸೆಬಿ (ಲಿಸ್ಟಿಂಗ್ ಅಬ್ಲಿಗೇಷನ್ಸ್ ಮತ್ತು ಡಿಸ್‌ಕ್ಲೋಸರ್ ರಿಕ್ವಯರ್‌ಮೆಂಟ್ಸ್) ನಿಯಂತ್ರಣ, 2015 ರಂತೆ ಸಲ್ಲಿಸಲಾಗಿದೆ.

ಆರ್ಥಿಕ ಫಲಿತಾಂಶಗಳು ಇಲ್ಲಿ ಲಭ್ಯವಿರುತ್ತದೆ
- **ಮೆಟ್ರೋಪಾಲಿಟನ್ ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟ್ : www.msei.in**
- **ಕಂಪನಿಯ ವೆಬ್‌ಸೈಟ್ https://www.schneiderelectricpresident.com/ investors/ annual-reports-financials.html**

ಮೇಲೆ ಹೇಳಿದವುಗಳನ್ನು ಇಲ್ಲಿ ನೀಡಿರುವ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ನೋಡಬಹುದು.

ನಿರ್ದೇಶಕರ ಮಂಡಳಿಯ ಪರವಾಗಿ
ಸ್ನೇಯ್ಡರ್ ಎಲೆಕ್ಟ್ರಿಕ್ ಪ್ರೆಸಿಡೆಂಟ್ ಸಿಸ್ಟಮ್ಸ್ ಲಿಮಿಟೆಡ್ ಗಾಗಿ
ಸಹಿ/–
ಸುಬ್ರೇಂದು ಸರ್ಕಾರ್
ಪೂರ್ಣಾವಧಿ ನಿರ್ದೇಶಕ ಮತ್ತು ಸಿಎಫ್‌ಒ
ಡಿಐಎನ್: 09813992

ಸ್ಥಳ: ಗುರುಗ್ರಾಮ
ದಿನಾಂಕ: 12 ಆಗಸ್ಟ್ 2025

Life Is On | Schneider Electric

IN THE COURT OF THE HON'BLE SMALL CAUSES COURT, AT BANGALORE (SCCH-12)
SC. NO. 38/2025
BETWEEN : THE STATE BANK OF INDIA
Vyalikaval Branch, No.70, 2nd Main Road, Vyalikaval Bengaluru: 560003. Represented by its Branch Manger MR, SUJATHA JUJARE ...PLAINTIFF
AND : PADMAVATHI. ...DEFENDANT
SUMMONS TO DEFENDANT BY WAY OF PAPER PUBLICATION
Mrs. PADMAVATHI, W/o. Chandrashekar Aged about 32 years. NO. 49, 11TH CROSS M V BLOCK PALACE GUTTAHALLI MALLESWARAM BANGALORE NORTH PIN-560003 BANGALORE-560003
Whereas, the Plaintiff has filed a suit Recovery of money instituted the present suit, for sum of Rs.1,99,855/- (Rupees One Lakh Ninety Nine Thousand Eight Hundred And Fifty Five Only) and future interest at contractual rate together with other applicable expenses, charges from the date of NPA till closure of loan. Hence you are hereby summoned to appear before court, person or through a Pleader on **17/9/25 at 11 A.M.** to answer the same failing which suit will be disposed off ex-parte.
Given under my hand and the seal of the court this 13/08/2025
By Order of the Court
Sd/- Assistant Registrar
Court of Small Causes, Bangalore
Advocate for Plaintiff
J. SATHISH KUMAR Advocate
EWS, 16/2, 1st Cross, 2nd Main, 2nd Stage, KHB (AD Halli), Basaveshwaranagar, Bengaluru -79.
Mob: 9448448238 Email: gsnadvocates@yahoo.com

ಓಂ ಪ್ರಕಾಶ್ ಹತ್ಯೆಯಲ್ಲಿ ಮಗಳ ಪಾತ್ರವಿಲ್ಲ

ಬೆಂಗಳೂರು:ಮಾಜಿ ಪೊಲೀಸ್ ಮಹಾನಿರ್ದೇಶಕ ಓಂ ಪ್ರಕಾಶ್ ಹತ್ಯೆ ಕೇಸ್ ತನಿಖೆ ಮಾಡಿರುವ ಸಿಸಿಬಿ, ನ್ಯಾಯಾಲಯಕ್ಕೆ ದೋಷಾರೋಪ(ಚಾರ್ಜ್‌ಶೀಟ್) ಸಲ್ಲಿಕೆ ಮಾಡಿದ್ದು, ಪತ್ನಿ ಪಲ್ಲವಿ ಪ್ರಮುಖ ಆರೋಪಿ ಎಂದು ಹೆಸರಿಸಿದೆ.

ಓಂಪ್ರಕಾಶ್ ಕೊಲೆಯಾದ ಬಳಿಕ ಎಚ್‌ಎಸ್‌ಆರ್ ಲೇಔಟ್ ಪೊಲೀಸ್ ಠಾಣೆಯಲ್ಲಿ ಓಂಪ್ರಕಾಶ್ ಪತ್ನಿ ಪಲ್ಲವಿ ಹಾಗೂ ಮಗಳ ವಿರುದ್ಧ ದೂರು ದಾಖಲಿಸಲಾಗಿತ್ತು. ಸಿಸಿಬಿ ಮೂಲಗಳ ಪ್ರಕಾರ, ಕೊಲೆಗೆ ಸಂಬಂಧಿಸಿದಂತೆ ಮೊದಲ ಎಸಿಎಂಎಂ ನ್ಯಾಯಾಲಯದಲ್ಲಿ ಆರೋಪಪಟ್ಟಿ ಸಲ್ಲಿಸಲಾಗಿದ್ದು, ಓಂ ಪ್ರಕಾಶ್ ಅವರ ಪತ್ನಿ ಪಲ್ಲವಿ ಅವರನ್ನು ಪ್ರಮುಖ ಆರೋಪಿಯನ್ನಾಗಿ ಹೆಸರಿಸಲಾಗಿದೆ. ಮಗಳು ಕೃತಿ ಅವರನ್ನು ಆರೋಪಗಳಿಂದ ಮುಕ್ತಗೊಳಿಸಲಾಗಿದೆ ಎನ್ನಲಾಗಿದೆ.

ಬೆಂಗಳೂರಿನ ಕೇಂದ್ರ ಅಪರಾಧ ವಿಭಾಗ (ಸಿಸಿಬಿ) 1,150 ಪುಟಗಳ ಚಾರ್ಜ್‌ಶೀಟ್ ಸಲ್ಲಿಕೆಯಾಗಿದೆ.

1981ನೇ ಬ್ಯಾಚ್ ಐಪಿಎಸ್ ಅಧಿಕಾರಿ ಓಂ ಪ್ರಕಾಶ್ ಅವರನ್ನು ಏಪ್ರಿಲ್ 20 ರಂದು ಬೆಂಗಳೂರಿನ ಎಚ್‌ಎಸ್‌ಆರ್ ಲೇಔಟ್ ನಿವಾಸದಲ್ಲಿ ಪತ್ನಿ ಪಲ್ಲವಿ ಕೊಲೆ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ. ಅಪರಾಧದ ತೀವ್ರತೆ ಪರಿಗಣಿಸಿ, ರಾಜ್ಯ ಸರಕಾರ ತನಿಖೆಯನ್ನು ಸಿಸಿಬಿಗೆ ವರ್ಗಾಯಿಸಿತು.

ವಿಶ್ವಾಸಾರ್ಹ ಪುರಾವೆಗಳ ಕೊರತೆ: ಎಫ್‌ಆರ್‌ಐ ನಲ್ಲಿ ಓಂಪ್ರಕಾಶ್ ಪತ್ನಿ ಪಲ್ಲವಿಯನ್ನು ಎ1 ಆರೋಪಿ, ಮಗಳನ್ನ ಎ2 ಆರೋಪಿಯನ್ನಾಗಿ ಮಾಡಲಾಗಿತ್ತು. ತನಿಖೆಯ ವೇಳೆ ಓಂಪ್ರಕಾಶ್ ಹತ್ಯೆಯಲ್ಲಿ ಮಗಳ ಪಾತ್ರ ಇಲ್ಲ ಅನ್ನುವುದು ಕಂಡು ಬಂದಿದೆ. ಹೀಗಾಗಿ, ತಂದೆಯ ಕೊಲೆ ಪ್ರಕರಣದಲ್ಲಿ ಎ2 ಆರೋಪಿಯಾಗಿದ್ದ ಮಗಳ ಹೆಸರನ್ನು ಚಾರ್ಜ್‌ಶೀಟ್‌ನಿಂದ ಕೈಬಿಡಲಾಗಿದೆ.

ತನಿಖಾಧಿಕಾರಿಗಳ ಪ್ರಕಾರ, ಕೊಲೆ ಪಿತೂರಿಯಲ್ಲಿ ಕೃತಿ ಅವರ ಪಾತ್ರವಿದೆ ಎಂದು ಹೇಳಲು ಸಾಕಷ್ಟು ಪುರಾವೆಗಳಿಲ್ಲ. ಘಟನೆ ನಡೆದ ಸಮಯದಲ್ಲಿ ಅವರು ಎಚ್‌ಎಸ್‌ಆರ್ ಲೇಔಟ್ ನಿವಾಸದ ಮೇಲಿನ ಮಹಡಿಯಲ್ಲಿದ್ದರು ಎನ್ನಲಾಗಿದೆ. ಅಪರಾಧದಲ್ಲಿ ಅವರ ಪಾತ್ರವಿದೆ ಎಂದು ಹೇಳುವ ವಿಶ್ವಾಸಾರ್ಹ ಪುರಾವೆಗಳು ಲಭ್ಯವಿಲ್ಲದ ಕಾರಣ ಅವರ ಹೆಸರನ್ನು ಆರೋಪ ಪಟ್ಟಿಯಿಂದ ಕೈಬಿಡಲಾಗಿದೆ. ಸದ್ಯ, ಪಲ್ಲವಿ ಅವರನ್ನು ಕೊಲೆ ಆರೋಪದ ಮೇಲೆ ಬಂಧಿಸಲಾಗಿದ್ದು, ನ್ಯಾಯಾಂಗ ಬಂಧನದಲ್ಲಿದ್ದಾರೆ.

ಸೆಕ್ಷನ್ 13(2) ರ ಸರ್ಫೇಸಿ ಕಾಯಿದೆ, 2002ರ ಅಡಿ (ಕಾಯಿದೆ) ತಗಾದೆ ಸೂಚನೆ

ಕ್ರ. ಸಂ.	ಸಾಲಗಾರ(ರ) ಹೆಸರು ಮತ್ತು ವಿಳಾಸ	ಸಾಲದ ಮೊತ್ತ (ರೂ)	ಸಾಲದ ಖಾತಾ ಸಂಖ್ಯೆ	ಅಡಮಾನ ಮಾಡಿರುವ ಆಸ್ತಿಯ ವಿವರ	ಬರಬೇಕಾದ ಬಾಕಿ ಮೊತ್ತ (ರೂ)	ಎನ್‌ಪಿಎ ದಿನಾಂಕ
	(ಎ)	(ಬಿ)	(ಸಿ)	(ಡಿ)	(ಇ)	(ಎಫ್)
1.	ಶ್ರೀ ಶ್ರೀನಿವಾಸ್ ರಾಜು ಕೊಂಡ ಹನುಮಂತ್	ರೂ.75,00,000/–	47319445	ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ವಾಸಯೋಗ್ಯ ಆಸ್ತಿಯ ಬಿಡಿಎ ಸೈಟ್ ನಂ. 127, ಸರ್ವೆ ನಂ. 84 ರಿಂದ 87, ಬಿಟಿಎಂ 2ನೇ ಹಂತ, ಮಡಿವಾಳ, 65ನೇ ವಾರ್ಡ್ 1ನೇ ಹಂತ ಎಕ್ಸ್‌ಟೆನ್ಷನ್, ಬೆಂಗಳೂರು, ಕರ್ನಾಟಕ–560076, ಶ್ರೀ ಶ್ರೀನಿವಾಸ್ ರಾಜು ಕೊಂಡ ಹನುಮಂತ್‌ರವರಿಗೆ ಸೇರಿದೆ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 7.70+8.50/2 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ: 12.00+11.80/2 ಮೀಟರ್ ಮತ್ತು ಚಕ್ಕುಬಂದಿ ಈ ಕೆಳಗಿನಂತಿದೆ. ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಸೈಟ್ ನಂ. 126, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಸೈಟ್ ನಂ. 128.	ರೂ.4428670.38	05/1/2025
2.	ಶ್ರೀ ಪ್ರಭಾಕರ್ ಮೆನನ್ ಜಯಕುಮಾರ್ ಶ್ರೀಮತಿ ಸಂಧ್ಯಾ ಜಿ ಮೆನನ್	ರೂ.14,00,000/–	43480284	ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ವಾಸಯೋಗ್ಯ ಆಸ್ತಿ 903/312, ಸಾರಂಗ, ಮುನಿಯಪ್ಪ ಲೇಔಟ್, 2ನೇ ಕ್ರಾಸ್, ಎನ್.ಎ.ಎಲ್. ರಸ್ತೆ, ವಾರ್ಡ್ ನಂ. 73, ಮುರುಗೇಶ್ ಪಾಳ್ಯ, ಬೆಂಗಳೂರು, ಕರ್ನಾಟಕ–560017, ವಿಸ್ತೀರ್ಣ : ಪೂರ್ವದಿಂದ ಪಶ್ಚಿಮಕ್ಕೆ : 30 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 46 ಅಡಿ ಮತ್ತು ಮತ್ತು ಶ್ರೀ ಪ್ರಭಾಕರ್ ಮೆನನ್ ಜಯಕುಮಾರ್ ಮತ್ತು ಚಕ್ಕುಬಂದಿ : ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ: ಕುಟ್ಟನ್ ನಾಯರ್ ರ ಮನೆ, ಉತ್ತರಕ್ಕೆ: ಮುನಿಯಪ್ಪ ರ ಆಸ್ತಿ, ದಕ್ಷಿಣಕ್ಕೆ: ಪಾರ್ಥಸಾರಥಿ ರವರ ಆಸ್ತಿ.	ರೂ.6,64,429.40	18/1/2025
3.	ಶ್ರೀಮತಿ ಆರ್ ಶಾರದಾ	ರೂ.45,75,000/–	51112604	ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ವಾಸಯೋಗ್ಯ ಆಸ್ತಿ ಫ್ಲ್ಯಾಟ್ ನಂ. 115, 1ನೇ ಮಹಡಿ, ಜಾನ್ನವಿ ಎನ್‌ಕ್ಲೇವ್, ಸರ್ವೆ ನಂ 35/3, ಕೋಡಿಚಿಕ್ಕನಹಳ್ಳಿ, ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲೂಕು, ಕರ್ನಾಟಕ–560068, ವಿಸ್ತೀರ್ಣ: 1800 ಚದರ ಅಡಿ ಮತ್ತು ಶ್ರೀ ಆರ್ ಶಾರದಾ ಇವರಿಗೆ ಸೇರಿದ್ದು, ಮತ್ತು ಚಕ್ಕುಬಂದಿ ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಕೆ ಜೆ ಜೀವನ್ ರವರಿಗೆ ಸೇರಿದ ಭೂಮಿ, ಉತ್ತರಕ್ಕೆ: ಖಾಸಗಿ ಆಸ್ತಿ, ದಕ್ಷಿಣಕ್ಕೆ: ಖಾಸಗಿ ಆಸ್ತಿ.	ರೂ.42,96,578.34	10/09/2024
4.	1. ಶ್ರೀ ಪಿ. ಎಸ್. ವಿಜಯರಾಘವನ್ 2. ಶ್ರೀಮತಿ ಕೆ ಪವಿತ್ರ	ರೂ.95,90,000/–	53071581 & 51457083	ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ವಾಸಯೋಗ್ಯ ಆಸ್ತಿಯ ಫ್ಲ್ಯಾಟ್ ನಂ. ಸಿ1–3121, 12ನೇ ಮಹಡಿ, ಶೋಭಾ ರೋಸ್ ಅಪಾರ್ಟ್‌ಮೆಂಟ್, ವೈಟ್‌ಫೀಲ್ಡ್, ಬಿಬಿಎಂಪಿ ಖಾತಾ ಕ್ರ.ಸಂ. 158, ಹಳೆ ಸಿ1–3121/683/3121, ಬೆಂಗಳೂರು, ಕರ್ನಾಟಕ–560066, ಶ್ರೀ ಪಿ ಎಸ್ ವಿಜಯರಾಘವನ್ ಮತ್ತು ಶ್ರೀ ಕೆ ಪವಿತ್ರ ರವರ ಮಾಲೀಕತ್ವದಲ್ಲಿದೆ ವಿಸ್ತೀರ್ಣ 1350.99 ಚದರ ಅಡಿ (ಬಿಲ್ಟಪ್ ಪ್ರದೇಶ), ಪೂರ್ವಕ್ಕೆ: ಆಸ್ತಿಯ ಸರ್ವೆ ನಂ.12/4ಬಿ, ಪಶ್ಚಿಮಕ್ಕೆ: ವೈಟ್‌ಫೀಲ್ಡ್ ಪಟ್ಟಣ ಮುಖ್ಯ ರಸ್ತೆ (ಹೊಸಕೋಟೆಯಿಂಥ ಸರ್ಜಾಪುರ), ಉತ್ತರಕ್ಕೆ: ಅದೇ ಸರ್ವೆ ನಂ. 12/4ಎ–1 ರ ಉಳಿದ ಭಾಗ, ದಕ್ಷಿಣಕ್ಕೆ: ಗಿಡ್ಡನ್ಸ್ ಲೇಔಟ್, ಸರ್ವೆ ನಂ. 14.	ರೂ.95,03,140.94	10.11.2024
5.	1. ಶ್ರೀ ರಾಮ್‌ಬಾಬು ಚಿಂತ 2. ಶ್ರೀಮತಿ ಲಲಿತ ಪ್ರಸನ್ನ ಕುಮಾರಿ	ರೂ.70,74,166/–	50190717 & 51999323	ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ವಾಸಯೋಗ್ಯ ಆಸ್ತಿಯ ಅಪಾರ್ಟ್‌ಮೆಂಟ್ ನಂ. (ಗಳು) ಕೆ 1256ಎ ಮತ್ತು ಕಎ1256ಬಿ, 11ನೇ ಮಹಡಿ, ಟವರ್ ಕೆ, ಬ್ಲಾಕ್ ಆರ್ 04, ರಿಪಬ್ಲಿಕ್ ಆಫ್ ವೈಟ್‌ಫೀಲ್ಡ್, ವೈಟ್‌ಫೀಲ್ಡ್, ಬೆಂಗಳೂರು, ಕರ್ನಾಟಕ–560066 ಇಲ್ಲಿದ್ದು, ಶ್ರೀ ರಾಮ್‌ಬಾಬು ಚಿಂತ ಮತ್ತು ಶ್ರೀಮತಿ ಲಲಿತ ಪ್ರಸನ್ನ ಕುಮಾರಿ ಚಿಂತರವರ ಮಾಲೀಕತ್ವದಲ್ಲಿದೆ.	ರೂ.67,45,290.19	01.09.2024

ಕೆಳಸಹಿದಾರರು, ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್‌ನ ಅಧಿಕೃತ ಅಧಿಕಾರಿಯಾಗಿದ್ದು, ತನ್ನ ವ್ಯವಹಾರವನ್ನು ನಂ. 26, 2ನೇ ಮಹಡಿ, ಪೂರ್ವ ವಿಂಗ್, ರಹೇಜ ಟವರ್ಸ್, ಎಂ ಜಿ ರಸ್ತೆ, ಬೆಂಗಳೂರು–560001 (ಇನ್ನು ಮುಂದೆ ಬ್ಯಾಂಕ್ ಎಂದು ಕರೆಯಲಾಗುವುದು) ಇಲ್ಲಿ ಹೊಂದಿದ್ದು, ಈ ಮೇಲೆ ಅಂಕಣ ಎ ಯಲ್ಲಿ ಹೆಸರಿಸಿರುವ ಸಾಲಗಾರ(ರು) ಬಿ ಅಂಕಣದಲ್ಲಿ ಹೆಸರಿಸಿರುವಂತೆ ಬೇರೆಯೆ ಸಾಲಸೌಲಭ್ಯಗಳನ್ನು ಖಾತಾ ಸಂಖ್ಯೆಯಲ್ಲಿ ಪಡೆದುಕೊಂಡಿದ್ದು, ಸಿ ಅಂಕಣದಲ್ಲಿ ಸಾಲದ ಮೊತ್ತವನ್ನು ಪ್ರತೀ ಸಾಲಗಾರರ ಹೆಸರಿನ ಎದುರು ಕ್ರಮ ಸಂ.1 ರಿಂದ 7ರವರೆಗೆ ನಮೂದಿಸಲಾಗಿದೆ.
ಮೇಲೆ ಹೇಳಲ್ಪಟ್ಟ ಸಾಲಸೌಲಭ್ಯಗಳನ್ನು ಅಂಕಣ ಡಿ ಯಲ್ಲಿ ಹೆಸರಿಸಿರುವ ಆಸ್ತಿಗಳನ್ನು ಅಡಮಾನ ಮಾಡುವ ಮೂಲಕ ಪ್ರತೀ ಸಾಲಗಾರರು (ಇನ್ನು ಮುಂದಕ್ಕೆ ಸಾಲಗಾರರು ಎನ್ನಲಾಗುವುದು)ಭದ್ರತೆಯಾಗಿ ಇಟ್ಟಿರುತ್ತಾರೆ ಮೇಲೆ ಹೆಸರಿಸಿರುವ ಸಾಲಗಾರ(ರು) ಸಾಲದ ಖಾತೆಯ ಹಣವನ್ನು ಬುಕ್ಸ್ ಆಫ್ ಅಕೌಂಟ್ಸ್ ಪ್ರಕಾರ ಮರುಪಾವತಿ ಮಾಡಲು ವಿಫಲರಾಗಿದ್ದು, ಅದನ್ನು ಬ್ಯಾಂಕಿಂಗ್ ವ್ಯಾವಹಾರಿಕ ನಿಯಮಗಳನ್ವಯ ಅದು ಬಾಕಿ ಮೊತ್ತವಾಗಿ ಉಳಿದಿದ್ದು, ಅದನ್ನು ಅಂಕಣ ಇ ಯಲ್ಲಿ ಪ್ರತೀ ಸಾಲಗಾರರ ಹೆಸರಿನ ಮುಂದೆ ಉಲ್ಲೇಖಿಸಲಾಗಿದೆ.
ಪ್ರತೀ ಸಾಲಗಾರರ ಸಾಲದ ಖಾತೆಯ ಮುಂದೆ ಹೆಸರಿಸಲಾದ ಮೊತ್ತವನ್ನು ಈ ಮೇಲಿನ ಸಾಲಗಾರರು ಮರುಪಾವತಿ ಮಾಡದೆ ಇರುವುದರಿಂದ ಬ್ಯಾಂಕ್ ಅದನ್ನು ಅಂಕಣ ಎಫ್ ನಲ್ಲಿ ಹೆಸರಿಸಿದ ದಿನಾಂಕದಂದು ಎನ್‌ಪಿಎ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ ನಿಯಮಗಳನ್ವಯ ವರ್ಗೀಕರಿಸಿದೆ. ಇ ಪ್ರಕಾರ ಸೆಕ್ಷನ್ 13(2)ರ ಕಾಯ್ದೆ ಅನ್ವಯ ನೋಟೀಸನ್ನು ನೀಡಲಾಗಿದ್ದು, ಅದು ಅವರಿಂದ ಸ್ವೀಕೃತವಾಗದೆ ಬ್ಯಾಂಕ್‌ಗೆ ಹಿಂತಿರುಗಲ್ಪಟ್ಟಿದೆ.
ಈ ಮೇಲಿನ ಸುಸ್ತಿಯ ಅನ್ವಯ ಬ್ಯಾಂಕ್ ಈ ಮೇಲಿನ ಸಾಲಗಾರರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಮೇಲಿನ ಬಾಕಿ ಹಣವನ್ನು ಅಂಕಣ ಇಯಲ್ಲಿ ಹೆಸರಿಸಿರುವಂತೆ ಸಂಪೂರ್ಣವಾಗಿ ಬಡ್ಡಿ ಸಹಿತ ಈ ಸೂಚನೆ ಪ್ರಕಟವಾದ 60 ದಿನಗಳ ಒಳಗೆ ಮರುಪಾವತಿ ಮಾಡದೆ ಇದ್ದಲ್ಲಿ, ಬ್ಯಾಂಕ್ ತನ್ನಲ್ಲಿರುವ ಕಾನೂನಿನ ಅನ್ವಯ ಭದ್ರತಾ ಆಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳಲಿದೆ.
ಈ ಮೂಲಕ ನಿಮಗೆ ತಿಳಿಯಪಡಿಸುವುದೇನೆಂದರೆ, ಈ ಮೇಲೆ ಹೆಸರಿಸಿರುವ ಸಾಲಗಾರರು ಭದ್ರತಾ ಆಸ್ತಿಗಳನ್ನು ಬ್ಯಾಂಕಿನ ಲಿಖಿತ ಪೂರ್ವಾನುಮತಿ ಇಲ್ಲದೆ ಪರಭಾರೆ (ವರ್ಗಾವಣೆ, ಮಾರಾಟ, ಭೋಗ್ಯ ಅಥವಾ ಇನ್ನಿತರೆ ಯಾವುದೇ ರೂಪದಲ್ಲಿ ಸೇರಿದಂತೆ) ಮಾಡುವಂತಿಲ್ಲ. ಒಂದು ವೇಳೆ ಇಂತಹ ಯಾವುದೇ ಘಟನೆಗಳು ಸಂಭವಿಸಿದಲ್ಲಿ ಅದು ಜೈಲುಶಿಕ್ಷೆಯಂತಹ ಅಥವಾ ದಂಡ ಇಲ್ಲವೆ ಇವೆರಡನ್ನೂ ಅನುಭವಿಸಬೇಕಾಗುವಂತಹ ಅಪರಾಧವಾಗಲಿದೆ.
ಸಾಲಗಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಉಪ ನಿಯಮ (8) ರ ಸೆಕ್ಷನ 13 ರಸರ್ಫೇಸಿ ಕಾಯಿದೆ ಅನ್ವಯ ನೀವು ಬಾಕಿ ಹಣವನ್ನು ಸಂಪೂರ್ಣವಾಗಿ ನಿಗದಿತ ಕಾಲಮಿತಿಯೊಳಗೆ ಪಾವತಿಸಿ, ಭದ್ರತಾ ಸ್ವತ್ತುಗಳನ್ನು ಮರುಪಡೆದುಕೊಳ್ಳಬಹುದಾಗಿದೆ. ಅದರೊಂದಿಗೆ ನಿಮಗೆ ತಿಳಿಯಪಡಿಸುವುದೇನೆಂದರೆ, ನೀವು ಭದ್ರತಾ ಆಸ್ತಿಗಳನ್ನು ಮರುಪಡೆಯಲು ಬಡ್ಡಿ ಹಾಗೂ ಸಂಪೂರ್ಣ ವೆಚ್ಚ, ದರಗಳನ್ನು ಪಾವತಿಸಿ ಪಡೆದುಕೊಳ್ಳಬಹುದು, ಇಲ್ಲವಾದಲ್ಲಿ, ಬ್ಯಾಂಕ್ ಸಾರ್ವಜನಿಕ ಸೂಚನೆಯ ಮೂಲಕ / ಇ–ಹರಾಜು, ದರ ಪಟ್ಟಿ ಆಹ್ವಾನ, ಸಾರ್ವಜನಿಕರಿಂದ ಟೆಂಡರ್ ಆಹ್ವಾನ, ಖಾಸಗಿ ಟ್ರೀಟಿ ಇತ್ಯಾದಿಗಳ ಮೂಲಕ ಅವುಗಳನ್ನು ಮಾರಾಟ ನಡೆಸಿ ಬ್ಯಾಂಕ್‌ಗೆ ಬರಬೇಕಾದ ಸಂಪೂರ್ಣ ಹಣವನ್ನು ವಸೂಲಾತಿ ಮಾಡಿಕೊಳ್ಳಲಿದೆ.
ದಯವಿಟ್ಟು ಗಮನಿಸಿಕೊಳ್ಳಬೇಕಾದುದೇನೆಂದರೆ, ಸೆಕ್ಷನ್ 13(2)ರ ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆ್ಯಕ್ಟ್ 2002ರ ಅನ್ವಯ ಈ ನೋಟೀಸನ್ನು ನೀಡಲಾಗಿದೆ, ಬ್ಯಾಂಕ್ ತನ್ನ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮೇಲಿನ ಸಾಲಗಾರರಿಗೆ ಅವರ ಹೆಸರಿನೊಂದಿಗೆ ಇರುವ ವಿಳಾಸಕ್ಕೆ ನೋಟೀಸನ್ನು ನೀಡಿದ್ದು, ಅದು ಸಾಲಗಾರರ ಅಪಾಯ, ಜವಾಬ್ದಾರಿ ಮತ್ತು ವೆಚ್ಚಕ್ಕೆ ಬದ್ಧವಾಗಿರುತ್ತದೆ.

ಸಹಿ/–
ಅಧಿಕೃತ ಅಧಿಕಾರಿಗಳು
ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್

ದಿನಾಂಕ: 14.08.2025
ಸ್ಥಳ: ಬೆಂಗಳೂರು

ಸಂಕ್ರಾಂತಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ
ನಂ. 89, 2ನೇ ಅಡ್ಡರಸ್ತೆ, 22ನೇ ಮುಖ್ಯರಸ್ತೆ, ಜೆ.ಪಿ.ನಗರ 2ನೇ ಹಂತ, ಮಾರೇನಹಳ್ಳಿ, ಬೆಂಗಳೂರು–560078
Regn No.RSR/Souka/Regn/187/2343/2014-15 dated 01.03.2016
ದೂರವಾಣಿ : 26589900

10ನೇ ಸರ್ವ ಸದಸ್ಯರ ಸಭೆಯ ಸೂಚನಾ ಪ್ರಕಟಣೆ

ನಮ್ಮ ಸಹಕಾರಿಯ 10ನೇ ವರ್ಷದ (2024–25) ಸರ್ವ ಸದಸ್ಯರ ಸಭೆಯನ್ನು **ದಿನಾಂಕ 07.09.2025ನೇ ಭಾನುವಾರ ಪೂರ್ವಾಹ್ನ 10.30 ಗಂಟೆಗೆ** ಹೋಟೆಲ್ ಶಾಂತಿಸಾಗರ, ಮೊದಲನೇ ಮಹಡಿ, ನಂ. 77/1, 24ನೇ ಮುಖ್ಯ ರಸ್ತೆ, ಎರಡನೇ ಹಂತ, ಜೆ.ಪಿ.ನಗರ, ಬೆಂಗಳೂರು–560078, ಇಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಆದ್ದರಿಂದ ಸದಸ್ಯರು ಸದರಿ ಸಭೆಗೆ ಹಾಜರಾಗಬೇಕೆಂದು ವಿನಂತಿಸಲಾಗಿದೆ.

ದಿನಾಂಕ : 13.08.2025 ಸಹಿ/–
ಸ್ಥಳ : ಬೆಂಗಳೂರು **ಮು.ಕಾ.ನಿ. ಅಧಿಕಾರಿ**

ಸಹಕಾರ ಸಂಘಗಳ ಉಪ ನಿಬಂಧಕರು (ನಿಯಮ.441) ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.
ಸೌಹಾರ್ದ ಸಹಕಾರ ಸೌಧ, ನಂ. 68, 1ನೇ ಮಹಡಿ, 17 ಮತ್ತು 18 ನೇ ಅಡ್ಡರಸ್ತೆ, ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055

ವಾದಿ :– **Chief Executive Officer. Srujana Vividoddesha Souharda Sahakari Niyamitha.,** #64, 3rd Crosss, M.V. Seetharamaiah Road, Gavipuram, Bangalore - 560079
ಪ್ರತಿವಾದಿಗಳು: ವ್ಯಾಜ್ಯ ಸಂಖ್ಯೆ : ಡಿ.ಆರ್.ಡಿ./ಕ.ರಾ.ಸೌ.ಸಂ.ಸ.ನಿ./7022/2021–22
(2) Sri. Somashekar B.S. S/o. Shivanna B.H., 2nd Cross, Ramanagar Main Road, Kanakapura, Ramanagar Dist-562117

ಪ್ರತಿವಾದಿಗಳಿಗೆ ಪತ್ರಿಕಾ ಪ್ರಕಟಣೆ ಮೂಲಕ ನೋಟೀಸ್

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಿಮಗೆ ತಿಳಿಯಪಡಿಸುವುದೆಂದರೆ ಈ ಮೇಲ್ಕಂಡ ಪ್ರತಿವಾದಿಗಳ ದಾವಾ ಸಂಖ್ಯೆ: ಡಿ.ಆರ್.ಡಿ/ಕ.ರಾ.ಸೌ.ಸಂ.ಸ.ನಿ.,/7022/2021–22 ರಂತೆ ಸಹಕಾರ ಸಂಘಗಳ ಉಪ ನಿಬಂಧಕರು (ನಿ. 441), ಸೌಹಾರ್ದ, ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯದಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಆಧಿನಿಯಮರಲ್ಲಿ 39 ರಡಿಯಲ್ಲಿ ದಾವೆಯನ್ನು ಸಲ್ಲಿಸಿದ್ದು, ನೀವು ಪ್ರತಿವಾದಿಯಾಗಿರುತ್ತೀರಿ. ಆದುದರಿಂದ ಈ ಮೂಲಕ ನಿಮಗೆ ತಿಳಿಯಪಡಿಸುವುದೇನೆಂದರೆ ಈ ಮೇಲ್ಕಂಡ ನ್ಯಾಯಾಲಯದ ಮುಂದೆ ದಿನಾಂಕ: 14.08.2025 ರಂದು ಬೆಳಿಗ್ಗೆ 11.30 ಗಂಟೆಗೆ ಸರಿಯಾಗಿ ತಾವಾಗಲಿ, ತಮ್ಮಿಂದ ನೇಮಕಗೊಂಡ ವಕೀಲರ ಮುಖಾಂತರವಾಗಲಿ ಹಾಜರಾಗಲು ಈ ಮೂಲಕ ತಿಳಿಯಪಡಿಸುತ್ತೇವೆ. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಪಡಿಸಲಾಗುವುದು.

ಸದರಿ ಪ್ರಕಟಣೆಯನ್ನು ದಿನಾಂಕ: 07.08.2025 ರಂದು ನ್ಯಾಯಾಲಯದ ಸಹಿ ಮತ್ತು ಮೊಹರಿನೊಂದಿಗೆ ನೀಡಲಾಗಿದೆ.

ಸಹಿ/-
ಸಹಕಾರ ಸಂಘಗಳ ಉಪ ನಿಬಂಧಕರು (ನಿ.441)
ದಾವಾ ಪಂಚಾಯ್ತಿ ನ್ಯಾಯಾಲಯ
ಕ.ರಾ.ಸೌ.ಸಂ.ಸ.ನಿ. ಬೆಂಗಳೂರು.
(ನ್ಯಾಯಾಲಯದ ಆದೇಶದ ಮೇರೆಗೆ)

ದಿನಾಂಕ: 12.08.2025
ಸ್ಥಳ: ಬೆಂಗಳೂರು

ಲೇಡಿಸ್‌ಪಿಜಿಗೆ ನುಗ್ಗಿ ಚಿನ್ನಾಭರಣ ದರೋಡೆ

ಬೆಂಗಳೂರು: ಹಾಡಹಗಲೇ ಲೇಡಿಸ್ ಪಿಜಿ ಗೆ ನುಗ್ಗಿದ ದರೋಡೆಕೋರ ಮಹಿಳಾ ಬೆಸ್ಕಾಂ ಎಂಜಿನಿಯರ್ ಕುತ್ತಿಗೆಗೆ ಚಾಕು ಇಟ್ಟು ಹೆದರಿಸಿ ಚಿನ್ನಾಭರಣ ಹಾಗೂ ಎರಡು ಮೊಬೈಲ್‌ಗಳನ್ನು ದೋಚಿ ಪರಾರಿಯಾಗಿರುವ ಘಟನೆ ಯಲಹಂಕ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಬೆಸ್ಕಾಂ ಅಸಿಸ್ಟೆಂಟ್ ಮಹಿಳಾ ಎಂಜಿನಿಯರ್ ಜುಡಿಷಿಯಲ್ ಲೇಔಟ್ ನಲ್ಲಿರುವ ಲೇಡಿಸ್ ಪಿಜಿಗೆ ಕಳೆದ 15 ದಿನಗಳ ಹಿಂದೆಯಷ್ಟೆ ಸೇರಿದ್ದರು. ಆ.11 ರಂದು ಎಂದಿನಂತೆ ಕೆಲಸಕ್ಕೆ ಹೋಗಿ ಮಧ್ಯಾಹ್ನ 3 ಗಂಟೆ ಸುಮಾರಿಗೆ ಊಟಕ್ಕೆಂದು ಪಿಜಿಗೆ ಬಂದಿದ್ದಾರೆ. ಪಿಜಿಯ 3ನೇ ಮಹಡಿಯಲ್ಲಿರುವ ತಮ್ಮ ರೂಮಿಗೆ ಹೋದ ಕೆಲವೇ ನಿಮಿಷಗಳಲ್ಲಿ ಬಾಗಿಲು ಬಡಿದ ಶಬ್ದವಾಗಿದೆ. ಪಿಜಿಯವರೇ ಬಂದಿರಬಹುದೆಂದು ತಿಳಿದು ಅವರು ಬಾಗಿಲು ತೆಗೆದಿದ್ದಾರೆ. ಈ ವೇಳೆ ದರೋಡೆಕೋರರು ಕುತ್ತಿಗೆಗೆ ಚಾಕು ಇಟ್ಟು ಬೆದರಿಸಿ ಮೈಮೇಲೆ ಧರಿಸಿದ್ದ ಚಿನ್ನಾಭರಣಗಳನ್ನು ಬಿಚ್ಚಿಸಿಕೊಂಡಿದ್ದಲ್ಲದೇ, ರೂಮಿನ ಹಾಸಿಗೆ ಮೇಲಿದ್ದ ಎರಡು ಮೊಬೈಲ್‌ಗಳನ್ನು ತೆಗೆದುಕೊಂಡು ಪರಾರಿಯಾಗಿ ದ್ದಾನೆ.ಪಿಜಿಯ ಸ್ವಲ್ಪ ದೂರದ ಪೊದೆಯ ಬಳಿ ಬಿದ್ದಿದ ಎರಡು ಮೊಬೈಲ್‌ಗಳನ್ನು ಪೊಲೀಸರು ಪತ್ತೆ ಮಾಡಿದ್ದು, ದರೋಡೆಕೋರರ ಪತ್ತೆಗೆ ಹುಡುಕಾಟ ನಡೆಸಿದ್ದಾರೆ.

ಅಪರೂಪದ ಸಂರಕ್ಷಿತ ಸರೀಸೃಪಗಳ ವಶಕ್ಕೆ

ಬೆಂಗಳೂರು: ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳು ಬ್ಯಾಂಕಾಕ್‌ನಿಂದ ಆಗಮಿಸಿದ ಪ್ರಯಾಣಿಕರೊಬ್ಬರಿಂದ ಹಾವುಗಳು ಸೇರಿದಂತೆ ಹಲವಾರು ವಿಲಕ್ಷಣ ಮತ್ತು ಸಂರಕ್ಷಿತ ಸರೀಸೃಪಗಳನ್ನು ವಶಪಡಿಸಿಕೊಂಡಿರುವುದಾಗಿ ಮಾಹಿತಿ ನೀಡಿದ್ದಾರೆ. ಮಂಗಳವಾರ ತಪಾಸಣೆ ಸಮಯದಲ್ಲಿ ಪ್ರಯಾಣಿಕರ ಲಗೇಜ್ ಒಳಗೆ ಅಡಗಿಸಿಟ್ಟ ಪೆಟ್ಟಿಗೆಗಳಲ್ಲಿ ಪ್ಯಾಕ್ ಮಾಡಲಾದ ಹಲವಾರು ಸರೀಸೃಪಗಳು ಪತ್ತೆಯಾಗಿದ್ದು, ಅವುಗಳನ್ನು ವಶಪಡಿಸಿಕೊಳ್ಳಲಾಗಿದೆ.

INDIQUBE®
GROW YOUR BUSINESS

INDIQUBE SPACES LIMITED
(Formerly known as 'Indiqube Spaces Private Limited,Innovent Spaces Private Limited')
CIN: U45400KA2015PLC133523
Registered Office: Plot # 53, Careernet Campus, Kariyammanna Agrahara Road, Devarabisanahalli, Outer Ring Road, Bengaluru - 560103, Karnataka, India,
Phone: +91 99000 92210, **E-mail:** cs.compliance@indiqube.com, **Website:** www.indiqube.com

UNAUDITED FINANCIAL RESULTS FOR THE QUARTER ENDED JUNE 30, 2025

The Board of Directors of **Indiqube Spaces Limited ("the Company")** at the meeting held on August 12, 2025 approved the Unaudited Financial Results of the Company for the quarter ended June 30, 2025 ("**the Results**")

The complete results with the Limited Review Report of the Statutory Auditors have been posted on the website of stock exchanges (**www.bseindia.com** and **www.nseindia.com**) and Company's website at **https://indiqube.com/investor/** and can be accessed by scanning the QR code.

For and on Behalf of the Board of Directors
INDIQUBE SPACES LIMITED
Sd/-
Pranav Ayanath Kuttiyat
Company Secretary and Compliance Officer
Membership No: A57351

Place: Bengaluru, Karnataka
Date: August 14, 2025

Note: *The above information is in accordance with Regulation 33 read with Regulation 47 (1) of the SEBI (Listing Obligations and Disclosure Requirements) Regulations, 2015*

Adfactors 374/25

ಸಮಾಚಾರ ಸಣ್ಣದಲ್ಲ

ಮೀಡಿಯಾ ಕಿಟ್‌ಗೆ ಅರ್ಜಿ ಆಹ್ವಾನ

ಬೆಂಗಳೂರು: ಪತ್ರಿಕೋದ್ಯಮದಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಸಮುದಾಯಕ್ಕೆ ಸೇರಿರುವ ಪತ್ರಕರ್ತರನ್ನು ಪ್ರೋತ್ಸಾಹಿಸುವ ಸಲುವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ 2025-26ನೇ ಸಾಲಿಗೆ ಮಾಧ್ಯಮ ಮಾನ್ಯತೆ ಹೊಂದಿರುವ ಪತ್ರಕರ್ತರಿಗೆ ಮೀಡಿಯಾ ಕಿಟ್ ವಿತರಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹಿಂದುಳಿದ ವರ್ಗಗಳ ಮಾನ್ಯತೆ ಪಡೆದ ಪತ್ರಕರ್ತರು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸುದ್ದಿ ಮತ್ತು ಪತ್ರಿಕಾ ವಿಭಾಗದಿಂದ ಅಥವಾ ಆಯಾ ಜಿಲ್ಲಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಅಧಿಕಾರಿಗಳಿಂದ ಅರ್ಜಿ ನಮೂನೆಯನ್ನು ಪಡೆದುಕೊಳ್ಳುವುದು. ಇಲಾಖೆಯ ಮಾನ್ಯತಾ ಕಾರ್ಡ್ ಹೊಂದಿದ ಪತ್ರಕರ್ತರು ತಮ್ಮ ಹೆಸರು, ಜನ್ಮ ದಿನಾಂಕ, ಖಾಯಂ ವಿಳಾಸ, ವಿದ್ಯಾರ್ಹತೆ, ಜಾತಿ (ಉಪಜಾತಿ), ಪತ್ರಿಕಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸೇವಾನುಭವ, ವೇತನ ವಿವರಗಳನ್ನೊಳಗೊಂಡ ಮಾಹಿತಿಯನ್ನು ಭರ್ತಿ ಮಾಡಿ ಸ್ವ-ವಿಳಾಸವಿರುವ ಲಕೋಟೆಯೊಂದಿಗೆ ಸಲ್ಲಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಆಯಾ ಜಿಲ್ಲೆಗಳ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಚೇರಿಯನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು ಎಂದು ಇಲಾಖೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

3 ದಿನ ರಾಜಭವನ ಸಾರ್ವಜನಿಕರಿಗೆ ಮುಕ್ತ

ಬೆಂಗಳೂರು: 79ನೇ ಸ್ವಾತಂತ್ರ್ಯ ದಿನಾಚರಣೆ ಹಿನ್ನೆಲೆಯಲ್ಲಿ ಆ.16ರಿಂದ ಮೂರು ದಿನಗಳ ಕಾಲ ರಾಜಭವನ ವೀಕ್ಷಣೆಗೆ ಸಾರ್ವಜನಿಕರ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿದ್ದು, ಸದರಿ ಮೂರು ದಿನಗಳು ಸಂಜೆ 6 ರಿಂದ 7.30 ಗಂಟೆಯವರೆಗೆ ವೀಕ್ಷಣೆ ಮಾಡಬಹುದಾಗಿದೆ. ರಾಜಭವನದ ವೀಕ್ಷಣೆಗೆ ಆಗಮಿಸುವ ಸಾರ್ವಜನಿಕರು ಸರಕಾರದಿಂದ ವಿತರಿಸಿರುವ ಸ್ಪಷ್ಟವಾಗಿ ಭಾವಚಿತ್ರವಿರುವ ಐ.ಡಿ. ಕಾರ್ಡ್‌ನ್ನು ಕಡ್ಡಾಯವಾಗಿ ತರುವುದು. ರಾಜಭವನದ ಪ್ರವೇಶದ ಸಂದರ್ಭದಲ್ಲಿ ಕಡ್ಡಾಯವಾಗಿ ಭದ್ರತಾ ತಪಾಸಣೆಗೆ ಒಳಪಡುವುದು. ರಾಜಭವನದ ಆವರಣದೊಳಗೆ ವೀಕ್ಷಣೆಗೆ ಅವಕಾಶ ಮಾಡಿಕೊಟ್ಟಿರುವ ಸ್ಥಳಗಳನ್ನು ಬಿಟ್ಟು ಬೇರೆಡೆಗೆ ಪ್ರವೇಶಿಸಬಾರದು. ಸಾರ್ವಜನಿಕರು ಪ್ರವೇಶದ ಸಂದರ್ಭದಲ್ಲಿ ಮತ್ತು ಪ್ರವೇಶಿಸಿದ ನಂತರ ಭದ್ರತೆಯ ಅಧಿಕಾರಿ ಮತ್ತು ಸಿಬ್ಬಂದಿಗಳು ನೀಡುವ ಸಲಹೆ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸು ವುದು. ಸಾರ್ವಜನಿಕರು ರಾಜಭವನದ ಆವರಣ ದೊಳಗೆ ಶಾಂತಿ ಮತ್ತು ನಿಶಬ್ಧ ಕಾಪಾಡುವ ಮೂಲಕ ಸಹಕರಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಅರ್ಜಿ ಆಹ್ವಾನ

ಬೆಂಗಳೂರು: ಸಮಾಜ ಕಲ್ಯಾಣ ಇಲಾಖೆಯಡಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸ್ವಯಂ ಸೇವಾ ಸಂಸ್ಥೆಗಳ ಅರ್ಹ ಸ್ವಯಂ ಸೇವಾ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಸ್ವಯಂ ಸೇವಾ ಸಂಸ್ಥೆಗಳು ನೋಂದಾಯಿತ ಸಂಸ್ಥೆಯಾಗಿದ್ದು, ನೋಂದಣಿ ಪ್ರಮಾಣ ಪತ್ರ ಚಾಲ್ತಿಯಲ್ಲಿರಬೇಕು,ಮೂರು ವರ್ಷದ ಲೆಕ್ಕ ಪರಿಶೋಧನಾ ವರದಿ ದೃಢೀಕೃತ ಪ್ರತಿ ಸಲ್ಲಿಸಬೇಕು. ಎಸ್.ಸಿ/ಎಸ್.ಟಿ ಸಮುದಾಯದ ಅಭಿವೃದ್ಧಿಗಾಗಿ 5 ವರ್ಷ ಸೇವೆ ಸಲ್ಲಿಸಿರಬೇಕು, ಸೇವೆ ಸಲ್ಲಿಸಿರುವ ದೃಢೀಕೃತ ದಾಖಲೆಯನ್ನು ಸಲ್ಲಿಸ ಬೇಕು. ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಆಯೋಜಿಸಿರುವ ಬಗ್ಗೆ ದಾಖಲೆಗಳು, ಛಾಯಾಚಿತ್ರಗಳು ಮತ್ತು ಪತ್ರಿಕಾ ವರದಿಗಳನ್ನು ಸಲ್ಲಿಸಬೇಕು.ಕಾರ್ಯಾಗಾರಗಳನ್ನು ಆಯೋಜನೆ ಮಾಡುವ ಬಗ್ಗೆ ಮುಚ್ಚಳಿಕೆ ಪತ್ರ ಸಲ್ಲಿಸಬೇಕು. ಅರ್ಹ ಸ್ವಯಂ ಸೇವಾ ಸಂಸ್ಥೆಗಳು ಆ.19 ರೊಳಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ 27623681 ಸಂಪರ್ಕಿಸಲು ತಿಳಿಸಿದೆ.

17 ರಂದು ಸತೀಶ್ ಹಂಪಿಹೊಳಿ ಕಾರ್ಯಕ್ರಮ

ಬೆಂಗಳೂರು: ಪಂಡಿತ್ ಸತೀಶ್ ಹಂಪಿಹೊಳಿ ಅಭಿನಂದನಾ ಸಮಿತಿ ವತಿಯಿಂದ ಜಯನಗರದ ಜೆಎಸ್‌ಎಸ್ ಸಭಾಂಗಣದಲ್ಲಿ ಆ.17ರಂದು ಲಯ ಸಾಧಕ ಪಂಡಿತ್ ಸತೀಶ್ ಹಂಪಿಹೊಳಿ ಅಭಿನಂದನಾ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ನಿವೃತ್ತ ಲೋಕಾಯುಕ್ತ ಸಂತೋಷ್ ಹೆಗ್ಡೆ, ಖ್ಯಾತ ಶಿಕ್ಷಣ ತಜ್ಞ ನಾಡೋಜ ಡಾ. ವೂಡೇ ಪಿ ಕೃಷ್ಣ, ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟ ಪೂರ್ವ ಅಧ್ಯಕ್ಷ ನಾಡೋಜ ಡಾ.ಮನು ಬಳಿಗಾರ್, ಜಿ ಆರ್ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕಿ ಡಾ.ಗೀತಾ ರಾಮಾನುಜಂ, ಪ್ರಸಿದ್ದ ಚಲನಚಿತ್ರ ನಟ ಶ್ರೀನಿವಾಸ ಪ್ರಭು, ಖ್ಯಾತ ಹಿಂದೂಸ್ತಾನಿ ಗಾಯಕ ಪಂಡಿತ್ ಮೃತ್ಯುಂಜಯ ಶೆಟ್ಟರ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಮಧ್ಯಾಹ್ನದಂದು ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಂಡಿತ್ ಪ್ರವೀಣ್ ಗೋಡ್ಕಿಂಡಿ ಅವರ ಕೊಳಲು ವಾದನ ವಿರುತ್ತದೆ. ಪಂಡಿತ್ ಓಜಸ್ ಆದ್ಯ ತಬಲಾ ನುಡಿಸಲಿದ್ದಾರೆ. ವಿದುಷಿ ಪೂರ್ಣ ಆಚಾರ್ಯ ಹಾಗೂ ಶಿಷ್ಯ ವೃಂದದವರಿಂದ ಕಥಕ್ ನೃತ್ಯ ನಡೆಯಲಿದೆ. ತಾಲ್ ಯಾತ್ರದಲ್ಲಿ ಪಂಡಿತ್ ಸಂತೋಷ್ ಕುಲಕರ್ಣಿ ಹಾಗೂ ವಿದ್ಯಾರ್ಥಿಗಳು ನುಡಿಸಲಿದ್ದಾರೆ. ಪಂಡಿತ್ ಸತೀಶ್ ಹಂಪಿಹೊಳಿಯವರ ನಿರ್ದೇಶನದಲ್ಲಿ ನಡೆಯುವ ಸಂಗೀತ ಸಮ್ಮಿಲನದಲ್ಲಿ ವಿದುಷಿ ಪ್ರತಿಮಾ ಆತ್ರೇಯ, ಪಂಡಿತ್ ಸಂಜೀವ್ ಕೊರ್ತಿ, ಪಂಡಿತ್ ಅರಣ್ಯ ಕುಮಾರ್, ಪಂಡಿತ್ ಶಿವಲಿಂಗ ರಾಜಾಪೂರ್, ವಿದ್ವಾನ್ ಬಾಲಾಜಿ, ಪಂಡಿತ್ ಪ್ರಕಾಶ್ ಸಪ್ರೆ, ಪಂಡಿತ್ ಶಿವಕುಮಾರ್ ಮಹಾಂತ್ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ವಿರಾಮ
ಪ್ರತಿ ಭಾನುವಾರ

ವಾಕ್ಸಮರಕ್ಕೆ ವೇದಿಕೆಯಾದ ವಿಧಾನಸಭೆ

ಭ್ರಷ್ಟಾಚಾರದ ಪಿತಾಮಹ ನೀನು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ವಾಗ್ದಾಳಿ | ಹಾಲಿ-ಮಾಜಿ ಡಿಸಿಎಂ ನಡುವೆ ಏಕವಚನದಲ್ಲಿ ಟೀಕಾಪ್ರಹಾರ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ಮಾಜಿ-ಹಾಲಿ ಉಪಮುಖ್ಯಮಂತ್ರಿಗಳ ನಡುವೆ ಏಕವಚನದಲ್ಲಿ ಬೈದಾಡಿಕೊಂಡ ಘಟನೆ ಬುಧವಾರದ ಕಲಾಪದಲ್ಲಿ ನಡೆಯಿತು.

'ನೀನು ಭ್ರಷ್ಟಾಚಾರದ ಪಿತಾಮಹ, ನೀನು ಭ್ರಷ್ಟಾಚಾರಿ ಅಂತ ಇಡೀ ಲೋಕಕ್ಕೆ ಗೊತ್ತು' ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಮಾಜಿ ಡಿಸಿಎಂ ಅಶ್ವತ್ಥ ನಾರಾಯಣ ಮಧ್ಯೆ ಸದನದಲ್ಲಿ ಪರಸ್ಪರ ವಾಕ್ಸಮರ ನಡೆಯಿತು. ನಿಯಮ 69ರಡಿ ರಸಗೊಬ್ಬರ ಕೊರತೆ ವಿಚಾರದ ಚರ್ಚೆ ವೇಳೆ ಇಬ್ಬರ ನಡುವೆ ವಾಗ್ದಾಳಿ ನಡೆಯಿತು.

ರಸಗೊಬ್ಬರ ಸಮಸ್ಯೆ ಇರುವುದಕ್ಕೆ ನಾವು ಮಾತನಾಡುತ್ತಿರುವುದು, ಸಚಿವರು ಉತ್ತರ ಕೊಡಲಿ ಎಂದು ಅಶ್ವತ್ಥ ನಾರಾಯಣ ಏರು ದನಿಯಲ್ಲಿ ಮಾತನಾಡಿದರು. ಈ ವೇಳೆ, ಗೋಲಿಬಾರ್ ಆಗಿದ್ದು ಯಾವ ಸರಕಾರದಲ್ಲಿ ನಿಮ್ಮ ಸರಕಾರದಲ್ಲಿ ಆಗಿದ್ದು ಎಂದು ಸಚಿವ ಚೆಲುವರಾಯಸ್ವಾಮಿ ತಿರುಗೇಟು ನೀಡಿದರು. ಈ ವೇಳೆ ಅಶ್ವತ್ಥ ನಾರಾಯಣ, ಸ್ಮಾರ್ಟ್ ಮೀಟರ್ ವಿಚಾರದಲ್ಲಿ ಉತ್ತರ ಕೊಡಲು ಧಮ್ ಇಲ್ಲದೆ ಓಡೋಗಿರುವವರು ನೀವು ಎಂದು ಸಚಿವ ಕೆ.ಜೆ. ಜಾರ್ಜ್ ಮೇಲೆ ಹರಿಹಾಯ್ದರು. ಇದಕ್ಕೆ ಸಚಿವ ಜಾರ್ಜ್, ಅಶ್ವತ್ಥ ನಾರಾಯಣ ಇಡೀ ಡಿಪಾರ್ಟ್‌ಮೆಂಟ್ ಲೂಟಿ ಹೊಡೆದವರು ನೀವು ಎಂದು ತಿರುಗೇಟು ನೀಡಿದರು. ಈ ವೇಳೆ ಕೊಲೆಗಡುಕ ಸರಕಾರ, ಅಸಮರ್ಥರು, ಭ್ರಷ್ಟಾಚಾರ ಸರಕಾರ ಎಂದು ಅಶ್ವತ್ಥ ನಾರಾಯಣ ವಾಗ್ದಾಳಿ ನಡೆಸಿದರು.

ಈ ವೇಳೆ ಮಧ್ಯಪ್ರವೇಶಿಸಿದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಭ್ರಷ್ಟಾಚಾರ ಪಿತಾಮಹ ನೀನು ಎಂದು ಅಶ್ವತ್ಥ ನಾರಾಯಣ ವಿರುದ್ಧ ವಾಗ್ದಾಳಿ ನಡೆಸಿದರು. ಯಾರನ್ನು ಕೇಳಿದರು ಗೊತ್ತಾಗುತ್ತದೆ ಯಾರಪ್ಪ ಭ್ರಷ್ಟಾಚಾರದ ಪಿತಾಮಹ ಎಂದು ಅಶ್ವತ್ಥ ನಾರಾಯಣ ತಿರುಗೇಟು ನೀಡಿದರು. ಇದಕ್ಕೆ ಡಿಕೆಶಿ, ರಾಮನಗರಕ್ಕೆ ಬಂದಿದ್ದಲ್ಲಪ್ಪ ಒಂದು ಸೀಟು ಬರಲಿಲ್ಲ ನಿನಗೆ. ಒಬ್ಬ ಮೈನಾರಿಟಿ ಸಚಿವರಿಗೆ ಅಸಮರ್ಥರು ಎಂದು ನೀನು ಹೇಳುತ್ತಿದ್ದೆಯಾ ಎಂದು ಕಿಡಿಕಾರಿದರು. ಈ ವೇಳೆ ಕಾಂಗ್ರೆಸ್ ಹಾಗೂ ಬಿಜೆಪಿ ಸದಸ್ಯರ ಮಧ್ಯೆ ವಾಕ್ಸಮರ ನಡೆಯಿತು.

ಸ್ಪೀಕರ್ ಸಮ್ಮುಖದಲ್ಲಿ ಸಂಧಾನ ಸಭೆ: ವಾಕ್ಸಮರದ ಬಳಿಕ ಸ್ಪೀಕರ್ ಎರಡೂ ಕಡೆಯವರ ಜತೆ ಸಂಧಾನ ಸಭೆ ನಡೆಸಿದರು. ಮುಂದೆ ಸದನದಲ್ಲಿ ಹೀಗಾಗಬಾರದು ಎಂದು ಸೂಚಿಸಿದರು. ಬಳಿಕ ಈ ಬಗ್ಗೆ ಮಾತನಾಡಿದ ಸಿಎಂ ಸಿದ್ದರಾಮಯ್ಯ ನಾವೆಲ್ಲರೂ ಸಭ್ಯತೆ ಮೀರಿ ಮಾತನಾಡಬಾರದು. ಅಸಂಸದೀಯ ಪದಗಳನ್ನು ಬಳಕೆ ಮಾಡದೇ ಒಂದು ಚೌಕಟ್ಟಿನೊಳಗೆ ಮಾತನಾಡಬೇಕಾಗುತ್ತದೆ. ಇದನ್ನು ನಾವೆಲ್ಲರೂ ಪಾಲಿಸೋಣ, ಪ್ರತಿಪಕ್ಷಗಳಿಗೆ ಸರಕಾರವನ್ನು ಟೀಕಿಸುವ ಅಧಿಕಾರ ಇದೆ. ಟೀಕಿಸಿ, ತಪ್ಪುಗಳನ್ನು ಎತ್ತಿತೋರಿಸಿ, ನಾವು ಉತ್ತರ ಕೊಡಬೇಕಾದಾಗ ಕೊಡುತ್ತೇವೆ. ಆದರೆ ಟೀಕೆಗಳು ಸಭ್ಯತೆಯ ಎಲ್ಲೆ ಮೀರದಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ನಮ್ಮೆಲ್ಲರದ್ದು ಎಂದು ಸಲಹೆ ನೀಡಿದರು.

ಕೇಂದ್ರದಿಂದ ರಸಗೊಬ್ಬರ ಪೂರೈಕೆ ಕೊರತೆ

ಕೇಂದ್ರದಿಂದ ರಸಗೊಬ್ಬರ ಪೂರೈಕೆಯಲ್ಲಿ ಆಗಿರುವ ಕೊರತೆಯಿಂದಾಗಿ ರಾಜ್ಯದಲ್ಲಿ ರಸಗೊಬ್ಬರ ಸಮಸ್ಯೆ ಉಂಟಾಗಿದ್ದು, ಇದರಲ್ಲಿ ಯಾವುದೇ ರಾಜಕೀಯ ಮಾಡದೇ ಒಂದಾಗಿ ರೈತರ ಹಿತ ಕಾಯಬೇಕಿದೆ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದ್ದಾರೆ. ರಸಗೊಬ್ಬರ ಸಮಸ್ಯೆಯ ಮೇಲೆ ನಡೆದ ಚರ್ಚೆಗೆ ಉತ್ತರಿಸಿದ ಅವರು, ರಾಜ್ಯದಲ್ಲಿ ಮುಂಗಾರು ಬೇಗ ಪ್ರಾರಂಭವಾಗಿದ್ದು, ಬಿತ್ತನೆ ನಿರೀಕ್ಷೆಗೂ ಮುಂಚೆ ಚಾಲನೆಯಾಗಿದೆ. ಅಲ್ಲದೇ 2 ಲಕ್ಷ ಹೆಕ್ಟೇರ್ ಬಿಳಿ ಜೋಳ ಬಿತ್ತನೆ ಪ್ರದೇಶ ಹೆಚ್ಚಳವಾಗಿದ್ದು ಹಾಗೂ ಕೇಂದ್ರದಿಂದ ಈ ವರೆಗೆ 2.7 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರ ಪೂರೈಕೆ ಕೊರತೆಯಾಗಿದ್ದು ಸಮಸ್ಯೆಗೆ ಕಾರಣವಾಗಿದೆ ಆದರೂ ಲಭ್ಯವಿದ್ದ ಕಾಪುದಾಸ್ತಾನು ಬಳಸಿ ಬಹುತೇಕ ತೊಂದರೆಯನ್ನು ನಿಭಾಯಿಸಲಾಗಿದೆ ಎಂದು ಹೇಳಿದರು. ರಸಗೊಬ್ಬರ ಪೂರೈಕೆ ಸಂಪೂರ್ಣ ಕೇಂದ್ರದ ಜವಾಬ್ದಾರಿ ರಾಜ್ಯದಿಂದ 12.5 ಲಕ್ಷ ಮೆ.ಟನ್ ಯೂರಿಯಾಕ್ಕೆ ಬೇಡಿಕೆ ಸಲ್ಲಿಸಲಾಗಿತ್ತು ಕೇಂದ್ರದಿಂದ 11.7 ಲಕ್ಷ ಮೆ.ಟನ್ ಹಂಚಿಕೆ ಮಾಡಲಾಗಿತ್ತು. ಆಗಸ್ಟ್ ಅಂತ್ಯದವರೆಗೆ 9.05ಲಕ್ಷ ಮೆ.ಟನ್ ಪೂರೈಕೆ ಮಾಡಬೇಕಾಗಿತ್ತು ಆದರೆ ಈವರೆಗೆ 6.30 ಲಕ್ಷ ಮೆ.ಟನ್ ಮಾತ್ರ ಪೂರೈಕೆಯಾಗಿದೆ. ಹಿಂದೆ ಇದ್ದ 3.46 ಲಕ್ಷ ಮೆ.ಟನ್ ಕಾಪುದಾಸ್ತಾನು ಬಳಸಿ ಪರಿಸ್ಥಿತಿ ನಿಭಾಯಿಸಲಾಗಿದೆ. ಈ ಹಿಂದಿನ ವರ್ಷಗಳಲ್ಲಿ ಕಾಪುದಾಸ್ತಾನು ಪರಿಗಣಿಸಿದೆ ರಸಗೊಬ್ಬರವನ್ನು ರಾಜ್ಯಕ್ಕೆ ಪೂರೈಕೆ ಮಾಡಲಾಗುತ್ತಿತ್ತು ಆದರೆ ಈ ಬಾರಿ ಸರಬರಾಜಿನಲ್ಲಿ ಕೊರತೆ ಮಾಡಲಾಗಿದೆ ಎಂದರು.

ಒಬ್ಬ ಹಿರಿಯ ಸದಸ್ಯರು, ಸಚಿವರಾದ ಜಾರ್ಜ್ ಬಗ್ಗೆ ಹಿಗ್ಗಾಮುಗ್ಗಾ ವಾಗ್ದಾಳಿ ನಡೆಸುವುದನ್ನು ಪಕ್ಷದ ಅಧ್ಯಕ್ಷನಾಗಿ, ಅವರ ಕೆಳಗೆ ಕೆಲಸ ಮಾಡಿದ ಒಬ್ಬ ಕಾರ್ಯಕರ್ತನಾಗಿ ಸಹಿಸಿಕೊಳ್ಳಲು ಸಾಧ್ಯವಿಲ್ಲ. ನಾನು 8 ಸಲ ಸತತವಾಗಿ ಆಯ್ಕೆ ಆಗಿ ಬಂದಿದ್ದು, ಹಲವು ಸಿಎಂಗಳು, ಸಂಸದೀಯ ಪಟುಗಳ ಜತೆ ಕೆಲಸ ಮಾಡಿದ ಅನುಭವ ಪಡೆದುಕೊಂಡಿದ್ದೇನೆ.

– **ಡಿ.ಕೆ.ಶಿವಕುಮಾರ್** ಉಪಮುಖ್ಯಮಂತ್ರಿ

ಹಿರಿಯರಾದ ಶಿವಕುಮಾರ್ ಅವರೇ ನೀವು ಸಂಯಮ ಕಳೆದುಕೊಳ್ಳಬಾರದಿತ್ತು. ನೀವು ಇನ್ನೂ ಬಹುದೂರ ಸಾಗಬೇಕಾದವರು. ಅಷ್ಟೇ ಅಲ್ಲ ಪ್ರತಿಪಕ್ಷಗಳ ಸದಸ್ಯರ ಪ್ರಶ್ನೆ ಸಚಿವರು ಉತ್ತರಿಸುವಾಗ ಹಿಂದೆ ಎದ್ದು ನಿಂತು ಮಾತನಾಡುವುದನ್ನು ಕಡಿಮೆ ಮಾಡಬೇಕು. ಎಲ್ಲ ಹಿರಿಯ ಸಚಿವರು ಅನುಭವ ಇದ್ದವರಿದ್ದಾರೆ. ಹಿರಿಯರು ಮಾತನಾಡುವಾಗ ಅಡ್ಡ ಮಾತನಾಡುವುದು ಸರಿಯಲ್ಲ. ಸದನದ ಘನತೆಯನ್ನು ಎಲ್ಲರೂ ಉಳಿಸೋಣ.

– **ಆರ್. ಅಶೋಕ್** ಪ್ರತಿಪಕ್ಷ ನಾಯಕ

ಸ್ವಾತಂತ್ರ್ಯೋತ್ಸವ ಆಚರಣೆಗೆ ಸಿದ್ಧತೆ

ಬೆಂಗಳೂರು: ಬೆಂಗಳೂರಿನಲ್ಲಿ 79ನೇ ಸ್ವಾತಂತ್ರ್ಯೋತ್ಸವ ಆಚರಣೆಗೆ ಸಿದ್ಧತೆಗಳು ನಡೆಯುತ್ತಿದ್ದು, ಮೊದಲ ಬಾರಿಗೆ ಮಾಣಿಕ್ ಷಾದಲ್ಲಿ ಪರೇಡ್ ವೀಕ್ಷಣೆಗೆ ಸಾರ್ವಜನಿಕರಿಗೆ ಅವಕಾಶ ನೀಡಲಾಗುತ್ತಿದೆ.

ಬಿಬಿಎಂಪಿ, ಬೆಂಗಳೂರು ಪೊಲೀಸ್ ಇಲಾಖೆ ಹಾಗೂ ಬೆಂಗಳೂರು ನಗರ ಜಿಲ್ಲಾಡಳಿತ ಸ್ವಾತಂತ್ರ್ಯೋತ್ಸವದ ಆಚರಣೆಗೆ ಸಕಲ ಸಿದ್ಧತೆ ಮಾಡಿಕೊಂಡಿದೆ. ಆ.15 ಬೆಳಗ್ಗೆ 9 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಧ್ವಜಾರೋಹಣ ನೆರವೇರಿಸಲಿದ್ದಾರೆ. ಈ ವರ್ಷ ಅಂದಾಜು ಎಂಟು ಸಾವಿರ ಜನರಿಗೆ ಆಸನದ ವ್ಯವಸ್ಥೆ ಮಾಡಲಾಗಿದೆ.

ಮಾಣಿಕ್ ಷಾ ಗ್ರೌಂಡ್‌ನಲ್ಲಿ ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್, ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಹಾಗೂ ಬೆಂಗಳೂರು ನಗರ ಡಿಸಿ ಜಗದೀಶ್ ಜಂಟಿ ಸುದ್ದಿಗೋಷ್ಠಿ ನಡೆಸಿದರು.

ಸುದ್ದಿಗೋಷ್ಠಿ ಬಳಿಕ ಬಿಬಿಎಂಪಿ ಕಮಿಷನರ್ ಮಹೇಶ್ವರ್ ರಾವ್ ಮಾತನಾಡಿ, ಮಳೆ ಬಂದರೆ ತೊಂದರೆಯಾಗದಂತೆ ಶಾಮಿಯಾನ, ವೇದಿಕೆಯ ನಿರ್ಮಾಣ ಮಾಡಲಾಗಿದೆ. ಸಿಎಂ ಸಿದ್ದರಾಮಯ್ಯ ಧ್ವಜಾರೋಹಣ ನೆರವೇರಿಸಲಿದ್ದಾರೆ. ಬಳಿಕ ತೆರೆದ ಜೀಪಿನಲ್ಲಿ ಪರೇಡ್ ಪರಿವೀಕ್ಷಣೆ ಮತ್ತು ಗೌರವ ರಕ್ಷೆ ಸ್ವೀಕರಿಸಿ ನಾಡಿನ ಜನತೆಗೆ ಸ್ವಾತಂತ್ರ್ಯೋತ್ಸವದ ಸಂದೇಶ ನೀಡಲಿದ್ದಾರೆ. ಈ ವರ್ಷ ಪ್ರಪ್ರಥಮ ಬಾರಿಗೆ ಎರಡು ಸಾವಿರ ಜನರಿಗೆ ಇ-ಪಾಸ್ ವ್ಯವಸ್ಥೆ ಮಾಡಲಾಗಿದೆ. ಈ ಪಾಸ್‌ನ್ನು ಸೇವಾ ಸಿಂಧು ಪೋರ್ಟಲ್ ಮೂಲಕ ಪಡೆದು, ಗೇಟ್ ನಂಬರ್ 5ರ ಮೂಲಕ ಪ್ರವೇಶ ಪಡೆಯಬಹುದಾಗಿದೆ ಎಂದರು. ಬೆಂಗಳೂರು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಮಾತನಾಡಿ, ಸಿಟಿ ಪೊಲೀಸ್ ವತಿಯಿಂದ ವಿಶೇಷವಾಗಿ ಸಿಸಿಟಿವಿ, ಡಾಗ್ ಸ್ಕ್ವಾಡ್ ಸೇರಿದಂತೆ ಎಲ್ಲಾ ಸೆಕ್ಟರ್‌ನಿಂದಲೂ ಬಿಗಿ ಬಂದೋಬಸ್ತ್ ಮಾಡಿದ್ದೇವೆ. ಪಾರ್ಕಿಂಗ್ ಜಾಗ ಕಡಿಮೆಯಿದೆ. ಜನರು ಪಬ್ಲಿಕ್ ಟ್ರಾನ್ಸ್‌ಪೋರ್ಟ್ ಬಳಸಿ. ಕೆಲವೊಂದು ರಸ್ತೆಗಳನ್ನು ಬಂದ್ ಮಾಡಲಾಗಿದೆ. ಇ-ಪಾಸ್ ತೆಗೆದುಕೊಂಡವರು ಬೆಳಗ್ಗೆ 8:30ರ ಒಳಗೆ ಪ್ರವೇಶಿಸಬೇಕು. ತಡವಾಗಿ ಬರಬಾರದು. ಮೈದಾನದಲ್ಲಿ ಎರಡು ಸಾವಿರ ಪೊಲೀಸ್ ಸಿಬ್ಬಂದಿಯನ್ನು ಭದ್ರತೆ ಕಾರ್ಯಕ್ಕೆ ನಿಯೋಜಿಸಲಾಗಿದೆ. ಮೈದಾನದ ಸುತ್ತ ಭದ್ರತೆ ಮತ್ತು ಸುರಕ್ಷತೆಗಾಗಿ ಈಗಾಗಲೇ ಸಿಸಿ ಕ್ಯಾಮೆರಾ ವ್ಯವಸ್ಥೆಯಿದ್ದು, ಈ ಸಮಾರಂಭಕ್ಕಾಗಿ 100 ಸಿಸಿಟಿವಿಗಳನ್ನು ಹೆಚ್ಚುವರಿಯಾಗಿ ನಿಯೋಜನೆ ಮಾಡಲಾಗಿದೆ. ಕೆಎಸ್‌ಆರ್‌ಪಿ ಸೇರಿ ವಿವಿಧ ಪೊಲೀಸ್ ಇಲಾಖೆಯ 35 ತುಕಡಿಗಳಲ್ಲಿ 1,150 ಮಂದಿ ಭಾಗಿಯಾಗಲಿದ್ದಾರೆ ಎಂದು ಹೇಳಿದರು.

ಕಸಾಪದಿಂದ ಕನ್ನಡದ ಮನೆ ಕನ್ನಡದ ಮನ' ಅಭಿಯಾನ

ಬೆಂಗಳೂರು: ಕನ್ನಡ ಭಾಷೆ ತನ್ನದೇ ಅಸ್ಮಿತೆಯನ್ನು ಪ್ರಾಚೀನತೆಯನ್ನು ಹಾಗೂ ಪರಂಪರೆ ಮತ್ತು ಅನನ್ಯತೆಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಕನ್ನಡ ಮನೆ-ಕನ್ನಡದ ಮನ ವಿಶೇಷ ಅಭಿಯಾನವನ್ನು ಆ.15ರಿಂದ ಆಯೋಜಿಸಲಾಗುವುದು ಎಂದು ಕಸಾಪ ಅಧ್ಯಕ್ಷ ನಾಡೋಜ ಮಹೇಶ್ ಜೋಶಿ ಹೇಳಿದರು. ಕನ್ನಡದ ಲಿಪಿಯನ್ನು ಲಿಪಿಗಳ ರಾಣಿ ಎಂದೇ ವಿನೋಬಾ ಭಾವೆಯವರು ಕರೆದಿದ್ದರು. ಹೀಗೆ ಕರೆಯುವುದಕ್ಕೆ ಭಾಷೆಗೆ ಇರುವ ಅನನ್ಯ ಗುಣಗಳು ಕಾರಣವಾದವು. ಕನ್ನಡ ಭಾಷೆ ನುಡಿದಂತೆ-ಬರೆಯುವ, ಬರೆದಂತೆ ಉಚ್ಚರಿಸುವ, ಸಂವಹನವನ್ನೂ ಕೂಡ ನಡೆಸುವಂತಹ ಭಾಷೆ. ಕನ್ನಡ ಪದಗಳ ಸ್ವರೂಪದಲ್ಲಿ ಸ್ಪಷ್ಟತೆ ಇದೆ. ಅಚ್ಚಗನ್ನಡ ಪದಗಳ ವ್ಯಾಪ್ತಿ ಬಹಳ ವಿಶಾಲವಾದದ್ದು. ಯುವ ಪೀಳಿಗೆಯಲ್ಲಿ ಹೀಗೆ ಅಚ್ಚಗನ್ನಡ ಶಬ್ದಗಳ ಕುರಿತು ಜಾಗೃತಿ ಮೂಡಿಸುವುದು ಇಂದಿನ ಅಗತ್ಯವಾಗಿದೆ ಎಂದರು.

ಕನ್ನಡ ಪದಗಳನ್ನು ಉಳಿಸಲು' ಕನ್ನಡದ ಮನೆ-ಕನ್ನಡದ ಮನ' ಎಂಬ ಅಭಿಯಾನವನ್ನು ಕಸಾಪ ಆರಂಭಿಸಲಿದೆ. ನೀವೂ ಈ ಅಭಿಯಾನದಲ್ಲಿ ಭಾಗವಹಿಸಬಹುದು. ಪ್ರತಿ ನಿತ್ಯವೂ ಬೆಳಗ್ಗೆ-ರಾತ್ರಿ ಕನಿಷ್ಟ ಅರ್ಧ ಗಂಟೆ ಕನ್ನಡದಲ್ಲಿ ಕುಟುಂಬದ ಜತೆ ಅದರಲ್ಲಿಯೂ ಮಕ್ಕಳ ಜತೆಯಲ್ಲಿ ಮಾತನಾಡಿ ಕನ್ನಡ ಬಳಕೆಯ ಕುರಿತು ಜಾಗೃತಿಯನ್ನು ಉಂಟು ಮಾಡುವ ಕೆಲಸವನ್ನು ನೀವು ಮಾಡಬಹುದು. ನಿಮ್ಮ ಮನೆಯಲ್ಲಿ ಬಳಕೆಯಾಗುತ್ತಿರುವ ಕನ್ನಡ ಪದಗಳ ಪಟ್ಟಿಯನ್ನು ಮತ್ತು ಅದನ್ನು ಉಳಿಸಲು ನೀವು ಮಾಡುತ್ತಿರುವ ಪ್ರಯತ್ನವನ್ನು ಕನ್ನಡ ಸಾಹಿತ್ಯ ಪರಿಷತ್ತಿಗೆ ಬರೆದು ಕಳುಹಿಸಿ ವಿಸ್ತಾರಕ್ಕೆ ಕಾರಣವಾಗಬಹುದು ಎಂದರು.

ಸಿಲಿಕಾನ್ ಬೀಚ್ ಪ್ರೋಗ್ರಾಂ ಹೋಮ್ ಕಮಿಂಗ್ ಫ್ಲ್ಯಾಟ್ ಪಾರ್ಮ್ ಪ್ರಾರಂಭ

ಬೆಂಗಳೂರು: ಸಿಲಿಕಾನ್ ಬೀಚ್ ಪ್ರೋಗ್ರಾಂ ಹೋಮ್ ಕಮಿಂಗ್ ಫ್ಲ್ಯಾಟ್ ಪಾರ್ಮ್‌ಅನ್ನು ಬುಧವಾರ ಪ್ರಾರಂಭಿಸಿದ್ದು, ಕರಾವಳಿ ಕರ್ನಾಟಕಕ್ಕೆ ಅನುಭವಿ ವೃತ್ತಿಪರರು ಮರಳಲು ಬೆಂಬಲಿಸಲು ಉತ್ತಮ ಯೋಜನೆಯಾಗಿದೆ. ಈ ಉಪಕ್ರಮವನ್ನು ಮಂಗಳೂರು ಸಂಸದ ಬ್ರಿಜೇಶ್ ಚೌಟ, ಉದ್ಯಮದ ಮುಖಂಡರು ಮತ್ತು ಉದ್ಯಮಿಗಳ ಸಮ್ಮುಖದಲ್ಲಿ ಉದ್ಘಾಟಿಸಿದರು.

ಎಸ್‌ಬಿಪಿ ಸಂಚಾಲಕ ರೋಹಿತ್ ಭಟ್ ಮಾತನಾಡಿ, ಕರಾವಳಿ ಕರ್ನಾಟಕದ ಸಂಪರ್ಕ ಹೊಂದಿರುವ ಅನುಭವಿ ವೃತ್ತಿಪರರು ತಮ್ಮ ಬೇರುಗಳಿಗೆ ಮರಳುವ ಪ್ರವೃತ್ತಿಯನ್ನು ಅಳೆಯಲು, ನಡೆಸಿದ ಸಮೀಕ್ಷೆಯಲ್ಲಿ ಶೇ.95ಕ್ಕೂ ಹೆಚ್ಚು ವೃತ್ತಿಪರರು ಸೂಕ್ತ ಅವಕಾಶಗಳು ಲಭ್ಯವಿದ್ದರೆ ಮರಳಲು ಸ್ಪಷ್ಟ ಆಸಕ್ತಿಯನ್ನು ತೋರಿಸಿದ್ದಾರೆ ಎಂದು ಹೇಳಿದರು.

ಹೆಚ್ಚಿನ ಕಂಪನಿಗಳು ಭಾರತದ ಸಿಲಿಕಾನ್ ಬೀಚ್‌ಗೆ ಸ್ಥಳಾಂತರಗೊಂಡಂತೆ ಅನುಭವಿ ವೃತ್ತಿಪರರನ್ನು ನೇಮಿಸಿಕೊಳ್ಳಲು ಎದುರು ನೋಡುತ್ತಿದ್ದು, ಈ ವೇದಿಕೆಯು ಅಂತಹ ಕಂಪನಿಗಳು ಆ ಪಾತ್ರಗಳನ್ನು ತ್ವರಿತವಾಗಿ ತುಂಬಲು ಮತ್ತು ತ್ವರಿತವಾಗಿ ಅಳೆಯಲು ಸಹಾಯ ಮಾಡುತ್ತದೆ ಎಂದರು.

ಹೆಚ್ಚಿನ ಕಂಪನಿಗಳು ಈ ಪ್ರದೇಶದ ಪ್ರತಿಭೆಯ ಅನುಕೂಲಗಳನ್ನು ಅರಿತುಕೊಂಡಂತೆ, ಅವರು ನಮ್ಮ ಅನುಭವಿ ವೃತ್ತಿಪರರನ್ನು ಸ್ಥಳೀಯ ಸ್ಪರ್ಶದೊಂದಿಗೆ ಹುಡುಕುತ್ತಾರೆ ಮತ್ತು ಈ ವೇದಿಕೆ ಅದಕ್ಕೆ ಸಹಾಯ ಮಾಡುತ್ತದೆ. ಇದಲ್ಲದೆ, ಅನೇಕ ವೃತ್ತಿಪರರು ತಮ್ಮ ಬೇರುಗಳೊಂದಿಗೆ ಮರುಸಂಪರ್ಕಿಸಲು ಮತ್ತು ಅವರನ್ನು ರೂಪಿಸಿದ ಸಮುದಾಯಗಳಲ್ಲಿ ಶಾಶ್ವತವಾದ ಪ್ರಭಾವ ಬೀರಲು ಬಯಸುತ್ತಾರೆ. ಹಿಂದಿರುಗುವ ಪ್ರತಿಯೊಬ್ಬ ವೃತ್ತಿಪರರು ಪ್ರತಿಭೆಯನ್ನು ಅವರು ಸೇರಿರುವ ಸ್ಥಳದಲ್ಲಿಯೇ ಉಳಿಯಲು ಬಿಡುವ ಮೂಲಕ ಕನಿಷ್ಠ 15-25 ಹೊಸ ಎಂಜಿನಿಯರ್ ಅಥವಾ ಪದವೀಧರರನ್ನು ಸುಲಭವಾಗಿ ಪಡೆದುಕೊಳ್ಳಬಹುದು.

ಮಹಾನಗರಗಳಲ್ಲಿ ಕೆಲಸ ಮಾಡುವ ಅನುಭವಿ ವೃತ್ತಿಪರರು ಸಂಚಾರ, ನೀರು, ಮಾಲಿನ್ಯ ಸಮಸ್ಯೆಗಳಿಂದ ಬೇಸತ್ತಿದ್ದಾರೆ. ಅದು ಅವರ ಜೀವನದ ಗುಣಮಟ್ಟವನ್ನು ಗಂಭೀರವಾಗಿ ಕುಗ್ಗಿಸುತ್ತಿದೆ. ಸರಿಯಾದ ಅವಕಾಶಗಳು ಅಸ್ತಿತ್ವದಲ್ಲಿದ್ದರೆ, ಅವರು ಪರಿಚಿತ ಪ್ರದೇಶಕ್ಕೆ ಹಿಂತಿರುಗುವುದನ್ನು ಪರಿಗಣಿಸುತ್ತಾರೆ.

–**ಬ್ರಿಜೇಶ್ ಚೌಟ** ಸಂಸದ

ಸಮಾಜದಲ್ಲಿ ಸಾಮಾಜಿಕ ಮೌಲ್ಯಗಳು ಪತನ

ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆಯಿಂದ ಕಳವಳ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು/ಭುವನೇಶ್ವರ

ಸಮಾಜದಲ್ಲಿ ಸಾಮಾಜಿಕ ಮೌಲ್ಯಗಳು ಪತನವಾಗುತ್ತಿದ್ದು, ಇದರ ಪರಿಣಾಮ ಮುಂದಿನ ಪೀಳಿಗೆಯ ಮೇಲೆ ಉಂಟಾಗಲಿದೆ ಎಂದು ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಹೇಳಿದರು.

ಭುವನೇಶ್ವರದ ಕಿಸ್, ಕಿಟ್ ಮತ್ತು ಕಿಮ್ಸ್ ಶಿಕ್ಷಣ ಸಂಸ್ಥೆಯಿಂದ ಸ್ಕೂಲ್ ಆಫ್ ಲಾ ಸಭಾಂಗಣದಲ್ಲಿ ಆಯೋಜಿಸಿದ್ದ ಸಾಮಾಜಿಕ ಮೌಲ್ಯಗಳ ಪತನ ಮತ್ತದರ ಪರಿಣಾಮಗಳು ಕುರಿತು ಉಪನ್ಯಾಸ ನೀಡಿ, ವಿದ್ಯಾರ್ಥಿಗಳಿಗೆ ನೈತಿಕ ಶಿಕ್ಷಣ ದೊರೆಯುತ್ತಿಲ್ಲ. ಪ್ರತಿಯೊಂದು ವೃತ್ತಿಯಲ್ಲೂ ಮೌಲ್ಯಗಳು ಕ್ಷೀಣಿಸುತ್ತಿವೆ. ಇದರಿಂದ ಭ್ರಷ್ಟಾಚಾರ ಸೇರಿ ಹಲವು ಜ್ವಲಂತ ಸಮಸ್ಯೆಗಳು ತಲೆದೋರುತ್ತಿವೆ. ಮೌಲ್ಯಗಳ ಪುನರ್ ಸ್ಥಾಪನೆ ಇಂದಿನ ಅಗತ್ಯ. ಭ್ರಷ್ಟಾಚಾರಿಗಳಿಗೆ ಕಾನೂನಿನ ಹೆದರಿಕೆ ಇಲ್ಲವಾಗಿದೆ. ವಿದ್ಯಾವಂತರಿಂದಲೇ ಈ ಪಿಡುಗು ವೃದ್ಧಿಸುತ್ತಿರುವುದು ಮತ್ತಷ್ಟು ಕಳವಳ ತಂದಿದೆ. ಶಿಕ್ಷಣ ಸಂಸ್ಥೆಗಳು ವಿದ್ಯೆಯ ಜತೆ ವಿದ್ಯಾರ್ಥಿಗಳ ಉತ್ತಮ ವ್ಯಕ್ತಿತ್ವ ನಿರ್ಮಾಣಕ್ಕೆ ಆದ್ಯತೆ ನೀಡಬೇಕು. ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡಲು ಯುವ ಸಮೂಹ ಮುಂದಾಗಬೇಕು. ಶಿಕ್ಷಣ ಕ್ಷೇತ್ರ ಇಂದು ಅಗಾಧವಾಗಿ ಬೆಳವಣಿಗೆಯಾಗುತ್ತಿದ್ದು, ರಾಷ್ಟ್ರ ನಿರ್ಮಾಣದಲ್ಲಿ ಶಿಕ್ಷಣ ಸಂಸ್ಥೆಗಳ ಪಾತ್ರ ಅನನ್ಯ ಎಂದು ಹೇಳಿದರು.

ಕಳೆದ 15 ವರ್ಷಗಳಲ್ಲಿ 1860ಕ್ಕೂ ಅಧಿಕ ಶಾಲೆಗಳು, ಶಿಕ್ಷಣ ಸಂಸ್ಥೆಗಳಿಗೆ ತಾವು ಭೇಟಿ ನೀಡಿದ್ದು, ಈ ಪೈಕಿ ಕಳಿಂಗ ಶಿಕ್ಷಣ ಸಂಸ್ಥೆ ಸರ್ವಶ್ರೇಷ್ಠವಾದದ್ದು. ಇಲ್ಲಿ ವಿದ್ಯಾರ್ಥಿಗಳಿಗೆ ಸಮಗ್ರ ಶಿಕ್ಷಣ ದೊರೆಯುತ್ತಿದೆ. ಬುಡಕಟ್ಟು ಸಮುದಾಯ, ಬಡವರು, ಬಲ್ಲಿದರು ಸೇರಿದಂತೆ ಪ್ರತಿಯೊಬ್ಬರಿಗೂ ಒಂದೇ ಸೂರಿನಡಿ ಸಮಗ್ರ ಶಿಕ್ಷಣ ದೊರೆಯುತ್ತಿದೆ. 20 ಸಾವಿರಕ್ಕೂ ಅಧಿಕ ಬೋಧಕರು, ಬೋಧಕೇತರರ ಬಹುದೊಡ್ಡ ಶೈಕ್ಷಣಿಕ ನಿಧಿ ಇದಾಗಿದೆ. ಅಧಿಕ ಪ್ರಮಾಣದಲ್ಲಿ ಬಡವರಿಗೆ ಉಚಿತ ಊಟ, ವಸತಿ, ಶಿಕ್ಷಣ ದೊರೆಯುತ್ತಿರುವುದು ಶ್ಲಾಘನೀಯ ಎಂದರು.

ಸ್ಕೂಲ್ ಆಫ್ ಲಾ ನಿರ್ದೇಶಕ ಪ್ರೊ.ರೋಸ್ ವರ್ಗೀಸ್, ಪ್ರಾಧ್ಯಾಪಕ ಪ್ರೊ. ಎನ್.ಎಲ್ ಮಿತ್ರ ಮತ್ತಿತರರು ಇದ್ದರು.

ಭುವನೇಶ್ವರದ ಕಿಸ್, ಕಿಟ್ ಮತ್ತು ಕಿಮ್ಸ್ ಶಿಕ್ಷಣ ಸಂಸ್ಥೆಯಿಂದ ಸ್ಕೂಲ್ ಆಫ್ ಲಾ ಸಭಾಂಗಣದಲ್ಲಿ ಆಯೋಜಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅವರನ್ನು ಹೂಗುಚ್ಛ ನೀಡಿ ಗೌರವಿಸಲಾಯಿತು.

ಕಳಿಂಗ ಶಿಕ್ಷಣ ಸಂಸ್ಥೆ ಬಗ್ಗೆ ಮೆಚ್ಚುಗೆ

ಕಳಿಂಗ ಶಿಕ್ಷಣ ಸಂಸ್ಥೆಯ ಮುಖ್ಯಸ್ಥ ಅಚ್ಯುತಾ ಸಮಂತ್ ದೇಶದಲ್ಲೆಲ್ಲೂ ಕಂಡು ಕೇಳರಿಯದ ದೊಡ್ಡ ಪ್ರಮಾಣದ ಹೊರೆಯನ್ನು ತಮ್ಮ ಭುಜದ ಮೇಲೆ ಹೊತ್ತುಕೊಂಡಿದ್ದಾರೆ. ಹೀಗಾಗಿ ಇವರನ್ನು ಅಟ್ಲಾಸ್ ಭೂಮಂಡಲ ಸಮಂತ ಎಂದು ಕರೆಯಲು ಇಚ್ಛಿಸುತ್ತೇನೆ. ಎಲ್ಲಾ ರೀತಿಯಿಂದಲೂ ಈ ಶಿಕ್ಷಣ ಸಂಸ್ಥೆ ಅತ್ಯುತ್ತಮವಾಗಿದೆ ಎಂದು ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಮೆಚ್ಚುಗೆ ವ್ಯಕ್ತಪಡಿಸಿದರು.

20 ನಿಮಿಷಕ್ಕಿಂತ ಹೆಚ್ಚು ಸಮಯ ಮೆಟ್ರೋ ನಿಲ್ದಾಣದಲ್ಲಿ ಕಾದಿದ್ದ ಪ್ರಯಾಣಿಕ

ಮೆಟ್ರೋ ರೈಲು ಮಿಸ್ ಮಾಡಿಕೊಂಡಿದ್ದಕ್ಕೆ ₹50 ದಂಡ

ಬೆಂಗಳೂರು: ನಮ್ಮ ಮೆಟ್ರೋದ ಹಳದಿ ಮೆಟ್ರೋ ರೈಲಿ ಸಂಚಾರ ಆರಂಭವಾದ ಬೆನ್ನಲ್ಲೇ ಪ್ರಯಾಣಿಕನೊಬ್ಬನು ಮೆಟ್ರೋ ರೈಲು ಮಿಸ್ ಮಾಡಿಕೊಂಡಿದ್ದಕ್ಕೆ 50 ರು. ದಂಡ ಪಾವತಿಸಬೇಕಾಗಿ ಬಂದಿದೆ.

ಆ.10ರಂದು ಪ್ರಧಾನಿ ನರೇಂದ್ರ ಮೋದಿಯವರಿಂದ ಉದ್ಘಾಟನೆಯಾದ ಮರುದಿನದಿಂದ ವಾಣಿಜ್ಯ ಕಾರ್ಯಾಚರಣೆ ಆರಂಭವಾಗಿದ್ದು, ಮೆಟ್ರೋ ರೈಲು ಪ್ರಯಾಣಿಕರಿಂದ ತುಂಬಿ ತುಳುಕಿತ್ತು. ಪ್ರಯಾಣಿಕರ ಸಂಖ್ಯೆಯ 10 ಲಕ್ಷ ದಾಟಿದೆ. ಈ ನಡುವೆ ಹಳದಿ ಮೆಟ್ರೋ ರೈಲು ತಪ್ಪಿಸಿಕೊಂಡ ಪ್ರಯಾಣಿಕರೊಬ್ಬರು 20 ನಿಮಿಷಕ್ಕೂ ಅಧಿಕ ಸಮಯ ಕಾದಿದ್ದಕ್ಕಾಗಿ 50 ರು. ದಂಡ ಪಾವತಿಸಬೇಕಾದ ಘಟನೆ ನಡೆದಿದೆ.

ನಮ್ಮ ಮೆಟ್ರೋದಲ್ಲಿ ನಿಗದಿತ ಸಮಯಕ್ಕಿಂತ ಹೆಚ್ಚು ಸಮಯ ಒಂದೇ ನಿಲ್ದಾಣದಲ್ಲಿ ಕಾಯುವಂತಿಲ್ಲ ಎಂಬ ನಿಯಮವಿದ್ದು, ಇದು ಕೆಲವರಿಗೆ ಗೊತ್ತಿದ್ದರೆ ಮತ್ತೆ ಕೆಲವರಿಗೆ ಗೊತ್ತಿಲ್ಲದೆ ದಂಡ ಕಟ್ಟುತ್ತಾರೆ. ಇದೀಗ ಇಂತಹದೇ ಒಂದು ಘಟನೆ ನಡೆದಿದೆ. ಮೆಟ್ರೋ ಹಳದಿ ಮಾರ್ಗ ಆರಂಭದ ಎರಡನೇ ದಿನವೇ ಮೆಟ್ರೋ ಮಿಸ್ ಮಾಡಿಕೊಂಡ ಪ್ರಯಾಣಿಕನಿಗೆ 50 ರು.ದಂಡ ವಿಧಿಸಲಾಗಿದೆ.

Bangalore Namma Metro
Fare Collection System
RECEIPT
Tax ID:

Receipt No: 004-1-120825-1839-03
Date and Time: 12 AUG 2025 18:39
Line ID: OCC
Station Name: Central Silk Board
EFO ID: E51, BGL.TE.04.00.01
Operator ID: 50902
Engraved ID:
Physical ID:
Card Name: Standard CSC
Ticket Type: VARSHIK
Media Type: SVT
Card Validity: 24-APR-2031
Payment Type: Purse

Upgrade - Excess Time

Penalty Name 1:
CSC Same Station Over Stay

Penalty Amount 1: 50.00
Total Amount Payable: 50.00

Amount Received: 50.00

ಸಿಲ್ಕ್ ಬೋರ್ಡ್ ಟು ಆರ್.ವಿ ರಸ್ತೆಗೆ ಹೋಗುವ ಸಲುವಾಗಿ ಪ್ರಯಾಣಿಕ ಟಿಕೆಟ್ ಪಡೆದು ಒಳಗೆ ಹೋಗಿದ್ದಾರೆ. ರೈಲು ಬರುವವರೆಗೂ ಕಾದಿದ್ದಾರೆ. ಆದರೆ, ಜನ ಹೆಚ್ಚು ಇದ್ದಿದ್ದರಿಂದ ಬಂದ ರೈಲು ಹತ್ತಲು ಸಾಧ್ಯವಾಗಿಲ್ಲ. ಬಳಿಕ ಮುಂದಿನ ರೈಲಿಗಾಗಿ 25 ನಿಮಿಷ ಕಾಯಲು ಸಾಧ್ಯವಿಲ್ಲ ಎಂದು ವಾಪಸ್ ಬರಲು ತೀರ್ಮಾನಿಸಿದ್ದಾರೆ. ಆದರೆ, ಹೊರಗೆ ಬರುವಾಗ 20 ನಿಮಿಷಕ್ಕಿಂತ ಹೆಚ್ಚು ಸಮಯ ನಿಲ್ದಾಣದಲ್ಲಿದ್ದೀರಿ ಎಂದು ಬಿಎಂಆರ್‌ಸಿಎಲ್ ಸಿಬ್ಬಂದಿ 50 ರು. ದಂಡ ವಿಧಿಸಿದ್ದಾರೆ.

ಬಸ್ ನಲ್ಲೇ ಪ್ರಯಾಣಿಸುತ್ತೇನೆ

ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಾಕಿರುವ ಮೆಟ್ರೋ ಪ್ರಯಾಣಿಕ, ಹಳದಿ ಮಾರ್ಗದಲ್ಲಿ ರೈಲು ಸಂಖ್ಯೆ ಹೆಚ್ಚಾಗುವವರೆಗೂ ನಾನು ಬಸ್‌ನಲ್ಲೇ ಪ್ರಯಾಣ ಮಾಡುತ್ತೇವೆ. ಒಂದು ಮೆಟ್ರೋ ಮಿಸ್ ಆದರೆ 25 ನಿಮಿಷ ಕಾಯಬೇಕು, ಇಲ್ಲ ಹೊರಗೆ ಹೋಗುತ್ತೇವೆ ಅಂದರೆ 50 ರು ದಂಡ ಪಾವತಿಸಬೇಕು. ಒಂದು ಕಡೆ ಹಳದಿ ಲೈನ್‌ನಲ್ಲಿ ಮೆಟ್ರೋ ರೈಲು ಅಭಾವವಿದ್ದರೆ, ಇನ್ನೊಂದೆಡೆ ಸಮಯದ ಜತೆ ಪ್ರಯಾಣಿಕರಿಗೆ ದಂಡ ವಿಧಿಸಲಾಗುತ್ತಿದೆ.

ಕೆಂಪೇಗೌಡ ಬಡಾವಣೆ ವಿಸ್ತರಣೆಗೆ ನಿರ್ಧಾರ

ಬೆಂಗಳೂರು: ಬಿಡಿಎಯು ಕೆಂಪೇಗೌಡ ಬಡಾವಣೆಯನ್ನು ಪಶ್ಚಿಮದಲ್ಲಿ 5755 ಎಕರೆ 32 ಗುಂಟೆಗಳಷ್ಟು ವಿಸ್ತರಿಸಲು ಮುಂದಾಗಿದ್ದು, ಈಗಾಗಲೇ 29,000 ನಿವೇಶನಗಳ ಹಂಚಿಕೆಯನ್ನು ಮಾಡಿದೆ. ಇತ್ತೀಚೆಗಷ್ಟೇ ನಗರದ ಉತ್ತರವಲಯದಲ್ಲಿ ಹೆಚ್ಚುವರಿ 3000 ಎಕರೆಗೆ ಶಿವರಾಮಕಾರಂತ ಬಡಾವಣೆಯನ್ನು ವಿಸ್ತರಿಸಲು ಬಿಡಿಎ ಮುಂದಾಗಿದ್ದು, ಇದೀಗ ಪಶ್ಚಿಮಕ್ಕೂ 5755 ಎಕರೆ 32 ಗುಂಟೆ ವಿಸ್ತರಿಸಲು ನಿರ್ಧರಿಸಿದೆ. ಈಗಾಗಲೇ ರೂಪಿಸಿರುವ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ 29000 ನಿವೇಶನಗಳನ್ನು ಹಂಚಿಕೆ ಮಾಡಿರುವ ಬಿಡಿಎ, ಇನ್ನೂ ಮೊದಲ ಹಂತದ ವಿನ್ಯಾಸ ಮತ್ತು ಮೂಲ ಸೌಕರ್ಯ ಒದಗಿಸಲು ಹೆಣಗಾಡುತ್ತಿರುವುದರ ಮಧ್ಯೆಯೇ ಬಡಾವಣೆ ವಿಸ್ತರಣೆಗೆ ಭೂಮಿ ಗುರುತಿಸಿದ್ದು, ಮೈಸೂರು ರಸ್ತೆ, ಮಾಗಡಿ ರಸ್ತೆ, ನೈಸ್ ರಸ್ತೆ ಆಚೆಯಿರುವ 17 ಹಳ್ಳಿಗಳನ್ನು ಈ ಭೂಮಿ ಒಳಗೊಳ್ಳಲಿದ್ದು, ಒಂದು ಗ್ರಾಮ ಮಾಗಡಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದೆ. 5755 ಎಕರೆ 32 ಗುಂಟೆ ಹೊಸ ಸ್ವತ್ತಿನ ಸ್ವಾಧೀನಕ್ಕೆ ಮಂಡಳಿಯಲ್ಲಿ ಅನುಮೋದನೆ ಸಿಕ್ಕಿದ್ದು, ಈಗಾಗಲೇ ಬಿಡಿಎ ಭೂಸ್ವಾಧೀನ ಅಧಿಕಾರಿಗಳ 5 ಪ್ರತ್ಯೇಕ ತಂಡ ಸಮೀಕ್ಷೆ ನಡೆಸಿ, ನೀಲನಕ್ಷೆ ಸಿದ್ಧಪಡಿಸಿವೆ ಎನ್ನಲಾಗಿದೆ.

ಸ್ವಾಧೀನಕ್ಕೆ ಚಿಂತನೆ: ಬಿಡಿಎ 2010ರಲ್ಲಿ ನಾಡಪ್ರಭು ಕೆಂಪೇಗೌಡ ಬಡಾವಣೆ ಅಭಿವೃದ್ಧಿ ಕೆಲಸ ಪ್ರಾರಂಭಿಸಿದ್ದು, ಸುಮಾರು 29000 ನಿವೇಶನಗಳು ಹಂಚಿಕೆಯಾಗಿದ್ದು, ಮೂಲ ಸೌಕರ್ಯಗಳ ಕೊರತೆಯಿಂದಾಗಿ ಕೇವಲ 50 ಮನೆಗಳು ಮಾತ್ರ ತಲೆಯೆತ್ತಿವೆ. ಸುಮಾರು 250 ಮನೆಗಳ ನಿರ್ಮಾಣ ಹಾಗೂ ರಸ್ತೆ ಡಾಂಬರೀಕರಣ ಪ್ರಗತಿಯಲ್ಲಿದೆ. ವಿದ್ಯುತ್ ಮತ್ತು ನೀರಿನ ಸಂಪರ್ಕ ಇನ್ನೂ ಸಿಕ್ಕಿಲ್ಲ. ಅಲ್ಲದೆ, ಬಿಡಿಎ ಆರಂಭದಲ್ಲಿ (ಮೊದಲ ಹಂತದಲ್ಲಿ) ಸುಮಾರು 4,040 ಎಕರೆ ಭೂಮಿ ಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿದ್ದರೂ, ಇದುವರೆಗೂ ಇಲ್ಲಿ ಕೇವಲ 2,200 ಎಕರೆ ಭೂಮಿಯನ್ನು ಮಾತ್ರ ಸ್ವಾಧೀನಪಡಿಸಿಕೊಂಡಿದೆ. ಕೆಂಗೇರಿ ಹೋಬಳಿಯ ಮಾರಗೊಂಡನಹಳ್ಳಿ, ಮಾಲಿಗೊಂಡನಹಳ್ಳಿ, ಹಾಮೋಹಳ್ಳಿ, ತಾವರೆಕೆರೆ ಹೋಬಳಿಯ ಚಿಕ್ಕೆಲ್ಲೂರು, ರಾಂಪುರ, ವೆಂಕಟಾಪುರ, ಕೊಲ್ಲೂರು, ನಂಜುಂಡಾಪುರ, ಗುರುನಾಯಕಪುರ, ಕೇತೋಹಳ್ಳಿ, ರಾಮಪುರ, ನರಸೀಪುರ, ಶೇಷಗಿರಿಪುರ, ಕಣಿಮಿಣಿಕೆ, ಕೊಡಿಗೇಹಳ್ಳಿ, ಶೀಗೆಹಳ್ಳಿ ಮತ್ತು ಮುದ್ದಿನಪಾಳ್ಯದಿಂದ 5755 ಎಕರೆ 32 ಎಕರೆ ಭೂಮಿಗೆ ಅಧಿಸೂಚನೆ ಹೊರಡಿಸಿ, ಸ್ವಾಧೀನಕ್ಕೆ ಪ್ರಕ್ರಿಯೆ ಆರಂಭಿಸಲಾಗಿದೆ.

ಸಮಾಚಾರ ಸಣ್ಣದಲ್ಲ

ಎಟಿಎಂನಲ್ಲಿ ಕಳ್ಳತನ: ಸಿಕ್ಕಿ ಬಿದ್ದ ಯುವಕ

ಬಳ್ಳಾರಿ: ಕಳ್ಳನೊಬ್ಬ ಎಟಿಎಂಗೆ ನುಗ್ಗಿ ಹಣ ದೋಚಲು ಪ್ರಯತ್ನಿಸುತ್ತಿರುವಾಗಲೇ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾನೆ. ಕ್ಷಿಪ್ರ ಕಾರ್ಯಾಚರಣೆ ನಡೆಸಿದ ಇಲ್ಲಿನ ಬ್ರೂಸ್‌ಪೇಟೆ ಠಾಣೆ ಪೊಲೀಸರು ಆಂಧ್ರ ಪ್ರದೇಶ ಮೂಲದ ಯುವಕನನ್ನು ಬಂಧಿಸಿ ದ್ದಾರೆ.

ಅನಂತಪುರದ ಸಾಯಿ ನಗರ ನಿವಾಸಿ ಆರ್. ವೆಂಕಟೇಶ್ ಕೋಡಿಗುಡ್ಡು (22) ಬಂಧಿತ ಆರೋಪಿ ಯಾಗಿದ್ದಾನೆ. ಈತ ಮಂಗಳವಾರ ನಸುಕಿನ ಜಾವದ ಸಮಯದಲ್ಲಿ, ನಗರದ ಕಾಳಮ್ಮ ಸರ್ಕಲ್ ಹತ್ತಿರ ಇರುವ ಆ್ಯಕ್ಸಿಸ್ ಬ್ಯಾಂಕ್‌ನ ಎಟಿಎಂ ಒಳಗಡೆ ಪ್ರವೇಶಿಸಿ, ಸಿಡಿಎಂ-ಎಟಿಎಂ ಮಷಿನ್ ಜಖಂಗೊಳಿಸಿ, ಹಣ ದೋಚಲು ಪ್ರಯತ್ನಿಸುತ್ತಿದ್ದ. ಈ ವೇಳೆ ಮಾಹಿತಿ ಮೇರೆಗೆ, ಸ್ಥಳಕ್ಕೆ ಬಂದ ಪೊಲೀಸರು ಆತನನ್ನು ಹಿಡಿಯಲು ಮುಂದಾಗಿದ್ದರು. ಆದರೆ ಯುವಕ ಪೊಲೀಸರ ಮೇಲೆಯೇ ಹಲ್ಲೆ ಮಾಡಲು ಮುಂದಾಗಿದ್ದಾನೆ. ಆರೋಪಿ ಎಷ್ಟೇ ಪ್ರಯತ್ನಿಸಿದರೂ ಎದೆಗುಂದದ ಪೊಲೀಸರು ಆತನನ್ನು ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಬಳ್ಳಾರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಧರ್ಮಸ್ಥಳದ ಪರ ಜಿಲ್ಲೆ ಜಿಲ್ಲೆಯಲ್ಲೂ ಕಹಳೆ

ಶ್ರೀ ಮಂಜುನಾಥಸ್ವಾಮಿ ದೇವಸ್ಥಾನದ ಬಗ್ಗೆ ಅಪಪ್ರಚಾರ ಎಂದು ಭಕ್ತರ ಕಿಡಿ | ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಆಗ್ರಹ

ಧರ್ಮಸ್ಥಳ: ಶ್ರೀ ಕ್ಷೇತ್ರ ಧರ್ಮಸ್ಥಳ ಮಂಜುನಾಥ ಸ್ವಾಮಿ ದೇವಾಲಯ ಹಾಗೂ ಧರ್ಮಾಧಿಕಾರಿಗಳಾದ ಡಿ. ವೀರೇಂದ್ರ ಹೆಗ್ಗಡೆಯವರ ವಿರುದ್ಧ ಅಪಪ್ರಚಾರ ನಡೆಯುತ್ತಿದೆ. ಕ್ಷೇತ್ರದ ಹೆಸರಿಗೆ ಕಳಂಕ ತರಲು ಷಡ್ಯಂತ್ರ ನಡೆಸುತ್ತಿರುವವರಿಗೆ ತಕ್ಕ ಶಿಕ್ಷೆಯಾಗಬೇಕು. ಎಸ್‌ಐಟಿ ಮೂಲಕ ನಡೆಯುತ್ತಿರುವ ಬುರುಡೆ ಶೋಧನೆಗೆ ನಿರ್ದಿಷ್ಟ ಅವಧಿಯನ್ನು ನೀಡಿ ಆದಷ್ಟು ಬೇಗ ಸತ್ಯಾಂಶ ಹೊರಬರಬೇಕು. ಈ ಷಡ್ಯಂತ್ರದ ಹಿಂದಿರುವವರನ್ನು ಎಸ್‌ಐಟಿಯವರು ತನಿಖೆಗೊಳಪಡಿಸಿ ಅವರಿಗೆ ಕಠಿಣ ಶಿಕ್ಷೆಯಾಗಬೇಕೆಂಬ ಒಕ್ಕೊರಲ ಧ್ವನಿಯೊಂದಿಗೆ ರಾಜ್ಯಾದ್ಯಂತ ನಡೆಯುತ್ತಿರುವ ಜನಾಗ್ರಹ ದಿನಕಳೆದಂತೆ ಬಿಸಿಯೇರುತ್ತಿದೆ.

ಎಲ್ಲೆಲ್ಲಿ ಪ್ರತಿಭಟನೆ: ಈಗಾಗಲೇ ಕೊಡಗು, ಉಡುಪಿ, ಉತ್ತರ ಕನ್ನಡ, ಶಿವಮೊಗ್ಗ, ಧಾರವಾಡ, ಮಂಡ್ಯ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ಹಾವೇರಿ, ರಾಯಚೂರು, ಹಾಸನ, ಬೀದರ್ ಜಿಲ್ಲೆಗಳಲ್ಲಿ ಲಕ್ಷಾಂತರ ಜನ ಬೀದಿಗಿಳಿದು ತಮ್ಮ ಆಕ್ರೋಶವನ್ನು ಹೊರಹಾಕಿದ್ದಾರೆ. ರಾಮನಗರ, ತುಮಕೂರು, ಚಿಕ್ಕಮಗಳೂರು, ವಿಜಯಪುರ, ಬೆಳಗಾವಿ, ಯಾದಗಿರಿ, ಬಾಗಲಕೋಟೆ, ಗದಗ, ಕೊಪ್ಪಳ, ಚಾಮರಾಜನಗರ, ಮೈಸೂರು, ಬಳ್ಳಾರಿ ಈ ಹದಿಮೂರು ಜಿಲ್ಲೆಗಳಲ್ಲಿ, ಹೊನ್ನಾಳ್ಳಿ ತಾಲೂಕಿನಲ್ಲಿ ಸಹಸ್ರಾರು ಮಂದಿ ಬೀದಿಗಿಳಿದು ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ.

ಗ್ರಾಮ ಮಟ್ಟದ ಹೋರಾಟ: ಈ ಹೋರಾಟದಲ್ಲಿ ಪಕ್ಷ ಭೇದ ಮರೆತು ಕ್ಷೇತ್ರದ ಭಕ್ತರು, ಅಭಿಮಾನಿಗಳೊಂದಿಗೆ ಧರ್ಮಸ್ಥಳದಿಂದ ಸಮಾಜಕ್ಕೆ ಆಗಿರುವ ಪ್ರಯೋಜನಗಳನ್ನು ಹತ್ತಿರದಿಂದ ಕಂಡಿರುವ ಅನೇಕ ಅಭಿಮಾನಿಗಳು, ಜಾತಿ, ಮತ, ಧರ್ಮ ಭೇದವಿಲ್ಲದೆ ಎಲ್ಲಾ ವರ್ಗದ ಜನರು ಕೈ ಜೋಡಿಸಿದ್ದಾರೆ. ಮುಂದಿನ ದಿನಗಳಲ್ಲೂ ಲಕ್ಷಾಂತರ ಮಂದಿ ಬೃಹತ್ ಮಟ್ಟದಲ್ಲಿ ಜಿಲ್ಲೆ, ತಾಲೂಕು, ಗ್ರಾಮ ಗ್ರಾಮಗಳಲ್ಲಿ ಹೋರಾಟಕ್ಕೆ ಸಿದ್ಧತೆಯನ್ನು ಮಾಡಿಕೊಳ್ಳುತ್ತಿದ್ದಾರೆ.

ಜಾಲತಾಣಗಳಲ್ಲಿ ಸುಳ್ಳು ಆರೋಪ: ಸರಕಾರ ತಕ್ಷಣ ಎಸ್‌ಐಟಿ ತನಿಖೆಗೆ ಒಂದು ನಿರ್ದಿಷ್ಟ ಸಮಯವನ್ನು ನಿಗದಿಗೊಳಿಸಬೇಕು. ಆದಷ್ಟು ಬೇಗ ಎಸ್‌ಐಟಿ ಸರಕಾರಕ್ಕೆ ವರದಿಯನ್ನು ಸಲ್ಲಿಸಿ ಸತ್ಯಾಂಶವನ್ನು ಜಗತ್ತಿಗೆ ತಿಳಿಸಬೇಕು. ಶ್ರೀಕ್ಷೇತ್ರ ಧರ್ಮಸ್ಥಳ ಮತ್ತು ಹೆಗ್ಗಡೆ ಕುಟುಂಬಸ್ಥರ ಮೇಲೆ ತೇಜೋವಧೆ ಮತ್ತು ಸುಳ್ಳು ಆರೋಪ ಮಾಡಬಾರದೆಂದು ನ್ಯಾಯಾಲಯದ ಆದೇಶ ಇದ್ದರೂ ಇಂದಿಗೂ ರಾಜರೋಷವಾಗಿ ಯೂಟ್ಯೂಬರ್, ಫೇಸ್‌ಬುಕ್ ಮುಂತಾದ ಸಾಮಾಜಿಕ ಜಾಲತಾಣಗಳ ಮೂಲಕ ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ. ಇವರ ಮೇಲೆ ಸರಕಾರ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಲಾಯಿತು.

ಕ್ಷೇತ್ರಕ್ಕೆ ಕಳಂಕ ತರುವ ಘಟನೆಗಳು ಮುಂದುವರಿದಲ್ಲಿ ಮುಂದಿನ ದಿನಗಳಲ್ಲಿ ಉಗ್ರ ಹೋರಾಟವನ್ನು ನಡೆಸಲಾಗುವುದು. ಇದನ್ನು ಗಂಭೀರವಾಗಿ ಪರಿಗಣಿಸಿ ಕ್ಷೇತ್ರಕ್ಕೆ ಕಳಂಕ ತರುವ ತಪ್ಪಿತಸ್ಥರ ವಿರುದ್ಧ ಕೂಡಲೇ ಕಾನೂನು ಕ್ರಮ ಕೈಗೊಳ್ಳಬೇಕೆಂಬ ವಿವಿಧ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳ ಮೂಲಕ ಸರಕಾರಕ್ಕೆ ಜನಾಗ್ರಹ ವೇದಿಕೆಯಿಂದ ಮನವಿ ಸಲ್ಲಿಸಲಾಯಿತು.

ಶ್ರೀ ಕ್ಷೇತ್ರ ಧರ್ಮಸ್ಥಳದ ದೇವಾಲಯ ಹಾಗೂ ಧರ್ಮಾಧಿಕಾರಿಗಳಾದ ಡಿ. ವೀರೇಂದ್ರ ಹೆಗ್ಗಡೆಯವರ ವಿರುದ್ಧ ಅಪಪ್ರಚಾರ ಖಂಡಿಸಿ ತುಮಕೂರು, ಬಾಗಲಕೋಟೆ, ವಿಜಯಪುರ ಜಿಲ್ಲಾ ಕೇಂದ್ರಗಳಲ್ಲಿ ಬೃಹತ್ ಪ್ರತಿಭಟನೆ ನಡೆದವು.

ಎಲ್ಲೆಲ್ಲಿ ಪ್ರತಿಭಟನೆ?

ಧರ್ಮಸ್ಥಳ ಕ್ಷೇತ್ರ ಹಾಗೂ ಧರ್ಮಾಧಿಕಾರಿ ವೀರೇದ್ರ ಹೆಗ್ಗಡೆಯವರ ವಿರುದ್ಧ ಅಪಪ್ರಚಾರ ನಡೆಸಲಾಗುತ್ತಿದೆ ಎಂದು ರಾಮನಗರ, ತುಮಕೂರು, ಚಿಕ್ಕಮಗಳೂರು, ವಿಜಯಪುರ, ಬೆಳಗಾಂ, ಯಾದಗಿರಿ, ಬಾಗಲಕೋಟೆ, ಗದಗ, ಕೊಪ್ಪಳ, ಚಾಮರಾಜನಗರ, ಮೈಸೂರು, ಬಳ್ಳಾರಿ, ಕಲಬುರಗಿ ಮತ್ತಿತರ ಕಡೆ ಬೃಹತ್ ಪ್ರತಿಭಟನೆ ನಡೆಯಿತು.

ಅಪಪ್ರಚಾರ ಮಾಡುವವರಿಗೆ ಗುಂಡಿಕ್ಕಿ: ರೇಣುಕಾಚಾರ್ಯ

ಕೋಟ್ಯಂತರ ಭಕ್ತರ ಕ್ಷೇತ್ರವಾದ ಧರ್ಮಸ್ಥಳದ ಬಗ್ಗೆ ಅಪಪ್ರಚಾರ ಮಾಡುವವರನ್ನು ಗುಂಡಿಕ್ಕಿ ಕೊಲ್ಲಬೇಕು ಎಂದು ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಕಿಡಿಕಾರಿದರು. ಹೊನ್ನಾಳಿಯಲ್ಲಿ ಧರ್ಮಸ್ಥಳ ಭಕ್ತರ ಬೃಹತ್ ಪ್ರತಿಭಟನಾ ಮೆರವಣಿಗೆಯಲ್ಲಿ ಬುಧವಾರ ಪಾಲ್ಗೊಂಡು ಮಾತನಾಡಿದ ಅವರು, ಯಾರೋ ಒಬ್ಬ ಅನಾಮಿಕ ದೂರು ನೀಡಿದ್ದಾನೆ. ಅಂತಾ ಸರಕಾರ ಎಸ್‌ಐಟಿ ರಚನೆ ಮಾಡಿದ್ದು ಅನಗತ್ಯ. ದೂರು ನೀಡಿದ ದೂರುದಾರನ ಪೂರ್ವಾಪರ ವಿಚಾರಣೆ ಮಾಡಿ ಮುಂದಿನ ವಿಚಾರಣೆ ಮಾಡಬೇಕಿತ್ತು. ಆದರೆ, ಅನಾಮಿಕನ ದೂರು ಆಧರಿಸಿ ತನಿಖೆ ನಡೆಸುತ್ತಿರುವುದು ಸರಿಯಲ್ಲ. ಎಸ್ ಐಟಿ ತನಿಖೆ ನಡೆದರೂ ಏನೂ ಕಂಡುಬಂದಿಲ್ಲ. ಇದು ಪವಿತ್ರ ಕ್ಷೇತ್ರಕ್ಕೆ ಮಸಿ ಬಳಿಯುವ ಹುನ್ನಾರವಾಗಿದೆ ಎಂದು ಅಸಮಧಾನ ವ್ಯಕ್ತಪಡಿಸಿದರು.

ಯಾವುದೇ ಕುರುಹು ಸಿಕ್ಕಿಲ್ಲ

ಸಾವಿರಾರು ಅಭಿಮಾನಿಗಳು ಜಿಲ್ಲಾಧಿಕಾರಿಗಳತ್ತ ತೆರಳಿ ಒಬ್ಬ ಅನಾಮಿಕ ಕೊಟ್ಟ ದೂರಿನ ಅನ್ವಯ ಸರಕಾರ ಎಸ್‌ಐಟಿಯನ್ನು ರಚಿಸಿದೆ. ಅದನ್ನು ನಾವು ಗೌರವಿಸುತ್ತೇವೆ. ಎಸ್‌ಐಟಿ ತಂಡ ಮತ್ತು ಅಧಿಕಾರಿಗಳ ಬಗ್ಗೆ ನಮಗೆ ಗೌರವವಿದೆ. ಆದರೆ ಅನಾಮಿಕ ಗುರುತಿಸಲ್ಪಟ್ಟ ಎಲ್ಲ ಸ್ಥಳಗಳಲ್ಲೂ ಗುಂಡಿ ತೋಡಿ ಶೋಧನೆ ನಡೆಸಿದ ನಂತರವು ಪ್ರಕ್ರಿಯೆಗಳಿಗೆ ಕೊನೆಯಾಗದಿರುವುದು ಭಕ್ತರಲ್ಲಿ ಗೊಂದಲ, ಹಲವಾರು ಅನುಮಾನಗಳನ್ನು ಹುಟ್ಟುಹಾಕಿದೆ. ನಿರ್ದಿಷ್ಟ ಸಮಯ, ಚೌಕಟ್ಟನ್ನು ನಿಗದಿಪಡಿಸಿಕೊಳ್ಳದೆ ಈವರೆಗೆ ಯಾವುದೇ ಕುರುಹು ಸಿಗದಿದ್ದರೂ ಅನಾಮಿಕ ವ್ಯಕ್ತಿ ಹೇಳಿದ ಜಾಗದಲ್ಲಿ ಅಗೆಯುತ್ತಾ ಹೋಗುವುದು ಹಾಗೂ ಈ ಷಡ್ಯಂತ್ರವನ್ನು ರೂಪಿಸಿರುವ ಕೈಗಳು ತೇಜೋವಧೆ ನಮ್ಮಿಂದ ಸಹಿಸಲು ಸಾಧ್ಯವಿಲ್ಲ ಎಂದು ಧರ್ಮಸ್ಥಳ ಅಭಿಮಾನಿಗಳು ಆಕ್ರೋಶ ವ್ಯಕ್ತಪಡಿಸಿದರು.

ಭುಗಿಲೆದ್ದ ಆಕ್ರೋಶ: ಬೀದಿಗಿಳಿದ ಭಕ್ತರು

← ಮೊದಲಪುಟದಿಂದ

ದೂರುದಾರ ಇದುವರೆಗೆ ಒಟ್ಟು 16 ಸ್ಥಳಗಳನ್ನು ತೋರಿಸಿದ್ದು, ಅವುಗಳ ಪೈಕಿ ಎರಡು ಕಡೆಗಳಲ್ಲಿ ಮಾತ್ರ ಮೃತದೇಹಗಳ ಅವಶೇಷಗಳು ಪತ್ತೆಯಾಗಿವೆ. ಈ ಪೈಕಿ ಒಂದು 40 ವರ್ಷ ಗಳಷ್ಟು ಹಿಂದೆ ಸಾವನ್ನಪ್ಪಿದ ಗಂಡಸಿನ ಕಳೇಬರವಾಗಿದ್ದು, ಇನ್ನೊಂದು ಇತ್ತೀಚೆಗೆ ಮೃತಪಟ್ಟ ಮಾನವನ ಅಸ್ಥಿಪಂಜರ ವಾಗಿದ್ದು, ಅನಾಮಿಕನ ದೂರಿನ ಸತ್ಯಾಸತ್ಯತೆ ಬಗ್ಗೆ ಪ್ರಶ್ನೆಗಳು ಎದ್ದಿವೆ.

ನೇತ್ರಾವತಿ-ಅಜಿಕುರಿ ರಸ್ತೆಯ ಕಿಂಡಿ ಅಣೆಕಟ್ಟೆ ಸಮೀಪದ 13ನೇ ಸ್ಥಳದಲ್ಲಿ ಎರಡು ದಿನಗಳ ಕಾಲ ನಡೆದ ಶೋಧ ಕಾರ್ಯಾಚರಣೆ ಬುಧವಾರ ಅಂತ್ಯಗೊಂಡಿದೆ. ಎಸ್‌ಐಟಿ ತಂಡ ಸುಮಾರು 32 ಅಡಿ ಆಳ, 25 ಅಡಿ ಉದ್ದ ಹಾಗೂ 12 ಅಡಿ ಅಗಲದ ಬೃಹತ್ ಗುಂಡಿ ತೋಡಿ ಪರಿಶೀಲನೆ ನಡೆಸಿದರೂ, ಯಾವುದೇ ಅಸ್ಥಿಪಂಜರ ಅಥವಾ ಶವ ಹೂತಿರುವ ಕುರುಹುಗಳು ಪತ್ತೆಯಾಗಿಲ್ಲ. ಹೀಗಾಗಿ ಎಸ್‌ಐಟಿ ಸಂಜೆ ವೇಳೆಗೆ ಅಗೆದ ಗುಂಡಿಗಳನ್ನು ಜೆಸಿಬಿ ಮೂಲಕ ಮುಚ್ಚುವ ಕೆಲಸವನ್ನು ಆರಂಭಿಸಿತು.

ಈ ಹಿಂದೆ ಅಣೆಕಟ್ಟೆ ಹಾಗೂ ರಸ್ತೆ ನಿರ್ಮಾಣದ ವೇಳೆ ಸುಮಾರು 10 ಅಡಿಗಳಷ್ಟು ಮಣ್ಣು ತುಂಬಿ ನೆಲವನ್ನು ಎತ್ತರಿಸಲಾಗಿದ್ದರಿಂದ, ಆಳವಾದ ಶೋಧದ ಅಗತ್ಯ ಇದೆ ಎಂಬ ತೀರ್ಮಾನಕ್ಕೆ ಬರಲಾಗಿತ್ತು. ಈ ಹಿನ್ನೆಲೆಯಲ್ಲಿ ಜಿಪಿಆರ್ ತಂತ್ರಜ್ಞಾನ ಬಳಸಿ ಮೊದಲು ನೆಲದಡಿಯ ಸ್ಥಿತಿಗತಿಯನ್ನು ಪರಿಶೀಲಿಸಲಾಗಿತ್ತು. ದೂರುದಾರ ಖುದ್ದು ಸ್ಥಳದಲ್ಲಿದ್ದುಕೊಂಡು, ಅವಶೇಷಗಳು ಸಿಗಬಹುದಾದ ಜಾಗವನ್ನು ತೋರಿಸಿದರೂ ಯಾವುದೇ ಕುರುಹುಗಳು ಪತ್ತೆಯಾಗಿಲ್ಲ.

ಧಾರವಾಡಕ್ಕೆ ಎಸ್‌ಇಝೆಡ್ ಗರಿ

← ಮೊದಲಪುಟದಿಂದ

ಪ್ರಲ್ಹಾದ್ ಜೋಶಿ ಅವರ ಮನವಿ ಮೇರೆಗೆ ಮೇರೆಗೆ ಎಲೆಕ್ಟ್ರಾನಿಕ್ ಘಟಕಗಳಿಗಾಗಿ ವಿಶೇಷ ಆರ್ಥಿಕ ವಲಯವನ್ನು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಶ್ ಗೋಯಲ್ ಘೋಷಿಸಿದ್ದಾರೆ.

28 ಎಕರೆ ಎಸ್‌ಇಝೆಡ್: ಒಟ್ಟು 391 ಎಕರೆ ಭೂಮಿಯನ್ನು ಹೊಂದಿರುವ ಏಕಸ್ ಇನ್ಫ್ರಾದ ಹುಬ್ಬಳ್ಳಿ ಡ್ಯೂರಬಲ್ ಗೂಡ್ಸ್ ಕ್ಲಸ್ಟರ್‌ನಲ್ಲಿ ಸದ್ಯ 28 ಎಕರೆ ಭೂಮಿಯನ್ನು ಎಲೆಕ್ಟ್ರಾನಿಕ್ಸ್ ವಿಶೇಷ ಆರ್ಥಿಕ ವಲಯ ಎಂದು ಘೋಷಿಸಲಾಗಿದೆ, ಮುಂದಿನ ದಿನದಲ್ಲಿ ಎಲೆಕ್ಟ್ರಾನಿಕ್ಸ್ ಉದ್ಯಮಗಳನ್ನು ಇನ್ನಷ್ಟು ಬರುವಂತೆ ಉತ್ತೇಜಿಸುವ ಮೂಲಕ, ಈ ವಿಶೇಷ ಆರ್ಥಿಕ ವಲಯವನ್ನು ಇನ್ನಷ್ಟು ವಿಸ್ತರಣೆ ಮಾಡುವುದಕ್ಕೆ ಅವಕಾಶವಿದೆ.

ಲಾಭವೇನು?: ವಿಶೇಷ ಆರ್ಥಿಕ ವಲಯವೆಂದು ಘೋಷಿಸುವುದರಿಂದ ವಿದೇಶಿ ನೇರ ಹೂಡಿಕೆಯನ್ನು ಹೆಚ್ಚವರಿಯಾಗಿ ಆಕರ್ಷಿಸಲು ಅವಕಾಶವಿರುತ್ತದೆ. ಈ ಭಾಗದಲ್ಲಿರುವ ಎಲೆಕ್ಟ್ರಾನಿಕ್ ಉದ್ಯಮಿಗಳಿಗೆ ಹೆಚ್ಚಿನ ನೆರವು ಹಾಗೂ ಜಾಗತಿಕ ಮಟ್ಟದಲ್ಲಿ ವ್ಯಾಪಾರ ಮಾಡಲು ಅವಕಾಶ ಸಿಗುತ್ತದೆ. ಇದರೊಂದಿಗೆ ಈ ವಲಯದಲ್ಲಿರುವ ಸಂಸ್ಥೆಗಳಿಗೆ ಕಡಿಮೆ ಬೆಲೆಗೆ ಸರಕುಗಳನ್ನು ಉತ್ಪಾದಿಸುವ, ವ್ಯಾಪಾರ ಮಾಡಲು ಅವಕಾಶ ನೀಡಲಾಗುತ್ತದೆ. ಇದರೊಂದಿಗೆ ವಿಶೇಷ ಆರ್ಥಿಕ ನೀತಿ, ತೆರಿಗೆ ವಿನಾಯಿತಿ ಸೇರಿದಂತೆ ಹಲವು ಸೌಲಭ್ಯಗಳು ಈ ವಲಯದಲ್ಲಿರುವ ಸಂಸ್ಥೆಗಳಿಗೆ ಸಿಗಲಿದೆ.

ಈ ಬಗ್ಗೆ ಮಾತನಾಡಿರುವ ಸಚಿವ ಪ್ರಲ್ಹಾದ್ ಜೋಶಿ ಅವರು, ಉತ್ತರ ಕರ್ನಾಟಕ ಭಾಗಕ್ಕೆ ಬರುವ ದಿನಗಳಲ್ಲಿ ಹೊಸ ಎಲೆಕ್ಟ್ರಾನಿಕ್ಸ್ ಉದ್ಯಮಗಳು ಬಂದಂತೆ ವಿಶೇಷ ಆರ್ಥಿಕ ವಲಯದ ವಿಸ್ತರಣೆ ಮಾಡುವ ಅವಕಾಶವಿದೆ. ಹುಬ್ಬಳ್ಳಿ-ಧಾರವಾಡದ ಕೈಗಾರಿಕಾ ಪ್ರದೇಶದಲ್ಲಿ ಎಲೆಕ್ಟ್ರಾನಿಕ್ ಉತ್ಪನ್ನಗಳ ಉತ್ಪಾದನೆಗೆ ಈ ವಿಶೇಷ ಆರ್ಥಿಕ ವಲಯ ಉತ್ತೇಜನ ನೀಡಲಿದೆ. ಹುಬ್ಬಳ್ಳಿ-ಧಾರವಾಡ ಕೌಶಲ್ಯಪೂರ್ಣ ಕಾರ್ಮಿಕರ ತಂಡದೊಂದಿಗೆ ತ್ವರಿತ ಕೈಗಾರಿಕಾ ಬೆಳವಣಿಗೆ, ಗುಣಮಟ್ಟದ ಉದ್ಯೋಗ ಸೃಷ್ಟಿ ಮತ್ತು ಆರ್ಥಿಕ ಪ್ರಗತಿಗೆ ಸಿದ್ಧವಾಗಿದೆ ಎಂದು ಹೇಳಿದ್ದಾರೆ

ಕಾಡಾನೆ ದಾಳಿ

ಹಾಸನ: ಬೇಲೂರಿನ ಲಿಂಗಾಪುರದಲ್ಲಿ ದೈತ್ಯಾಕಾರದ ಕಾಡಾನೆಯೊಂದು ಸೈಲೆಂಟಾಗಿ ಮನೆಯೊಂದರ ಬಳಿ ಬಂದು ನಿಂತು ಮನೆ ಮಂದಿಗೆ ಆತಂಕ ಉಂಟು ಮಾಡಿದೆ. ಅಲ್ಲದೇ ಕೂದಲೆಳೆ ಅಂತರದಲ್ಲಿ ದಾಳಿಯಿಂದ ಮನೆ ಮಂದಿ ಬಚಾವ್ ಆಗಿದ್ದಾರೆ. ಬುಧವಾರ ಬೆಳಗ್ಗೆ ಕಾಡಾನೆಗಳು ಮನೆಯ ಮುಂಭಾಗದಿಂದ ದಾಟಿ ಹೋಗಿದ್ದವು. ಇದರಿಂದ ಗಾಬರಿಗೊಂಡಿದ್ದ ಮನೆಯ ಮಾಲೀಕರು ಮಹಡಿ ಮೇಲೆ ನಿಂತು ನೋಡಿದಾಗ ಒಂಟಿ ಕೋರೆ ಕಾಡಾನೆ ಕಾಣಿಸಿ ಕೊಂಡಿದೆ. ಮನೆಯವರು ಸದ್ದು ಮಾಡುತ್ತಿದ್ದಂತೆ ಕಾಫಿ ತೋಟದ ಒಳಗೆ ಸೈಲೆಂಟ್ ಆಗಿ ಅಡಗಿದ್ದ ಕಾಡಾನೆ ಹೊರ ಬಂದಿದ್ದು ವಿಡಿಯೋ ಮಾಡುತ್ತಿದ್ದವರ ಮೇಲೆ ದಾಳಿಗೆ ಯತ್ನಿಸಿದೆ. ನಂತರ ರಸ್ತೆ ದಾಟಿ ಕಾಫಿ ತೋಟದೊಳಗೆ ಕಾಡಾನೆ ಹೋಗಿದ್ದು, ಕಾಡಾನೆ ಬರುವುದರ ಅರಿವಿಲ್ಲದೆ ವಾಹನ ಸವಾರರ ಸಂಚಾರ ಮಾಡಿದ್ದಾರೆ. ಈ ವೇಳೆ ಕಾರಲ್ಲಿದ್ದವರು ಸಹ ಕ್ಷಣಾರ್ಧದಲ್ಲಿ ಪಾರಾಗಿದ್ದಾರೆ.

ಕೃಷಿ ವಿಶ್ವವಿದ್ಯಾಲಯ, ಧಾರವಾಡ
ಆಸ್ತಿ ವಿಭಾಗ, ಕೃಷಿ ನಗರ,
ಧಾರವಾಡ – 580 005. ದೂ.: 91–836–2214332/216,444.
ಮಿಂಚಂಚೆ : estateofficer@rediffmail.com
ಸಂಖ್ಯೆ : ಆ.ಅ./ಡಿ.ಬಿ./ಟಿಎನ್./ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್–128/ಹೆಚ್.ಪಿ./2025–26 ದಿನಾಂಕ : 07–08–2025

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕೃಷಿ ವಿಶ್ವವಿದ್ಯಾಲಯ ಧಾರವಾಡದ ವಿವಿಧ ಆವರಣಗಳಲ್ಲಿ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರುಗಳಿಂದ ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪದ್ಧತಿಯಂತೆ http://kppp.karnataka.gov.in ಆನ್‌ಲೈನ್ ಮುಖಾಂತರ ಸಲ್ಲಿಸತಕ್ಕದ್ದು.

ಟೆಂಡರ್ ವೇಳಾ ಪಟ್ಟಿ

1) ವಿಚಾರಣೆಗಳಿಗಾಗಿ ಕೊನೆಯ ದಿನಾಂಕ : 21–08–2025 ರ ಅಪರಾಹ್ನ 4.00 ಗಂಟೆಗೆ, 2) ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ ಹಾಗೂ ವೇಳೆ : 25–08–2025 ರ ಬೆಳಿಗ್ಗೆ 11.00 ಗಂಟೆಗೆ, 3) ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ : 28–08–2025 ರ ಅಪರಾಹ್ನ 4.00 ಗಂಟೆಗೆ, 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ವೇಳೆ : 29–08–2025 ರ ಅಪರಾಹ್ನ 4.15 ಗಂಟೆಗೆ, 5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ವೇಳೆ : 30–08–2025 ರ ಅಪರಾಹ್ನ 4.00 ಗಂಟೆಗೆ.

ಹೆಚ್ಚಿನ ವಿವರಗಳಿಗಾಗಿ ಕಚೇರಿ ಕೆಲಸದ ಸಮಯದಲ್ಲಿ ದೂರವಾಣಿ ಸಂಖ್ಯೆ : 0836 – 2214332 ಸಂಪರ್ಕಿಸಬಹುದು. ಇ–ಪ್ರೊಕ್ಯೂರ್‌ಮೆಂಟ್ ನೋಂದಣಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 080 – 4601 0000.

ಸೂಚನೆ : ಟೆಂಡರ್‌ಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಇ–ಪ್ರೊಕ್ಯೂರಮೆಂಟ್ ವೇದಿಕೆಯಲ್ಲಿ ಪ್ರವಹಿಸುವ ತಿದ್ದುಪಡಿಗಳು / ಮಾರ್ಪಾಡುಗಳನ್ನು ಗುತ್ತಿಗೆದಾರರು ಗಮನಿಸಬೇಕು.

ಸಹಿ/– ಆಸ್ತಿ ಅಧಿಕಾರಿಗಳು,
ಕೃ.ವಿ.ವಿ., ಧಾರವಾಡ.
ಡಿಐಪಿಆರ್/ಧಾರವಾಡ/545/ಮಣಿಪಾಲ್/2025–26

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
#49, ಈಸ್ಟ್ ವಿಂಗ್, 4ನೇ & 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ,
ಬೆಂಗಳೂರು – 560 001. Phone No. 080-22265383 website : www.kiadb.in, Email: cdoce1@kiadb.in
ಸಂಖ್ಯೆ: ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–09/476/2025–26 ದಿನಾಂಕ: 12.08.2025

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
(ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕೆಐಡಿಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಆಧುನಿಕ ತಂತ್ರಜ್ಞಾನ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ, ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಹಾಗೂ ಕರ್ನಾಟಕ ಸರ್ಕಾರದ ಕೆಸಿಇಐ ನಲ್ಲಿ ನೋಂದಾಯಿತ (ದರ್ಜೆ–2 ಮತ್ತು ಮೇಲ್ಪಟ್ಟು ವಿದ್ಯುತ್) ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿಲಕೋಟೆ ಪದ್ಧತಿಯಲ್ಲಿ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು: ಯಾದಗಿರಿ ಜಿಲ್ಲೆ, ಕಡೇಚೂರು 2ನೇ ಹಂತದ ಕೈಗಾರಿಕೆ ಪ್ರದೇಶದಲ್ಲಿ ನೀರು ಸರಬರಾಜು ವಿತರಣೆ ಮಾಡುವ ಕಾಮಗಾರಿ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 29.08.2025ರ ಸಂಜೆ 4:00 ಗಂಟೆಯವರೆಗೆ.

ಸಹಿ/–
ಮುಖ್ಯ ಅಭಿಯಂತರರು–2,
ಕೆಐಎಡಿಬಿ, ಬೆಂಗಳೂರು
ಡಿಐಪಿಆರ್/ಸಿಪಿ/2310/ಸಿಸಿಎಲ್/2025–26

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಅಧೀನಕ್ಕೆ ಒಳಪಟ್ಟಿದೆ)
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಕೃಭಾಜನಿನಿ, ಐಬಿಸಿ,
ನಿಮಪೋ ವಿಭಾಗ, ರಾಂಪೂರ (ಪ.ಅ). ದೂರವಾಣಿ ಸಂಖ್ಯೆ: 08488–224328,
ಇ–ಮೇಲ್:kbjnleerampur@gmail.com.
ಸಂ:ಕೃಭಾಜನಿನಿ/ಐಬಿಸಿ/ನಿಮಪೋ/ವಿರಾಂ/ಪಿಬಿ–1/2025–26/766 ದಿನಾಂಕ: 12.08.2025

INFORMATION QUOTATION NOTIFICATION

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಪರವಾಗಿ ಕಾರ್ಯಪಾಲಕ ಅಭಿಯಂತರರು ಕೃಭಾಜನಿನಿ ಐಬಿಸಿ ನಿಮಪೋ ವಿಭಾಗ, ರಾಂಪೂರ (ಪ.ಅ) ಇವರು ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ. ಪೋರ್ಟಲ್‌ನಲ್ಲಿ ಕೃಷ್ಣಾ ಭಾಗ್ಯ ಜಲ ನಿಗಮದ ನಿಯಮಾವಳಿಗಳಿಗೆ ಒಳಪಟ್ಟು ನೋಂದಾಯಿತ ಸಮಾಲೋಚಕರಿಂದ ಕೆಳಕಾಣಿಸಿದ ಕೆಲಸಕ್ಕೆ ಕೋಟೇಶನ್‌ಗಳನ್ನು ಕರೆಯಲಾಗಿದೆ ಕೋಟೇಶನ್‌ಗಳನ್ನು ಒಂದು ಲಕೋಟೆ ಪದ್ಧತಿಯಲ್ಲಿ ಸಲ್ಲಿಸುವುದು. ಹೆಚ್ಚಿನ ವಿವರಗಳಿಗೆ ಆನ್‌ಲೈನ್ ಮೂಲಕ ವೆಬ್ ಸೈಟ್ https://kppp.karnataka.gov.in ನಲ್ಲಿ ಮಾಹಿತಿ ಪಡೆಯಬಹುದು.

Sl.No	Name of Work	ITEMS
1	Consultancy services for Preparation of DPR, Estimate and DTP for the work of:Survey, Investigation, Design of SCADA and PLC system for pumps to maintain the required discharge in canal network of Indi Lift Canal and SCADA system for canal network management system from Ch: 0.00 to 97.300 km (including main canal/distributaries/ laterals/ DPO's) and from Ch: 97.300 to 147.00 of Indi Lift Canal (including Main canal / Distry Head Regulators).(Total 19 No's of Items)	19 No's

1) https://kppp.karnataka.gov.in ವೆಬಸೈಟನಲ್ಲಿ ಅಂದಾಜು ಪತ್ರಿಕೆ ತಯಾರಿಸಲು ಮಾತ್ರ ಕೋಟೇಶನ್ ಸಲ್ಲಿಸುವ ದಿನಾಂಕ: 13–08–2025 ರಿಂದ 19–08–2025 ವರೆಗೆ ಸಾಯಂಕಾಲ 5.30 ವರೆಗೆ
2) ಭರ್ತಿಗೊಳಿಸಿದ ಕೋಟೇಶನ್ ಸಲ್ಲಿಸುವ ಕೊನೆಯ ದಿನಾಂಕ: 19–08–2025 ಸಾಯಂಕಾಲ 5.30
3) The rates shall be exclusive of GST and including transportation & delivery at site etc
4) ಕೋಟೇಶನ್‌ಗಳನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ, ಕೃಭಾಜನಿನಿ, ಐಬಿಸಿ ನಿಮಪೋ ವಿಭಾಗ ರಾಂಪೂರ ಕಚೇರಿಯಲ್ಲಿ ದಿನಾಂಕ: 21–08–2025 ರಂದಯ ಬೆಳಿಗ್ಗೆ 11.00 ಗಂಟೆಗೆ ತೆರಯಲಾಗುವುದು.
5) ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು ಕೃಭಾಜನಿನಿ ಐಬಿಸಿ ನಿಮಪೋ ವಿಭಾಗ ರಾಂಪೂರ ಕಚೇರಿ ವೇಳೆಯಲ್ಲಿ ಪಡೆಯಬಹುದು ಅಥವಾ https://kppp.karnataka.gov.in ವೆಬ್ ಸೈಟಿನಿಂದ ಪಡೆಯಬಹುದು.
6) ಯಾವುದೇ ಕಾರಣ ನೀಡದೇ ಕೋಟೇಶನ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳು ಹೊಂದಿರುತ್ತಾರೆ.

ಸಹಿ/– (ಉಜ್ವಲ ಪಿ. ಸೋನವಣೆ) ಕಾರ್ಯನಿರ್ವಾಹಕ ಇಂಜಿನೀಯರರು,
ಕೃಭಾಜನಿನಿ, ನಿಮಪೋ ಐಬಿಸಿ ವಿಭಾಗ, ರಾಂಪೂರ (ಪ.ಅ)
ವಾಸಾಸಂಇ/ವಿಜಯಪುರ/255/ಕೆಎಸ್‌ಎಂಸಿಎ/2025–26

ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ
ನಂ.5, 2ನೇ ಮಹಡಿ, ಲೂಪ್‌ಲೇನ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560009.
ಫೋನ್ : 080–22341230/35, ಇ–ಮೇಲ್: bmicapa@gmail.com
ಸಂಖ್ಯೆ: ಬಿಎಂಐಸಿಎಪಿಎ/ಭೂಉಬ–02/52/2025–26/762 ದಿನಾಂಕ: 13.08.2025

ಸಾರ್ವಜನಿಕ ಪ್ರಕಟಣೆ
[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರ ಪ್ರಕಾರ]

ಅರ್ಜಿದಾರರಾದ ಶ್ರೀ ಎಂ.ಲಕ್ಷ್ಮೀನಾರಾಯಣ್ ಇವರು ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಹೆಗ್ಗಡಗೆರೆ ಗ್ರಾಮದ ಸರ್ವೆ ಸಂಖ್ಯೆ: 238/2ರ 01 ಎಕರೆ–06ಗುಂಟೆ (0ಎ–06ಗು 'ಎ' ಖರಾಬು ಸೇರಿ), 239/1ರ 03ಎಕರೆ ಪೈಕಿ 01ಎಕರೆ, 239/2ರ 01ಎಕರೆ–00ಗು (0ಎ–04ಗು 'ಎ' ಖರಾಬು ಸೇರಿ) ಮತ್ತು 240ರ 04ಎ–27ಗು ಪೈಕಿ 03ಎ–27ಗು ಒಟ್ಟು 06ಎ–33ಗು ವಿಸ್ತೀರ್ಣದ ಜಮೀನುಗಳನ್ನು ಕೆಟಿಸಿಪಿ ಕಾಯ್ದೆ, 1961ರ ಕಲಂ 14(ಎ)ರಡಿಯಲ್ಲಿ "ವ್ಯವಸಾಯ" ವಲಯದಿಂದ "ವಸತಿ" ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಮನವಿ ಸಲ್ಲಿಸಿರುತ್ತಾರೆ. ಸದರಿ ಜಮೀನನ್ನು ಅನುಮೋದಿತ ಮಹಾಯೋಜನೆಯಲ್ಲಿ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯು ಈ ಕೆಳಕಂಡ ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದಾಗಿ ಅರ್ಜಿದಾರರು ತಿಳಿಸಿರುತ್ತಾರೆ.

1) ಈ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ, ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ದೊರಕುತ್ತವೆ.
2) ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ.
3) ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ.
4) ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ನಾಗರೀಕ ಸೌಲಭ್ಯಗಳಾದ ಉತ್ತಮ ರಸ್ತೆಗಳು, ಒಳಚರಂಡಿ, ವಿದ್ಯುತ್ ಸೌಲಭ್ಯ ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ.

ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 15 ದಿವಸಗಳೊಳಗಾಗಿ ಸೂಕ್ತ ಕಾರಣಗಳೊಂದಿಗೆ ಲಿಖಿತವಾಗಿ ಸದಸ್ಯ–ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ. ಬೆಂಗಳೂರು ಇವರಿಗೆ ಈ ಪ್ರಕಟಣೆಯಲ್ಲಿನ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಸೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–
ಸದಸ್ಯ ಕಾರ್ಯದರ್ಶಿಗಳು,
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.
ವಾ.ಸಾ.ಸಂ.ಇ/ವಾಪ್ರ/2307/ಎಸ್‌ಎಸ್‌ಸಿ/2025–26

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯ, ಕೋಲಾರ
ಕೆ.ಎನ್.ಸ್ಯಾನಿಟೋರಿಯಂ ಆವರಣ, ಬಂಗಾರಪೇಟೆ ರಸ್ತೆ, ಕೋಲಾರ– 563102
ಸಂಖ್ಯೆ:ಜಿಆಕುಕ/ಕೋ/ಎಸಿಸಿ/ಹೊ.ಗು/ಗ್ರೂಪ್–ಡಿ/ಇತರೆ/07/2025–26
ದಿನಾಂಕ: 12.08.2025

ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2025–26 ನೇ ಸಾಲಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ ವ್ಯಾಪ್ತಿಯ ಅಧೀನ ಸಂಸ್ಥೆಗಳಲ್ಲಿ ಖಾಲಿ ಇರುವ ಮತ್ತು ಅವಶ್ಯಕವಿರುವ ಗ್ರೂಪ್–ಡಿ, ಗಣಕಯಂತ್ರ ಸಹಾಯಕರು, ಶುಶೂಷಣಾ ಅಧಿಕಾರಿ, ಫಾರ್ಮಾಸಿ ಅಧಿಕಾರಿ, ಕಿರಿಯ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿಗಳು, ಮತ್ತು ವಾಹನ ಚಾಲಕರು ಒಟ್ಟು 145 ಹುದ್ದೆಗಳನ್ನು ಮತ್ತು 11 ನಾನ್ ಕ್ಲಿನಿಕಲ್ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಸ್ವಚ್ಛತಾ ಸೇವೆಗಳ ನಿರ್ವಹಣೆಗಾಗಿ ಪಡೆಯಲು ಇ–ಟೆಂಡರ್ ಕರೆಯಲಾಗಿದೆ. **ದಿನಾಂಕ: 14.08.2025 ರಿಂದ 28.08.2025** ರವರೆಗೆ ಇ–ಪಕ್ಯೂರಮೆಂಟ್ ಇ– ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **www.kppp.karnataka.gov.in** ರಲ್ಲಿ ಬಿಡ್‌ದಾರರು ಬಿಡ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಹಾಗೂ **ದಿನಾಂಕ: 30.08.2025 ರಂದು ಬೆಳಿಗ್ಗೆ 11.00 ಗಂಟೆಗೆ ತಾಂತ್ರಿಕ ಬಿಡ್ಡನ್ನು ತೆರೆಯಲಾಗುವುದು.** ಈ ಬಗ್ಗೆ ಹೆಚ್ಚಿನ ವಿವರಗಳು ಬೇಕಾದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ಕೋಲಾರ ಇಲ್ಲಿ ಕೆಲಸದ ದಿನಗಳಂದು ಸಂಪರ್ಕಿಸಬಹುದು. (ದೂರವಾಣಿ ಸಂಖ್ಯೆ: 9731040941). 145 ಹುದ್ದೆಗಳ ಟೆಂಡರ್ ಸಂಖ್ಯೆ: **DHO/K/ACC/OS/GR/OTHERS/07/2025-26** ಗ್ರೂಪ್–ಡಿ ಮತ್ತು ಇತರೆ ಸಿಬ್ಬಂದಿಗಳ **ಟೆಂಡರ್‌ನ ಅಂದಾಜು ಮೊತ್ತ ರೂ: 3.00.00.000 (ಮೂರು ಕೋಟಿ ರೂಪಾಯಿಗಳು ಮಾತ್ರ).** 11 ನಾನ್ ಕ್ಲಿನಿಕಲ್ ಹುದ್ದೆಗಳ ಟೆಂಡರ್ ಸಂಖ್ಯೆ: **DHO/K/ACC/OS/NC/08/2025-26** ನಾನ್ ಕ್ಲಿನಿಕಲ್ ಸ್ವಚ್ಛತಾ ಸಿಬ್ಬಂದಿಗಳ ಟೆಂಡರ್‌ನ **ಅಂದಾಜು ಮೊತ್ತ ರೂ: 40,00,000 (ನಲವತ್ತು ಲಕ್ಷ ರೂಪಾಯಿಗಳು ಮಾತ್ರ)**

ಸಹಿ/–ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:231/ಕೆಎಸ್‌ಎಂಸಿಎ/2025–26

ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ನಗರ ಸಾಮಾಜಿಕ ಅರಣ್ಯ ವಿಭಾಗ,
ಜಾರಕ್ ಬಂಡೆ ಅರಣ್ಯ ವಸತಿ ಸಂಕೀರ್ಣ, ಜಾಲಹಳ್ಳಿ ಪಶ್ಚಿಮ, ಬೆಂಗಳೂರು–560 015.
E-mail: dcf.buzp@yahoo.in Phone No: 080-29900992.
ಸಂಖ್ಯೆ: ಎ1/ಬಿಯುಡಿ/ಟೆಂಡರ್/ಸಿಆರ್–02/2025–26 ದಿನಾಂಕ: 13–08–2025

ಟೆಂಡರ್ ಪ್ರಕಟಣೆ

2025–26ನೇ ಸಾಲಿನಲ್ಲಿ ನಗರ ಸಾಮಾಜಿಕ ಅರಣ್ಯ ವಿಭಾಗದ ಕಗ್ಗಲೀಪುರ ಸಾಮಾಜಿಕ ಅರಣ್ಯ ವಲಯಗಳಲ್ಲಿ ಅರ್ನಿಬಂಧಿತ ಅನುದಾನ ಯೋಜನೆಯಡಿ ಮಾನ್ಸೂನ್ ನೆಡುತೋಪು ನಿರ್ಮಾಣ ಮತ್ತು ಆನೇಕಲ್ ಸಾಮಾಜಿಕ ಅರಣ್ಯ ವಲಯದಲ್ಲಿ ಆರ್.ಎಸ್.ಪಿ ಯೋಜನೆಯಡಿ ಸಸಿ ಬೆಳೆಸುವ ಹಾಗೂ ಮುಂಗಡ ಕಾಮಗಾರಿಗಳನ್ನು ಕೈಗೊಳ್ಳುವ ಸಂಬಂಧ ಅರಣ್ಯ ಇಲಾಖೆಯಲ್ಲಿ ನೋಂದಾಯಿತ ಗುತ್ತಿಗೆದಾರರಾಗಿ ಹೆಸರನ್ನು ನೋಂದಾಯಿಸಿಕೊಂಡಿರುವಂತಹ ಅರ್ಹ ಗುತ್ತಿಗೆದಾರರುಗಳಿಂದ ಕರ್ನಾಟಕ ಸರ್ಕಾರದ ಇ–ಪ್ರೋಕ್ ಪೋರ್ಟಲ್ (https://.kppp.karnataka.gov.in) ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರನ್ನು ಇ–ಪೋರ್ಟಲ್‌ನಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ 20–08–2025 ಸಂಜೆ 5.00 ಗಂಟೆಗೆ** ಹಾಗೂ ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 21–08–2025 ರಂದು ಸಂಜೆ 5:10 ಗಂಟೆ.** ತಾಂತ್ರಿಕ ಬಿಡ್‌ಗಳಲ್ಲಿನ ಷರತ್ತುಗಳು ಯಶಸ್ವಿಯಾಗಿದ್ದರೆ ಮಾತ್ರ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು ಹಾಗೂ ಷರತ್ತುಗಳು ಪೂರೈಕೆ ಇಲ್ಲದ ಬಿಡ್‌ಗಳನ್ನು ತಿರಸ್ಕರಿಸಲಾಗುವುದು. ಯಶಸ್ವಿಯಾಗಿದ್ದರೆ **ದಿನಾಂಕ 23–08–2025 ಸಂಜೆ 5.00 ಗಂಟೆಗೆ** ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು. ಒಂದನೇ ಬಾರಿ ಇ–ಪೋರ್ಟಲ್‌ನಲ್ಲಿ ಯಾರೂ ಭಾಗವಹಿಸದೇ ಇದ್ದಲ್ಲಿ ಮರು–ಟೆಂಡರ್‌ಗೆ **ದಿನಾಂಕ 27–08–2025 ಸಂಜೆ 5.00 ಗಂಟೆಯವರೆಗೂ** ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಿ ಇ–ಟೆಂಡರ್‌ನಲ್ಲಿ ಭಾಗವಹಿಸಬಹುದು ಹಾಗೂ ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ 28–08–2025 ಸಂಜೆ 5.10 ಗಂಟೆಗೆ.** ತಾಂತ್ರಿಕ ಬಿಡ್‌ಗಳಲ್ಲಿನ ಷರತ್ತುಗಳು ಯಶಸ್ವಿಯಾಗಿದ್ದರೆ ಮಾತ್ರ **ದಿನಾಂಕ 30–08–2025 ಸಂಜೆ 5.00 ಗಂಟೆಗೆ** ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು. ಪ್ರತ್ಯೇಕ ಕೆಲಸಗಳ ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಆಡಳಿತ ಕೇಂದ್ರ ವೆಬ್‌ಸೈಟ್ https://.kppp.karnataka.gov.in ನಲ್ಲಿ ಮಾಹಿತಿಗಳನ್ನು ಪಡೆಯಬಹುದು.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ನಗರ ಸಾಮಾಜಿಕ ಅರಣ್ಯ ವಿಭಾಗ, ಬೆಂಗಳೂರು
ವಾಸಾಸಂಇ/ವಾಪ್ರ/2314/ಆಕಾರ್/2025–26

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020.
ನಂ. ಬೆಂಅಪ್ರಾ/ನಯೋಸ/ಸಿಎಲ್‌ಯು–108/1894/2025–26 ದಿನಾಂಕ: 13.08.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–ಎ ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ಹೆಸರು	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಮೆ॥ ವಿಶ್ವೇಶ್ವರ ಕ್ರಿಯೇಟರ್ಸ್ ರವರ ಪರವಾಗಿ ಜಿಡಿಎ ಮತ್ತು ಜಿಪಿಎದಾರರಾದ ಶ್ರೀ ಗೋನುಗುಂಟ್ಲ ಸೋಮಶೇಖರ್ ರಾವ್ ಮತ್ತು ಇತರರು ನಂ. ಜಿ2, 2ನೇ ಅಡ್ಡರಸ್ತೆ, ಎಇಸಿಎಸ್ ಬಡಾವಣೆ, ಬಿ–ಬ್ಲಾಕ್, ಕುಂದಲಹಳ್ಳಿ, ಬೆಂಗಳೂರು–560037.	ಆನೇಕಲ್	ಸರ್ಜಾಪುರ	ಬಿ. ಹೊಸಹಳ್ಳಿ	14/5	1–06	ವ್ಯವಸಾಯ ವಲಯ	ವಸತಿ
2					14/6	0–1.25		
3					17/2ರ ಪೈಕಿ	0–5.50		
4					17/5	0–4.50		
					ಒಟ್ಟು	1–17.25		

ಷರಾ: ಅರ್ಜಿದಾರರು ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಪ್ರಶ್ನಿತ ಜಮೀನುಗಳನ್ನು 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂ.ಅ.ಪ್ರಾ., ಬೆಂಗಳೂರು.

ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಪ್ರತಿ ಜಿಲ್ಲೆಗೆ ಎರಡರಂತೆ 62 ಮೆಟ್ರಿಕ್ ನಂತರದ ವಸತಿ ನಿಲಯಗಳನ್ನು ಆರಂಭಿಸಲಾಗುವುದು

-ಶಿವರಾಜ್ ಎಸ್. ತಂಗಡಗಿ, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ

ಕೆಲವು ಪ್ರಭಾವಿಗಳು ಸರಕಾರಿ ಜಮೀನನ್ನು ಭೂ ಕಬಳಿಕೆ ಮಾಡಿಕೊಂಡು ನ್ಯಾಯಾಲಯದಿಂದ ತಡೆಯಾಜ್ಞೆ ತರುತ್ತಿದ್ದರು. ಹೈಕೋರ್ಟ್ ಇಲ್ಲವೇ ಸುಪ್ರೀಂಕೋರ್ಟ್‌ಗೆ ಹೋಗಿ ತಡೆಯಾಜ್ಞೆ ತರುತ್ತಿದ್ದರು. ಜಮೀನು ಮಾಲೀಕ ಕಾನೂನು ಹೋರಾಟ ನಡೆಸಲು ಸಾಧ್ಯವಾಗದೆ ತನಗೆ ಅರ್ಧ ಪರಿಹಾರ ಸಿಕ್ಕರೆ ಸಾಕು ಎಂಬ ತೀರ್ಮಾನಕ್ಕೆ ಬರುತ್ತಿದ್ದ. ಈ ಎಲ್ಲ ಅಕ್ರಮಗಳನ್ನು ತಡೆಗಟ್ಟಲು ನಾವು ಹೊಸ ನಿಯಮವನ್ನು ರೂಪಿಸಿದ್ದೇವೆ. ಇದರ ಕರಡು ಸಿದ್ಧವಾಗಿದೆ.

- ಕೃಷ್ಣಬೈರೇಗೌಡ, ಸಚಿವ



ಸಮಾಚಾರ ಸಣ್ಣದಲ್ಲ

ತ್ಯಾಜ್ಯ ಸುರಿದರೆ ಕ್ರಿಮಿನಲ್ ಕೇಸ್

ವಿಧಾನ ಪರಿಷತ್: ಅನಧಿಕೃತವಾಗಿ ತ್ಯಾಜ್ಯವನ್ನು ಸುರಿಯುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು ಎಂದು ಪೌರಾಡಳಿತ ಸಚಿವ ರಹೀಂ ಖಾನ್ ತಿಳಿಸಿದರು.

ವಿಧಾನ ಪರಿಷತ್ ಸದಸ್ಯ ರಾದ ಗೋವಿಂದ ರಾಜು ಮಂಡಿಸಿದ ಗಮನ ಸೆಳೆಯುವ ಸೂಚನೆಗೆ ಉತ್ತರಿಸಿದ ಸಚಿವರು, ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಕೋಲಾರದ ಕೆಂದಟ್ಟಿ ಗ್ರಾಮದ ಹತ್ತು ಎಕರೆ ಜಮೀನಿನಲ್ಲಿ ಘನತ್ಯಾಜ್ಯ ನಿರ್ವಹಣಾ ಘಟಕ ಸ್ಥಾಪಿಸಲಾಗಿದ್ದು, ಕೋಲಾರ ನಗರಸಭೆ ವ್ಯಾಪ್ತಿಯ ಘನತ್ಯಾಜ್ಯ ನಿರ್ವಹಣೆಯನ್ನು ಆ ಮೂಲಕ ನಿರ್ವಹಿಸಲಾಗುತ್ತಿದೆ. ಪ್ರತಿ ನಿತ್ಯ 35 ಟನ್ ಹಸಿ ತ್ಯಾಜ್ಯವನ್ನು ಸಂಸ್ಕರಿಸಿ ಕೋಲಾರ ಅಗ್ರಿ ಗೋಲ್ಡ್ ಬ್ರಾಂಡ್ ಹೆಸರಿನಲ್ಲಿ ಗೊಬ್ಬರ ಮಾರಾಟ ಮಾಡಲಾಗುತ್ತಿದೆ. ಇದರ ಜತೆಗೆ ಮಣಿ ಘಟ್ಟ ರಸ್ತೆಯ ಬಳಿ ಹಾಗೂ ಕೆಂದಟ್ಟಿಯ ಸಂಗ್ರ ಹಣಾ ಘಟಕದಲ್ಲಿ ತ್ಯಾಜ್ಯವನ್ನು ಸಂಸ್ಕರಿಸಿ ಮರು ಬಳಕೆದಾರರಿಗೆ ಮಾರಾಟ ಮಾಡಿ ಬಂದ ಹಣವನ್ನು ನಗರಸಭೆಗೆ ಪಾವತಿ ಮಾಡಿಕೊಳ್ಳ ಲಾಗುತ್ತಿದೆ ಎಂದರು.

ರಸ್ತೆ ದುರಸ್ಥಿ ಮಾಡಲು ಅನುದಾನ ಬಿಡುಗಡೆ

ವಿಧಾನಸಭೆ: ರಾಜ್ಯದಲ್ಲಿ ಗ್ರಾಮೀಣ ರಸ್ತೆಗಳು ಹದಗೆಟ್ಟಿರುವುದು ಸರಕಾರದ ಗಮನದಲ್ಲಿದೆ. ಹದಗೆಟ್ಟಿರುವ ರಸ್ತೆಗಳ ದುರಸ್ಥಿಗೆ ಅನುದಾನ ಬಿಡುಗಡೆ ಮಾಡಿದ್ದೇವೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಸ್ಪಷ್ಟಪಡಿಸಿದರು.

ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಜಗದೀಶ್ ಶಿವಯ್ಯ ಗುಂಡಗುಂಟಿ ರವರ ಪ್ರಶ್ನೆಗೆ ಉತ್ತರಿಸಿದ ಅವರು, ಈ ಹಿಂದೆ ಗ್ರಾಮೀಣ ರಸ್ತೆಗಳು ಹಾಳಾಗಿದ್ದ ಸಂದರ್ಭದಲ್ಲಿ ಎನ್‌ಡಿಆರ್ ಎಫ್ ಮತ್ತು ಎಸ್‌ಡಿಆರ್‌ಎಫ್ ನಿಯಮಗಳ ಪ್ರಕಾರ ಸರಕಾರ ಹಣ ಬಿಡುಗಡೆ ಮಾಡಿದೆ. ಪ್ರಗತಿ ಪಥ ಯೋಜನೆಯಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರದಲ್ಲೂ 15 ರಿಂದ 18 ಕಿ.ಮೀ. ಗ್ರಾಮೀಣ ರಸ್ತೆಗಳ ದುರಸ್ಥಿ ಕೈಗೊಳ್ಳಲು ನಿಯಮಗಳನ್ನು ಸರಳೀಕರಣ ಮಾಡಿದ್ದೇವೆ. ನಮ್ಮ ರಸ್ತೆ ನಮ್ಮ ಹೊಲ ಯೋಜನೆ ಕಳೆದ 6 ವರ್ಷಗಳಿಂದ ಸ್ಥಗಿತವಾಗಿತ್ತು. ಇದಕ್ಕೂ ಮುಖ್ಯಮಂತ್ರಿಗಳು 3 ಕೋಟಿ ಅನುದಾನ ನೀಡಲು ಮುಂದಾಗಿದ್ದಾರೆ. ಗ್ರಾಮೀಣ ರಸ್ತೆಗಳ ದುರಸ್ಥಿಗೆ ಸರಕಾರ ಅನುದಾನ ನೀಡುತ್ತಿದೆ ಎಂದು ಹೇಳಿದರು. ಇದಕ್ಕೂ ಮೊದಲು ಮಾತನಾಡಿದ ಜಗದೀಶ್ ಗುಡಗುಂಟಿ, ಜಮ ಖಂಡಿ ಕ್ಷೇತ್ರದಲ್ಲಿ ಗ್ರಾಮೀಣ ರಸ್ತೆಗಳು ಸಂಪೂರ್ಣ ಹಾಳಾಗಿವೆ. ಗರ್ಭಿಣಿಯರನ್ನು ವಾಹನದಲ್ಲಿ ಕರೆದೊಯ್ಯಲು ಸಾಧ್ಯವಿಲ್ಲ. ಜೋಳಿಗೆಯಲ್ಲಿ ಆಸ್ಪತ್ರೆಗೆ ಕರೆದೊಯ್ಯುವ ಪರಿಸ್ಥಿತಿ ಇದೆ. ರಸ್ತೆಗಳ ಅಭಿವೃದ್ಧಿಗೆ 10 ಕೋಟಿ ಅನುದಾನ ನೀಡುವಂತೆ ಆಗ್ರಹಿಸಿದ್ದರು.

ಎಲ್ಲ ಜಿಲ್ಲೆಯಲ್ಲೂ ಶ್ರಮಿಕ ವಸತಿ ಶಾಲೆ

ವಿಧಾನಸಭೆ: ರಾಜ್ಯದ 31 ಜಿಲ್ಲೆಗಳಲ್ಲಿ ಶ್ರಮಿಕ ವಸತಿ ಶಾಲೆಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿದರು.



ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ಯು.ಬಿ.ಬಣಕಾರ್‌ರವರ ಪ್ರಶ್ನೆಗೆ ಉತ್ತರಿಸಿದ ಅವರು, 2025-26ನೇ ಸಾಲಿನ ಆಯವ್ಯಯದಲ್ಲಿ ಕಾರ್ಮಿಕ ಕಲ್ಯಾಣ ಮಂಡಳಿ ವತಿಯಿಂದ ರಾಜ್ಯದ 31 ಜಿಲ್ಲೆಗಳಲ್ಲಿ ಶ್ರಮಿಕ ವಸತಿ ಶಾಲೆಗಳನ್ನು ಆರಂಭಿಸುವ ಘೋಷಣೆ ಮಾಡಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ನವರು ಈಗಾಗಲೇ ರಾಜ್ಯದ 31 ಜಿಲ್ಲೆಗಳಲ್ಲಿ ವಸತಿ ಶಾಲೆಗಳನ್ನು ಆರಂಭಿಸಲು ಆಡಳಿತಾತ್ಮಕ ಅನುಮೋದನೆ ನೀಡಿದ್ದಾರೆ. ಈ ಶಾಲೆಗಳ ಕಟ್ಟಡ ನಿರ್ಮಾಣ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ಹೇಳಿದರು. ಬಜೆಟ್‌ನಲ್ಲಿ ಘೋಷಣೆ ಮಾಡಿರುವಂತೆ ಪ್ರತಿ ಜಿಲ್ಲೆಗೆ ಒಂದು ವಸತಿ ಶಾಲೆ ನಿರ್ಮಾಣ ಮಾಡಲು ಅವಕಾಶ ಇರುತ್ತದೆ. ಬಹುತೇಕ ಶಾಸಕರಿಂದ ಶ್ರಮಿಕ ವಸತಿ ಶಾಲೆಗಳ ಆರಂಭಕ್ಕೆ ಹೆಚ್ಚಿನ ಬೇಡಿಕೆಗಳು ಬಂದಿವೆ. ಮುಂದಿನ ದಿನಗಳಲ್ಲಿ ಸರಕಾರ ಹೆಚ್ಚಿನ ವಸತಿ ಶಾಲೆಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಿದೆ ಎಂದು ಹೇಳಿದರು.

ವಿಶ್ವವಾಣಿ ಕ್ಲಬ್ ಹೌಸ್
14.08.2025
ಸಂಜೆ: 06.55 ರಿಂದ 08.05 ರವರೆಗೆ
ಗುರುವಾರದ ಅತಿಥಿ

ಶ್ರೀ ನಿತಿನ್ ರಾಜಾರಾಮ್ ಶಾಸ್ತ್ರಿ
ವಿಷಯ
ದೇಶಭಕ್ತಿ ಗೀತೆಗಳು
vishwavani.news

ಭೂ ಸುಧಾರಣೆ ತಿದ್ದುಪಡಿ ವಿಧೇಯಕಕ್ಕೆ ಅನುಮೋದನೆ | ಇನ್ನು ಮುಂದೆ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿಯೇ ಅನುಮತಿ

ಗ್ರಾಮೀಣ ಭಾಗದ ಸಣ್ಣ ಉದ್ದಿಮೆದಾರರಿಗೆ ರಿಲೀಫ್

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ಸಣ್ಣ ಉದ್ದಿಮೆ ಸ್ಥಾಪಿಸಲು ಗ್ರಾಮೀಣ ಭಾಗದಲ್ಲಿ ಎರಡು ಎಕರೆವರೆಗೆ ಕೃಷಿ ಭೂಮಿಯನ್ನು ಕೃಷಿ ಯೇತರ ಉದ್ದೇಶಕ್ಕಾಗಿ ಬಳಸಲು ಅವಕಾಶ ಕಲ್ಪಿಸುವ 2025ರ ಕರ್ನಾಟಕ ಭೂ ಸುಧಾರಣೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕಕ್ಕೆ ವಿಧಾನಸಭೆಯಲ್ಲಿ ಅನುಮೋದನೆ ಸಿಕ್ಕಿದೆ.

ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ವಿಧೇಯಕ ಕುರಿತು ಮಾತನಾಡಿ, ಖಾಸಗಿ ವ್ಯಕ್ತಿಗಳ ಕೃಷಿ ಜಮೀನನ್ನು ಶಿಕ್ಷಣ ಸಂಸ್ಥೆಗಳು ಅಥವಾ ಸಣ್ಣ ಉದ್ದಿಮೆ/ಕೈಗಾರಿಕೆಗಳಿಗೆ ಖರೀದಿಸಲು ಸೆಕ್ಷನ್ 109ರ ಅಡಿ ಈ ಹಿಂದೆಯೇ ಅನುಮತಿ ನೀಡಲಾಗಿದೆ. ಆದರೆ, ಆ ಅನುಮತಿಗಾಗಿ ಅವರು ಸರಕಾರದ ಮುಖ್ಯ ಕಾರ್ಯದರ್ಶಿಗೆ ಮನವಿ ಸಲ್ಲಿಸಬೇಕಿತ್ತು. ಈ ನಿಯಮಕ್ಕೆ ತಿದ್ದುಪಡಿ ಮಾಡಲಾಗಿದ್ದು, ಅಧಿಕಾರವನ್ನು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ ಎಂದು ಹೇಳಿದರು.

ಭೂ ಖರೀದಿಗೆ ಜಿಲ್ಲಾಧಿಕಾರಿ ಅನುಮತಿ: ಸಣ್ಣ ಉದ್ಯಮ ಆರಂಭಿಸುವ ಸಂಸ್ಥೆಗಳಿಗೆ ಜಿಲ್ಲಾಧಿಕಾರಿ 4 ಹೆಕ್ಟೇರ್‌ವರೆಗಿನ ಭೂಮಿ ಖರೀದಿಗೆ ಅನುಮತಿ ನೀಡಬಹುದು. ಹೀಗೆ ನೀಡುವ ಅನುಮತಿ ಆಟೋಮ್ಯಾಟಿಕ್ ಆಗಿ ಭೂ ಪರಿವರ್ತನೆಯಾಗಿರುತ್ತದೆ. ಅಂದರೆ, ಕೃಷಿ ಭೂಮಿಯು ಕೃಷಿಯೇತರ ಚಟುವಟಿಕೆಗೆ ಬಳಕೆಗೆ ಅವಕಾಶ ಸಿಗುತ್ತದೆ. ಈ ಹಿಂದೆ ಸಣ್ಣ ಉದ್ದಿಮೆದಾರರು, ಶಿಕ್ಷಣ ಸಂಸ್ಥೆಗಳು ಭೂಮಿಯನ್ನು ಯಾವುದೋ ಉದ್ದೇಶಕ್ಕೆ ಪಡೆದು ನಂತರದಲ್ಲಿ ಬೇರೆ ಉದ್ದೇಶಕ್ಕೆ ಬಳಸಲು ಅನುಮತಿ ಕೋರಲಾಗುತ್ತಿತ್ತು. ಅದಕ್ಕೆ ಅನುಮತಿ ನೀಡಲು ಅವಕಾಶ ಇರಲಿಲ್ಲ. ಪ್ರಸ್ತುತ ಆ ನಿಯಮವನ್ನೂ ತಿದ್ದುಪಡಿಸಿ ಅವಕಾಶ ಕಲ್ಪಿಸಲಾಗುತ್ತಿದೆ ಎಂದು ತಿಳಿಸಿದರು.

ರಾಜ್ಯದ ಯಾವುದೇ ಭಾಗದಲ್ಲಿ ಎರಡು ಎಕರೆವರೆಗೆ ಕೈಗಾರಿಕೆ ಮಾಡಲು ಭೂ ಪರಿವರ್ತನೆಗೆ ವಿನಾಯಿತಿ ನೀಡಲಾಗುತ್ತದೆ. ಸಣ್ಣ ಉದ್ದಿಮೆದಾರರಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಈ ತಿದ್ದುಪಡಿಯನ್ನು ತರಲಾಗಿದೆ. ನವೀಕರಿಸಬಹುದಾದ ಇಂಧನ ಕ್ಷೇತ್ರ ಪ್ರಸ್ತುತ ಉದಯೋನ್ಮುಖ ವಲಯ. ಕಲ್ಲಿದ್ದಲಿನಿಂದ ನವೀಕರಿಸಬಹುದಾದ ಇಂಧನದ ಕಡೆಗೆ ಬದಲಾಗಬೇಕು ಎಂಬುದು ಸರಕಾರದ ಹಾಗೂ ಜನ ಸಾಮಾನ್ಯರ ಆದ್ಯತೆ. ಸೋಲಾರ್, ಪವನ ಶಕ್ತಿ ಘಟಕ ಸ್ಥಾಪಿಸಲು ಅನುಮತಿ ಕೊಡಿಸುವ ನೆಪದಲ್ಲಿ ಮಧ್ಯವರ್ತಿಗಳ ಹಾವಳಿ ಹೆಚ್ಚಾಗಿದೆ. ಇದರಿಂದ ಸಣ್ಣ ಉದ್ದಿಮೆದಾರರು ಮಧ್ಯವರ್ತಿಗಳ ಕಾಟಕ್ಕೆ ಬೇಸತ್ತಿದ್ದಾರೆ ಎಂದರು.

ಸೋಲಾರ್ ಹಾಗೂ ಪವನ ಶಕ್ತಿ ವಿಂಡ್ ಮಿಲ್ ಸ್ಥಾಪಿಸುವ ಉದ್ದಿಮೆದಾರರ ಬಂಡವಾಳ ಹೂಡಿಕೆಯೂ ಕಡಿಮೆಯಾಗುತ್ತಿದೆ. ಆದ್ದರಿಂದ ಮಧ್ಯವರ್ತಿಗಳ ಉಪಟಳ ತಪ್ಪಿಸಿ ಬಂಡವಾಳ ಹೆಚ್ಚಿಸುವ ಸಲುವಾಗಿ ಆಟೋಮ್ಯಾಟಿಕ್ ಪರಿವರ್ತನೆಗೆ ಅವಕಾಶ ನೀಡಲಾಗಿದೆ. ಈ ಬಗ್ಗೆ ಸಿಎಂ ಸಿದ್ದರಾಮಯ್ಯ ಅವರ ಒತ್ತಾಯವೂ ಇತ್ತು. ಬಹಳ ದಿನಗಳ ಚರ್ಚೆಯ ನಂತರ ಕಾನೂನಿನಲ್ಲಿ ಅವಕಾಶ ಮಾಡಿಕೊಡಲಾಗುತ್ತಿದೆ.

- ಕೃಷ್ಣಬೈರೇಗೌಡ, ಕಂದಾಯ ಸಚಿವ

ನೋಂದಣಿ ತಿದ್ದುಪಡಿ ವಿಧೇಯಕಕ್ಕೆ ಅನುಮೋದನೆ: ಕರ್ನಾಟಕ ನೊಂದಣಿ ತಿದ್ದುಪಡಿ ವಿಧೇಯಕಕ್ಕೆ ಸಂಬಂಧಿಸಿದಂತೆ ವಿವರಣೆ ನೀಡಿದ ಸಚಿವ ಕೃಷ್ಣಬೈರೇಗೌಡ ಅವರು, ನೋಂದಣಿ ಪ್ರಕ್ರಿಯೆಯಲ್ಲಿ ಸರಳೀಕರಣಗೊಳಿಸಿ ಸುಧಾರಣೆ ಮಾಡಲಾಗುತ್ತಿದೆ. ಜನರ ಕಷ್ಟಕ್ಕೆ ಪರಿಹಾರ ನೀಡುವ ಕೆಲಸ ಮಾಡಲಾಗುತ್ತಿದೆ. ಅದರ ಮುಂದುವರೆದ ಪ್ರಯತ್ನವೇ ಈ ನೂತನ ತಿದ್ದುಪಡಿ ವಿಧೇಯಕ. ಈ ವಿಧೇಯಕದ ಮೂಲ ಉದ್ದೇಶವೇ ನೋಂದಣಿ ಸರಳೀಕರಣ ಮತ್ತು ನೋಂದಣಿ ಪ್ರಕ್ರಿಯೆಯಲ್ಲಿ ತಾಂತ್ರಿಕತೆ ಬಳಸಿಕೊಂಡು ಅಧಿಕಾರಿಗಳ ಮಧ್ಯಪ್ರವೇಶವನ್ನು ಸಕ್ರಿಯವಾಗಿ ಕಡಿಮೆ ಮಾಡುವುದಾಗಿದೆ ಎಂದು ತಿಳಿಸಿದರು.

ನೂತನ ತಿದ್ದುಪಡಿಯ ಮೂಲಕ ಸೆಕ್ಷನ್ 9(ಎ) ಅಡಿ ಕಂಪ್ಯೂಟರ್ ಡಿಜಿಟಲ್ ಸಹಿ ವ್ಯವಸ್ಥೆಯನ್ನು ಕಡ್ಡಾಯಗೊಳಿಸಲಾಗಿದೆ. ಉದಾಹರಣೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಒಬ್ಬರಿಗೆ ನಿವೇಶನ ಮಂಜೂರು ಮಾಡಿದರೆ ರಿಜಿಸ್ಟ್ರಾರ್ ಅಧಿಕಾರಿ ಇಲ್ಲದೆಯೂ ಅದನ್ನು ಆಟೋಮ್ಯಾಟಿಕ್ ಆಗಿ ನೋಂದಣಿ ಮಾಡುವಂತಹ ವ್ಯವಸ್ಥೆಯನ್ನು ಜಾರಿಗೆ ತರುತ್ತಿದ್ದೇವೆ. ರೈತರು ತಾವು ಪಡೆದ ಸಾಲ ತೀರಿಸಿದ್ದನ್ನು ಪಹಣಿ ಕಾಲಂ ನಿಂದ ತೆಗೆಯಲು ಸಹ ಸರಕಾರಿ ಕಚೇರಿಗೆ ಅಲೆಯಬೇಕಾದ ಸ್ಥಿತಿ ಇದೆ. ಕಾಲಂ ನಿಂದ ಹೆಸರು ತೆಗೆಯಲು ಅದಕ್ಕೂ ಹಣ ನೀಡಬೇಕು. ತಂತ್ರಜ್ಞಾನ ಕಾಲದಲ್ಲೂ ಋಣಮುಕ್ತ ದಾಖಲೆ ಪಡೆಯಲೂ ಸಹ ಮಧ್ಯವರ್ತಿಯನ್ನು ಹಿಡಿಯಬೇಕಾದ ದುಃಸ್ಥಿತಿ ಇದೆ. ಹೀಗಾಗಿಯೇ ನೋಂದಣಿಯನ್ನು ಸರಳೀಕರಣಗೊಳಿಸುವ ಉದ್ದೇಶದಿಂದ ಈ ನೂತನ ತಿದ್ದುಪಡಿ ತರಲಾಗಿದೆ ಎಂದು ತಿಳಿಸಿದರು.

ವಿವಿಧ ವಿಧೇಯಕಗಳ ಅನುಮೋದನೆ

ಇದೇ ಸಮಯದಲ್ಲಿ ಅದೇ ರೀತಿ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ತಿದ್ದುಪಡಿ ವಿಧೇಯಕ - 2025, ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣ ಅಭಿವೃದ್ಧಿ ತಿದ್ದುಪಡಿ ವಿಧೇಯಕ - 2025, ಕಿತ್ತೂರು ಅಭಿವೃದ್ಧಿ ಪ್ರಾಧಿಕಾರ ತಿದ್ದುಪಡಿ ವಿಧೇಯಕ - 2025, ಕೂಡಲಸಂಗಮ ಅಭಿವೃದ್ಧಿ ಮಂಡಳಿ ತಿದ್ದುಪಡಿ ವಿಧೇಯಕ - 2025, ಬನವಾಸಿ ಅಭಿವೃದ್ಧಿ ಪ್ರಾಧಿಕಾರ ತಿದ್ದುಪಡಿ ವಿಧೇಯಕ - 2025, ಸರ್ವಜ್ಞ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ತಿದ್ದುಪಡಿ ವಿಧೇಯಕ - 2025ಕ್ಕೆ ಅಂಗೀಕಾರ ನೀಡಲಾಗಿದೆ. ರಾಜ್ಯದ ಎಲ್ಲ ಪ್ರಾಧಿಕಾರಗಳ ಅಭಿವೃದ್ಧಿ ಕೆಲಸ ಸಕ್ರಿಯವಾಗಿ ಮತ್ತು ಪರಿಣಾಮಕಾರಿಯಾಗಿ ನಡೆಯಬೇಕು ಎಂಬ ಉದ್ದೇಶದಿಂದ ಈ ಎಲ್ಲಾ ತಿದ್ದುಪಡಿ ವಿಧೇಯಕಗಳನ್ನೂ ಮಂಡಿಸಲಾಗಿದೆ. ಈ ಹಿಂದೆ ಒಂದೆರಡು ಅಭಿವೃದ್ಧಿ ಪ್ರಾಧಿಕಾರಗಳು ಇದ್ದವು, ಹೀಗಾಗಿ ಪ್ರಾಧಿಕಾರಗಳಿಗೆ ಮುಖ್ಯಮಂತ್ರಿಗಳೇ ಅಧ್ಯಕ್ಷರಾಗಿ ರಬೇಕು ಎಂಬ ನಿಯಮ ಇತ್ತು. ಆದರೆ, ಇಂದು ಪ್ರಾಧಿಕಾರಗಳ ಸಂಖ್ಯೆ ಅಧಿಕವಾಗಿದೆ ಎಂದರು. ಮುಖ್ಯಮಂತ್ರಿಗಳಿಗೂ ಕೆಲಸದ ಒತ್ತಡ ಅಧಿಕವಾಗಿದ್ದು, ಈ ನಡುವೆ ಪ್ರಾಧಿಕಾರಗಳ ಅಭಿವೃದ್ಧಿಗೆ ಮುಖ್ಯಮಂತ್ರಿಗಳಿಂದ ಗಮನ ನೀಡುವುದು ಕಷ್ಟದ ವಿಚಾರ. ಹೀಗಾಗಿ ಎಲ್ಲಾ ಪ್ರಾಧಿಕಾರಗಳ ಅಭಿವೃದ್ಧಿ ಕೆಲಸ ಸಕ್ರಿಯವಾಗಿ ಮತ್ತು ಪರಿಣಾಮಕಾರಿಯಾಗಿ ನಡೆಯಬೇಕು ಎಂಬ ಉದ್ದೇಶದಿಂದ ಪ್ರಾಧಿಕಾರಗಳಿಗೆ ಮುಖ್ಯಮಂತ್ರಿ ಅಥವಾ ಇಲಾಖೆ ಸಚಿವ ಕಂದಾಯ ಸಚಿವರು ಅಥವಾ ಸರಕಾರ ಸೂಚಿಸಿದ ಪ್ರಾಧಿಕಾರದ ಅಭಿವೃದ್ಧಿ ಬಗ್ಗೆ ಆಸಕ್ತಿ ಇರುವ ಯಾವುದೇ ಸಚಿವರನ್ನು ನೇಮಕ ಮಾಡಲು ಅವಕಾಶ ನೀಡಲಾಗಿದೆ ಎಂದು ವಿವರಿಸಿದರು.

ಎಷ್ಟೇ ಕಾನೂನು ಕ್ರಮ ವಿಧಿಸಿದರೂ ಜನರಲ್ಲಿ ಜಾಗೃತಿ ಮೂಡದಿದ್ದರೆ ಹೇಗೆ?

ರಾಜ್ಯದಲ್ಲಿ ಯುವಕರ ಸಾವು ಹೆಚ್ಚಾಗುತ್ತಿವೆ

ವಿಧಾನ ಪರಿಷತ್: ರಾಜ್ಯದಲ್ಲಿ ಪ್ರತಿ ವರ್ಷ ರಸ್ತೆ ಅಪಘಾತಗಳಿಂದ ಒಂದು ಸಾವಿರಕ್ಕೂ ಅಧಿಕ ಮಂದಿ ಸಾವನ್ನಪ್ಪುತ್ತಿದ್ದಾರೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಸದಸ್ಯ ನವೀನ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ದ್ವಿಚಕ್ರ ವಾಹನ , ಬಸ್, ಕಾರು, ಟ್ರ್ಯಾಕ್ಟರ್ ಮತ್ತಿತರ ವಾಹನಗಳ ಅಪಘಾತದಿಂದ ದೇಶಾದ್ಯಂತ 1,25,000 ಜನ ಸಾವನ್ನಪ್ಪಿದರೆ, ರಾಜ್ಯದಲ್ಲಿ 8 ಸಾವಿರ ಜನ ಸಾಯುತ್ತಾರೆ ಎಂದು ಹೇಳಿದರು. ಅಪಘಾತಗಳ ಪ್ರಕರಣ ತಡೆಗಟ್ಟಲು ನಾವು ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಕಟ್ಟುನಿಟ್ಟಿನ ದಂಡ ವಿಧಿಸುವುದು, ಡಿಎಲ್ ರದ್ದುಪಡಿಸುವುದು, ಕಾನೂನು ಕ್ರಮಗಳಂತಹ ಹಲವಾರು ಕಠಿಣ ಕ್ರಮಗಳನ್ನು ತೆಗೆದುಕೊಂಡಿದ್ದರೂ ಅಪಘಾತಗಳು ಕಡಿಮೆಯಾಗುತ್ತಿಲ್ಲ ಎಂದು ವಿಷಾದಿಸಿದರು. ಶಾಲಾ ಕಾಲೇಜುಗಳಲ್ಲಿ ಮಕ್ಕಳು ಮತ್ತು ವಿದ್ಯಾರ್ಥಿಗಳಿಂದ ಜಾಗೃತಿ ಅಭಿಯಾನ, ಮದ್ಯಪಾನ ಮಾಡಿ ವಾಹನ ಚಾಲನೆ ನಿಷೇಧ, ವೀಲ್ಹಿಂಗ್ ಮಾಡಿದವರ ಡಿಎಲ್ ರದ್ದು ಸೇರಿದಂತೆ ಹತ್ತಾರು ಕ್ರಮ ಕೈಗೊಳ್ಳಲಾಗಿದೆ. ನಾವು ಎಷ್ಟೇ ಕಾನೂನು ಕ್ರಮ ವಿಧಿಸಿದರೂ ಜನರಲ್ಲಿ ಜಾಗೃತಿ ಬಾರದೆ ಇದ್ದರೆ ನಾವೇನು ಮಾಡಲು ಸಾಧ್ಯ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ದ್ವಿಚಕ್ರ ವಾಹನ ಅಪಘಾತಗಳ ಪೈಕಿ ಬೆಂಗಳೂರು ದೇಶದಲ್ಲಿ ಮೊದಲ ಸ್ಥಾನದಲ್ಲಿದೆ. ಪ್ರತಿದಿನ 136 ಅಪಘಾತಗಳು ಸಂಭವಿಸಿದ್ದು ಸರಾಸರಿ 36 ರಿಂದ 40 ಮಂದಿ ಮೃತಪಟ್ಟಿದ್ದಾರೆ. ಅಪಘಾತ ತಗ್ಗಿಸಲು ಅಗತ್ಯ ಕ್ರಮ ಕೈಗೊಳ್ಳಬೇಕಿದೆ.

- ರಾಮಲಿಂಗಾರೆಡ್ಡಿ, ಸಾರಿಗೆ ಸಚಿವ

ಐದೂವರೆ ವರ್ಷಗಳಲ್ಲಿ 60,115 ಮಂದಿ ಸಾವು

ಕಳೆದ ಐದೂವರೆ ವರ್ಷಗಳಲ್ಲಿ ರಾಜ್ಯದಲ್ಲಿ 2.13 ಲಕ್ಷ ಅಪಘಾತಗಳು ಸಂಭವಿಸಿದ್ದು 60,115 ಮಂದಿ ಸಾವನ್ನಪ್ಪಿದ್ದಾರೆ. ಪ್ರತಿದಿನ ಸರಾಸರಿ 130ರಿಂದ 150 ಅಪಘಾತಗಳು ನಡೆದಿದ್ದು, ಈ ಪೈಕಿ 36ರಿಂದ 40 ಮಂದಿ ಬಲಿಯಾಗಿದ್ದಾರೆ ಎಂದು ಸಾರಿಗೆ ಇಲಾಖೆ ಮಾಹಿತಿ ನೀಡಿದೆ. 2021ರಿಂದ ಕಳೆದ ಜೂನ್ ಅಂತ್ಯದವರೆಗೂ 2,13,192 ಅಪಘಾತಗಳು ಸಂಭವಿಸಿವೆ. ಅವುಗಳಲ್ಲಿ 60,115 ಮಂದಿ ವಾಹನ ಸವಾರರು ಮೃತಪಟ್ಟಿದ್ದಾರೆ. ಸಾವನ್ನಪ್ಪಿದವರ ಪೈಕಿ ಬಹುತೇಕ ಯುವಕರಾಗಿದ್ದಾರೆ. ರಾಜ್ಯದಲ್ಲಿ ಒಟ್ಟು 1.31 ಕೋಟಿ ದ್ವಿಚಕ್ರ ವಾಹನಗಳಿಗೆ 1.23 ಕೋಟಿ ನಾಲ್ಕು ಚಕ್ರದ ವಾಹನಗಳಿಗೆ ಪರವಾನಗಿ (ಡಿಎಲ್) ನೀಡಲಾಗಿದೆ. 2,89,977 ಲಕ್ಷ ಹಳದಿ ಬೋರ್ಡ್ ಕಾರುಗಳು ನೋಂದಾಯಿಸಿಕೊಂಡಿವೆ ಎಂದು ಸಚಿವರು ಮಾಹಿತಿ ನೀಡಿದರು.

ಬೈಕ್ ಟ್ಯಾಕ್ಸಿ ಪುನಾರಂಭ ಹೈಕೋರ್ಟ್ ತೀರ್ಪಿಗೆ ಬದ್ಧ

ವಿಧಾನಪರಿಷತ್: ರಾಜ್ಯದಲ್ಲಿ ಬೈಕ್ ಟ್ಯಾಕ್ಸಿ ಸೇವೆಗಳನ್ನು ಪುನಾರಾಂಭ ಮಾಡುವ ಕುರಿತು ಹೈಕೋರ್ಟ್ ನೀಡಿರುವ ತೀರ್ಪಿಗೆ ರಾಜ್ಯ ಸರಕಾರ ಬದ್ಧವಾಗಲಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಪ್ರಶ್ನೋತ್ತರ ಅವಧಿಯಲ್ಲಿ ಸದಸ್ಯ ಡಿ.ಎಸ್.ಅರುಣ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಬೈಕ್ ಟ್ಯಾಕ್ಸಿ ಸೇವೆಗಳನ್ನು ನಿಷೇಧಿಸಿ ರಾಜ್ಯ ಸರಕಾರ ಆದೇಶ ಹೊರಡಿಸಿತ್ತು. ಇದನ್ನು ಹೈಕೋರ್ಟ್ ಏಕಸದಸ್ಯ ಪೀಠ ಎತ್ತಿ ಹಿಡಿದಿತ್ತು. ಆದರೆ ಹೈಕೋರ್ಟ್ ದ್ವಿಸದಸ್ಯ ಪೀಠದ ನ್ಯಾಯಮೂರ್ತಿಗಳು ಇದಕ್ಕೆ ತಡೆಯಾಜ್ಞೆ ನೀಡಿದ್ದಾರೆ. ಸದ್ಯದಲ್ಲೇ ಅಂತಿಮ ಆದೇಶ ಬರಲಿದೆ. ನ್ಯಾಯಾಲಯ ನೀಡುವ ತೀರ್ಪಿಗೆ ನಾವು ಬದ್ಧರಾಗಿದ್ದೇವೆ ಎಂದರು.

ಬೈಕ್ ಟ್ಯಾಕ್ಸಿ ಸೇವೆಗಳನ್ನು ಒದಗಿಸುವ ಸಂಬಂಧ ಈ ಹಿಂದೆ ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ಸಮಿತಿ ರಚಿಸಲಾಗಿತ್ತು. ಪ್ರಾರಂಭದಲ್ಲಿ ವಿದ್ಯುತ್ ಚಾಲಿತ ಬೈಕ್‌ಗಳಿಗೆ ಅವಕಾಶ ನೀಡಿದ್ದೆವು. ನಂತರ ಪೆಟ್ರೋಲ್ ಚಾಲಿತ ಬೈಕ್‌ಗಳು ಸೇವೆ ಒದಗಿಸಲು ಪ್ರಾರಂಭಿಸಿದವು. ಇದನ್ನು ವಿರೋಧಿಸಿ ಆಟೋ ಹಾಗೂ ಖಾಸಗಿಯವರು ವಿರೋಧ ವ್ಯಕ್ತಪಡಿಸಿದರು. ಜನರ ಹಿತದೃಷ್ಟಿಯಿಂದ ಇದನ್ನು ಸರಕಾರ ನಿಷೇಧ ಮಾಡಿತ್ತು. ಸರಕಾರದ ಆದೇಶವನ್ನು ಹೈಕೋರ್ಟ್ ಕೂಡ ಎತ್ತಿ ಹಿಡಿದಿತ್ತು. ಆದರೆ ದ್ವಿಸದಸ್ಯ ಪೀಠ ತಡೆಯಾಜ್ಞೆ ನೀಡಿದೆ ಎಂದರು. ಬೈಕ್ ಟ್ಯಾಕ್ಸಿ ಸೇವೆಗಳನ್ನು ಒದಗಿಸುತ್ತಿದ್ದರಿಂದ ಓಲಾ, ಊಬರ್‌ನವರು ತಮಗೆ ತೊಂದರೆಯಾಗುತ್ತದೆ ಎಂದು ಮನವಿ ಮಾಡಿಕೊಂಡಿದ್ದರು. ಎಲ್ಲರ ಹಿತದೃಷ್ಟಿಯಿಂದ ಸರಕಾರ ಈ ಕ್ರಮ ತೆಗೆದುಕೊಂಡಿತ್ತು. ಇನ್ನು ಗೀಗ್ ಕೆಲಸಗಾರರು ಪ್ರಯಾಣಿಕರ ಸೇವೆ ಒದಗಿಸಲಿಲ್ಲ. ಸ್ವಿಗ್ಗಿ, ಜೊಮೆಟೊ ಮತ್ತಿತರರು ಆಹಾರ, ತಿಂಡಿತಿನಿಸುಗಳನ್ನು ಸರಬರಾಜು ಮಾಡುತ್ತಾರೆ. ಇದರಿಂದ ಯಾರಿಗೂ ತೊಂದರೆಯಾಗುವುದಿಲ್ಲ ಎಂದು ರಾಮಲಿಂಗಾರೆಡ್ಡಿ ಸ್ಪಷ್ಟಪಡಿಸಿದರು.

ದೇವಸ್ಥಾನದಲ್ಲಿ ಪ್ಲಾಸ್ಟಿಕ್ ಬಳಕೆ ನಿಷೇಧ

ವಿಧಾನಪರಿಷತ್: ರಾಜ್ಯದ ಮುಜರಾಯಿ ಇಲಾಖೆ ವ್ಯಾಪ್ತಿಗೆ ಒಳಪಡುವ ದೇವಸ್ಥಾನಗಳಲ್ಲಿ ಆ.15ರಿಂದ ಪ್ಲಾಸ್ಟಿಕ್ ಬಳಕೆ ಮಾಡುವುದನ್ನು ಸಂಪೂರ್ಣವಾಗಿ ನಿಷೇಧ ಮಾಡಲಾಗುವುದು ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು. ಸದಸ್ಯ ಮಧುಮಾದೇಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಮುಜರಾಯಿ ಇಲಾಖೆಯು ಆ.15ರಿಂದ ರಾಜ್ಯದ ಎಲ್ಲ ದೇವಸ್ಥಾನಗಳಲ್ಲಿ ಪ್ಲಾಸ್ಟಿಕ್ ನಿಷೇಧ ಮಾಡಿ, ಆದೇಶ ಹೊರಡಿಸಲಾಗುವುದು. ಬಳಕೆ ಮಾಡಿದವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸುವುದಾಗಿ ಎಚ್ಚರಿಕೆ ನೀಡಿದರು. ದೇವಸ್ಥಾನದ ಒಳಗಡೆ ಮುಜರಾಯಿ ಇಲಾಖೆಯವರು ನಿಷೇಧ ಮಾಡಲು ಅವಕಾಶವಿದೆ. ಆವರಣದ ಒಳಗಡೆ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಬೇಕು. ಪ್ಲಾಸ್ಟಿಕ್ ಬಳಕೆಯಿಂದ ಪರಿಸರ, ಮಾನವನ ಆರೋಗ್ಯದ ಮೇಲ ದುಷ್ಪರಿಣಾಮ ಬೀರುತ್ತಿರುವುದರಿಂದ ಇದನ್ನು ನಿಷೇಧ ಮಾಡುತ್ತಿರುವುದಾಗಿ ಸರಕಾರದ ಕ್ರಮ ಸಮರ್ಥಿಸಿಕೊಂಡರು.

ಸರಕಾರಿ ಭೂಗಳ್ಳರ ವಿರುದ್ಧ ಕಠಿಣ ಕ್ರಮ

ವಿಧಾನಪರಿಷತ್: ಸರಕಾರಿ ಜಮೀನು ಕಬಳಿಸುವ ಭೂಗಳ್ಳರ ಮೇಲೆ ಕಠಿಣ ಕಾನೂನು ಕ್ರಮ ಜರುಗಿಸಲು ತಿದ್ದುಪಡಿ ಮಾಡಿರುವ ಕಾಯ್ದೆ ಈ ತಿಂಗಳ ಅಂತ್ಯದೊಳಗೆ ಜಾರಿಗೆ ಬರಲಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ವಿಧಾನಪರಿಷತ್‌ಗೆ ತಿಳಿಸಿದರು.

ಸದಸ್ಯ ರಾಮೋಜಿ ಗೌಡ ಪ್ರಶ್ನೆಗೆ ಉತ್ತರಿಸಿ, ಸರಕಾರಿ ಜಮೀನು ಕಬಳಿಸಿದವರು ಕಾನೂನಿನಿಂದ ತಪ್ಪಿಸಿಕೊಳ್ಳುತ್ತಿದ್ದರು. ನ್ಯಾಯಾಲ ಯದಿಂದ ತಡೆಯಾಜ್ಞೆ ತರುವುದು ಸೇರಿದಂತೆ ಹಲವು ದಾರಿಗಳಿಂದ ನುಣುಚಿಕೊಳ್ಳುತ್ತಿದ್ದರು. ನೂತನ ಕಾಯ್ದೆಯಲ್ಲಿ ಕಠಿಣ ಕಾನೂನು ಕ್ರಮಗಳಿವೆ. ಇನ್ನು ಮುಂದೆ ಯಾರೇ ಆಗಲಿ ಸರಕಾರಿ ಜಮೀನು ಕಬಳಿಸಿರುವುದು ಅಥವಾ ಕಬಳಿಸುವವರಿಗೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಾಯ ಮಾಡಿದ ಅಧಿಕಾರಿಗಳ ಮೇಲೂ ಕಾನೂನು ಕ್ರಮ ಜರುಗಿಸಲು ಅವಕಾಶವಿದೆ. ಸರಕಾರಿ ಜಮೀನು ಅಕ್ರಮವಾಗಿ ಕಬಳಿಸಿದ್ದನ್ನು ರದ್ದುಪಡಿಸುವ ಅಧಿಕಾರವನ್ನು ಜಿಲ್ಲಾ ನೋಂದಣಿ ಅಧಿಕಾರಿಗಳಿಗೆ ನೀಡಲಾಗಿದೆ ಎಂದರು.

ಮೀಸಲು ಪಟ್ಟಿ ಬಿಡುಗಡೆಯಾದ ತಕ್ಷಣ ಚುನಾವಣೆ ನಡೆಸಲು ಸಿದ್ಧ: ಖರ್ಗೆ

ಜಿಪಂ, ತಾಪಂಗಳಿಗೆ ಶೀಘ್ರವೇ ಚುನಾವಣೆ

ವಿಧಾನ ಪರಿಷತ್: ಜಿಲ್ಲಾ ಹಾಗೂ ತಾಲೂಕು ಪಂಚಾಯಿತಿಗಳಿಗೆ ಮೀಸಲಾತಿ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಇದು ಪೂರ್ಣಗೊಂಡ ನಂತರ ಶೀಘ್ರದಲ್ಲೇ ಚುನಾವಣೆ ನಡೆಸಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಭೋಜನ ವಿರಾಮದ ನಂತರ ಗಮನ ಸೆಳೆಯುವ ಕಲಾಪದಡಿ ಕಾಂಗ್ರೆಸ್‌ನ ಮಂಜುನಾಥ್ ಭಂಡಾರಿ ಮತ್ತು ಬಿಜೆಪಿಯ ಡಿ.ಎಸ್.ಅರುಣ್ ಈ ಬಗ್ಗೆ ಪ್ರಸ್ತಾಪಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಮಂಜುನಾಥ್ ಭಂಡಾರಿ, ಬಿಜೆಪಿ ಆಡಳಿತದ ಅವಧಿಯಲ್ಲಿ ಚುನಾವಣೆ ನಡೆಯಬೇಕಾಗಿತ್ತು. ಆದರೆ ಈವರೆಗೂ ತಾಲೂಕು ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ಚುನಾವಣೆ ನಡೆದಿಲ್ಲ. ಪಂಚಾಯತ್ ರಾಜ್ ವ್ಯವಸ್ಥೆ ಬಲಿಷ್ಠವಾಗಬೇಕಾದರೆ ಪಂಚಾಯತ್‌ಗಳಿಗೆ ಅಧಿಕಾರ ನೀಡಬೇಕು. ಈ ಹಿನ್ನೆಲೆಯಲ್ಲಿ ಸರಕಾರ ಈಗಿರುವ ಕಾನೂನಾತ್ಮಕ ತೊಡಕು ಬಗೆಹರಿಸಿ ಶೀಘ್ರದಲ್ಲೇ ಚುನಾವಣೆ ನಡೆಸಿ ಸರಕಾರಕ್ಕೆ ಮನವಿ ಮಾಡಿದರಲ್ಲದೆ, ಚುನಾವಣೆ ನಡೆಯದ ಹಿನ್ನೆಲೆಯಲ್ಲಿ ಹಲವು ಸವಲತ್ತುಗಳು ಸಿಗುತ್ತಿಲ್ಲ. ಸರಕಾರ ಈ ಬಗ್ಗೆ ಹೆಚ್ಚಿನ ಕಾಳಜಿ ತೋರಬೇಕು. ಜಿಲ್ಲಾ, ತಾಲೂಕು ಹಾಗೂ ಗ್ರಾಮ ಪಂಚಾಯಿತಿ ಚುನಾವಣೆಗಳನ್ನು ನಡೆಸಬೇಕು ಎಂದು ಒತ್ತಾಯಿಸಿದರು.

ಜತೆಗೆ ಗ್ರಾಮ ಪಂಚಾಯಿತಿ ಚುನಾವಣೆಗಳನ್ನು ಪಕ್ಷದ ಚಿಹ್ನೆಯಲ್ಲಿ ನಡೆಸಬೇಕು. ಕೇರಳದಲ್ಲಿ ಚಿಹ್ನೆಯಡಿ ಚುನಾವಣೆ ನಡೆಸಲಾಗುತ್ತಿದೆ. ಅದೇ ಮಾದರಿಯಲ್ಲಿ ರಾಜ್ಯದಲ್ಲಿ ಸರಕಾರ ಚುನಾವಣೆಗೆ ಅವಕಾಶ ನೀಡಬೇಕು. ಪಂಚಾಯಿತಿ ಸದಸ್ಯರುಗಳ ಗೌರವಧನ ಹೆಚ್ಚಳ ಸಂಬಂಧ ಸರಕಾರ ತಿದ್ದುಪಡಿ ತರಬೇಕು. ಪಂಚಾಯಿತಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಕೆಲಸದ ಭದ್ರತೆ ನೀಡಬೇಕು ಎಂದು ಭಂಡಾರಿ ಒತ್ತಾಯಿಸಿದರು.

ಏಕಕಾಲದಲ್ಲಿ ಚುನಾವಣೆ ನಡೆಯಲಿ: ಬಿಜೆಪಿಯ ಡಿ.ಎಸ್.ಅರುಣ್ ಮಾತನಾಡಿ, ಸರಕಾರ ಗ್ರಾಮ ಪಂಚಾಯಿತಿಗಳಿಗೆ ಶಕ್ತಿ ನೀಡುವ ಕೆಲಸ ಆಗಬೇಕು. ಸರಕಾರ ಅಸ್ತಿತ್ವಕ್ಕೆ ಬಂದು ಮೂರು ವರ್ಷ ಪೂರೈಸುವತ್ತ ಸಮೀಪಿಸುತ್ತಿದೆ. ದ್ವಿತೀಯ ಹಂತದ ನಾಯಕತ್ವದ ಬೆಳೆಯಲು ಇದಕ್ಕೆ ಅನುಕೂಲವಾಗಲಿದೆ. ಇದಕ್ಕೆ ಕೋಟಾ ಶ್ರೀನಿವಾಸ ಪೂಜಾರಿ ಅವರೇ ಉದಾಹರಣೆ. ಗ್ರಾಮ ಪಂಚಾಯಿತಿಯಿಂದ ವಿಧಾನ ಪರಿಷತ್ ವರೆಗೆ ಇದೀಗ ಲೋಕಸಭೆಗೂ ಹೆಜ್ಜೆಯಿರಿಸಿದ್ದಾರೆ. ಅಂತಹ ನಾಯಕರು ಹುಟ್ಟಿಕೊಳ್ಳಲು ಪಂಚಾಯಿತಿ ವ್ಯವಸ್ಥೆ ಕಾರಣವಾಗಲಿದೆ ಎಂದರು. ಒಂದೇ ದೇಶ ಒಂದೇ ಚುನಾವಣೆ ಮಾದರಿಯಲ್ಲಿ ಮೂರು ಪಂಚಾಯಿತಿಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸುವಂತೆ ಒತ್ತಾಯಿಸಿದರು. ಜತೆಗೆ ಚುನಾವಣೆ ನಡೆಯದಿದ್ದರೆ ಕೇಂದ್ರ ಸರಕಾರ ಅನುದಾನ ಕೂಡ ಕುಂಠಿತವಾಗಲಿದೆ ಎಂದರು.

ಕೇರಳದ ಮಾದರಿಯಲ್ಲಿ ಪಕ್ಷದ ಚಿಹ್ನೆಯಡಿ ಚುನಾವಣೆ ನಡೆಸಬೇಕು ಎಂಬುದು ಸದಸ್ಯರ ಒತ್ತಾಸೆಯಾಗಿದೆ. ಈ ಬಗ್ಗೆ ಸಮಿತಿ ರಚನೆ ಮಾಡುವ ಚಿಂತನೆ ಇದೆ. ಜತೆಗೆ ಪಂಚಾಯತ್ ರಾಜ್ ಕಾಯ್ದೆ ತಿದ್ದುಪಡಿಯ ಕಾನೂನು ತೊಡಕುಗಳ ಬಗ್ಗೆ ಪರಿಶೀಲನೆ ನಡೆಸಲಾಗುವುದು.

-ಪ್ರಿಯಾಂಕ್ ಖರ್ಗೆ, ಸಚಿವ

ಏಕಕಾಲದಲ್ಲಿ ಚುನಾವಣೆ ನಡೆಸಲು ಆಗದು

ಈ ಹಿಂದೆ ಕ್ಷೇತ್ರ ಪುನರ್ ವಿಂಗಡಣೆ ತೊಡಕಾಗಿತ್ತು. ಅದು ನಿವಾರಣೆಯಾಗಿದೆ. ಮೀಸಲಾತಿ ಪ್ರಕ್ರಿಯೆ ಪೂರ್ಣಗೊಂಡ ನಂತರ ಸರಕಾರ ಚುನಾವಣೆ ನಡೆಸಲಿದೆ. ಪಂಚಾಯಿತಿಗಳಿಗೆ ಚುನಾವಣೆ ನಡೆಸಬೇಕು ಎಂಬುವುದು ಸರಕಾರದ ಇರಾದೆ. ಆದರೆ, ಜಿಲ್ಲಾ, ತಾಲೂಕು ಹಾಗೂ ಗ್ರಾಮ ಪಂಚಾಯಿತಿಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸಲು ಆಗದು. ಕಾರಣ ಗ್ರಾಮ ಪಂಚಾಯಿತಿ ಅಧಿಕಾರವಧಿ ಇನ್ನೂ ಒಂದೆರಡು ವರ್ಷವಿದೆ. ಆದರೆ ಮೀಸಲಾತಿ ಪಟ್ಟಿ ಬಿಡುಗಡೆಯಾದ ತಕ್ಷಣ ಸರಕಾರ ಚುನಾವಣೆ ನಡೆಸಲು ಸಿದ್ಧವಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಗ್ರಾಪಂ ವ್ಯಾಪ್ತಿಯಲ್ಲಿ ಮಿನಿ ಗ್ರಿಡ್ ಸ್ಥಾಪನೆ

ಗ್ರಾಮ ಪಂಚಾಯ್ತಿಗಳಿಗೆ ವಿದ್ಯುತ್ ಸ್ವಾತಂತ್ರ್ಯಕ್ಕೆ ಕ್ರಮ

ವಿಧಾನಸಭೆ: ಗ್ರಾಮ ಪಂಚಾಯಿತಿಗಳ ಮೇಲಿನ ವಿದ್ಯುತ್ ಹೊರೆ ತಪ್ಪಿಸಲು ಸೌರ ವಿದ್ಯುತ್ ಮೊರೆ ಹೋಗಲು ಸರಕಾರ ತೀರ್ಮಾನಿಸಿದ್ದ, ಇದರಲ್ಲಿ ಉಳಿದ ವಿದ್ಯುತ್‌ನ್ನು ಮಾರಾಟ ಮಾಡಲು ಮಿನಿ ಗ್ರಿಡ್‌ಗಳನ್ನು ಸ್ಥಾಪಿಸಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹಾಗೂ ದುರ್ಯೋದನ ಐಹೊಳೆ ಅವರಿಗೆ ಉತ್ತರಿಸಿದ ಅವರು, ಪಂಚಾಯಿತಿಗಳಿಗೆ ಸ್ವಂತ ಇಂಧನ ಮೂಲಗಳನ್ನು ಸೃಷ್ಟಿಸಲು ಸರಕಾರ ಬಜೆಟ್‌ನಲ್ಲಿ ಮೈಕ್ರೋಗ್ರಿಡ್ ಯೋಜನೆಯನ್ನು ಅನುಷ್ಠಾನ ಮಾಡಿದೆ. ಪ್ರಾಯೋಗಿಕವಾಗಿ ಕಲ್ಯಾಣ ಕರ್ನಾಟಕದ ಎರಡು ಭಾಗದಲ್ಲಿ ಅನುಷ್ಠಾನಕ್ಕೆ ಟೆಂಡರ್ ಕರೆದಿದ್ದೇವೆ. ಈ ಯೋಜನೆ ಯಶಸ್ವಿಯಾದರೆ ಎಲ್ಲ ಕಡೆಯೂ ಯೋಜನೆಯನ್ನು ವಿಸ್ತರಿಸುತ್ತೇವೆ. ಇದರಿಂದ ಪಂಚಾಯಿತಿಗಳಿಗೆ ವಿದ್ಯುತ್ ಕೊರತೆ ಸಮಸ್ಯೆ ಕಾಡುವುದಿಲ್ಲ. ಸೌರಶಕ್ತಿ ಮೂಲಕ ವಿದ್ಯುತ್ ಉತ್ಪಾದಿಸಿಕೊಳ್ಳಲು ಅವಕಾಶವಾಗಲಿದೆ ಎಂದು ಹೇಳಿ ದರು. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಉತ್ಪಾದನೆಯಾಗುವ ಸೌರ ವಿದ್ಯುತ್ ಅನ್ನು ಆಯಾ ಗ್ರಾಮ ಪಂಚಾಯಿತಿಗಳಲ್ಲಿ ಬಳಸಿಕೊಳ್ಳಲಾಗುವುದು. ಹೆಚ್ಚುವರಿಯಾಗಿ ಉಳಿದ ವಿದ್ಯುತ್ ಮಾರಾಟ ಮಾಡಲು ಅನುಕೂಲವಾಗುವಂತೆ ಮೈಕ್ರೋ, ಮಿನಿಗ್ರಿಡ್‌ಗಳನ್ನು ಮಾಡಲು ತೀರ್ಮಾನಿಸಲಾಗಿದೆ. ಈ ಮೈಕ್ರೋಗ್ರಿಡ್ ವಿನೂತನ ಯೋಜನೆ ಕಲ್ಯಾಣ ಕರ್ನಾಟಕ ಭಾಗದಲ್ಲಿ ಟೆಂಡರ್ ಕರೆಯಲಾಗಿದೆ. ಈ ಯೋಜನೆಯಡಿ ಬೀದಿದೀಪ, ಪಂಚಾಯ್ತಿ ಕಚೇರಿಗಳಿಗೆ ವಿದ್ಯುತ್ ಬಳಕೆ ಮಾಡಿ ಉಳಿದ ವಿದ್ಯುತ್‌ನ್ನು ಗ್ರಿಡ್‌ಗೆ ಒಪ್ಪಿಸಲಾಗುವುದು ಎಂದರು. ಇ-ಖಾತೆ ವಿತರಣೆಯ ಸಂಬಂಧ ಇಂಟರ್‌ನೆಟ್ ಹಾಗೂ ಸರ್ವರ್ ಸಮಸ್ಯೆಗಳಿರುವ ಕಡೆ ಸರಿಪಡಿಸುವ ಕೆಲಸ ನಡೆದಿದೆ. ಇನ್ನೊಂದು ತಿಂಗಳಲ್ಲಿ ತಾಂತ್ರಿಕ ವಾಗಿ ಮೇಲ್ದರ್ಜೆಗೇರಿಸುವ ಕಾರ್ಯಗಳು ನಡೆಯಲಿದ್ದು, ಇದೆಲ್ಲ ಆದರೆ ಇ-ಸ್ವತ್ತು ವಿತರಣೆ ಮತ್ತು 11 ಬಿ ಖಾತೆ ವಿತರಣೆಯ ಸಮಸ್ಯೆಗಳು ಪರಿಹಾರವಾಗಲಿವೆ. ಪಂಚಾಯತ್ ರಾಜ್ ತಿದ್ದುಪಡಿ ವಿಧೇಯಕಕ್ಕೆ ಕಾನೂನು ರೂಪಿಸಿ ಅದು ಜಾರಿಯಾದ ನಂತರ ಪಂಚಾಯ್ತಿ ಮಟ್ಟದಲ್ಲಿರುವ ಇ-ಸ್ವತ್ತು, 11 ಬಿ ಖಾತಾ ವಿತರಣೆ ಎಲ್ಲ ಸಮಸ್ಯೆಗಳಿಗೂ ಪರಿಹಾರ ಸಿಗಲಿದೆ ಎಂದು ಹೇಳಿದರು.

ಬಿ ಖಾತೆ ವಿತರಿಸಲು ಕ್ರಮ: ಪ್ರಿಯಾಂಕ್

ಬಿಜೆಪಿ ಶಾಸಕ ಬಸವಗೌಡ ಪಾಟೀಲ್ ಯತ್ನಾಳ್ ಅವರ ಮತ್ತೊಂದು ಪ್ರಶ್ನೆಗೆ ಉತ್ತರಿಸಿದ ಪ್ರಿಯಾಂಕ್, ಇನ್ನು ಒಂದೂವರೆ ತಿಂಗಳಲ್ಲಿ ಇ-ಸ್ವತ್ತು ತಂತ್ರಾಂಶದ ಮೂಲಕ ನಮೂನೆ 11 ಬಿ ಖಾತೆ ವಿತರಿಸಲು ಕ್ರಮ ಕೈಗೊಳ್ಳಲಾಗುವುದು. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ತಿದ್ದುಪಡಿ ವಿಧೇಯಕಕ್ಕೆ ಸಂಬಂಧಿಸಿದಂತೆ 29 ಆಕ್ಷೇಪಣೆಗಳು ಬಂದಿದ್ದು, ಅವುಗಳನ್ನು ಪರಿಶೀಲಿಸಿ ಇನ್ನು 15 ದಿನಗಳಲ್ಲಿ ನಿಯಮಗಳನ್ನು ರೂಪಿಸಲಾಗುವುದು ಎಂದು ಭರವಸೆ ನೀಡಿದರು. ಕಳೆದ ಎರಡು ವರ್ಷದಲ್ಲಿ 1237 ಕೋಟಿ ತೆರಿಗೆ ಸಂಗ್ರಹಿಸಲಾಗಿದೆ. ಇದು ದೇಶದಲ್ಲಿಯೇ ರಾಜ್ಯವೊಂದರ ಗ್ರಾಮೀಣಾಭಿವೃದ್ಧಿ ಇಲಾಖೆ ಸಂಗ್ರಹಿಸಿದ ಅತಿಹೆಚ್ಚು ತೆರಿಗೆಯಾಗಿದೆ. ಈ ತೆರಿಗೆ ಹಣವನ್ನು ಪಂಚಾಯಿತಿಗಳ ಅಭಿವೃದ್ಧಿಗೆ ಬಳಕೆ ಮಾಡಲಾಗುತ್ತದೆ ಎಂದು ಹೇಳಿದರು. ಇ-ಸ್ವತ್ತು ಸಮಸ್ಯೆಗಳ ಸುಧಾರಣೆಗೆ ಸಮಿತಿ ರಚಿಸಲಾಗಿದೆ ಎಂದರು.

ವಿಶ್ವವಾಣಿ

ಸಂಪಾದಕೀಯ

ಇನ್ನಷ್ಟು ಕಟ್ಟೆಚ್ಚರ ವಹಿಸಬೇಕಿದೆ

ಪಾಕಿಸ್ತಾನದ ಗುಪ್ತಚರ ಸಂಸ್ಥೆ 'ಐಎಸ್ಐ'ನ ಬೆಂಬಲ ಹೊಂದಿರುವ ಅಂತಾರಾಷ್ಟ್ರೀಯ ಉಗ್ರಸಂಘಟನೆಯ ಜಾಲವನ್ನು ಪಂಜಾಬ್ ಪೊಲೀಸರು ಪತ್ತೆ ಹಚ್ಚಿರುವುದು ಶ್ಲಾಘನೀಯ ಬೆಳವಣಿಗೆ. ಗುಪ್ತಚರ ಇಲಾಖೆಯ ಮಾಹಿತಿಯ ಮೇರೆಗೆ ಈ ಸಂಘಟನೆಯ ಐವರನ್ನು ಬಂಧಿಸಿದ ಪೊಲೀಸರು ಅವರಿಂದ ಹ್ಯಾಂಡ್ ಗ್ರೆನೇಡ್, ಪಿಸ್ತೂಲ್ ಮುಂತಾದ 'ದಾಳಿ ಸಾಧನ'ಗಳನ್ನು ವಶಪಡಿಸಿಕೊಂಡಿದ್ದಾರೆ. ಈ ಉಗ್ರರು ಸ್ವಾತಂತ್ರ್ಯ ದಿನಾಚರಣೆಯಂದು ದಾಳಿ ನಡೆಸಲು ಸಂಚು ಹೂಡಿದ್ದರು ಎನ್ನಲಾಗಿದೆ. 'ಕೆಟ್ಟ ಮೇಲೆ ಬುದ್ಧಿ ಬಂತು' ಎಂಬುದೊಂದು ಗಾದೆಮಾತಿದೆ, ಆದರೆ ಇದು ಪಾಕಿಸ್ತಾನಕ್ಕೆ ಅನ್ವಯವಾಗುವುದಿಲ್ಲ ಎಂಬುದು ವಿಪರ್ಯಾಸದ ಸಂಗತಿ. ಕಾರಣ, 'ಆಪರೇಷನ್ ಸಿಂದೂರ' ಕಾರ್ಯಾಚರಣೆಯ ವೇಳೆ ಭಾರತದಿಂದ ಸರಿಯಾಗಿ ತಪರಾಕಿ ತಿಂದಿದ್ದರೂ ಆ ಕುತಂತ್ರಿ ದೇಶಕ್ಕಿನ್ನೂ ಬುದ್ಧಿ ಬಂದಂತಿಲ್ಲ. ಪ್ರಾಯಶಃ, ಇತ್ತೀಚಿನ ದಿನಗಳಲ್ಲಿ ಅಮೆರಿಕದ ಒತ್ತಾಸೆ ಹೆಚ್ಚೆಚ್ಚು ಸಿಗುತ್ತಿರುವುದೇ ಪಾಕಿಸ್ತಾನದ ಈ ಧಾರ್ಷ್ಟ್ಯಕ್ಕೆ ಕಾರಣವಿದ್ದಿರಬೇಕು, ಇರಲಿ. ಭಾರತದ ಭದ್ರತೆ, ಏಕತೆ, ಸಮಗ್ರತೆ, ಸಾರ್ವಭೌಮತೆಗಳಿಗೆ ಧಕ್ಕೆಯನ್ನುಂಟುಮಾಡಲು ಪಾಕಿಸ್ತಾನವು ದಶಕಗಳಿಂದಲೂ ಕಸರತ್ತು ಮಾಡುತ್ತಲೇ ಬಂದಿರುವುದನ್ನು ಬಿಡಿಸಿ ಹೇಳಬೇಕಿಲ್ಲ. ಸನ್ನಿಹಿತವಾಗಿರುವ ಸ್ವಾತಂತ್ರ್ಯ ದಿನಾಚರಣೆಯಂದೇ ಭಾರತದ ಆಯಕಟ್ಟಿನ ನೆಲೆಗಳ ಮೇಲೆ ಎರಗಿ ವಿಧ್ವಂಸಕ ಕೃತ್ಯಗಳನ್ನು ಎಸಗಿ, ತನ್ನ ಗುಪ್ತ ಕಾರ್ಯಸೂಚಿಯ ನೆರವೇರಿಕೆಗೆ ಅದು ಹೀಗೆ ಯತ್ನಿಸುತ್ತಿರುವುದು, ಈ ಕಸರತ್ತಿನ ಮತ್ತೊಂದು ಭಾಗವಷ್ಟೇ. ಆದ್ದರಿಂದ, ಈಗ ಬಂಧಿಸಲ್ಪಟ್ಟ ಉಗ್ರರಿಗೆ ಯಾವುದೇ ದಯೆ-ದಾಕ್ಷಿಣ್ಯ ತೋರಿಸದೆ ಪಾಕಿಸ್ತಾನದ ಇಂಥ ಮತ್ತಷ್ಟು ಸಂಚುಗಳ ಕುರಿತು ಅವರ ಬಾಯಿಬಿಡಿಸಬೇಕು ಹಾಗೂ ಅದನ್ನು ಅಂತಾರಾಷ್ಟ್ರೀಯ ಸಮುದಾಯದ ಗಮನಕ್ಕೆ ತರುವಂತಾಗಬೇಕು. ಪಾಕಿಸ್ತಾನದ ಇಂಥ ನರಿಬುದ್ಧಿಯನ್ನು ಹಾಗೂ ಬೆನ್ನಿಗಿರಿಯುವ ಚಾಳಿಯನ್ನು ಕಂಡಾಗಲೆಲ್ಲಾ, 'ಛೇ, ಆಪರೇಷನ್ ಸಿಂದೂರ ಕಾರ್ಯಾಚರಣೆಯನ್ನು ನಿಲ್ಲಿಸಬಾರದಿತ್ತು' ಎಂಬ ಸ್ವಗತವು ದೇಶಪ್ರೇಮಿಗಳಿಂದ ಹೊಮ್ಮಿದರೆ ಅದೇನೂ ಅಚ್ಚರಿಯಲ್ಲ! ಅದೇನೇ ಇರಲಿ, ನಾವು ಭಾರತೀಯರು ಮೈಯೆಲ್ಲಾ ಕಣ್ಣಾಗಿರಬೇಕಿದೆ, ಶಂಕಿತ ಚಟುವಟಿಕೆಗಳು ಗಮನಕ್ಕೆ ಬರುತ್ತಿದ್ದಂತೆ ಸಂಬಂಧಪಟ್ಟವರಿಗೆ ಅದರ ಸುದ್ದಿ ಮುಟ್ಟಿಸಬೇಕಿದೆ.

ಸೊಂಪಾದಕೀಯ

ಗತ್ತಿಲ್ಲ ಮತ್ತು ಗೊತ್ತಿಲ್ಲ

ರಾಜ್ಯ ಸರಕಾರದ ವಿಷಯದಲ್ಲಿ ಈಗ ಅತಿ ನಗೆಪಾಟಲಿಗೆ ಈಡಾಗಿರೋ ವ್ಯಕ್ತಿ ಅಂದ್ರೆ ನಮ್ಮ ಹೋಮ್ ಮಿನಿಸ್ಟರ್ ಪರಮೇಶ್ವರ್ ಅವರು. ಮಾಧ್ಯಮದವರು ಬಂದು ಏನೇ ಪ್ರಶ್ನೆ ಕೇಳಿದ್ರೂ, 'ನಾನು ಸೀದಾ ಹೋಮ್‌ಪೇಜ್‌ಗೆ ಹೋಗಿ ಸೇಮ್ ಉತ್ತರ ಕೊಡ್ತೀನಿ' ಅಂತಾರೆ ಪರಮ್ ಅವರು. ಯಾರೇ ಮೈಕ್ ಹಿಡಿದು ಏನೇ ಕೇಳಿದ್ರೂ, ಮೈ ಕೈ ನೋವು ಮಾಡಿಕೊಳ್ಳೋದು ಇರಲಿ ತಲೆಯನ್ನೇ ಕೆಡಿಸಿಕೊಳ್ಳದೆ ಅವರು ಹೇಳೋದು ಒಂದೇ ಮಾತು, 'ನಂಗೆ ಅದರ ಬಗ್ಗೆ ಗೊತ್ತಿಲ್ಲ. ಮಾಹಿತಿ ಇಲ್ಲ' ಅಷ್ಟೇ. ಜಪ್ಪಯ್ಯ ಅಂದ್ರೂ, ಬೇರೆ ಉತ್ತರ ಇಲ್ಲ ಅನ್ನೋದು ಪರಮಸತ್ಯ ಅನ್ನೋ ಥರ ಆಗಿದೆ. ನನಗೆ ಎಲ್ಲಾ ಗೊತ್ತು ಅಂದ್ರೆ, ನನ್ನನ್ನು ನಾನು ಪರಮಜ್ಞಾನಿ ಅಂತ ಕರೆದುಕೊಂಡು ಅಹಂಕಾರ ಪಟ್ಟುಕೊಂಡ ಹಾಗೆ ಆಗುತ್ತೆ ಅಂತಲೋ ಏನೋ ನಮ್ಮ ಪರಮ್ ಅವರು ಯಾವಾಗ್ಲೂ 'ನನಗೆ ಏನೂ ಗೊತ್ತಿಲ್ಲ, ನಾನು ಪಾಮರ' ಅಂತಲೇ ಪೋಸು ಕೊಡ್ತಾರೆ. ಇವರು ಮಾಧ್ಯಮಗಳ ಮೈಕುಗಳ ಮುಂದೆ ಮಾತ್ರ ಹಿಂಗೆನಾ ಅಂತ ಗೊತ್ತಿಲ್ಲ. ಮನೆಯಲ್ಲಿ ಪತ್ನಿ ಏನಾದ್ರೂ ಹೇಳಿದಾಗಲೂ ಈ ಪತಿ ಪರಮೇಶ್ವರರು ಹಿಂಗೇ ಹೇಳ್ತಾರಾ ಅನ್ನೋ ಅನುಮಾನ ಎಲ್ಲರಿಗೂ ಇದೆ. ಆದ್ರೆ ಒಂದು ರಾಜ್ಯದ ಹೋಮ್ ಮಿನಿಸ್ಟರ್ ಆಗಿ ಏನ್ ಕೇಳಿದ್ರೂ, ಗೊತ್ತಿಲ್ಲ ಅನ್ನೋದು ಎಷ್ಟು ಸರಿ? ಇವರಿಗೆ ನಮ್ಮ ರಾಜ್ಯದಲ್ಲಿನ ಆಗುಹೋಗುಗಳ ಬಗ್ಗೆ ಗೊತ್ತಿರಲ್ವಾ. ಮೀಡಿಯಾ, ಸೋಷಿಯಲ್ ಮೀಡಿಯಾ ಓಪನ್ ಮಾಡಿದ್ರೆ, ಸಾಕು ಕಣ್ಣಿಗೆ ರಾಚುವಂಥ ವಿಷಯಗಳ ಬಗ್ಗೆ ಕೇಳಿದ್ರೂ, ನಂಗೆ ಗೊತ್ತಿಲ್ಲ ಅಂತಾರೆ ಇವರು. ಹಾಗಾಗಿ ಇವರು ನಿಜವಾಗ್ಲೂ ಇಲ್ಲಿಯವರೇನಾ, ಇಲ್ಲಾ ಚಂದ್ರಲೋಕದವರಾ ಅಂತ ಎಲ್ಲರಿಗೂ ಕುತೂಹಲ ಮೂಡೋದು ಸಹಜ. ಲೋಕದಾ ಗೊಡವೆ ನನಗೇಕೆ ಅಂತ ಇವರು ಮೀಡಿಯ, ಸೋಷಿಯಲ್ ಮೀಡಿಯಾ ನೋಡೋದೇ ಇಲ್ವಾ ಅನ್ನೋದು ಗೊತ್ತಿಲ್ಲ. ಆದ್ರೆ ಈ ಪರಮೇಶಿ ಗೊತ್ತಿಲ್ಲ ಪ್ರಸಂಗ ನೋಡಿ, ಇಷ್ಟು ದಿನ 'ಗತ್ತಿಲ್ಲದ ಹೋಮ್ ಮಿನಿಸ್ಟರ್' ಅಂತ ಕರೀತಾ ಇದ್ದೋರು ಈಗ 'ಗೊತ್ತಿಲ್ಲದ ಹೋಮ್ ಮಿನಿಸ್ಟರ್' ಅಂತ ಆಡಿಕೊಳ್ತಾ ಇರೋದಂತೂ ಸತ್ಯ.

ಸಂಪಾದಕರ ಸದ್ಯಶೋಧನೆ

ಲ್ಯಾಂಡಿಂಗ್ ಎಂಬ ಪರಿಣತಿ

ವಿಮಾನವು ಸುರಕ್ಷಿತವಾಗಿ ರನ್‌ವೇ ಮೇಲೆ ಇಳಿಯುತ್ತದಲ್ಲ, ಆಗ ಏನಾಗುತ್ತದೆ ಎಂಬುದನ್ನು ಗಮನಿಸಿದ್ದೀರಾ? ಇದು ಕೇವಲ ಚಕ್ರಗಳು ರನ್‌ವೇಗೆ ಸ್ಪರ್ಶಿಸುವ ಕ್ರಿಯೆಯಷ್ಟೇ ಅಲ್ಲ, ಇದು ತಂತ್ರಜ್ಞಾನ, ನಿಖರತೆ ಮತ್ತು ಸಮಯಪ್ರಜ್ಞೆಯ ಪರಿಪೂರ್ಣ ಸಂಯೋಜನೆಯಾಗಿದೆ. ಪೈಲಟ್‌ಗಳು ವಿಮಾನವನ್ನು ನಿಧಾನವಾಗಿ ಮತ್ತು ಸುಗಮವಾಗಿ ಇಳಿಸಲು ತಂತ್ರಜ್ಞಾನಗಳನ್ನು ಬಳಸುತ್ತಾರೆ. ಇದು ನಿಜಕ್ಕೂ ಒಂದು ಸಂಪೂರ್ಣ, ಸುರಕ್ಷತಾ ಕ್ರಿಯೆ. ಲ್ಯಾಂಡಿಂಗ್‌ನಲ್ಲಿ ಬಳಸುವ ಮುಖ್ಯ ತಂತ್ರಜ್ಞಾನಗಳನ್ನು ಅರ್ಥ ಮಾಡಿಕೊಳ್ಳಬೇಕು. ಮೊದಲನೆಯದಾಗಿ, ಫ್ಲೈಟ್ ಪಾತ್ ಆಂಗಲ್ (Flight Path Angle- FPA). ಹೀಗೆಂದರೆ, ವಿಮಾನ ಇಳಿಯಲು ಪ್ರಾರಂಭಿಸಿದಾಗಿನ ಅದರ ಇಳಿಜಾರಿನ ಕೋನ (angle of descent). ಪೈಲಟ್‌ಗಳು ಈ ಕೋನವನ್ನು ನಿಖರವಾಗಿ ನಿರ್ಧರಿಸುತ್ತಾರೆ. ಇದರಿಂದ ವಿಮಾನವು ರನ್‌ವೇ ಕಡೆಗೆ ಸ್ಥಿರವಾಗಿ ಮತ್ತು ನಿಯಂತ್ರಿತವಾಗಿ ಕೆಳಗೆ ಇಳಿಯುತ್ತದೆ. ಇದು ವಿಮಾನವನ್ನು ಹಠಾತ್ತಾಗಿ ಕೆಳಗೆ ಬೀಳಿಸುವುದನ್ನು ತಪ್ಪಿಸಿ, ಒಂದು ಸುಗಮವಾದ ಗ್ಲೈಡ್ (smooth glide) ಮಾಡಲು ಸಹಾಯ ಮಾಡುತ್ತದೆ. ಆಧುನಿಕ ವಿಮಾನಗಳಲ್ಲಿ ಕಂಪ್ಯೂಟರ್ ಮತ್ತು ಸ್ವಯಂಚಾಲಿತ ವ್ಯವಸ್ಥೆಗಳು ಈ ಫ್ಲೈಟ್ ಪಾತ್ ಆಂಗಲ್ ಅನ್ನು ನಿಖರವಾಗಿ ನಿರ್ವಹಿಸುತ್ತವೆ. ಎರಡನೆಯದು, ಬ್ರೇಕಿಂಗ್ ಸಿಸ್ಟಮ್‌ಗಳು (Braking Systems). ವಿಮಾನ ಇಳಿದ ನಂತರ ಅದನ್ನು ನಿಲ್ಲಿಸಲು ಬ್ರೇಕಿಂಗ್ ಸಿಸ್ಟಮ್‌ಗಳು ಪ್ರಮುಖ ಪಾತ್ರ ವಹಿಸುತ್ತವೆ. ಇವು ಕೇವಲ ಪೆಡಲ್‌ಗಳಲ್ಲ, ಆದರೆ ಹಲವಾರು ಶಕ್ತಿಶಾಲಿ ತಂತ್ರಜ್ಞಾನಗಳ ಸಂಯೋಜನೆ. ವಿಮಾನದ ಚಕ್ರಗಳಿಗೆ ಒತ್ತಡವನ್ನು ಅನ್ವಯಿಸಿ ಬ್ರೇಕಿಂಗ್ ಶಕ್ತಿಯನ್ನು ಒದಗಿಸುತ್ತವೆ. ಕಾರುಗಳಲ್ಲಿರುವಂತೆ, ಹೈಡ್ರಾಲಿಕ್ ವ್ಯವಸ್ಥೆ ಬಳಸಿಕೊಂಡು ಬ್ರೇಕ್ ಪ್ಯಾಡ್‌ಗಳನ್ನು ಚಕ್ರಗಳ ಮೇಲೆ ಒತ್ತಲಾಗುತ್ತದೆ. ವಿಮಾನದ ಕಂಪ್ಯೂಟರ್ ವ್ಯವಸ್ಥೆಯು ರನ್‌ವೇ ಮೇಲೆ ಲ್ಯಾಂಡ್ ಆದ ತಕ್ಷಣ ಸ್ವಯಂಚಾಲಿತವಾಗಿ ಬ್ರೇಕ್‌ಗಳನ್ನು ಅನ್ವಯಿಸುತ್ತದೆ. ಪೈಲಟ್ ಇವುಗಳ ತೀವ್ರತೆಯನ್ನು (ಉದಾಹರಣೆಗೆ, ಕಡಿಮೆ, ಮಧ್ಯಮ, ಅಥವಾ ಹೆಚ್ಚು) ಮೊದಲೇ ಆಯ್ಕೆ ಮಾಡಬಹುದು. ಇಲ್ಲಿ ಸ್ಪಾಯ್ಲರ್‌ಗಳ (Spoilers) ಪಾತ್ರವೂ ನಿರ್ಣಾಯಕ. ಇವು ವಿಮಾನದ ರೆಕ್ಕೆಗಳ ಮೇಲೆ ಇರುವ ಫಲಕಗಳು. ಲ್ಯಾಂಡಿಂಗ್ ಸಮಯದಲ್ಲಿ ಇವು ಮೇಲಕ್ಕೆ ಎತ್ತಿ ನಿಲ್ಲುವುದರಿಂದ, ವಿಮಾನದ ಮೇಲೆ ಗಾಳಿಯ ಪ್ರತಿರೋಧ (air resistance) ಹೆಚ್ಚಾಗುತ್ತದೆ. ಇದರಿಂದ ವಿಮಾನವು ರನ್‌ವೇ ಮೇಲೆ ವೇಗ ಕಮ್ಮಿ ಮಾಡಿಕೊಂಡು ನಿಧಾನವಾಗಲು ಸಹಾಯಕ. ಹಾಗೆಯೇ ರಿವರ್ಸ್ ಥ್ರಸ್ಟ್ (Reverse Thrust). ಇದು ಜೆಟ್ ಎಂಜಿನ್‌ಗಳಿಂದ ವಿಮಾನದ ಬ್ರೇಕಿಂಗ್‌ಗೆ ನೆರವು ನೀಡುವ ಪ್ರಮುಖ ತಂತ್ರಜ್ಞಾನ. ವಿಮಾನವು ರನ್‌ವೇಗೆ ಇಳಿದ ನಂತರ, ಪೈಲಟ್‌ಗಳು ಎಂಜಿನ್‌ನಿಂದ ಹೊರಬರುವ ಗಾಳಿಯ ದಿಕ್ಕನ್ನು ಹಿಂದಕ್ಕೆ ಬದಲಾಯಿಸುತ್ತಾರೆ. ಇದರಿಂದ ಎಂಜಿನ್‌ನ ಶಕ್ತಿಯು ವಿಮಾನವನ್ನು ಮುಂದಕ್ಕೆ ಹೋಗದಂತೆ ತಡೆಯುತ್ತದೆ ಮತ್ತು ಅದನ್ನು ನಿಧಾನಗೊಳಿಸುತ್ತದೆ. ಹೀಗಾಗಿ ಸಾಮಾನ್ಯವಾಗಿ ಜೋರಾದ ಶಬ್ದ ಬರುತ್ತದೆ. ವಿಶೇಷವಾಗಿ ಒದ್ದೆಯಾದ ರನ್‌ವೇಗಳಲ್ಲಿ ಇದು ಅತ್ಯಂತ ಪರಿಣಾಮಕಾರಿ. ಬೋಯಿಂಗ್ 777ನಂಥ ದೊಡ್ಡ ವಿಮಾನಗಳು ಗಂಟೆಗೆ 280 ಕಿ.ಮೀ (150 ನಾಟ್ಸ್) ವೇಗದಿಂದ 60 ಸೆಕೆಂಡುಗಳಿಗಿಂತ ಕಡಿಮೆ ಸಮಯದಲ್ಲಿ ಸಂಪೂರ್ಣವಾಗಿ ನಿಲ್ಲಬಲ್ಲವು. ಇದು ರೇಸ್ ಟ್ರ್ಯಾಕ್‌ನಲ್ಲಿನ ಸ್ಪೋರ್ಟ್ಸ್ ಕಾರುಗಳಿಗಿಂತಲೂ ವೇಗವಾಗಿದೆ. ಕೆಲವು ನಿರ್ದಿಷ್ಟ ಸಂದರ್ಭಗಳಲ್ಲಿ, ಪೈಲಟ್‌ಗಳು ಮೊದಲು ಬ್ರೇಕ್‌ಗಳನ್ನು ಬಳಸುವುದಿಲ್ಲ. ಬದಲಾಗಿ, ಗಾಳಿಯ ಪ್ರತಿರೋಧ ಮತ್ತು ಸ್ಪಾಯ್ಲರ್‌ಗಳನ್ನು ಮಾತ್ರ ಬಳಸಿಕೊಂಡು ವಿಮಾನ ನಿಧಾನವಾಗಲು ಬಿಡುತ್ತಾರೆ. ವಿಮಾನವು ರನ್‌ವೇಯನ್ನು ಸ್ಪರ್ಶಿಸಿದಾಗ ಅದು ಯಾವುದೇ ಅಲುಗಾಟವಿಲ್ಲದೇ, ಅತ್ಯಂತ ಸುಗಮವಾಗಿ ಇದ್ದರೆ ಅದನ್ನು ಬಟರ್ ಲ್ಯಾಂಡಿಂಗ್' ಎಂದು ಕರೆಯಲಾಗುತ್ತದೆ. ಇದು ಪೈಲಟ್‌ನ ನಿಖರತೆ ಮತ್ತು ಪರಿಣತಿಯ ಸಂಕೇತವಾಗಿದೆ. ಬಹಳ ಮೃದುವಾಗಿ ವಿಮಾನವನ್ನು ಲ್ಯಾಂಡ್ ಮಾಡುವುದು, ಅಂದರೆ ಚಕ್ರಗಳು ರನ್‌ವೇಗೆ ತಾಗುವ ಕ್ಷಣದಲ್ಲಿ ಯಾವುದೇ ಜರ್ಕ್ ಅಥವಾ ಶಾಕ್ ಆಗದಂತೆ ಲ್ಯಾಂಡ್ ಮಾಡುವುದು ಒಂದು ಪರಿಣತಿ. ಹೀಗೆ ಮಾಡಿದಾಗ ಪ್ರಯಾಣಿಕರಿಗೆ ಲ್ಯಾಂಡಿಂಗ್ ಬಹುತೇಕ 'ಗಾಳಿಯಲ್ಲಿ ಹಾರುವ' ಅನುಭವವಾಗುತ್ತದೆ. ಮೃದುವಾದ ಲ್ಯಾಂಡಿಂಗ್ ಪೈಲಟ್‌ಗಳಿಗೆ ಒಂದು ಸಾಧನೆ ಎಂಬ ಭಾವವನ್ನು ಮೂಡಿಸುತ್ತದೆ.

ವ್ಯಕ್ತಿತ್ವವಿರುವುದು ಮನಸ್ಸಿನ ವಿಸ್ತಾರದಲ್ಲಿ, ದೇಹದ ಗಾತ್ರದಲ್ಲಲ್ಲ



ನೂರೆಂಟು ವಿಶ್ವ

ವಿಶ್ವೇಶ್ವರ ಭಟ್
vbhat@me.com

ಹಲವು ತಿಂಗಳುಗಳಾದರೂ ಯೋಗಿ ದುರ್ಲಭಜೀ ಮಾತಿಗೆ ಸಿಕ್ಕಿರಲಿಲ್ಲ. ನಾನು ವಿದೇಶ ಪ್ರವಾಸ, ತಿರುಗಾಟ, ಫೋಟೋಗ್ರಫಿ, ಡ್ರೋನ್, ಬರವಣಿಗೆ, ಆಫೀಸು ಮಧ್ಯೆ ಕಳೆದುಹೋಗಿದ್ದೆ. ಈ ಸಮಯದಲ್ಲಿ ಎಂಟಕ್ಕೂ ಹೆಚ್ಚು ದೇಶಗಳಿಗೆ ಹೋಗಿ ಬಂದೆ. ಒಂದೆರಡು ಸಲ ದುರ್ಲಭಜೀಯವರನ್ನು ಸಂಪರ್ಕಿಸಲು ಪ್ರಯತ್ನಿಸಿದೆ, ಸಾಧ್ಯವಾಗಲಿಲ್ಲ. ಕಳೆದ ವಾರ ಫೋನ್ ಮಾಡಿದಾಗ ಯೋಗಿಜೀ ಮೌನವ್ರತದಲ್ಲಿದ್ದಾರೆ ಅಂತ ಅವರ ಶಿಷ್ಯರು ಹೇಳಿದರು.

''ಯೋಗಿ ದುರ್ಲಭಜೀ ಡಾ. ಮನಮೋಹನಸಿಂಗ್ ಅವರ ವ್ರತಾಚರಣೆಯಲ್ಲಿದ್ದಾರಾ?'' ಎಂದು ರೇಗಿಸಿದೆ. ಅವರ ಚಾಲಾಕಿ ಶಿಷ್ಯ ನಿಶ್ಚಿಂತಜೀ, ''ಯೋಗಿಜೀ ವರ್ಷದಲ್ಲಿ ಹದಿನೈದು ದಿನ ಮಾತ್ರ ಮೌನವ್ರತವನ್ನು ಆಚರಿಸುತ್ತಾರೆ. ಡಾ. ಮನಮೋಹನ ಸಿಂಗ್‌ರಂತೆ ಹತ್ತು ವರ್ಷಗಳ ಕಠೋರ ಮೌನವ್ರತ ಅಲ್ಲ'' ಎಂದ. ''ಯೋಗಿಜಿ ಜತೆ ಎಸ್ಎಮ್ಮೆಸ್‌ನಲ್ಲಿ ಮಾತಾಡಬಹುದಾ?'' ಎಂದು ಕೇಳಿದೆ. ''ಯೋಗಿಜೀ ಈಗ ಏನನ್ನೂ ಬಳಸುವುದಿಲ್ಲ, ನೆಲದ ಮೇಲೆಯೇ ಮಲಗುತ್ತಾರೆ. ಮೊಬೈಲ್ ರಿಂಗ್ ಸದ್ದು ಕೇಳಿದರೆ ಸಿಡಿಮಿಡಿಗೊಳ್ಳುತ್ತಿದ್ದರು. ಈಗ ಅವರೊಂದೇ ಅಲ್ಲ, ಅವರು ವಾಸಿಸುವ ಮನೆಯಲ್ಲಿ ಕಠೋರ ಮೌನ'' ಎಂದ ನಿಶ್ಚಿಂತಜೀ.

ದುರ್ಲಭಜೀ ಈ ವರಸೆಗಳೆಲ್ಲ ನನಗೆ ಹೊಸತಲ್ಲ. ಕಳೆದ ಕೆಲವು ತಿಂಗಳ ಹಿಂದೆ ವ್ಯವಹಾರದಲ್ಲಿ ಯೋಗಿಜೀ ಅವರಿಗೆ ನೂರಾರು ಕೋಟಿ ರುಪಾಯಿ ಲಾಭವಾಯಿತು. ಆ ಎಲ್ಲ ಹಣವನ್ನು ಮುಂಬೈನ ಕೊಳಗೇರಿ ಮಕ್ಕಳ ಆರೋಗ್ಯ, ಶಿಕ್ಷಣಕ್ಕೆ ಕೊಟ್ಟು ಬಂದರು. ಮನೆಯಲ್ಲಿನ ಪೀಠೋಪಕರಣಗಳನ್ನೆಲ್ಲ ಎತ್ತಿಕೊಂಡು ಹೋಗುವಂತೆ ಶಿಷ್ಯರಿಗೆ ಹೇಳಿದರು. ಕುಳಿತುಕೊಳ್ಳಲು ಮಣೆ ಹೊರತಾಗಿ ಏನೂ ಇರಲಿಲ್ಲ. ಎರಡು ದಿನಗಳ ಬಳಿಕ ಅದನ್ನೂ ಬೇರೆಯವರಿಗೆ ಕೊಡುವಂತೆ ಹೇಳಿದರು. ''ಈಗ ಮನೆ ಭರ್ತಿಯಾಗಿ ತುಂಬಿಕೊಂಡಿದೆ. ಫರ್ನಿಚರ್‌ಗಳನ್ನೆಲ್ಲ ತಂದು ಖಾಲಿ ಖಾಲಿ ಮಾಡಬೇಡಿ'' ಎಂದು ಶಿಷ್ಯರಿಗೆ ತಾಕೀತು ಮಾಡಿದ ಯೋಗಿಜೀ ತಮ್ಮ ಕೋಣೆಯೊಳಗೆ ಇಟ್ಟಿದ್ದ ಲಾಕರನ್ನೂ ಕೊಟ್ಟು ಬಿಡುವಂತೆ ಹೇಳಿದರು. ಇಡೀ ಮನೆಯಲ್ಲಿ ಹುಡುಕಿದರೂ ಒಂದು ಬಿಲ್ಲಿ ಕಾಸು ಸಿಗದಷ್ಟು ಬರಿಗೈದಾಸರಾಗಿದ್ದರು.

ದುರ್ಲಭಜೀ ಇಂಥ ಸ್ಥಿತಿಯನ್ನು ಅದೆಷ್ಟು ಸಲ, ತಲುಪಿದ್ದಾರೋ ಏನೋ? ಅವರು ಹಣ ಇರುವ ಹಾಗೂ ಇಲ್ಲದಿರುವ ಸ್ಥಿತಿ ಮಧ್ಯೆ ವ್ಯತ್ಯಾಸವನ್ನೇ ಕಾಣುವುದಿಲ್ಲ. ಅವರಿಗೆ ನೂರು ಕೋಟಿ ಗಳಿಸುವುದೂ ಗೊತ್ತು. ಗಳಿಸಿದ್ದೆಲ್ಲವನ್ನೂ ತನ್ನದಲ್ಲವೇ ಅಲ್ಲ ಎಂದು ಬೇರೆಯವರಿಗೆ ಕೊಟ್ಟು ಕೆಲ ಕಾಲ ಪರಮಾನಂದವನ್ನು ಅನುಭವಿಸುವುದೂ ಗೊತ್ತು. ''ಹಣವಿದ್ದರೆ ನಿದ್ದೆ ಬರೊಲ್ಲ, ಹಣ ಮಾಡಲಾರಂಭಿಸಿದರೆ ಸಮಾಧಾನವಿಲ್ಲ, ಸಾಕು ಎಂಬುದಿಲ್ಲ, ಎಷ್ಟು ಹಣ ಮಾಡಿದರೂ ತೃಪ್ತಿಯೆಂಬುದಿಲ್ಲ, ಹಣ ಎಂಥ ಕೆಲಸವನ್ನಾದರೂ ಮಾಡಿಸುತ್ತದೆ. ಆಗ ನೆಮ್ಮದಿಯಿಂದ ಇರುವುದಾದರೂ ಹೇಗೆ? ನಾನು ಆಗ ಗಳಿಸಿದ್ದೆಲ್ಲವನ್ನೂ ಕೊಟ್ಟು ಶೂನ್ಯವಾಗಲು ಪ್ರಯತ್ನಿಸುತ್ತೇನೆ. ಮೊದಮೊದಲು ಒಂದು ಪೈಸೆಯನ್ನು ಬೇರೆಯವರಿಗೆ ಕೊಡಬೇಕಾದ ಸಂದರ್ಭದಲ್ಲಿ ಕರುಳು ಕಿತ್ತುಬಂದಷ್ಟು ವೇದನೆ, ಸಂಕಟವಾಗುತ್ತಿತ್ತು, ನನ್ನ ದೇಹದ ಅಂಗವನ್ನಾದರೂ ಕೊಟ್ಟೇನು ಆದರೆ ಹಣವನ್ನು ಮಾತ್ರ ಕೊಡಲಾರೆ ಎಂಬ ಮನಸ್ಥಿತಿ ನನ್ನದಾಗಿತ್ತು. ಕ್ರಮೇಣ ನನ್ನ ಈ ಗುಣದಿಂದ ಮೀರಿ ಬೆಳೆಯಬೇಕು ಎಂದು ಅನಿಸಲಾರಂಭಿಸಿತು. ಕೊಡುವುದರಲ್ಲಿರುವ ಸಂತೃಪ್ತಿ ಯಾವುದರಲ್ಲೂ ಇಲ್ಲ ಎಂಬುದು ಮನವರಿಕೆಯಾಗತೊಡಗಿತು. ಗಳಿಸಿದ್ದರಲ್ಲಿ ಸ್ವಲ್ಪ ಭಾಗವನ್ನು ಕೊಡಲಾರಂಭಿಸಿದೆ, ಕ್ರಮೇಣ ಸ್ವಲ್ಪ ಇಟ್ಟುಕೊಂಡು ಉಳಿದುದೆಲ್ಲವನ್ನೂ ಕೊಡಲಾರಂಭಿಸಿದೆ. ಈಗ ಎಲ್ಲವನ್ನೂ ಕೊಡುತ್ತಿದ್ದೇನೆ. ಇದರಲ್ಲಿರುವ ಸುಖ ಅನುಭವಿಸಿದವನಿಗೇ ಗೊತ್ತು'' ಎಂದರು ಯೋಗಿ ದುರ್ಲಭಜೀ.

''ಯೋಗಿಜೀ, ಮುಂದೇನು?'' ಎಂದು ಕೇಳಿದೆ.

''ಮುಂದೇನೂ ಇಲ್ಲ, ಜೀವನದಲ್ಲಿ ಸುಖವಾಗಿರಲು ಹಲವು ದಾರಿಗಳಿವೆ. ಹಣ ಗಳಿಕೆಯೊಂದೇ ಅಲ್ಲ. ಅದು ಒಂದು ಉಪಾಯವಾಗಬೇಕೇ ಹೊರತು ಜೀವನೋಪಾಯವಾಗಬಾರದು. ಪ್ರತಿದಿನ ನಾವು ಮಾಡುವ ಕೆಲಸಗಳನ್ನೆಲ್ಲ ದುಡ್ಡು ಮಾಡುವ ಉದ್ದೇಶವನ್ನಿಟ್ಟುಕೊಂಡೇ ಮಾಡುತ್ತೇವಾ ಎಂದು ಅನಿಸಲಾರಂಭಿಸಿದೆ. ತನಗೇನು ಸಿಗುತ್ತದೆ, ತನಗೆಷ್ಟು ಕಮಿಷನ್ ಸಿಗುತ್ತದೆ, ತನಗೆಷ್ಟು ಲಂಚ ಸಿಗುತ್ತದೆ ಎಂದೇ ಯೋಚಿಸುತ್ತಾರೆ. ಸಂಬಂಧಗಳನ್ನು ದುಡ್ಡಿನ ಆಧಾರದಲ್ಲಿಯೇ ನಿರ್ಧರಿಸಲಾಗುತ್ತಿದೆ. ಇವರ ಸಂಪರ್ಕ ಮಾಡುವುದರಿಂದ ತನಗೇನು ಸಿಗುತ್ತದೆಯೆಂದೇ ಜನ ಯೋಚಿಸುತ್ತಾರೆ. ಇದರಿಂದ ಕ್ಷಣಿಕ ಲಾಭವಾಗಬಹುದಷ್ಟೆ'' ಎಂದರು ಯೋಗಿಜೀ.

ಅವರೇ ಮುಂದುವರಿಸಿದರು- ''ನಾನು ಕಳೆದ ತಿಂಗಳು ಕಾಶಿಯಲ್ಲಿ ಇಪ್ಪತ್ತೆರಡು ದಿನವಿದ್ದೆ. ಅಲ್ಲಿನ ಬೀಡಾಡಿ ದನಕರುಗಳಿಗೆ ನೀರು, ಆಹಾರ ಹಾಕಿದೆ. ನನಗೆ ಸಿಕ್ಕ ಸಂತಸ, ಸಮಾಧಾನವನ್ನು ಹಣದಲ್ಲಿ ಅಳೆಯಲು ಸಾಧ್ಯವೇ? ಅದರ ಮುಂದೆ ನೂರು ಕೋಟಿ ರುಪಾಯಿ ಏನೇನೂ ಅಲ್ಲ, ನಾನು ಮಾಡಿದಂತೆ ಎಲ್ಲರೂ ಮಾಡಬೇಕೆಂದು ಹೇಳುತ್ತಿಲ್ಲ, ಅದು ಎಲ್ಲರಿಗೂ ಸಾಧ್ಯವಾಗಲಿಕ್ಕಿಲ್ಲ. ಹಾಗೆಂದು ಕಷ್ಟವೂ ಅಲ್ಲ. ನನ್ನದು ಆದರ್ಶ ಅಲ್ಲ, ನೆಮ್ಮದಿ ಅರಸುವ ಮಾರ್ಗವಷ್ಟೆ. ಎಲ್ಲ ಆನಂದವೂ ಹಣದಲ್ಲಿಯೇ ಇದೆ ಎಂದು ಭಾವಿಸಿದವರಿಗೆ, ಹಣ ಹೇರಳವಾಗಿ ಬಂದ ಬಳಿಕ ಅರಿವಾಗುತ್ತದಲ್ಲ, ಹಣದಲ್ಲಿ ಅದಿಲ್ಲ ಎಂಬುದು, ನನಗೆ ಅರಿವಾದುದನ್ನಷ್ಟೇ ಹೇಳಿದೆ ನಿಮಗೆ''.

ಯೋಗಿಜೀ ಮಾತು ಬದಲಿಸಿದರು. ''ನೀವೆಂದಾದರೂ ಒಂದು ದಿನ, ಒಂದು ತಾಸು ಮೌನವಾಗಿದ್ದೀರಾ?'' ಎಂದು ಕೇಳಿದರು. ''ಇಲ್ಲ'' ಎಂದೆ. ''ಹಾಗಾದರೆ ನೀವು ನಿಮ್ಮ ಜೀವನವನ್ನು ವ್ಯರ್ಥಗೊಳಿಸಿದಿರಿ, ಮೌನಕ್ಕಿಂತ ಶ್ರೇಷ್ಠವಾದುದು ಯಾವುದೂ ಇಲ್ಲ. ನಮ್ಮ ಜತೆಗೆ ನಾವಿರುವುದು ಸಾಧ್ಯವಾಗುವುದಾದರೆ ಅದು ಮೌನದಲ್ಲಿ ಮಾತ್ರ, ಮೌನದ ಮಹತ್ವ ಅರ್ಥವಾದರೆ ಮಾತು ವ್ಯರ್ಥ ಎಂದೆನಿಸುತ್ತದೆ. ಪ್ರಾಣಿಗಳಲ್ಲಿನ ಸಹಜತೆ, ಅಕೃತಿಮತೆ ವ್ಯಕ್ತವಾಗುವುದು ಅವುಗಳ ಮೌನದಲ್ಲಿ, ಮೂಕಸ್ವಭಾವದಲ್ಲಿ. ಮಾತು ಸುಳ್ಳಿಗೆ, ಕೃತ್ರಿಮತೆಗೆ ರಹದಾರಿ. ಹತ್ತು ದಿನ ಮೌನವಾಗಿರಿ, ಅದರಿಂದ ನಿಮ್ಮ ಪಾಲಿನ ಜಗತ್ತು ಮುಳುಗಿಹೋಗುವುದಿಲ್ಲ, ಅಷ್ಟರ ಮಟ್ಟಿನ ನಿಮ್ಮ ಅಹಂ ಕಡಿಮೆಯಾಗಿರುತ್ತದೆ. ಜೀವನದಲ್ಲಿ ನೀವು ಯಾರ್‍ಯಾರೋ ಜತೆಗೆ ಇರುತ್ತೀರಿ. ಮೌನದಲ್ಲಿ ನಿಮ್ಮೊಂದಿಗೆ ಮಾತ್ರ ಇರಲು ಸಾಧ್ಯ. ಆರಂಭದ ಕಷ್ಟ ಕೊನೆಯಲ್ಲಿ ಬ್ರಹ್ಮಾನಂದವಾಗಿ ಪರಿವರ್ತಿತವಾಗಿರುತ್ತದೆ'' ಎಂದರು ದುರ್ಲಭಜೀ.

''ಮೌನದ ಮಹತ್ವ ಸಾರಿದರೆ ಮೊಬೈಲ್ ಕಂಪನಿಗಳೆಲ್ಲ ನಿಮ್ಮ ವಿರುದ್ಧವೂ ಕಾರಸ್ಥಾನ ಹೂಡಬಹುದು, ಹುಷಾರು'' ಎಂದೆ. ''ಅಂದ ಹಾಗೆ, ನನ್ನ ಬಳಿಯಿರುವ ಮೊಬೈಲನ್ನು ನೀರಿಗೆ ಎಸೆದೆ'' ಅಂದರು ದುರ್ಲಭಜೀ, ''ಅದಕ್ಕಾಗಿಯೇ ಸೋನಿ ಕಂಪನಿಯವರು ನೀರಿಗೆ ಎಸೆದರೂ ಹಾಳಾಗದ ಮೊಬೈಲನ್ನು ಬಿಡುಗಡೆ ಮಾಡಿರೋದು'' ಅಂದೆ. ಜೋರಾಗಿ ನಕ್ಕರು.

ಯೋಗಿಜೀ ದಿನದ ಮೌನವ್ರತಕ್ಕೆ ಜಾರುವ ಸಮಯ ಸನ್ನಿಹಿತವಾಗುತ್ತಿರಬಹುದೆಂದು ಅನಿಸಿತು. ಕೊನೆಯಲ್ಲಿ ಹೇಳಿದರು- ''ಚೊಂಗ್ ಶಿಯುಚಿಂಗ್ ಬರೆದ The fat lady ಎಂಬ ಪುಟ್ಟ ಪ್ರಬಂಧವನ್ನು ಇತ್ತೀಚೆಗೆ ಓದಿದೆ. ಅದನ್ನು ನಿಮಗೆ ಕಳಿಸಿಕೊಡುತ್ತೇನೆ. ಸಾಧ್ಯವಾದರೆ ನಿಮ್ಮ ಓದುಗರಿಗೆ ತಿಳಿಸಿ. ದಢೂತಿ ದೇಹದ ವ್ಯಕ್ತಿಗಳು ಒಳಗೊಳಗೆ ತೀವ್ರ ಹಿಂಸೆ ಅನುಭವಿಸುತ್ತಿರುತ್ತಾರೆ. ದಪ್ಪಗಿರುವುದು ಅಪರಾಧ ಎಂಬ ಮನೋಭಾವ ಬೆಳೆಯುತ್ತಿದೆ. ಎಲ್ಲರೂ ಸ್ಲಿಮ್ ಆಗಲು ಹಂಬಲಿಸುತ್ತಾರೆ. ಸ್ಲಿಮ್ ಇಲ್ಲದವರು ಕುರೂಪಿಗಳು ಎಂಬ ಭಾವನೆಯನ್ನು ಬಿತ್ತಲಾಗುತ್ತಿದೆ. ದಢೂತಿ ಕಾಯದವರಿಗೆ ಮನೋಬಲ ತುಂಬುವ ಕೆಲಸ ಆಗಬೇಕಿದೆ''.

ಮರುದಿನವೇ ಸ್ಪೀಡ್ ಪೋಸ್ಟ್‌ನಲ್ಲಿ 'ಫ್ಯಾಟ್‌ಲೇಡಿ' ಪ್ರಬಂಧ ಕೈಸೇರಿತು. ದುರ್ಲಭಜೀ ಹೇಳಿದಂತೆ, ದಪ್ಪವಾಗಿರುವುದೇ ಅಪರಾಧ ಎಂದು ಎಲ್ಲರೂ ಭಾವಿಸಿದಂತಿದೆ. ಸ್ಲಿಮ್ ಆಗಲು ವಿವಿಧ ಕೋರ್ಸ್‌ಗಳಿಗೆ ಸೇರಿಕೊಳ್ಳುತ್ತಿದ್ದಾರೆ. ಉಪವಾಸ ಬೀಳುತ್ತಿದ್ದಾರೆ. ಮಾತ್ರೆ ಸೇವಿಸುತ್ತಿದ್ದಾರೆ. ಜಿರೋ ಫಿಗರ್ ಖಯಾಲಿ ಹಿಡಿಸಿಕೊಂಡಿದ್ದಾರೆ. ಜನರ ಆಹಾರ ಪದ್ಧತಿ ಬದಲಾಗುತ್ತಿದೆ. Thin is beautiful, Fat is ugly ಎಂದು ಜನ ಭಾವಿಸಲಾರಂಭಿಸಿದ್ದಾರೆ. ದಢೂತಿ ವಿರೋಧಿ ಅಲೆ ವಿಶ್ವದಾದ್ಯಂತ ಬೀಸುತ್ತಿದೆ. ದುರ್ಲಭಜೀ ಕಳಿಸಿದ 'ಫ್ಯಾಟ್ ಲೇಡಿ' ಪ್ರಸಂಗ ಮುದ ನೀಡಿತು. ಅನುಭವ ನಿಮ್ಮದೂ ಆಗಲೆಂದು ಸಂಕ್ಷಿಪ್ತವಾಗಿ ಕೊಡುತ್ತಿದ್ದೇನೆ.

★ ★ ★

''ಹಾಯ್, ಹೌ ಆರ್ ಯು? ಐ ಆ್ಯಮ್ ಲಾರಾ, ಹೌ ನೈಸ್ ಟು ಮೀಟ್ ಯು'' ಎಂದಳು ಆ ದಢೂತಿ ಕಾಯದ ಮಹಿಳೆ. ತನ್ನ ಬ್ಯಾಗನ್ನು ಕ್ಯಾಬಿನ್‌ನಲ್ಲಿಡುತ್ತಾ, ನನ್ನನ್ನು ಸರಿಸಿಕೊಂಡು, ಕಿಟಕಿ ಬಳಿಯ ಸೀಟಿನಲ್ಲಿ ಹೋಗಿ ದೊಪ್ ಎಂದು ಕುಳಿತಳು. ಅವಳ ದೇಹದ ಕಾಲುಭಾಗ ನನ್ನ ಮೇಲೆ ಜಮಾ ಆಗಿತ್ತು. 'ಬಂತಲ್ಲಪ್ಪ ಗ್ರಹಚಾರ' ಎಂದು ಸಿಡಿಮಿಡಿಗೊಂಡೆ. ಬಾಳೆದಿಂಡಿನಂಥ ಅವಳ ಬಾಹುಗಳು ನನ್ನ ಭುಜವನ್ನು ಸವರಿ ನನ್ನನ್ನು ಪಕ್ಕಕ್ಕೆ ತಳ್ಳುವಂತೆ ಮಾಡಿತ್ತು. ಅವಳ ದೇಹದ ಆಕಾರ, ಆ ಪರ್ವತದಂಥ ಶರೀರ, ಅವಳ ಪೃಷ್ಟ ನೋಡಿ ನನಗೆ ತುಸು ವಾಕರಿಕೆ ಬಂದಂತಾಯಿತು. ಸಾಲದ್ದಕ್ಕೆ ನನ್ನ ಸೀಟನ್ನು ಬೇರೆ ಆಕ್ರಮಣ ಮಾಡಿಕೊಂಡಿದ್ದಳು. ಅವಳು ''ಹೌ ಆರ್ ಯು?'' ಎಂದು ಕೇಳಿದರೂ ನನಗೆ ಉತ್ತರಿಸಲು ಮನಸ್ಸಾಗಲಿಲ್ಲ. ಇಂದು ಯಾರ ಮುಖ ನೋಡಿ ಎದ್ದೆನೋ ಎಂದು ನನ್ನನ್ನೇ ಹಳಿದುಕೊಂಡೆ.

ಆ ದಢೂತಿ ಬಿಡಬೇಕಲ್ಲ? ''ನಾನು ಲಾರಾ, ಬ್ರಿಟನ್‌ನವಳು. ನೀವು ಜಪಾನಿನವರಾ?'' ಎಂದು ಕೇಳಿದಳು. ''ಇಲ್ಲ ಮಲೇಷಿಯಾದವನು'' ಎಂದೆ.

''ಹೌದಾ? ಐ ಆ್ಯಮ್ ಸಾರಿ, ಒಮ್ಮೆ ನನ್ನ ಕೈಕುಲುಕಿ, ಮುಂದಿನ ಆರು ತಾಸುಗಳ ಕಾಲ ನಾವು ಅಕ್ಕಪಕ್ಕ ಕುಳಿತಿರುತ್ತೇವೆ. ಯಾವ ಋಣಾನುಬಂಧವೋ ಗೊತ್ತಿಲ್ಲ, ಇಬ್ಬರೂ ಸ್ನೇಹಿತರಾಗೋಣ, ಏನಂತೀರಾ?'' ಎಂದಳು ಲಾರಾ. ನಾನು ಯಾವ ಪ್ರತಿಕ್ರಿಯೆಯನ್ನೂ ನೀಡಲಿಲ್ಲ. ಆದರೂ ಅವಳಿಗೆ ಏನೂ ಅನಿಸಿರಲಿಲ್ಲ, ಒಲ್ಲದ ಮನಸ್ಸಿನಿಂದ ಕೈ ಕುಲುಕಿದೆ. ಹಾಗೆಂದು ಸಲುಗೆ ಕೊಡಲಿಲ್ಲ, ಆದರೆ ಆ ಘಟವಾಣಿ ಹೆಂಗಸು ಬಿಡಬೇಕಲ್ಲ, ತಾನು ಹಾಂಗ್‌ಕಾಂಗ್‌ಗೆ ಯಾಕೆ ಬಂದೆ, ಅಲ್ಲಿ ಏನೇನು ಮಾಡಿದೆ ಎಂಬುದನ್ನೆಲ್ಲ ವಿವರಿಸಿದಳು. ಬೋರ್ಡಿಂಗ್ ಸ್ಕೂಲಿನಲ್ಲಿರುವ ಮಕ್ಕಳಿಗಾಗಿ ತಾನು ಏನೇನು ಖರೀದಿಸಿದೆ ಎಂಬುದರ ದೊಡ್ಡ ಪಟ್ಟಿಯನ್ನೇ ಕೊಟ್ಟಳು. ಆಕೆ ಒಬ್ಬ ಟೀಚರ್ ಎಂದು ಗೊತ್ತಾಯಿತು. ಆಕೆಯ ಪ್ರಶ್ನೆಗಳಿಗೆಲ್ಲ ನಾನು ಹೂಂ, ಹಾಂ ಅಥವಾ ಒಂದು ಸಾಲಿನ ಉತ್ತರ ಕೊಡುತ್ತಿದ್ದೆ. ಅವಳ ಮಾತುಗಳಲ್ಲಿ ಕಾಳಜಿ, ಕಳಕಳಿಯಿದೆಯೆಂದು ಅನಿಸಲಾರಂಭಿಸಿತು. ಅಷ್ಟೊತ್ತಿಗೆ ವಿಮಾನದಲ್ಲಿ ಊಟ ಬಂತು.

''ನನ್ನ ಈ ದಢೂತಿ ದೇಹ ನನಗೆ ಮಾತ್ರ ಚೆಂದ, ನಿಮಗೆ ಹೊರೆಯಾದಾಗ ನನ್ನನ್ನು ಹಿಡಿದು ತಳ್ಳುವ ಅಧಿಕಾರ ನಿಮಗಿದೆ'' ಅಂದಳು. ''ನನ್ನ ಗಂಡನಿಗೆ ಸಂಸಾರದ ಭಾರ ಅಂದ್ರೆ ನನ್ನ ಭಾರವೇ ಆಗಿದೆ. ಆತ ನನ್ನ ಭಾರವನ್ನು ಸಹಿಸಿಕೊಂಡಿದ್ದಾನಲ್ಲ, ನಿಜಕ್ಕೂ ದೊಡ್ಡ ಮನುಷ್ಯ'' ಎಂದು ನಕ್ಕಳು. ತನ್ನ ಮಾತುಗಳಿಂದ, ನೇರಾನೇರ ಸ್ವಭಾವದಿಂದ ಲಾರಾ ಹತ್ತಿರವಾಗಲಾರಂಭಿಸಿದಳು. ಅವಳು ಚೆನ್ನಾಗಿ ಓದಿಕೊಂಡಿದ್ದಳು. ಫಿಲಾಸಫಿಯಿಂದ ಹಿಡಿದು ಸೈನ್ಸ್ ತನಕ ಅನೇಕ ವಿಷಯಗಳ ಬಗ್ಗೆ ತಿಳಿದುಕೊಂಡಿದ್ದಳು. ಅವಳ ಪ್ರತಿ ಮಾತಿನಲ್ಲೂ ತೀಕ್ಷ್ಣ ಪ್ರತಿಕ್ರಿಯೆ ಅಡಕವಾಗಿರುತ್ತಿತ್ತು. ಅವಳ ಗ್ರಹಿಕೆ ಭಿನ್ನವಾಗಿತ್ತು. ಹಾಸ್ಯ, ವಿಡಂಬನೆಯಿಲ್ಲದೇ ಮಾತು ಮುಗಿಸುತ್ತಿರಲಿಲ್ಲ. ''ನನ್ನಂಥ ಆನೆ ಗಾತ್ರದವರು ವಿಮಾನದಲ್ಲಿ ಹಾರುವುದು ಗುರುತ್ವಾಕರ್ಷಣ ನಿಯಮಗಳಿಗೆ ಸವಾಲು. ಆದರೆ ಸತ್ಯ ಕೂಡ. ಇದು ಫಿಲಾಸಫಿಯೂ ಹೌದು, ಸೈನ್ಸ್ ಸಹ'' ಎಂದಳು. ನಾನು ಅವಳ ಮಾತುಗಳಿಗೆ ಪ್ರತಿಕ್ರಿಯಿಸಲಾರಂಭಿಸಿದೆ.

ಮಧ್ಯೆ ಮಧ್ಯೆ ಗಗನಸಖಿಯರು ಬಂದು ಹೋಗುತ್ತಿದ್ದರು. ಅವರ ಜತೆಯಲ್ಲೂ ಲಾರಾ ಜೋಕು ಮಾಡುತ್ತಿದ್ದಳು. ''ನನ್ನನ್ನು ನೋಡಿ ಹೆದರಬೇಡಿ. ನನ್ನ ಆಕಾರ ನೋಡಿ ನನ್ನ ಆಹಾರ ಸೇವನೆಯ ಪ್ರಮಾಣ ಅಳೆಯಬೇಡಿ. ನೀವು ನಿಮ್ಮ ದೇಹವನ್ನು ಪ್ರೀತಿಸುತ್ತೀರಿ. ಹಾಗಾಗಿ ಉಪವಾಸ ಬೀಳುತ್ತೀರಿ. ನಾನು ನನ್ನ ದೇಹವನ್ನು ಪ್ರೀತಿಸುತ್ತೇನೆ. ಹಾಗಾಗಿ ಚೆನ್ನಾಗಿ ತಿನ್ನುತ್ತೇನೆ. ನಾನೇ ಪರಮಸುಖಿ'' ಎಂದಳು. ಗಗನಸಖಿಯೂ ಜೋರಾಗಿ ನಕ್ಕಳು. ಆಕೆಯ ಜತೆ ಮಾತಿಗಿಳಿಯಬೇಕೆನಿಸಿತು. ''ಲಾರಾ, ನೀವು ಎಂದಾದರೂ ನಿಮ್ಮ ತೂಕ ಕಡಿಮೆ ಮಾಡುವ ಬಗ್ಗೆ ಯೋಚಿಸಿದ್ದೀರಾ?'' ಎಂದು ಕೇಳಿದೆ. ''ಬಹಳ ಶ್ರಮ ಪಟ್ಟು ಇಷ್ಟು ಸಂಪಾದಿಸಿದ್ದೇನೆ. ಅದನ್ಯಾಕೆ ಕಡಿಮೆ ಮಾಡಿಕೊಳ್ಳಲಿ'' ಎಂದಳು. ''ಬೊಜ್ಜು ಕರಗಿಸದಿದ್ದರೆ ಹೃದಯ ಸಂಬಂಧಿ ಕಾಯಿಲೆ ಬರುವುದಂತಲ್ಲಾ?'' ಎಂದೆ. ''ಹಾಗೇನಿಲ್ಲ, ನಿಮಗ್ಯಾರು ಹೇಳಿದರು? ನಿಮ್ಮ ತೂಕದ ಬಗ್ಗೆಯೇ ಚಿಂತಿಸಿದರೆ ನೀವು ಮಾನಸಿಕರಾಗಬಹುದಷ್ಟೆ. ಅಷ್ಟಕ್ಕೂ ನನಗೆ ಬೊಜ್ಜಿನ ಬಗ್ಗೆ ಯೋಚಿಸಲು ಟೈಮೇ ಇಲ್ಲ, ನಾನು ಜೀವನದಲ್ಲಿ ಎಷ್ಟೆಲ್ಲಾ ಸುತ್ತಬೇಕು. ಎಷ್ಟೊಂದು ಜನರ ಸ್ನೇಹ ಮಾಡಬೇಕು, ನನಗೆ ಗೊತ್ತಿರುವುದೆಲ್ಲ ನನ್ನ ವಿದ್ಯಾರ್ಥಿಗಳಿಗೆ ಹೇಳಿಕೊಡಬೇಕು, ಅಷ್ಟಕ್ಕೂ ನನಗೆ ಯಾವುದೇ ದೈಹಿಕ ತೊಂದರೆಯಿಲ್ಲ, ನಾನು ಆರೋಗ್ಯವಾಗಿದ್ದೇನೆ. ದಢೂತಿ ಶರೀರ ಕೆಲವರಿಗೆ ಅಸಹ್ಯವಾಗಿ ಕಾಣಬಹುದು. ಆದರೆ ಅದು ಅನಾರೋಗ್ಯ ಅಲ್ಲ. ನನಗೆ ಬೊಜ್ಜಿನ ಬಗ್ಗೆ ಚಿಂತಿಸುವುದಕ್ಕಿಂತ ಇನ್ನೂ ಪ್ರಮುಖ ವಿಷಯಗಳಿವೆ. ಅಷ್ಟಕ್ಕೂ ಆಹಾರ ಅಂದ್ರೆ ದೇವರ ಸೃಷ್ಟಿ'' ಎಂದ ಲಾರಾ ವೈನ್ ಗ್ಲಾಸನ್ನು ತುಟಿಗಿಟ್ಟುಕೊಂಡಳು.

''ದೇವರು ನನಗೆ ಕೊಟ್ಟಿರುವ ಈ ದೇಹದಿಂದ ನಾನು ಆನಂದ ಹೊಂದಿದ್ದೇನೆ. ನನಗೆ ನನ್ನ ದೇಹ ಭಾರ ಎಂದೆನಿಸಿಲ್ಲ. ಇರುವೆಗೆ ತನ್ನ ದೇಹ ಭಾರ ಎಂದೆನಿಸಿಲ್ಲ, ಇರುವೆಗೆ ಆನೆ ದಢೂತಿ ಎನಿಸಬಹುದು. ಆನೆಗೆ ಆನೆ ದಢೂತಿ ಅಲ್ಲ'' ಎನ್ನುತ್ತಾ ನಕ್ಕಳು ಲಾರಾ. ನಾನು ನಗೆಗೂಡಿಸಿದೆ.

''ನಾನು ಕಾಣಲು ದಢೂತಿಯಿರಬಹುದು, ಆದರೆ ನಾನು ಹೂವಿನಷ್ಟೆ ಹಗುರ, ನನ್ನ ಮನಸ್ಸು ಬಹಳ ಸ್ಲಿಮ್. ದಪ್ಪಗಿದ್ದವರ ಹೃದಯ ವಿಶಾಲವಾಗಿರುತ್ತಂತೆ. ದಢೂತಿ ದೇಹದವರನ್ನು ಕಂಡರೆ ಚೇಷ್ಟೆ ಮಾಡುತ್ತಾರೆ. ಕನಿಕರ ಪಡುತ್ತಾರೆ. ದಪ್ಪಗಿರುವಂತೆ, ತೆಳ್ಳಗಿರುವುದೂ ದೇಹದ ಆಕಾರವೇ ಹೊರತು ಅದೇ ವ್ಯಕ್ತಿತ್ವ ಅಲ್ಲ. ನನ್ನ ಪತಿ ನನ್ನನ್ನು ಪ್ರೀತಿಸುವ ಪರಿ ನೋಡಿದರೆ ಅಚ್ಚರಿಯಾಗುತ್ತದೆ ನಿಮಗೆ'' ಎಂದವಳೇ ಗಗನಸಖಿಯರನ್ನು ಕರೆದು, ''ನಿಮ್ಮ ಪಾಲಿನ ದನ್ನು ತಿನ್ನದೇ ತೆಳುವಾಗುತ್ತೀರಿ. ಅದನ್ನು ನಮಗೆ ಕೊಟ್ಟು ನಮ್ಮನ್ನು ದಪ್ಪ ಮಾಡುತ್ತೀರಿ. ಇನ್ನು ಮುಂದೆ ಚೆನ್ನಾಗಿ ತಿನ್ನಿ. ದಪ್ಪಗಿರುವವರು ಹಾಗೂ ತೆಳ್ಳಗಿರುವವರಿಗೆ ಇರುವ ಏಕಮಾತ್ರ ವ್ಯತ್ಯಾಸ ಅಂದ್ರೆ ಆಹಾರ, ಮತ್ತೇನಲ್ಲ'' ಎಂದಳು. ಅಷ್ಟು ಹೊತ್ತಿಗೆ ನಾವು ಕುಳಿತಿರುವ ಕಡೆ ಎಲ್ಲ ಗಗನಸಖಿಯರು, ಸಹಪ್ರಯಾಣಿಕರು ಬಂದು ಲಾರಾ ಮಾತುಗಳನ್ನು ಕೇಳುತ್ತಿದ್ದರು. ಲಾರಾ ಎಲ್ಲರ ಆಕರ್ಷಣೆಯ ಕೇಂದ್ರವಾಗಿದ್ದಳು. ಕೆಲವರಂತೂ ಆಕೆಯ ಜತೆ ನಿಂತು ಫೋಟೋ ತೆಗೆಸಿಕೊಂಡರು.

ನಾವು ವಿಮಾನದಿಂದ ಇಳಿದೆವು. ''ಜೀವನದಲ್ಲಿ ದಢೂತಿ ವ್ಯಕ್ತಿಗಳನ್ನು ಕಂಡಾಗಲೆಲ್ಲ ನನ್ನನ್ನೂ ನೆನಪಿಸಿಕೊಳ್ತೀರಿ ಅಲ್ವಾ?'' ಎಂದು ಕೇಳಿದಳು. ನನಗೆ ತಡೆದುಕೊಳ್ಳಲಾಗಲಿಲ್ಲ. ಆಕೆಯನ್ನು ಬಿಗಿದಪ್ಪಿದೆ. ''ಉಹುಂ ಹೀಗಲ್ಲ, ನನ್ನನ್ನು ತಬ್ಬಿಕೊಳ್ಳುವುದು ಕಷ್ಟ. ನಿಮ್ಮ ಎರಡೂ ಕೈಗಳು ಸಿಗಬೇಕೆಂದರೆ ಇನ್ನಷ್ಟು ಬಿಗಿಯಾಗಿ ಅಪ್ಪಿಕೊಳ್ಳಿ'' ಎಂದಳು ತಮಾಷೆಯಿಂದ. ಅವಳನ್ನು ಸ್ವಾಗತಿಸಲು ನೂರಾರು ವಿದ್ಯಾರ್ಥಿಗಳು ನಿಲ್ದಾಣಕ್ಕೆ ಬಂದಿದ್ದರು. ಎಲ್ಲರೂ ಆಕೆಯನ್ನು ಮುಗಿಬಿದ್ದು ಅಪ್ಪಿಕೊಂಡರು.

ಆ ದೃಶ್ಯವನ್ನು ನಾನು ನೋಡುತ್ತಾ ಹಾಗೇ ನಿಂತಿದ್ದೆ.

ನಾನು ನನ್ನ ಜೀವನದಲ್ಲಿ ನೋಡಿದ ಅತ್ಯಂತ ಸುಂದರ ಹೆಂಗಸು ಅಂದ್ರೆ ಈಕೆಯೇ ಎಂದು ನನ್ನ ಒಳಮನಸ್ಸು ಹೇಳುತ್ತಿತ್ತು...

ನಿದ್ದೆಯಲ್ಲಿದ್ದ ಆನೆ ಎದ್ದಿದೆ, ಇನ್ನು ಸುಮ್ಮಿರೋದಿಲ್ಲ!

ಭಾರತವು ಐತಿಹಾಸಿಕವಾಗಿ ಬಹಳ ಶ್ರೀಮಂತ ದೇಶವಾಗಿತ್ತು. ನಡುವೆ ಯಾರ್‍ಯಾರೋ ಕೊಳ್ಳೆ ಹೊಡೆದರು. ಅದರಿಂದ ಚೇತರಿಸಿಕೊಂಡು ಮತ್ತೆ ಈಗ ಜಗತ್ತಿನ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿ ಬೆಳೆದಿದೆ. ನಮ್ಮ ಶಕ್ತಿ ಜಗತ್ತಿಗಿನ್ನೂ ಸರಿಯಾಗಿ ಗೊತ್ತಿಲ್ಲ. ಅಷ್ಟೇಕೆ, ನಮಗೇ ಸರಿಯಾಗಿ ಗೊತ್ತಿಲ್ಲ!

ಹಿರಿಯ ಪತ್ರಿಕೋದ್ಯಮಿ

ಡಾ.ವಿಜಯ್ ದರಡಾ
vveditoped@gmail.com

ದೇಶದಲ್ಲಿ ಒಂದಿಡೀ ವಾರದ ಸ್ವಾತಂತ್ರ್ಯೋತ್ಸವದ ಸಂಭ್ರಮಾಚರಣೆ ಆರಂಭವಾಗಿದೆ. ನಾವೆಲ್ಲರೂ ಈಗ ಸ್ವತಂತ್ರ ಭಾರತದಲ್ಲಿರುವ ಮುಕ್ತವಾಗಿ ಯೋಚಿಸುವ ಪ್ರಜೆಗಳು. ತ್ರಿವರ್ಣ ಧ್ವಜದಡಿ ನಮ್ಮ ನಮ್ಮ ಊರಿನಲ್ಲಿ ನಮ್ಮದೇ ರೀತಿಯಲ್ಲಿ ಸ್ವಾತಂತ್ರ್ಯದ ಸಂಭ್ರಮವನ್ನು ಆಚರಿಸುತ್ತಿದ್ದೇವೆ. ಸ್ವಾತಂತ್ರ್ಯವನ್ನು ಸಂಭ್ರಮಿಸಲು ನನಗೆ ನನ್ನದೇ ಆದ ರೀತಿಯೊಂದಿದೆ. ಅದು ಪೆನ್ನು. ಆ ಪೆನ್ನಿನ ಮೂಲಕ ಈಗ ಆರ್ಥಿಕ ಸ್ವಾತಂತ್ರ್ಯದ ಬಗ್ಗೆ ಚರ್ಚಿಸೋಣ.

ಬ್ರಿಟಿಷರ ಕಪಿಮುಷ್ಟಿಯಿಂದ ನಮ್ಮ ತಾಯ್ನಾಡು ಬಿಡುಗಡೆ ಪಡೆದು 78 ವರ್ಷಗಳು ಕಳೆದವು. ಈ ಅವಧಿಯಲ್ಲಿ ನಾವು ನಿಸ್ಸಂಶಯವಾಗಿಯೂ ಅಗಾಧ ಪ್ರಗತಿ ಸಾಧಿಸಿದ್ದೇವೆ. ಇಡೀ ಜಗತ್ತಿನಲ್ಲಿ ಭಾರತೀಯರು ನಮ್ಮ ಹೆಜ್ಜೆ ಗುರುತು ಮೂಡಿಸಿದ್ದೇವೆ. ಅಭಿವೃದ್ಧಿಯ ಯಾವ ದಾರಿಯನ್ನೂ ನಾವು ಪ್ರಯತ್ನಿಸದೆ ಬಿಟ್ಟಿಲ್ಲ. ಹೀಗಾಗಿ ಸಹಜವಾಗಿಯೇ ನಮ್ಮನ್ನು ನೋಡಿ ಅಸೂಯೆಪಡುವವರು ಇರುತ್ತಾರೆ. ಅವರು ನಮ್ಮ ಪ್ರಗತಿಗೆ ಅಡ್ಡಗಾಲು ಹಾಕಲು ಪ್ರಯತ್ನಿಸುತ್ತಾರೆ. ನಮ್ಮಲ್ಲಿರುವ ಆರ್ಥಿಕ ಸಂಪನ್ಮೂಲಗಳ ಮೇಲೆ ಅವರು ಲಾಲಸೆಯಿಂದ ಕಣ್ಣು ನೆಟ್ಟಿರುತ್ತಾರೆ. ವಿಶ್ವ ವಾಣಿಜ್ಯ ಕೇಂದ್ರದಂಥ ಸಂಸ್ಥೆ ಇಂದು ಪಾರ್ಶ್ವವಾಯು ಬಡಿಸಿಕೊಂಡು ಕುಳಿತಿದೆ. ಅದರ ಕೈಯಲ್ಲಿ ಯಾರನ್ನೂ ರಕ್ಷಿಸಲು ಸಾಧ್ಯವಾಗುತ್ತಿಲ್ಲ. ಹಾಗಿರುವಾಗ ಈಗ ಹೊಸತಾಗಿ ಎದುರಾಗಿರುವ ಆರ್ಥಿಕ ಸವಾಲುಗಳನ್ನು ನಾವು ಹೇಗೆ ಎದುರಿಸಬೇಕು?

ಇಡೀ ಜಗತ್ತು ಇಂದು ಅಮೆರಿಕದ ತೆರಿಗೆಯ ಚಕ್ರವ್ಯೂಹದಲ್ಲಿ ಸಿಲುಕಿಕೊಂಡಿದೆ. ಭಾರತ ಕೂಡ ಅದಕ್ಕೆ ಹೊರತಾಗಿಲ್ಲ. ಹಾಗೆ ನೋಡಿದರೆ, ನಾವು ಅತಿಹೆಚ್ಚು ಹೊಡೆತ ಅನುಭವಿಸುತ್ತಿರುವ ದೇಶಗಳ ಸಾಲಿನಲ್ಲಿದ್ದೇವೆ. ಭಾರತದ ಸರಕುಗಳ ಮೇಲೆ ವಿಧಿಸಿದ್ದ ತೆರಿಗೆಯನ್ನು ಅಮೆರಿಕ ಶೇ.25ರಿಂದ ಶೇ.50ಕ್ಕೆ ಏರಿಸಿದೆ. ಅಂದರೆ, ನಾವು ಅಮೆರಿಕಕ್ಕೆ 100 ರು. ಬೆಲೆಯ ವಸ್ತುವನ್ನು ರಫ್ತು ಮಾಡಿದರೆ ಆ ದೇಶದಲ್ಲಿ ಅದಕ್ಕೆ 50 ರು. ತೆರಿಗೆ ವಿಧಿಸಲಾಗುತ್ತದೆ. ಸಹಜವಾಗಿಯೇ ಇದು ಅಲ್ಲಿನ ಗ್ರಾಹಕರಿಗೆ ವರ್ಗಾವಣೆಯಾಗುತ್ತದೆ. ಆಗ ಅಮೆರಿಕದ ಗ್ರಾಹಕರು ಕೊಳ್ಳುವ ಭಾರತೀಯ ವಸ್ತುಗಳು ದುಬಾರಿಯಾಗುತ್ತವೆ. ಅದರಿಂದಾಗಿ ಭಾರತದ ವಸ್ತುಗಳಿಗೆ ಅಮೆರಿಕದಲ್ಲಿ ಬೇಡಿಕೆ ಕುಸಿಯುತ್ತದೆ. ಇಲ್ಲೊಂದು ವಿಷಯ ಗಮನಿಸಿ. ಭಾರತವು ಜಗತ್ತಿಗೆ ಎಷ್ಟು ಸರಕನ್ನು ರಫ್ತು ಮಾಡುತ್ತದೆಯೋ ಅದರಲ್ಲಿ ಶೇ.18ರಷ್ಟನ್ನು ಅಮೆರಿಕವೊಂದಕ್ಕೇ ರಫ್ತು ಮಾಡುತ್ತದೆ. ಹೀಗಾಗಿ ಅಮೆರಿಕದ ತೆರಿಗೆ ಹೊಡೆತ ಭಾರತದ ಆರ್ಥಿಕತೆಗೆ ಬಹಳ ಜೋರಾಗಿಯೇ ಬೀಳುತ್ತದೆ. ಇದರಲ್ಲಿ ಭಾರತದ ಆರ್ಥಿಕ ಸ್ವಾತಂತ್ರ್ಯದ ಪ್ರಶ್ನೆಯೂ ಇದೆ. ಅದನ್ನು ಅಮೆರಿಕ ನಿಯಂತ್ರಿಸಲು ಬಯಸುತ್ತಿದೆ. ನನ್ನ ಪ್ರಕಾರ, ಭಾರತ ಯಾವ ವೇಗದಲ್ಲಿ ಅಭಿವೃದ್ಧಿ ಹೊಂದುತ್ತಿದೆಯೋ ಅದನ್ನು ನೋಡಿ ಸುಮ್ಮನಿರಲು ಎಲ್ಲರಿಗೂ ಆಗುತ್ತಿಲ್ಲ. ಏನಾದರೂ ಮಾಡಿ, ಎಲ್ಲಾ ರೀತಿಯಲ್ಲೂ, ಭಾರತವನ್ನು ಕಟ್ಟಿಹಾಕಬೇಕು ಎಂದು ಅವು ಪ್ರಯತ್ನಿಸುತ್ತಿವೆ. ಇತ್ತೀಚಿನ ಒಂದು ಉದಾಹರಣೆಯನ್ನೇ ನೋಡಿ. ನಮ್ಮ ದೇಶದ ಉದ್ಯಮಪತಿಗಳು ಈಗ ಜಾಗತಿಕ ಮಟ್ಟದಲ್ಲಿ ದೊಡ್ಡ ಹೆಸರು ಮಾಡತೊಡಗಿದ್ದಾರೆ. ಅಂಬಾನಿ, ಅದಾನಿ, ಸಜ್ಜನ್ ಜಿಂದಾಲ್, ಟಾಟಾ, ಬಿರ್ಲಾ ಮುಂತಾದವರು ಉದ್ದಿಮೆಗಳನ್ನು ಬೃಹತ್ತಾಗಿ ವಿಸ್ತರಿಸುತ್ತಿದ್ದಾರೆ. ಅದಾನಿಯಂತೂ ಜಗತ್ತಿನ ನಂ.2 ಶ್ರೀಮಂತರಾಗುವ ಮಟ್ಟಕ್ಕೆ ಬೆಳೆದಿದ್ದಾರೆ. ಆದರೆ, ಅವರ ಬೆಳವಣಿಗೆಯನ್ನು ಸಹಿಸಲಾಗದ ಕೆಲ ಜಾಗತಿಕ ಶಕ್ತಿಗಳು ಅವರ ವಿರುದ್ಧ ಇಲ್ಲಸಲ್ಲದ ಆರೋಪ ಮಾಡಿ, ಅವರಿಗೆ ಎಷ್ಟು ಸಾಧ್ಯವೋ ಅಷ್ಟು ಕಿರುಕುಳ ನೀಡಲು ಯತ್ನಿಸಿದವು. ಎಲ್ಲಿಯವರೆಗೆ ಅಂದರೆ, ಅವರು ಲಂಡನ್, ಯುರೋಪ್ ಅಥವಾ ಅಮೆರಿಕದ ಪ್ರಭಾವಲಯದಲ್ಲಿರುವ ದೇಶಗಳಿಗೆ ಹೋದರೆ ಅರೆಸ್ಟ್ ಮಾಡಲಾಗುತ್ತದೆ ಎಂದು ಸುದ್ದಿ ಹರಡಿತ್ತು! ಇಂದು ಭಾರತದೊಂದಿಗೆ ಪೈಪೋಟಿಗಿಳಿದಿರುವ ಎಲ್ಲಾ ದೇಶಗಳೂ ಒಂದಲ್ಲಾ ಒಂದು ರೀತಿಯಲ್ಲಿ ನಮ್ಮನ್ನು ಕಷ್ಟಕ್ಕೆ ಸಿಲುಕಿಸಲು ಯತ್ನಿಸುತ್ತಿವೆ. ಈ ಹಿಂದೆ ಟ್ರಂಪ್ ಚೀನಾಕ್ಕೆ ಶೇ.145ರಷ್ಟು ತೆರಿಗೆ ವಿಧಿಸಿದ್ದರು. ಅದಕ್ಕೆ ಚೀನಾ ತಕ್ಕ ಉತ್ತರ ನೀಡಿತು. ಕೊನೆಗೆ ಏನಾಯಿತು? ಬೇರೆ ದಾರಿಯಿಲ್ಲದೆ ಟ್ರಂಪ್ ತಲೆಬಾಗಿದರು.

ನಾನು ಅರ್ಥಶಾಸ್ತ್ರಜ್ಞನಲ್ಲ. ಆದರೆ ಒಬ್ಬ ಪತ್ರಕರ್ತನಾಗಿ, ರಾಜಕಾರಣಿಯಾಗಿ ಹಾಗೂ ಉದ್ಯಮಿಯಾಗಿ ನನಗೆ ಇದನ್ನೆಲ್ಲ ವಿಶ್ಲೇಷಣೆ ಮಾಡುವ ಶಕ್ತಿ ಖಂಡಿತ ಇದೆ. ನನ್ನ ಪ್ರಕಾರ, ಭಾರತದ ಕೃಷಿ ಕ್ಷೇತ್ರ ಮತ್ತು ಡೈರಿ ಕ್ಷೇತ್ರದ ಮೇಲೆ ಅಮೆರಿಕಕ್ಕೆ ಬಹಳ ವರ್ಷಗಳಿಂದ ಕಣ್ಣಿತ್ತು. ಭಾರತದ ಸಮಗ್ರ ರಾಷ್ಟ್ರೀಯ ಉತ್ಪನ್ನ (ಜಿಡಿಪಿ)ಕ್ಕೆ ಕೃಷಿ ಕ್ಷೇತ್ರ ಶೇ.14ರಷ್ಟು ಕೊಡುಗೆ ನೀಡುತ್ತಿದೆ. ಈ ಕ್ಷೇತ್ರವು ಶೇ.42ರಷ್ಟು ಭಾರತೀಯರಿಗೆ ಉದ್ಯೋಗ ನೀಡುತ್ತಿದೆ. ಡೈರಿ ಉದ್ದಿಮೆಗಳು ಜಿಡಿಪಿಗೆ ಶೇ.5ಕ್ಕಿಂತ ಸ್ವಲ್ಪ ಹೆಚ್ಚು ಕೊಡುಗೆ ನೀಡುತ್ತಿವೆ. ಇದಕ್ಕೆ ಪಶುಸಂಗೋಪನೆ ಹಾಗೂ ಅದಕ್ಕೆ ಸಂಬಂಧಿಸಿದ ಕ್ಷೇತ್ರಗಳನ್ನೂ ಸೇರಿಸಿದರೆ ದೇಶದ ಶೇ.8.5ರಷ್ಟು ಜನರಿಗೆ ಇವು ಉದ್ಯೋಗ ನೀಡುತ್ತಿವೆ. ಭಾರತವು ಜಗತ್ತಿನಲ್ಲೇ ಅತಿದೊಡ್ಡ ಹಾಲು ಉತ್ಪಾದಕ ದೇಶ. ಜಗತ್ತಿನ ಶೇ.23ರಿಂದ ಶೇ.24ರಷ್ಟು ಹಾಲು ಭಾರತದಲ್ಲಿ ಉತ್ಪತ್ತಿಯಾಗುತ್ತದೆ. ಅಮೆರಿಕ ಎರಡನೇ ಸ್ಥಾನದಲ್ಲಿದೆ. ಆದರೆ ಅವರ ಹಾಲಿಗೂ ನಮ್ಮ ದೇಶದ ಹಾಲಿಗೂ ಸಾಕಷ್ಟು ವ್ಯತ್ಯಾಸವಿದೆ. ಅಮೆರಿಕದಲ್ಲಿ ಹಸುಗಳಿಗೆ ಮಾಂಸ-ಆಧರಿತ ಪ್ರೋಟೀನ್ ತಿನ್ನಿಸಿ ಹೆಚ್ಚು ಹಾಲು ಕರೆಯುತ್ತಾರೆ. ನಮ್ಮ ದೇಶದಲ್ಲಿ ಹಾಲಿನ ಪಶುಗಳೆಲ್ಲ ಸಸ್ಯಾಹಾರಿಗಳು.

ಈಗ ಎರಡೂ ದೇಶಗಳ ಕೃಷಿ ಮತ್ತು ಡೈರಿ ಉದ್ದಿಮೆಯ ನಡುವಿನ ವ್ಯತ್ಯಾಸ ನೋಡೋಣ. ಭಾರತದಲ್ಲಿ ಕೃಷಿ ಕ್ಷೇತ್ರಕ್ಕೆ ಸರಕಾರದಿಂದ ಸಿಗುವ ನೆರವು ಅತ್ಯಲ್ಪ. ಆದರೆ ಅಮೆರಿಕದಲ್ಲಿ ಕೃಷಿಕರಿಗೆ ಸರಕಾರದಿಂದ ಭಾರಿ ಪ್ರಮಾಣದಲ್ಲಿ ಸಬ್ಸಿಡಿ, ತಾಂತ್ರಿಕ ನೆರವು ಹಾಗೂ ಸುಲಭದ ಸಾಲ ಸಿಗುತ್ತದೆ. ಇದರರ್ಥ ಏನೆಂದರೆ, ಅಮೆರಿಕದ ಕೃಷಿ ಕ್ಷೇತ್ರ ಮತ್ತು ಕೃಷಿಕರು ಭಾರತದ ಕೃಷಿ ಕ್ಷೇತ್ರ ಮತ್ತು ಕೃಷಿಕರಿಗಿಂತ ಉತ್ತಮ ಸ್ಥಿತಿಯಲ್ಲಿದ್ದಾರೆ. ಅಮೆರಿಕ ಮಾತ್ರವಲ್ಲ, ಯುರೋಪ್ ಹಾಗೂ ಚೀನಾ ಸೇರಿದಂತೆ ಅನೇಕ ದೇಶಗಳು ಕೃಷಿಗೆ ದೊಡ್ಡ ಪ್ರಮಾಣದಲ್ಲಿ ಸಬ್ಸಿಡಿ ನೀಡುತ್ತವೆ. ಹೀಗಿರುವಾಗ ಅಮೆರಿಕದ

ಕೃಷಿ ಉತ್ಪನ್ನಗಳು ಹಾಗೂ ಡೈರಿ ಉತ್ಪನ್ನಗಳಿಗೆ ಭಾರತದೊಳಗೆ ಮುಕ್ತ ಪ್ರವೇಶ ನೀಡಿದರೆ ನಮ್ಮ ಕೃಷಿಕರು ಖಂಡಿತ ಮಾರುಕಟ್ಟೆಯಲ್ಲಿ ಉಳಿಯಲು ಸಾಧ್ಯವಿಲ್ಲ. ಆಗ ಭಾರತೀಯ ಕೃಷಿಕರ ಆರ್ಥಿಕ ಸ್ವಾತಂತ್ರ್ಯವನ್ನು ಕಿತ್ತುಕೊಂಡಂತಾಗುತ್ತದೆ.

ಚೀನಾದಿಂದ ನಮ್ಮ ದೇಶದ ಆರ್ಥಿಕ ಸ್ವಾತಂತ್ರ್ಯದ ಮೇಲೆ ನಡೆಯುತ್ತಿರುವ ದಾಳಿಯ ಬಗ್ಗೆ ಈಗಾಗಲೇ ನಾವು ಎಚ್ಚೆತ್ತುಕೊಂಡಿದ್ದೇವೆ. ಆದರೂ ಚೀನಾದ ಉತ್ಪನ್ನಗಳು ನಮ್ಮ ಮಾರುಕಟ್ಟೆಗೆ ದಾಂಗುಡಿ ಇಡುತ್ತಲೇ ಇವೆ. ನಮ್ಮ ಗುಡಿ ಕೈಗಾರಿಕೆ ಹಾಗೂ ಸಣ್ಣ ಕೈಗಾರಿಕೆಗಳ ಉತ್ಪನ್ನಗಳು ಚೀನಾದ ಉತ್ಪನ್ನಗಳ ಮೇಲಾಟವನ್ನು ಮಾರುಕಟ್ಟೆಯಲ್ಲಿ ತಾಳಿಕೊಳ್ಳಲು ಆಗದೆ ಹೆಣಗಾಡುತ್ತಿವೆ. ಪ್ರಧಾನಿ ನರೇಂದ್ರ ಮೋದಿಯವರ 'ಮೇಕ್ ಇನ್ ಇಂಡಿಯಾ' ಘೋಷಣೆ ನಮಗೊಂದು ದಾರಿಯನ್ನು ತೋರಿಸಿದೆಯಾದರೂ ನಾವು ಕ್ರಮಿಸಬೇಕಾದ ದಾರಿ ಇನ್ನೂ ದೀರ್ಘವಿದೆ. ಕೇವಲ ಸರಕಾರದ ದೂರದೃಷ್ಟಿತ್ವದ ನೀತಿಗಳು ಹಾಗೂ ಜನಸಾಮಾನ್ಯರ ಪರಿಶ್ರಮ ಮಾತ್ರ ಈ ಪರಿಸ್ಥಿತಿಯನ್ನು ಬದಲಿಸಬಲ್ಲದು. ನಮ್ಮ ಅಧಿಕಾರಶಾಹಿಯ ಮನಸ್ಥಿತಿ ಈಗಲೂ ಪೂರ್ತಿ ಬದಲಾಗಿಲ್ಲ. ಎಲ್ಲಿಯವರೆಗೆ ನಾವು ಕಾರ್ಮಿಕರ ಉತ್ಪಾದನಾ ಸಾಮರ್ಥ್ಯ ಹಾಗೂ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧೆಯನ್ನೊಡ್ಡಲು ಸಾಧ್ಯವಿಲ್ಲ. ಪ್ರತಿಯೊಂದು ರಂಗದಲ್ಲೂ ನಾವು ಗುಣಮಟ್ಟಕ್ಕೆ ಆದ್ಯತೆ ನೀಡಬೇಕಿದೆ. ಆಗ ನಮ್ಮನ್ನು ತಡೆಯುವ ಶಕ್ತಿ ಯಾರಿಗೂ ಇರುವುದಿಲ್ಲ. ನಾನು ಅಮೆರಿಕದ ಅಭಿವೃದ್ಧಿಯ ಕತೆ ಓದುತ್ತಿದ್ದೆ. ಅಲ್ಲೊಂದು ಸಂಗತಿ ಗಮನ ಸೆಳೆಯಿತು. ಅಮೆರಿಕದ ಆರ್ಥಿಕತೆ ಒಮ್ಮೆ ಕುಸಿದಾಗ ಜಾನ್ ಎಫ್. ಕೆನಡಿ ತಮ್ಮ ದೇಶದ ಪ್ರಜೆಗಳನ್ನುದ್ದೇಶಿಸಿ ಒಂದು ಮಾತು ಹೇಳಿದ್ದರು. ''ದೇಶ ನಿಮಗಾಗಿ ಏನು ಮಾಡುತ್ತಿದೆ ಎಂದು ಕೇಳಬೇಡಿ, ದೇಶಕ್ಕಾಗಿ ನೀವು ಏನು ಮಾಡಬಲ್ಲಿರಿ ಎಂದು ಕೇಳಿಕೊಳ್ಳಿ''. ಈ ಮಾತು ಅಮೆರಿಕದ ಭವಿಷ್ಯವನ್ನೇ ಬದಲಿಸಿತು.

ಭಾರತದ ವಿಷಯದಲ್ಲೂ ನಮ್ಮ ಮನಸ್ಥಿತಿ ಇದೇ ರೀತಿ ಬದಲಾಗಬೇಕಿದೆ. ನಾವು ಕಠಿಣ ಪರಿಶ್ರಮದಿಂದ ಎಷ್ಟು ಎತ್ತರಕ್ಕೆ ಏರಬೇಕು ಅಂದರೆ, ಕಾಲೆಳೆಯುವವರಿಗೆ ನಮ್ಮ ಕಾಲೇ ಸಿಗಬಾರದು! ನಮ್ಮನ್ನು ಕೆಣಕಲು ಬರುವವರು ಹತ್ತು ಸಲ ಯೋಚಿಸುವಂತಾಗಬೇಕು! ಚೀನಾ ಹೇಗೆ ಅಮೆರಿಕಕ್ಕೆ ಅದರ ಜಾಗವನ್ನು ತೋರಿಸಿತೋ ಅದೇ ರೀತಿ ನಾವು ಕೂಡ ಎದೆ ಸೆಟೆಸಿ ನಿಲ್ಲಬೇಕು. ಪಂಚಶೀಲ ತತ್ವಗಳ ಗೊಡವೆ ಬಿಟ್ಟು ಕಠಿಣ ನಿಲುವು ಪ್ರದರ್ಶಿಸಬೇಕು. 'ರಾಮಚರಿತಮಾನಸ'ದಲ್ಲಿ ಒಂದು ಅಧ್ಯಾಯವಿದೆ. ಪರಶುರಾಮ ತನ್ನ ಕೊಡಲಿಯಿಂದ ಲಕ್ಷ್ಮಣನನ್ನು ಹೆದರಿಸಲು ಯತ್ನಿಸಿದಾಗ ಲಕ್ಷ್ಮಣ ಹೇಳುತ್ತಾನೆ: ''ಕೈಬೆರಳು ತೋರಿಸಿದಾಕ್ಷಣ ಒಣಗಿಹೋಗಲು ನಾನು ಕುಂಬಳಕಾಯಿಯಲ್ಲ!''.

ಭಾರತಕ್ಕೆ ಅಗಾಧ ಸಾಮರ್ಥ್ಯವಿದೆ. ಬೆಳೆಯಲು ನಮ್ಮ ಮುಂದೆ ಸಾಕಷ್ಟು ಅವಕಾಶಗಳಿವೆ. ಕಳೆದ ಎರಡು ಸಾವಿರ ವರ್ಷಗಳ ಆರ್ಥಿಕ ಇತಿಹಾಸವನ್ನು ನೋಡಿದರೆ, ಮೊದಲ 1500 ವರ್ಷಗಳ ಕಾಲ ಜಗತ್ತಿನ ಉತ್ಪಾದನಾ ವಲಯದ ಶೇ.46ರಷ್ಟು ಪಾಲು ಭಾರತದ್ದೇ ಆಗಿತ್ತು. ಬ್ರಿಟಿಷರು ಭಾರತವನ್ನು ಆಕ್ರಮಿಸಿಕೊಂಡ ಮೇಲೂ ನಮ್ಮ ಕೊಡುಗೆ ಶೇ.23ರಷ್ಟಿತ್ತು. ಆದರೆ ಅವರು ಭಾರತವನ್ನು ಬಿಟ್ಟು ಹೋದಾಗ ಅದು ಶೇ.2ಕ್ಕೆ ಕುಸಿದಿತ್ತು. ಆ ಲೂಟಿಯಿಂದಲೂ ನಾವು ಚೇತರಿಸಿಕೊಂಡು, ಇವತ್ತು ಜಗತ್ತಿನ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿ ಬೆಳೆದಿದ್ದೇವೆ. ನೆನಪಿಡಿ, ಜಗತ್ತಿನಲ್ಲೇ ಇಂದು ಅತಿಹೆಚ್ಚು ಚಿನ್ನ ಖರೀದಿಸುವ ದೇಶ ನಮ್ಮದು.

ನಮ್ಮ ದೇಶದ ಆರ್ಥಿಕ ಸ್ವಾತಂತ್ರ್ಯದ ಮೇಲೆ ದಾಳಿ ನಡೆಸಲು ಯತ್ನಿಸುತ್ತಿರುವ ಶಕ್ತಿಗಳಿಗೆ ನಾನು ಹೇಳುವುದಿಷ್ಟೆ: ಭಾರತದ ಸಾಮರ್ಥ್ಯವನ್ನು ಕೀಳಂದಾಜು ಮಾಡಬೇಡಿ. ಭಾರತ ಈವರೆಗೆ ನಿದ್ರೆಯಲ್ಲಿದ್ದ ಆನೆಯಾಗಿತ್ತು. ಈಗ ಅದು ಎಚ್ಚರಗೊಂಡು ರಾಜಗಾಂಭೀರ್ಯದಲ್ಲಿ ನಡೆಯಲು ಆರಂಭಿಸಿದೆ. ಇನ್ನು ಇದು ನಿಲ್ಲುವುದೂ ಇಲ್ಲ, ತಲೆಬಾಗುವುದೂ ಇಲ್ಲ, ಹೆದರುವುದೂ ಇಲ್ಲ..! ಜೈ ಹಿಂದ್!

(ಲೇಖಕರು ಹಿರಿಯ ಪತ್ರಿಕೋದ್ಯಮಿ)

ಭಟ್ಟರ್ ಸ್ಕಾಚ್

- ರಾಜಣ್ಣ, ಮಂಡ್ಯ
ಭಟ್ರೇ, ಜಿಮ್‌ಗೆ ಹೋದ್ರೆ ಹೊಟ್ಟೆ ಕರಗುತ್ತಾ?
– **ಹೋಟೆಲ್‌ಗೆ ಹೋಗದಿದ್ದರೆ ಕರಗಬಹುದು!**

- ನಂಜೇಶ ಪಾಡಿಗ, (ಇಮೇಲ್ ಮೂಲಕ)
ಭಟ್ರೇ, ಹೆಂಡತಿಯ ಕನಸೇ ಬೀಳುತ್ತಿಲ್ಲವಲ್ಲ?
– **ಖುಷಿ ವಿಚಾರಗಳಿಗೆ ಸ್ವಯಂ ಕನಿಕರಪಟ್ಟುಕೊಳ್ಳಬಾರದು!**

- ರಾಜೇಶ್ವರಿ ಪಟ್ಟಣ, ಬೆಂಗಳೂರು
ಭಟ್ರೇ, ಗಂಡಸರು ಪರಮಸ್ವಾರ್ಥಿಗಳು, ಏನಂತೀರಾ?
– **ಹೂಂ.. ತಮ್ಮ ಹೆಂಡತಿಯ ಹೆಸರಿನಲ್ಲೇ ಆಸ್ತಿ ಮಾಡ್ತಾರೆ!**

- ವೇಣುಗೋಪಾಲ ಕಂಚಿತೋಟ, ಕಡೂರು
ಭಟ್ರೇ, ಸಹನಾ ಎಂದು ಹೆಸರಿಟ್ಟುಕೊಳ್ಳುವವರೆಲ್ಲ ಸಿಡುಕುತ್ತಾರಲ್ಲ?
– **ಪ್ರಾರ್ಥನಾ ಅಂತ ಹೆಸರಿಟ್ಟುಕೊಂಡವಳು ಮೊನ್ನೆ ಗಂಡನಿಗೆ ಕೆಟ್ಟದಾಗಿ ಉಗಿತಾ ಇದ್ದಳಪ್ಪ!**

- ಸತೀಶ ಎಲ್.ವಿ., (ಇಮೇಲ್ ಮೂಲಕ)
ಭಟ್ರೇ, ರಕ್ಷಾಬಂಧನ ಸೇರಿದಂತೆ ನಮ್ಮಲ್ಲಿ ನೂರೆಂಟು ಹಬ್ಬಗಳಿವೆ, ಇಲ್ಲದೆ ಇರೋದು ಯಾವುದು?
– **ತಾಳಿ ಕಟ್ಟೋ ಹಬ್ಬ!**

- ಶ್ರೀರಂಗಪ್ರಿಯ, ಬೆಳಗಾವಿ
ಭಟ್ರೇ ನಿಮ್ಮನ್ನು ಲೋಕಸಭೆಯಲ್ಲೋ, ರಾಜ್ಯಸಭೆಯಲ್ಲೋ, ವಿಧಾನಸಭೆಯಲ್ಲೋ ನೋಡಬೇಕು ಅಂತ ಆಸೆಯಾಗ್ತಿದೆಯಲ್ಲ?
– **ವಿಶ್ವವಾಣಿ ಪತ್ರಿಕೆಯಲ್ಲೇ ನಾನು ನೆಮ್ಮದಿಯಾಗಿರೋದು ನಿಂಗೆ ಇಷ್ಟವಿಲ್ವಾ ಮಾರಾಯಾ?!**

- ರುಕ್ಕು, ಚಾಮರಾಜಪೇಟೆ
ಭಟ್ರೇ, ನಮ್ಮ ವ್ಯಕ್ತಿತ್ವ ಎಲ್ಲರಿಗೂ ಎದ್ದು ಕಾಣಬೇಕಾದರೆ ಏನು ಮಾಡಬೇಕು?
– **ಎದ್ದು ಕಾಣುವಂತೆ ಇಟ್ಟುಕೊಳ್ಳಬೇಕು!**

- ಚಂದ್ರಶೇಖರ ನಾಗೂರು, (ಇಮೇಲ್ ಮೂಲಕ)
ಭಟ್ರೇ, ಮದುವೆಯಾದ ನಂತರವೂ ಗೊಂದಲ ಮುಂದುವರಿಯುವುದು ಯಾವಾಗ?
– **ಸನ್ನಿ ಲಿಯೋನ್–ಸನ್ನಿ ಡಿಯೋಲ್ ಮದುವೆಯಾದಾಗ ಸನ್ನಿ ಲಿಯೋನಳನ್ನು ಏನಂತ ಕರೆಯೋದು ಅಂತ ಯೋಚಿಸಿದಾಗ ಹಾಗೆ ಆಗುತ್ತದೆ!**

ಶಾಪದ ಅಗ್ನಿಕುಂಡದಲ್ಲಿ ಅರಳಿದ ಕೆಂಡಗಳು



ಕಾಡುದಾರಿ
ಹರೀಶ್ ಕೇರ
vveditoped@gmail.com

ಮಹಾಭಾರತವನ್ನು ನೀವು ಆದಿಯಿಂದ ನೋಡುತ್ತ ಹೋದರೆ ಕೊನೆಯವರೆಗೂ ನೂರಾರು ಶಾಪಗಳೂ, ನೂರಾರು ವರಗಳೂ ಕಾಣಸಿಗುತ್ತವೆ. ಮಹಾಭಾರತ ಕತೆಯ ಮೊದಲ ರಾಜ ಶಂತನುವಿನ ಜನನ ಆದುದು ಒಂದು ಶಾಪದಿಂದ. ಕೊನೆಯಲ್ಲಿ ಪಾಂಡವರ ಮೊಮ್ಮಗ ಪರೀಕ್ಷಿತನ ಅಂತ್ಯವಾದುದೂ ಒಂದು ಶಾಪದಿಂದ. ಈ ಶಾಪ ಮತ್ತು ವರಗಳ ಇತಿವೃತ್ತ ನೋಡುತ್ತ ಹೋದರೆ ನಮಗೆ ಸಾಕಷ್ಟು ಒಳನೋಟಗಳು ಸಿಕ್ಕುತ್ತವೆ.

ಬ್ರಹ್ಮಲೋಕದಲ್ಲಿ ಬ್ರಹ್ಮನ ಸಭೆ ನಡೆದಿತ್ತು. ಸೂರ್ಯವಂಶ–ಚಂದ್ರವಂಶಗಳ ಹಿಂದಿನ ರಾಜರು, ಪುಣ್ಯ ಮಾಡಿ ಬ್ರಹ್ಮಲೋಕ ಸೇರಿದವರೂ, ನಾನಾ ದೇವತೆಗಳೂ ಅಲ್ಲಿದ್ದರು. ಹಾಗಿದ್ದವನೊಬ್ಬ ಮಹಾಭಿಷ. ಇವನು ಇಕ್ಷ್ವಾಕು ವಂಶದ ರಾಜ. ಸಾವಿರಾರು ರಾಜಸೂಯ, ಅಶ್ವಮೇಧ ಮಾಡಿ ಸ್ವರ್ಗ ಸೇರಿದ್ದವನು. ಅಂದು ಅವನ ಗ್ರಹಚಾರ ಕೆಟ್ಟಿತ್ತು. ದೇವನದಿ ಗಂಗೆ ಸಭೆಯಲ್ಲಿ ನಡೆದುಬಂದಳು. ಗಾಳಿ ಬೀಸಿತು, ಆಕೆಯ ಸೆರಗು ಸರಿಯಿತು. ಆಕೆಯನ್ನು ನಗ್ನವಾಗಿ ನೋಡಬಾರದು ಎಂಬ ಎಚ್ಚರದಿಂದ ಎಲ್ಲರೂ ಕಣ್ಣು ಮುಚ್ಚಿಕೊಂಡರು. ಗಂಗೆಯ ಸೌಂದರ್ಯದಲ್ಲಿ ಕಣ್ಣು ನೆಟ್ಟಿದ್ದ ಮಹಾಭಿಷ ರೆಪ್ಪೆ ಮುಚ್ಚಲಿಲ್ಲ. ಇದು ಬ್ರಹ್ಮನಿಗೆ ಗೊತ್ತಾಗಿ, ಸಿಟ್ಟಿನಿಂದ ''ನೀನು ಭೂಮಿಯಲ್ಲಿ ಮತ್ತೆ ಜನಿಸು'' ಎಂದು ಶಾಪ ಕೊಟ್ಟ. ಹಾಗೆ ಚಂದ್ರವಂಶದ ದೊರೆ ಪ್ರತೀಪನಲ್ಲಿ ಜನಿಸಿದವನು ಶಂತನು.

ಆದರೆ ಹಾಗೆ ಭೂಮಿಗೆ ಬರುವಾಗ ಮಹಾಭಿಷ ಗಂಗೆಯನ್ನೂ ಬಿಡಲಿಲ್ಲ. ''ನನ್ನದು ತಪ್ಪಾಯಿತು, ಒಪ್ಪಿಕೊಳ್ಳುತ್ತೇನೆ. ನನ್ನ ಶಿಕ್ಷೆಯನ್ನು ಸ್ವೀಕರಿಸುತ್ತೇನೆ. ಆದರೆ ಇದರಲ್ಲಿ ಗಂಗೆಯದೂ ಸ್ವಲ್ಪ ಪಾಲಿದೆ. ಅವಳೂ ಮೈಮರೆತಿದ್ದಳು. ಆಕೆಯೂ ನನ್ನ ಜತೆ ಭೂಮಿಗೆ ಬರಲಿ. ನನ್ನ ಜತೆ ಸಂಸಾರ ಮಾಡಲಿ'' ಎಂದ. ಬ್ರಹ್ಮ ಯಾವ ಮೂಡ್‌ನಲ್ಲಿದ್ದನೋ, ''ನೀನೂ ಭೂಮಿಗೆ ಹೋಗು'' ಎಂದು ಗಂಗೆಗೂ ಆದೇಶಿಸಿದ. ಗಂಗೆ ಹಾಗೆ ಹೋಗುತ್ತಿರುವಾಗ ದಾರಿಯಲ್ಲಿ ಎಂಟು ಮಂದಿ ವಸುಗಳು ಸಿಕ್ಕಿದರು. ಇವರು ದೇವತೆಗಳ ಒಂದು ವರ್ಗ. ಸಂಜೆಗತ್ತಲಲ್ಲಿ ನಡೆಯುವಾಗ ವಸಿಷ್ಠರನ್ನು ಕಾಣದೆ ತುಳಿದು, ''ಮನುಷ್ಯರಾಗಿ ಹುಟ್ಟಿ'' ಎಂದು ಅವರಿಂದ ಶಪಿತರಾಗಿದ್ದವರು ಅವರು. ಗಂಗೆ ಮತ್ತು ಅವರ ನಡುವೆ ಸಂವಾದ ನಡೆಯಿತು. ''ನಾವು ಯಾವುದೋ ಮನುಷ್ಯರ ಗರ್ಭದಲ್ಲಿ ಜನಿಸಲು ಒಲ್ಲೆವು. ಹುಟ್ಟಿದರೆ ನಿನ್ನಂಥ ಪವಿತ್ರಾತ್ಮಳ ಗರ್ಭದಲ್ಲಿ ಹುಟ್ಟುವೆವು. ಒಪ್ಪಿಗೆ ನೀಡು'' ಎಂದರು. ಗಂಗೆ ಒಪ್ಪಿದಳು. ವಸುಗಳು ಜತೆಗೇ ಒಂದು ಷರತ್ತು ಹಾಕಿದರು– ''ನಮಗೆ ಭೂಮಿಯಲ್ಲಿ ನರಳುತ್ತಾ ಬದುಕಲು ಇಷ್ಟವಿಲ್ಲ. ಹುಟ್ಟಿದ ಕೂಡಲೇ ನಮ್ಮನ್ನು ನೀರಿನಲ್ಲಿ ಮುಳುಗಿಸಿ ಸಾಯಿಸು''. ಗಂಗೆ ಅದಕ್ಕೂ ಒಪ್ಪಿದಳು.

ಹೀಗೆ ಮಹಾಭಿಷ ಶಂತನುವಾಗಿ ಜನಿಸಿದ. ಗಂಗೆ ಅವನಿಗಿಂತ ಮೊದಲು ನದಿಯಾಗಿ ಭೂಮಿಗೆ ಬಂದಳು. ಒಂದು ಸಲ ಶಂತನು ನದಿದಡದಲ್ಲಿ ಸಂಚರಿಸುತ್ತಿದ್ದಾಗ ಆಕೆಯನ್ನು ಕಂಡು ಮೋಹಗೊಂಡ. ಮದುವೆಯಾಗುತ್ತೇನೆ ಎಂದ, ''ಆಗಲಿ, ಆದರೆ ನಾನು ಏನೇ ಮಾಡಿದರೂ ನೀನು ಅದನ್ನು ಪ್ರಶ್ನಿಸಬಾರದು. ಪ್ರಶ್ನಿಸಿದರೆ ಈ ಸಂಬಂಧ ಕಡಿದುಕೊಳ್ಳುವ ಹಕ್ಕು ನನ್ನದಾಗಿರುತ್ತದೆ'' ಎಂದು ಷರತ್ತು ಹಾಕಿದಳು. ಶಂತನು ಒಪ್ಪಿದ. ಹೀಗೆ ಮದುವೆಯಾಯಿತು.

ಒಂದೊಂದಾಗಿ ಮಕ್ಕಳು ಜನಿಸಿದವು, ಏಳು ಮಕ್ಕಳು. ಹುಟ್ಟಿದ ಕೂಡಲೇ ಗಂಗೆ ಅವುಗಳನ್ನು ತೆಗೆದುಕೊಂಡು ಹೋಗಿ ನದಿಯಲ್ಲಿ ಮುಳುಗಿಸಿ ಕೊಂದಳು. ಈ ಉಲ್ಲೇಖಕ್ಕೆ ಏನೇನು ಅರ್ಥಗಳಿವೆಯೋ. ಗಂಗೆ, ಶಿಶುಗಳನ್ನು ಗಂಗಾನದಿಯಲ್ಲೇ ಮುಳುಗಿಸಿ ಕೊಲ್ಲುವುದು ಎಂದರೇನರ್ಥ? ಬಹುಶಃ ಅವು ಹುಟ್ಟುವಾಗಲೇ ಸತ್ತಿರಬೇಕು. ಬಹುಶಃ ಶಂತನು–ಗಂಗೆಯರದು ಅನುರೂಪ ದಾಂಪತ್ಯ ಆಗಿರಲಿಲ್ಲ. ಅದು ಗಂಗೆ–ಶಂತನುಗಳಿಬ್ಬರ ಅಗತ್ಯಕ್ಕೆ ದಕ್ಕಿದ ದಾಂಪತ್ಯ. ಅದು ಶಾಪದಿಂದ, ನೋವು ಸಂಕಟಗಳಿಂದ ಮುಕ್ತಿ ಪಡೆಯಲು ಮಾಡಿಕೊಂಡ ದಾಂಪತ್ಯ. ಬಹುಶಃ ಅದರಲ್ಲಿ ಸಿಹಿಗಿಂತ ಕಹಿಯೇ ಅಧಿಕ ಇದ್ದಿರಬೇಕು. ಇಬ್ಬರೂ ಮುಕ್ತವಾಗಿ ಮಾತಾಡಿಕೊಳ್ಳುತ್ತಿರಲಿಲ್ಲ. ಹಾಗೆ ಮಾತಾಡಿಕೊಂಡಿದ್ದರೆ ಅವಳು ಶಿಶುಗಳನ್ನು ನೀರಿಗೆ ಎಸೆಯುವ ಹಿನ್ನೆಲೆ ಅವನಿಗೆ ತಿಳಿದಿರುತ್ತಿತ್ತು. ಆಕೆಯನ್ನು ಖಂಡಿಸುವ ಯೋಚನೆ ಹುಟ್ಟುತ್ತಿರಲಿಲ್ಲ.

ಎಂಟನೇ ಮಗು ಆಗುವ ಹೊತ್ತಿಗೆ ಶಂತನುವಿನ ಸಹನೆ ಸತ್ತಿತ್ತು. ಶಂತನು ಆಕೆಯ ರಟ್ಟೆ ಹಿಡಿದು ''ಯಾಕೆ ಹೀಗೆ?'' ಎಂದು ಅಬ್ಬರಿಸಿದ. ಅಷ್ಟೇ ಸಾಕಾಯಿತು. ಗಂಗೆಗೂ ಈ ಮನುಷ್ಯ ಬದುಕು, ಸಂಸಾರ ಸಾಕೆನಿಸಿತ್ತು. ''ಸರಿ, ನಿನಗೆ ಮಗು ಬೇಕು ತಾನೆ? ನೀನೇ ಇಟ್ಟುಕೋ. ಆದರೆ ನೀನು ನನ್ನನ್ನು ಪ್ರಶ್ನಿಸಿದೆ, ತಡೆದೆ, ಖಂಡಿಸಿದೆ. ಹೀಗಾಗಿ ನಾನು ಹೊರಟೆ'' ಎಂದು ಹೇಳಿ, ತಮ್ಮಿಬ್ಬರ ಪೂರ್ವಜನ್ಮದ ಕತೆಯನ್ನೂ ಅವನಿಗೆ ಹೇಳಿ ಅಲ್ಲಿಂದ ಹೊರಟಳು. ಹೊರಡುವಾಗ ಮಗನಿಗೆ ಶಿಕ್ಷಣ ಕಲಿಸಿ ಮರಳಿ ಕಳಿಸುತ್ತೇನೆ ಎಂದು ತಿಳಿಸಿ ಅವನನ್ನೂ ಕರೆದೊಯ್ದಳು. ಅವನು ದೇವವ್ರತ. ನಂತರ ಭೀಷ್ಮನಾದವನು. ಅವನೂ ಶಪಿತ ವಸು.

ಮಹಾಭಾರತದ ಕೊನೆಗೆ ಬನ್ನಿ. ಕುರುಕ್ಷೇತ್ರ ಯುದ್ಧವೆಲ್ಲ ಮುಗಿದು, ಧರ್ಮರಾಯ 36 ವರ್ಷಗಳ ಸುಭಿಕ್ಷ ಆಡಳಿತ ನಡೆಸಿದ. ನಂತರ ಅಭಿಮನ್ಯುವಿನ ಪುತ್ರ, ಉತ್ತರೆಯ ಮಗ ಪರೀಕ್ಷಿತನಿಗೆ ಪಟ್ಟ ಕಟ್ಟಿ ಪಾಂಡವರು ಸ್ವರ್ಗಾರೋಹಣಕ್ಕೆ ಹೊರಟುಹೋದರು. ಇವನೂ ಹುಟ್ಟುವ ಮೊದಲೇ ಸಾಯಬೇಕಿತ್ತು. ಅಶ್ವತ್ಥಾಮನ ಬ್ರಹ್ಮಾಸ್ತ್ರಕ್ಕೆ ತುತ್ತಾಗಿದ್ದ. ಆದರೆ ಕೃಷ್ಣನ ಹಸ್ತಕ್ಷೇಪದಿಂದ ಬದುಕಿದ. ಹರಿಭಕ್ತ ಪರೀಕ್ಷಿತ ಹಲವಾರು ವರ್ಷ ಸೊಗಸಾದ ಆಡಳಿತ ನಡೆಸಿದ. ಆಗಷ್ಟೇ ದ್ವಾಪರ ಮುಗಿದು, ಕಲಿ ಕಾಲೂರಲು ಹವಣಿಸುತ್ತಿದ್ದ. ಆದರೆ ಧರ್ಮರಾಯನಂತೆಯೇ ಪರೀಕ್ಷಿತನೂ ಕಲಿಯನ್ನು ಭೂಮಿಯ ಮೇಲೆ ಕಾಲಿಡದಂತೆ ಗದರಿಸಿ ಆಚೆ ಇಟ್ಟಿದ್ದ.

ಒಮ್ಮೆ ಇವನು ಬೇಟೆಗೆ ಕಾಡಿಗೆ ಹೋದ. ಸುತ್ತಾಡಿ ಬಳಲಿ, ಶಮೀಕರೆಂಬ ಮುನಿಯ ಆಶ್ರಮದ ಹತ್ತಿರ ಬಂದ. ಧ್ಯಾನದಲ್ಲಿದ್ದ ಮುನಿ ರಾಜ ಬಂದದ್ದನ್ನು ಗಮನಿಸಲಿಲ್ಲ. ಪರೀಕ್ಷಿತನಿಗೆ ಅವಮಾನವೆನಿಸಿತು, ವಿವೇಕ ಕೈಕೊಟ್ಟಿತು. ಅವಿವೇಕವೇ ನಾಶದ ಮೂಲ. ಕೋಪ ಬಂತು. ಅಲ್ಲಿಯೇ ಸತ್ತು ಬಿದ್ದಿದ್ದ ಒಂದು ಹಾವನ್ನು ತಂದು ''ರಾಜ ಬಂದರೂ ಸತ್ತಂತೆ ಸುಮ್ಮನಿರುವ ನಿನಗೆ ಸತ್ತ ಸರ್ಪವೇ ಸಮ್ಮಾನ'' ಎಂದು ಮುನಿಯ ಕೊರಳಿಗೆ ಹಾಕಿ ಹೊರಟುಹೋದ. ಸ್ವಲ್ಪ ಹೊತ್ತಿನಲ್ಲಿ ಮುನಿಯ ಮಗ ಶೃಂಗಿ ಅಲ್ಲಿಗೆ ಬಂದು ನೋಡಿದ. ತಂದೆಯ ಕೊರಳಲ್ಲಿ ಹಾವು ನೋಡಿ ಕ್ರೋಧವಶನಾದ. ''ನನ್ನ ತಂದೆಯ



ಕೊರಳಿಗೆ ಸತ್ತ ಹಾವನ್ನು ಹಾಕಿ ಅಪಮಾನ ಮಾಡಿದವನು ಇಂದಿನಿಂದ ಏಳು ದಿನಗಳೊಳಗಾಗಿ ತಕ್ಷಕ ಸರ್ಪ ಕಚ್ಚಿ ಸಾಯಲಿ'' ಎಂದು ಶಾಪ ನೀಡಿದ. ಎಚ್ಚರಗೊಂಡ ಶಮೀಕರಿಗೆ ಅನಾಹುತದ ಅರಿವಾಯಿತು. ಪರೀಕ್ಷಿತನ ಅವಿವೇಕಕ್ಕೂ ಮಗನ ದುಡುಕಿಗೂ ಬೇಸರಿಸಿದರು. ಹೀಗೊಂದು ಶಾಪ ಬಿದ್ದಿದೆ ಎಂಬ ವಾರ್ತೆಯನ್ನು ರಾಜನಿಗೆ ಕಳುಹಿಸಿದ.

ಈಗ ಪರೀಕ್ಷಿತನಿಗೆ ನಿಶ್ಚಿತವಾದ ಸಾವನ್ನು ಗೆಲ್ಲುವ ಹಠ ಮೂಡಿತು. ಸಾವು ಹೇಗೆ ಬಳಿ ಬರುವುದೋ ನೋಡೋಣ ಎಂಬ ಹಠವೂ ಮೂಡಿತು. ಸಮುದ್ರದ ನಡುವೆ ಒಂದು ಎತ್ತರವಾದ ಸ್ತಂಭವನ್ನು ರಚಿಸಿ, ಅದರ ಮೇಲುಗಡೆ ರಾಜಭವನ ಕಟ್ಟಿಸಿ, ಸುತ್ತಲೂ ಬಿಚ್ಚುಗತ್ತಿಯ ಭಟರ ಕಾವಲು ಇಟ್ಟು, ತಾನು ಭವನದೊಳಗೆ ಬಚ್ಚಿಟ್ಟುಕೊಂಡ. ಸರ್ಪಗಳು ಸಮುದ್ರದ ಉಪ್ಪು ನೀರಿನಲ್ಲಿ ಬರಲಾರವು, ಬಂದರೂ ಭಟರು ಕೊಲ್ಲುತ್ತಾರೆ ಎಂಬ ಯೋಚನೆ. ಆದರೆ ಸರ್ಪರಾಜ ತಕ್ಷಕನಿಗೆ ಋಷಿಗಳ ಶಾಪವನ್ನು ಈಡೇರಿಸಲೇಬೇಕಾದ ವಿಧಿಯಿತ್ತು. ಅವನು ಪರೀಕ್ಷಿತನನ್ನು ಕಾಣಲು ಬರುವ ಋಷಿಗಳ ಗುಂಪಿನಲ್ಲಿ, ಅವರು ತಂದ ಹಣ್ಣುಹಂಪಲಿನಲ್ಲಿ ಒಂದು ಹುಳವಾಗಿ ಸೇರಿಕೊಂಡ. ಪರೀಕ್ಷಿತ ಅರಮನೆಯಲ್ಲಿ ಒಂಟಿಯಾಗಿದ್ದ. ಹುಳ ಹಣ್ಣಿನಿಂದ ಹೊರಬಂದು ಬೃಹದಾಕಾರವಾಗಿ ಬೆಳೆದು ಹೆಡೆ ತೆರೆದ. ಕೊನೆ ಬಂತೆಂದು ಪರೀಕ್ಷಿತನಿಗೆ ಅರ್ಥವಾಯಿತು. ಸಾವನ್ನು ತೆರೆದ ಕೈಗಳಿಂದ ಸ್ವಾಗತಿಸಿದ.

ಇಲ್ಲಿಗೆ ಶಾಪದ ಸರಣಿ ಮುಗಿಯಿತು ಎಂದುಕೊಂಡಿರಾ? ಇಲ್ಲ. ಮುಂದೆ ಪರೀಕ್ಷಿತನ ಮಗ ಜನಮೇಜಯ ರಾಜನಾದ. ''ನಿನ್ನ ತಂದೆಯ ಮರಣಕ್ಕೆ ಕಾರಣನಾದವನು ತಕ್ಷಕ. ಅವನು ಸರ್ಪ. ಸರ್ಪಗಳಿಗೆ ಕೃತಜ್ಞತೆಯಿಲ್ಲ, ಅವು ಕ್ಷುದ್ರಜೀವಿಗಳು. ಅವನ್ನು ಬಿಡಬೇಡ'' ಎಂದು ಯಾರೋ ಅವನಿಗೆ ಚಾಡಿ ಹೇಳಿದರು. ಅವನು ಸಿಟ್ಟಿನಿಂದ, ಸರ್ಪಕುಲದ ಮೇಲೆಯೇ ಸೇಡು ತೀರಿಸಿಕೊಳ್ಳಲು ಮುಂದಾದ. ಸರ್ಪಯಜ್ಞವನ್ನು ಸಂಕಲ್ಪಿಸಿ, ಅದಕ್ಕೆ ಸೂಕ್ತ ಋತ್ವಿಜರನ್ನು ಕರೆಸಿ ಆರಂಭಿಸಿಯೇಬಿಟ್ಟ. ಇವನು ಆರಂಭಿಸಿದ ಯಜ್ಞಕ್ಕೆ ಸರ್ಪಗಳು, ನಾಗಗಳು ತಾವಾಗಿ ಬಂದು ತುಪತುಪನೆ ಯಜ್ಞಕುಂಡಕ್ಕೆ ಬಿದ್ದು ಬೆಂದುಹೋದವು. ಸರ್ಪಗಳು ಹೀಗೆ ಆಹುತಿಯಾಗಲು ಕಾರಣವೇನು? ಅದರ ಹಿನ್ನೆಲೆಯಲ್ಲೂ ಒಂದು ಶಾಪದ ಕತೆಯಿದೆ. ಕದ್ರು ಹಾಗೂ ವಿನತೆಯರು ಮುನಿ ಕಶ್ಯಪರ ಪತ್ನಿಯರು. ಕದ್ರು ಸರ್ಪಗಳ ತಾಯಿಯಾದರೆ, ವಿನತೆಯ ಮಗ ಗರುಡ. ಒಮ್ಮೆ ಕದ್ರು ಮತ್ತು ವಿನತೆಯರ ನಡುವೆ ಇಂದ್ರನ ಕುದುರೆಯಾದ ಉಚ್ಚೈಶ್ರವಸ್ಸಿನ ಬಾಲದ ಬಣ್ಣದ ಬಗ್ಗೆ ತಗಾದೆಯಾಯಿತು. ಅದು ಸಂಪೂರ್ಣವಾಗಿ ಬಿಳಿಯೇ. ವಿನತೆ ಹಾಗೇ ಹೇಳಿದಳು. ಆದರೆ ಕದ್ರು ಅದು ಕಪ್ಪು ಎಂದು ಹಠ ಹಿಡಿದಳು. ಪಂಥ ಉಂಟಾಯಿತು. ಪಂಥದಲ್ಲಿ ಸೋತವರು ಇನ್ನೊಬ್ಬರಿಗೆ ಗುಲಾಮರಾಗಬೇಕು. ಕದ್ರು ತನ್ನ ಮಕ್ಕಳಾದ ಸರ್ಪಗಳನ್ನು ಕರೆದು ಕುದುರೆಯ ಬಾಲದಲ್ಲಿ ನೇತಾಡಿ ಅದನ್ನು ಕಪ್ಪಾಗಿ ಕಾಣಿಸಲು ಆದೇಶಿಸಿದಳು. ಸರ್ಪಗಳು ಒಪ್ಪಲಿಲ್ಲ. ಕದ್ರು ಅವರೆಲ್ಲರಿಗೂ, ಜನಮೇಜಯನ ಸರ್ಪಯಾಗದಲ್ಲಿ ಸುಟ್ಟುಹೋಗುವಂತೆ ಶಪಿಸಿದಳು.

ಇಷ್ಟಕ್ಕೂ ಶಾಪ ಎಂದರೇನು? ಹಾಗೊಂದು ನಿಜಕ್ಕೂ ಉಂಟೇ ಎಂಬ ವಿಚಾರ ಎತ್ತಿಕೊಂಡು ತರ್ಕಕ್ಕೆ ಹೊರಟರೆ ನಾವು ತುದಿ ಮುಟ್ಟಲಾರೆವು. ನೊಂದ ಹೃದಯದ ಸಿಟ್ಟಿನ ಮಾತೇ ಶಾಪ ಎಂದು ಬೇಕಿದ್ದರೆ ಸರಳವಾಗಿ ಹೇಳಿಬಿಡಬಹುದು. ಮೈಸೂರು ಅರಸರ ಸಂಬಂಧವಾಗಿ ಒಂದು ಶಾಪದ ಕತೆ ಹೇಳುತ್ತಾರೆ. ಅಲಮೇಲಮ್ಮನ ಶಾಪದ ಫಲ ಇಂದಿಗೂ ಕಾಣಸಿಗುತ್ತದೆ ಎನ್ನುತ್ತಾರೆ. ಮೈಸೂರು ಅರಸು ವಂಶದ ಕುಡಿಗಳಲ್ಲಿ ಯಾರಿಗೂ ಮಕ್ಕಳಿಲ್ಲ ಎನ್ನುವುದನ್ನೂ, ದತ್ತು ತೆಗೆದುಕೊಂಡವರಿಗೆ ಮಾತ್ರ ಮಕ್ಕಳಾಗಿದೆ ಎನ್ನುವುದನ್ನೂ ಆಧಾರವಾಗಿ ಒದಗಿಸುತ್ತಾರೆ. ತನ್ನ ಮೇಲೆ ಒಂದು ಶಾಪವಿದೆ ಎಂದು ಪ್ರತಿ ಮನುಷ್ಯನೂ ನಂಬುತ್ತಾನೆ. 'ನೀನು ಉದ್ಧಾರ ಆಗಲ್ಲ', 'ನೀನು ಚೆನ್ನಾಗಿಲ್ಲ', 'ನೀನು ನಾಶ ಆಗ್ತೀಯ', 'ನಿನಗೆ ಇಂಗ್ಲಿಷ್ ಬರೋಲ್ಲ' ಹೀಗೆಲ್ಲ ಈ ಶಾಪಗಳು. ಇವು ತಂದೆ ತಾಯಿಯಿಂದಲೋ, ಶಿಕ್ಷಕರಿಂದಲೋ ಬಂದಿರುತ್ತವೆ. ಪ್ರತಿಯೊಬ್ಬನೂ ಅದನ್ನು ಮೀರಲೂ ಹೇಗೆ ಹೇಗೋ ಯತ್ನಿಸುತ್ತಾ ಇರುತ್ತಾನೆ. ನಮ್ಮ ಬದುಕಿನಲ್ಲೂ ಇಂಥ ಶಾಪದ ಮಹಾಭಾರತಗಳಿರುತ್ತವೆ. ಅಲ್ಲಿರುವ ಇನ್ನಷ್ಟು ಶಾಪದ ಕತೆಗಳನ್ನು ಇನ್ನೊಮ್ಮೆ ನೋಡೋಣ.

ರಸಗೊಬ್ಬರರಹಿತ ಕೃಷಿಯೇ ಸಾವಯವ ಬದುಕಿನ ಆಶಾಕಿರಣ!

ಗಂಟಾಘೋಷ
ಗುರುರಾಜ್ ಗಂಟಿಹೊಳೆ
vveditoped@gmail.com

ಮೊದಲೆಲ್ಲ ಊಟ ಯಾವುದಾದರೇನು, ಎಲ್ಲಿ ಮಾಡಿದರೇನು ಎಂಬಂತೆ ರುಚಿ ಕಟ್ಟಾಗಿರುತ್ತಿತ್ತು. ಹಿರಿಯರನ್ನು ಕೇಳಿದರೆ, ಕಳೆದುಹೋಗುತ್ತಿರುವ ನೈಸರ್ಗಿಕ ವಿಧಾನವಾಗಿದ್ದ ಸೌದೆಒಲೆ ಕಡೆಗೆ ಬೊಟ್ಟು ಮಾಡುತ್ತಾರೆ. ಇತ್ತೀಚೆಗೆ ಅಡುಗೆ ಮಾಡುವ ವಿಧಾನಗಳು, ಧವಸ–ಧಾನ್ಯಗಳಿಂದ ಹಿಡಿದು ನಿತ್ಯ ಅಡುಗೆಗೆ ಬಳಕೆಯಾಗುವ ಪದಾರ್ಥಗಳೇ ಬದಲಾಗಿಬಿಟ್ಟಿವೆ ಎನ್ನುತ್ತಾರೆ. ಹೌದು ಎನ್ನದೆ ಬೇರೆ ದಾರಿಯಿಲ್ಲ. ಕಾರಣ, ನಾವು ಬೆಳೆಯುತ್ತಿರುವ ಬೆಳೆಗಳು ಮತ್ತು ಅವುಗಳಿಗೆ ಬಳಸುತ್ತಿರುವ ರಸಗೊಬ್ಬರಗಳು!

ಕೇವಲ 20–30 ವರ್ಷಗಳ ಹಿಂದೆ ಇದ್ದಂಥ ಮತ್ತು ಇಂದಿನ ಜೋಳದ ಕಾಳಿನ ಅಳತೆ, ಗುಣಮಟ್ಟ, ತೂಕದ ಬಗ್ಗೆ ಗಮನಹರಿಸಿ. ಇದು ಕೇವಲ ಜೋಳದ ಕಾಳಿನ ಕತೆಯಲ್ಲ. ಬಹುತೇಕ ಭಾರತದ ಎಲ್ಲ ರಾಜ್ಯಗಳಲ್ಲಿದ್ದ ಹಳೆಯ ಗ್ರಾಮೀಣ ಪದ್ಧತಿ, ದೇಸೀ ತಳಿಗಳನ್ನು ಕಳೆದುಕೊಂಡು ಸುಧಾರಿತ ತಳಿಗಳ ಹೆಸರಿನಲ್ಲಿ ಯಾವ ಯಾವ ಬೀಜ, ಸಸ್ಯ, ನಾಟಿಗಳನ್ನು ಬೆಳೆಯುತ್ತಿದ್ದೇವೆಂಬುದನ್ನೇ ಅರಿಯದ ಸ್ಥಿತಿಗೆ ಬಂದುನಿಂತಿದ್ದೇವೆ.

ಪ್ರತಿ ಧವಸ–ಧಾನ್ಯಕ್ಕೂ ಅದರದ್ದೇ ಆದ ಜೀವತಂತು (DNA Structure) ಇರುತ್ತದೆ. ಇದು ಆಯಾ ಭೌಗೋಳಿಕ ಪ್ರದೇಶಕ್ಕನುಗುಣವಾಗಿ, ನೂರಾರು ವರ್ಷಗಳಿಂದ ರೂಪುಗೊಂಡು, ಹದಹೊಂದಿದ ಮೇಲೆ, ಸ್ಥಳೀಯರಿಗೆ ನಿತ್ಯ ಆಹಾರವಾಗಿ ಹೊಂದಿಕೆಯಾಗಿರುತ್ತದೆ. ಇದೆಲ್ಲವನ್ನು ಮೀರಿ, ವಿದೇಶಿ ತಳಿಗಳನ್ನು, ಬೀಜಗಳನ್ನು ರೈತರಿಗೆ ಪ್ರಾಯೋಗಿಕವಾಗಿ ಹಂಚಿದ್ದಲ್ಲದೆ, ಅವನ್ನು ಬೆಳೆಯಲು ಉಚಿತ ಯೋಜನೆಗಳ ಮೂಲಕ ಪ್ರೋತ್ಸಾಹಿಸಿದಾಗ, ಸಹಜವಾಗೇ ರೈತರು ಬೆಳೆಯತೊಡಗುತ್ತಾರೆ. ದಶಕಗಳ ಹಿಂದೆ ಇಂಥ ಬೆಳೆಗಳಿಗೆ ಅನುಗುಣವಾಗಿ, ಮತ್ತದೇ ವಿದೇಶಿ ಕಂಪನಿಗಳ ಮೂಲಕ ವಿವಿಧ ಬಗೆಯ ರಾಸಾಯನಿಕಗಳನ್ನು ಸಿಂಪಡಿಸಲು ಆಗ್ರಹಿಸಲಾಗುತ್ತಿತ್ತು. ಇಂಥ ಪ್ರಕ್ರಿಯೆ ಸದ್ದಿಲ್ಲದೆ ಕನಿಷ್ಠ 30 ವರ್ಷ ನಡೆದರೂ ಸಾಕು, ಸ್ಥಳೀಯವಾಗಿ ಬೆಳೆಯುತ್ತಿದ್ದ ಮೂಲಬೆಳೆ ಸಂಪ್ರದಾಯವನ್ನು ಪೂರ್ತಿ ಬದಲಾಯಿಸಿಬಿಡಬಹುದು.

ಅಂದು ಬೆಳೆ ಬೆಳೆಯಲು ರೈತರಿಗೆ ಗೊಬ್ಬರದ ಅವಶ್ಯಕತೆಯೇ ಇರಲಿಲ್ಲ. ಇಂದು ಗೊಬ್ಬರವಿಲ್ಲದೆ ಗದ್ದೆ–ತೋಟಗಳಿಗೆ ಕಾಲಿಡುವಂತಿಲ್ಲ. ಕಳೆದ 2–3 ದಿನಗಳಿಂದ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಕಂಡುಬರುತ್ತಿರುವ ಪರಿಸ್ಥಿತಿಯೆಂದರೆ, ರೈತರಿಗೆ ರಸಗೊಬ್ಬರ ಸಿಗುತ್ತಿಲ್ಲ. ಬೇಡಿಕೆಗನುಗುಣವಾಗಿ ರಾಜ್ಯಮಟ್ಟದಿಂದ ಹಿಡಿದು ಜಿಲ್ಲಾ, ತಾಲೂಕು ಮಟ್ಟದವರೆಗೆ ಸಮರ್ಪಕವಾಗಿ ರಸಗೊಬ್ಬರ ಸಿಗದೆ, ರೈತರು ಕಂಗಾಲಾಗಿ ಪ್ರತಿಭಟನೆಗೆ ಇಳಿದಿದ್ದಾರೆ. ರೈತರು ರಸಗೊಬ್ಬರವಿಲ್ಲದೆ ಗದ್ದೆಗಳಿಗೆ ಕಾಲಿಡುವುದಿಲ್ಲವೇನೋ ಎಂಬ ವಾತಾವರಣ ನಿರ್ಮಾಣವಾಗಿದೆ.

ದೇಶದಲ್ಲಿ ಒಟ್ಟು 150 ಮಿಲಿಯನ್ ರೈತರಿದ್ದು ಇದರಲ್ಲಿ ಭೂರಹಿತರೂ ಸೇರಿದ್ದಾರೆ. ಇನ್ನು ಕರ್ನಾಟಕದಲ್ಲಿ ಒಟ್ಟು 31,679,045 ಎಕರೆ ಕೃಷಿಭೂಮಿಯಿದ್ದು, 16 ಲಕ್ಷ ಭೂರಹಿತ ಮತ್ತು 78 ಲಕ್ಷ ಭೂಮಿ ಹೊಂದಿದ ರೈತರಿದ್ದಾರೆಂದು ದಾಖಲೆಗಳು ಹೇಳುತ್ತವೆ. ಸಾವಯವ, ಸಹಜಕೃಷಿ ಎಂಬಂತೆ ತಮಗೆ ತಿಳಿದ ಸ್ಥಳೀಯ ಪದ್ಧತಿಗಳಲ್ಲಿ ಕೃಷಿ ಮಾಡಿಕೊಂಡಿದ್ದ ರೈತರಿಗೆ 1906ರಲ್ಲಿ SSP (Single Super Phosphate) ಎಂಬ 65 ಯುನಿಟ್ ಸಾಮರ್ಥ್ಯದ ರಸಗೊಬ್ಬರ ಕಾರ್ಖಾನೆಯನ್ನು ತಮಿಳುನಾಡಿನ ರಾಣಿಪೇಟೆ ಎಂಬಲ್ಲಿ ಸ್ಥಾಪಿಸಿ, ಮೊದಲಬಾರಿಗೆ ರಸಗೊಬ್ಬರವನ್ನು ಪರಿಚಯಿಸಲಾಯಿತು. ಇಲ್ಲಿಂದ ಭಾರತೀಯ ಕೃಷಿ ಪದ್ಧತಿಯೊಳಗೆ ಪ್ರವೇಶಿಸಿದ ರಸಗೊಬ್ಬರ, ಮುಂದೆ 1933ರಲ್ಲಿ Ammonium Sulphate (AS) 10 ಯುನಿಟ್‌ಗಳಲ್ಲಿ, 1959ರಲ್ಲಿ ಯೂರಿಯಾ, ASN, AC ಮುಂತಾದವು 29 ಯುನಿಟ್‌ಗಳಲ್ಲಿ ಆರಂಭಗೊಂಡವು. ದೇಶದ ಮೊದಲ ರಸಗೊಬ್ಬರ ಕಾರ್ಖಾನೆ Fertilizer Corporation of India (FCI) 1951ರಲ್ಲಿ ಜಾರ್ಖಂಡ್ ರಾಜ್ಯದ ಸಿಂದ್ರಿಯಲ್ಲಿ ಆರಂಭಗೊಂಡಿತು.

ದೇಶದಲ್ಲಿ ಹಸಿರುಕ್ರಾಂತಿ ಆರಂಭಗೊಂಡು, ಎಂ.ಎಸ್. ಸ್ವಾಮಿನಾಥನ್ ನೇತೃತ್ವದಲ್ಲಿ ಕೃಷಿಯಲ್ಲಿ ವಿನೂತನ ಪ್ರಯತ್ನಗಳಾದವು. ಹೆಚ್ಚು ಇಳುವರಿಗಾಗಿ ರಸಗೊಬ್ಬರಗಳೂ ದೊರೆಯುತ್ತಿದ್ದುದರಿಂದ ಬೆಳೆಯಲ್ಲಿ ಬದಲಾವಣೆ ಕಾಣುವಂತಾಯಿತು. ಆಗ್ರೋ–ಕೆಮಿಕಲ್ ಇಂಡಸ್ಟ್ರಿಯನ್ನು ದೇಶದಲ್ಲಿ ಶಾಶ್ವತ ನೆಲೆಕಾಣಲು ಕೆಕಿ ಹಾರ್ಮುಸ್ಜಿ ಘಾರ್ಡಾ ಅವರ ಪ್ರಯತ್ನ ಕಾರಣವಾದ್ದರಿಂದ, ಇವರನ್ನು ಭಾರತದಲ್ಲಿ Father of Fertilizer ಎಂದೇ ಕರೆಯುತ್ತಾರೆ. ಪ್ರಸ್ತುತ, DAP, NPK ಸೇರಿದಂತೆ ವಿವಿಧ ರಸಗೊಬ್ಬರ ಉತ್ಪಾದನೆಯಲ್ಲಿ IFFCO (Indian Farmers Fertilizers Corporative Limited) ಸಂಸ್ಥೆಯು ದೇಶಾದ್ಯಂತ ಮುಂಚೂಣಿಯಲ್ಲಿದೆ. RCF, NFL, FACT, BVFCL, HFCL, PDIL ಸೇರಿದಂತೆ ಹತ್ತಾರು ಖಾಸಗಿ ಕಂಪನಿಗಳು ರಸಗೊಬ್ಬರ ಉತ್ಪಾದನೆಯಲ್ಲಿ ತೊಡಗಿವೆ.

ಇಡೀ ದೇಶದಲ್ಲೇ ಪಂಜಾಬ್ ರಾಜ್ಯವು ಪ್ರತಿ ಹೆಕ್ಟೇರ್‌ಗೆ 250 ಕೆ.ಜಿ. (ದೇಶದ ಸರಾಸರಿ ಪ್ರತಿ ಹೆಕ್ಟೇರ್‌ಗೆ 140 ಕೆ.ಜಿ.) ರಸಗೊಬ್ಬರವನ್ನು ಬಳಸುತ್ತಿದೆ. ಪೊಟ್ಯಾಷ್ ಎಂಬ ರಸಗೊಬ್ಬರವನ್ನು ಭಾರತದಲ್ಲಿ ತಯಾರಿಸಲು ಅನುಮತಿ ಇರುವುದಿಲ್ಲವಾದ್ದರಿಂದ ಆಮದು ಮಾಡಿಕೊಳ್ಳಲಾಗುತ್ತಿದೆ. ಇನ್ನು, ಯೂರಿಯಾವನ್ನು ರಸಗೊಬ್ಬರಗಳ ರಾಜನೆಂದು ರೈತರು, ಬಳಕೆದಾರರು ಪರಿಗಣಿಸಿದ್ದಾರೆ. ದೇಶದಲ್ಲಿ, 1950ರಿಂದಲೂ ರಸಗೊಬ್ಬರಗಳು ಯಥೇಚ್ಛವಾಗಿ ಬಳಕೆಯಲ್ಲಿದ್ದರೂ, 35 ವರ್ಷಗಳ ಬಳಿಕ ಇವುಗಳನ್ನು ನಿಯಂತ್ರಿಸುವ ಕಾನೂನು ನಿಯಮಗಳನ್ನು– The Fertilizer (Control) Order–1985ರಲ್ಲಿ ಜಾರಿಗೆ ತರಲಾಗುತ್ತದೆ. ರಸಗೊಬ್ಬರಗಳು (Fertilizers) ಮತ್ತು ಕೀಟನಾಶಕಗಳಿಗೆ (Pesticides) ಬಹಳ ವ್ಯತ್ಯಾಸವೇನಿಲ್ಲ. ಎರಡರ ಬಳಕೆಯೂ ಮಣ್ಣಿನ ಫಲವತ್ತತೆಗೆ ಹಾನಿಕಾರಕ. ರಸಗೊಬ್ಬರಗಳು ಇಳುವರಿ ಬರಲು ಬಳಕೆಯಾಗುತ್ತಿದ್ದರೆ, ಕೀಟನಾಶಕಗಳು ಮಾತ್ರ ನೆಲದ ಜೀವಜಂತುಗಳನ್ನು, ಎರೆಹುಳುಗಳಂಥ ಕೃಷಿಗೆ ಸಹಕಾರಿಯಾಗುವ ಎಲ್ಲ ವಿಧದ ಜೀವಾಣು–ಕೀಟಾಣುಗಳನ್ನು ಕೊಲ್ಲುತ್ತವೆ. ದೇಶದಲ್ಲಿ ಅತಿಹೆಚ್ಚು ಕೀಟನಾಶಕದ ಬಳಕೆಯಲ್ಲಿ ಮಹಾರಾಷ್ಟ್ರವು ಮುಂಚೂಣಿಯಲ್ಲಿದ್ದು 12 ಸಾವಿರ ಟನ್ ವಾರ್ಷಿಕ ಬಳಕೆದಾರರನ್ನು ಹೊಂದಿದೆ. ಉತ್ತರ ಪ್ರದೇಶ 7 ಸಾವಿರ, ಪಂಜಾಬ್ 6 ಸಾವಿರ, ತೆಲಂಗಾಣ 5 ಸಾವಿರ, ಹರಿಯಾಣ 4 ಸಾವಿರ ಮತ್ತು ಕರ್ನಾಟಕ 2 ಸಾವಿರ ಟನ್‌ಳಷ್ಟು ಬಳಕೆ ಮಾಡುತ್ತಿವೆ ಎನ್ನಲಾಗಿದೆ. ಇತರೆ ರಾಜ್ಯಗಳಿಗೆ ಹೋಲಿಸಿದಲ್ಲಿ ಕರ್ನಾಟಕದ ರೈತರು ಕಡಿಮೆ ಕೀಟನಾಶಕವನ್ನು ಬಳಸುತ್ತಿದ್ದಾರೆ. ಇದು ಸಾವಯವಕ್ಕೆ ಅತ್ಯಂತ ಪೂರಕ ಸಂದರ್ಭವೆನ್ನಬಹುದು.

ಕೀಟನಾಶಕ, ಕಳೆನಾಶಕ (Herbicide), ಶಿಲೀಂಧ್ರನಾಶಕ (Fungicide), ಇಲಿ, ಹೆಗ್ಗಣನಾಶಕ (Rodenticide) ಮತ್ತು ನೆಲದೊಳಗಿನ ಹುಳುನಾಶಕ (Nematicide) ಗಳನ್ನು ಕೊಲ್ಲುವಂಥ 5 ವಿಧಗಳಲ್ಲಿ ಪೆಸ್ಟಿಸೈಡ್‌ಗಳು ದೊರೆಯುತ್ತವೆ. ಇವುಗಳ ಬದಲಾಗಿ, ಜೈವಿಕ ಕೃಷಿ (Organic Farming), ಜೈವಿಕ ನಾಶಕ (Bio-Pesticides) ಗಳನ್ನು ಹೆಚ್ಚು ಪ್ರಚಾರಿಸಿ, ಪ್ರೋತ್ಸಾಹಿಸಿ ಜಾರಿಗೆ ತರುವ ಹೊಣೆ ಕೃಷಿ ಇಲಾಖೆ ಮತ್ತು ಸರಕಾರದ್ದು. ಇದಕ್ಕಾಗಿ, ನಾವು ಇತರೆ ರಾಜ್ಯಗಳನ್ನು ಮಾದರಿಯಾಗಿ ಪರಿಗಣಿಸಬೇಕು. ಇಂಥ ವಿಪರೀತ ಬಳಕೆಯನ್ನು ತಡೆಗಟ್ಟಲು ನರೇಂದ್ರ ಮೋದಿ ಸರಕಾರವು 2010ರಲ್ಲಿ NBS (Nutrient Based Subsidy) ಯೋಜನೆಯನ್ನು ಜಾರಿಗೆ ತಂದಿತು. ಮಣ್ಣಿನ ರಕ್ಷಣೆ ಇತ್ಯಾದಿ ಗಮನದಲ್ಲಿರಿಸಿಕೊಂಡು ಪೋಷಕಾಂಶದ ಅಗತ್ಯಕ್ಕೆ ತಕ್ಕಂತೆ ನಿಗದಿತ ಪ್ರಮಾಣದಲ್ಲಿ ಮತ್ತು ಕೇಂದ್ರ ಸರಕಾರದ ಸಬ್ಸಿಡಿಯಲ್ಲಿ ರೈತರಿಗೆ ತಲುಪಿಸುವ ಯೋಜನೆ ಇದಾಗಿದೆ.

ರಾಜ್ಯಕ್ಕೆ ಸುಮಾರು 6.5 ಲಕ್ಷ ಮೆಟ್ರಿಕ್ ಟನ್‌ಗಳಷ್ಟು ರಸಗೊಬ್ಬರದ ತುರ್ತು ಅಗತ್ಯವಿದೆ ಎನ್ನಲಾಗಿದೆ. ಈಗಾಗಲೇ ಮಾನ್ಸೂನ್ ರಾಜ್ಯವನ್ನು ಪ್ರವೇಶಿಸಿದ್ದು, ಈ ಬಾರಿ ಹೆಚ್ಚು ಆರ್ದ್ರವಾಗಿರಲಿದೆ ಎಂದೆಲ್ಲ ವರದಿಗಳಿವೆ. ಇದನ್ನರಿತು, ಕೇಂದ್ರ ಸರಕಾರವು 7 ಲಕ್ಷ ಮೆಟ್ರಿಕ್ ಟನ್‌ಗಳಷ್ಟು ರಸಗೊಬ್ಬರವನ್ನು ರಾಜ್ಯದ ರೈತರಿಗೆ ಸರಬರಾಜು ಮಾಡಿಯಾಗಿದೆ ಎನ್ನಲಾಗಿದೆ. ಇಷ್ಟಾಗಿಯೂ ಕೆಲವೆಡೆ ಕೃತಕ ಅಭಾವ ಸೃಷ್ಟಿಸಿ, ಬೇಡಿಕೆ ಹೆಚ್ಚುವಂತೆ ಮಾಡಿ ಅಧಿಕ ಬೆಲೆಗೆ ಮಾರುತ್ತಿರುವುದನ್ನು ತಡೆಯುವ ಹೊಣೆ ರಾಜ್ಯ ಸರಕಾರದ್ದಾಗಿದೆ. ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರು, ಕರ್ನಾಟಕ ಸರಕಾರವು ಖಾರೀಫ್ 2025ಕ್ಕೆ 6,30,000 ಮೆಟ್ರಿಕ್ ಟನ್ ಯೂರಿಯಾ ಬೇಡಿಕೆಯಿಟ್ಟಿದ್ದರೂ, ಕೇಂದ್ರವು ಈಗಾಗಲೇ 8,73,000 ಮೆಟ್ರಿಕ್ ಟನ್‌ನಷ್ಟು ಪೂರೈಸಿದ್ದು, ಇದು ಬೇಡಿಕೆಯನ್ನು ಮೀರಿಸಿದೆ ಮತ್ತು ರಾಜ್ಯದೊಳಗೆ ಈಗಾಗಲೇ 7,08,000 ಮೆಟ್ರಿಕ್ ಟನ್ ಯೂರಿಯಾ ಮಾರಾಟವಾಗಿದೆ ಎಂದಿದ್ದಾರೆ. ಮುಖ್ಯಮಂತ್ರಿಗಳು 2025 ಜುಲೈ 25ರಂದು, ಕೇಂದ್ರ ಸಚಿವ ಜೆ.ಪಿ. ನಡ್ಡಾ ಅವರಿಗೆ ಪತ್ರ ಬರೆದು, ಖಾರೀಫ್ ಹಂಗಾಮಿಗೆ ಒಟ್ಟು 11,17,000 ಮೆಟ್ರಿಕ್ ಟನ್ ಯೂರಿಯಾ ರಾಜ್ಯಕ್ಕೆ ಅಗತ್ಯವಾಗಿದೆ ಎನ್ನುವ ಮೂಲಕ ಇನ್ನೂ ಹೆಚ್ಚು ರಾಸಾಯನಿಕದ ಬಳಕೆಯಲ್ಲಿ ನಾವು ತೊಡಗುತ್ತಿದ್ದೇವೆ ಎಂಬುದನ್ನು ಸೂಚ್ಯವಾಗಿ ಹೇಳಿದಂತಾಗಿದೆ.

ರಸಗೊಬ್ಬರ ಮತ್ತು ಕೀಟನಾಶಕಗಳ ವಿಚಾರದಲ್ಲಿ ಕರ್ನಾಟಕ ಸರಕಾರವು ಸಿಕ್ಕಿಂ ರಾಜ್ಯದ ಮಾದರಿಯನ್ನು ಯಾಕೆ ಅನುಸರಿಸುತ್ತಿಲ್ಲವೆಂಬುದೇ ಸೋಜಿಗದ ಸಂಗತಿ. ಸಿಕ್ಕಿಂ ಯಾವುದೇ ರಾಸಾಯನಿಕ ಬಳಸದಂತೆ ತನ್ನ ಬೆಳೆಗಾರರಿಗೆ ಸಂಪೂರ್ಣ ನಿಷೇಧ ಹೇರಿದ್ದು, ನೈಸರ್ಗಿಕ, ಸಾವಯವ ಕೃಷಿ ಮೇಲೆ ಅವಲಂಬಿತವಾಗಿದೆ. India's First 100% Organic State ಎಂದು ಗುರುತಿಸಲ್ಪಟ್ಟಿದೆ. ಜಗತ್ತಿನ ಉತ್ತಮ ಸ್ಟೇಟ್ ಪಾಲಿಸಿಗಳಲ್ಲಿ ಒಂದಾಗಿದೆ ಎಂದು FAO (Food and Agriculture Organisation) ಸಂಸ್ಥೆಯು ಗೌರವಿಸಿದೆ.

ಸಾವಯವ ಗೊಬ್ಬರ ಬಳಕೆಯನ್ನು ಹೆಚ್ಚಿಸಿದಾಗ, ಮನೆ ಮತ್ತು ತೋಟದ ತ್ಯಾಜ್ಯಗಳಿಂದ ಮಾಡಲಾಗುವ ಹಗುರ ಗೊಬ್ಬರ (ಕಾಂಪೋಸ್ಟ್) ಮಣ್ಣಿಗೆ ಹಾರ್ಮೋನುಗಳಂತಾಗುತ್ತದೆ. ಜತೆಗೆ, ಮೇಣುಗೊಬ್ಬರವು (Vermi-compost) ಹುಳಗಳ ಸಹಾಯದಿಂದ ತಯಾರಾಗುವ ಅತ್ಯುತ್ತಮ ಸಾವಯವ ಗೊಬ್ಬರಗಳಲ್ಲಿ ಒಂದಾಗಿದೆ. ಗೋಮೂತ್ರ, ಗೋಮಯ, ಹುಲ್ಲು ಇತ್ಯಾದಿಯಿಂದ ತಯಾರಾದ ಗೊಬ್ಬರವೂ ಕೃಷಿಗೆ ಉತ್ತಮವಾಗಿದೆ. ಅಗತ್ಯವಿದ್ದಲ್ಲಿ ಕಡಿಮೆ ಹಾನಿಕಾರಕ ರಸಗೊಬ್ಬರ ಬಳಸಿ, ಮಣ್ಣುಪರೀಕ್ಷೆ ಆಧಾರಿತ ಸಾವಯವ ಗೊಬ್ಬರ, ಜೀವಾಣು, ಜೀವಾಮೃತ ಇತ್ಯಾದಿ ಬಳಸುತ್ತಿದ್ದರೆ, ಮಣ್ಣು ಶಕ್ತಿಯುತವಾಗುತ್ತ ಉತ್ತಮ ಇಳುವರಿಯತ್ತ ಸಾಗಬಲ್ಲದು. ರೈಜೋಬಿಯಂ, ಅಜೋಸ್ಪಿರಿಲ್ಲಮ್, ಅಜೋಟೋಬಾಕ್ಟರ್, ಫಾಸ್ಫೋಬ್ಯಾಕ್ಟೀರಿಯಾ, ಮೈಕರೋರೆಜಾ ಇತ್ಯಾದಿ ಜೀವಾಣುಗಳು ನೈಸರ್ಗಿಕವಾಗಿ ಪೋಷಕಗಳನ್ನು ಅಗತ್ಯಕ್ಕೆ ತಕ್ಕಂತೆ ಬಳಸುವಿಕೆಯಿಂದಾಗಿ ವಾತಾವರಣದಿಂದ ನೈಸರ್ಗಿಕವಾಗಿ ನೈಟ್ರೋಜನ್ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಕೂಡ ಉಂಟಾಗುತ್ತದೆ. ಮಿಶ್ರಬೆಳೆ ಪದ್ಧತಿ, ಹಸಿರುಗೊಬ್ಬರ (Green manure) ಬಳಕೆ, ಪ್ರೆಸಿಷನ್ ಕೃಷಿ ತಂತ್ರಜ್ಞಾನ, GPS ಆಧಾರಿತ ಮಣ್ಣಿನ ಪರೀಕ್ಷೆ, ಡ್ರಿಪ್ ಫರ್ಟಿಗೇಷನ್, ಕೃಷಿ ಮೊಬೈಲ್ ತಂತ್ರಾಂಶಗಳ ಮೂಲಕ ಅಗತ್ಯವಿರುವಷ್ಟು ಮಾತ್ರ ಗೊಬ್ಬರವನ್ನು ಬಳಸಬಹುದು. ಬೆಳೆ ಕೊಯ್ಲು ಬಳಿಕ ಉಳಿದ ಹಿಂಡು ಅಥವಾ ಎಲೆಗಳನ್ನು ಮಣ್ಣಿನ ಮೇಲೆ ಹಾಸುವುದರಿಂದ ಇದು ತೇವಾಂಶ ಕಾಯ್ದುಕೊಳ್ಳಲು ಸಹಾಯಕವಾಗುತ್ತದೆ. ಗೊಬ್ಬರ ಬೇಡಿಕೆಯನ್ನು ತಗ್ಗಿಸುವಂಥ ಮಲ್ಚಿಂಗ್ ಪದ್ಧತಿಯ (Mulching) ತರಬೇತಿಯನ್ನು ಕೃಷಿಕರಿಗೆ ನೀಡಿ ಜಾಗೃತಿ ಮೂಡಿಸಬೇಕಿದೆ.

ಸಾವಯವ ಕೃಷಿಯನ್ನು ಬೆಂಬಲಿಸುವಂಥ ಅನೇಕ ಯೋಜನೆಗಳು ಜಾರಿಯಲ್ಲಿದ್ದು, ಪಾರಂಪರ್ಯ ಕೃಷಿ ವಿಕಾಸ ಯೋಜನೆ (PKVY), ಭಾರತ್ ಸಾವಯವ ಮಿಷನ್, ಕೃಷಿಕ ರತ್ನ/ಮಿಲೆಟ್ ಮಿಷನ್ ಯೋಜನೆಗಳ ಸದುಪಯೋಗ ಪಡೆಯಬಹುದಾಗಿದೆ. ಆರಂಭಿಕ ಅವಧಿಯಲ್ಲಿ ಉತ್ಪಾದನೆಯ ಇಳಿಕೆಗೆ ರೈತರು ಭಯ ಪಡುತ್ತಾರೆಯಾದ್ದರಿಂದ ಸಾವಯವ ಕೃಷಿಗೆ ಇದು ಪ್ರಮುಖ ಅಡಚಣೆಯಾಗಿದೆ. ಈ ಹಂತದಲ್ಲಿ ರಾಜ್ಯ ಸರಕಾರ ಇವರ ಬೆಂಬಲಕ್ಕೆ ನಿಲ್ಲಬೇಕಿದೆ. ಅಮೆರಿಕವು ಕೃಷಿ ಮತ್ತು ಹೈನುಗಾರಿಕೆಯಲ್ಲಿ ಪೂರ್ಣ ಹಿಡಿತ ಸಾಧಿಸಲು ಹೊಂಚುಹಾಕಿದ್ದನ್ನು ಮೋದಿ ಸರಕಾರ ನಿರಾಕರಿಸುವ ಮೂಲಕ ದೇಶಿ ಉತ್ಪನ್ನಕ್ಕೆ ಆದ್ಯತೆ ನೀಡಿದೆ. ಹಾಗಾಗಿಯೇ ಇಂದು ಶೇ.50ರಷ್ಟು ಸುಂಕವನ್ನು ಅಮೆರಿಕವು ಭಾರತದ ಮೇಲೆ ಹೇರಿದೆ. ಈ ಸಂಕಷ್ಟದ ಸಂದರ್ಭದಲ್ಲಿ ವಿದೇಶಿ ವಸ್ತುಗಳನ್ನು ಕಡಿಮೆ ಬಳಸುತ್ತ, ಆಂತರಿಕವಾಗಿ ಬಲಿಷ್ಠಗೊಳ್ಳೋಣ. ಕೃಷಿಯಲ್ಲೂ ಸ್ವದೇಶಿತನವನ್ನು ಹೆಚ್ಚು ಅಳವಡಿಸಿಕೊಳ್ಳೋಣ.

ರಸಗೊಬ್ಬರರಹಿತ ಸಾವಯವ ಕೃಷಿಯು ಭವಿಷ್ಯದ ಸಮೃದ್ಧ ಬದುಕಿಗೆ ದಾರಿ ತೋರಿಸುತ್ತದೆ. ಇದು ಮಣ್ಣಿನ ಆರೋಗ್ಯ, ನೀರಿನ ಶುದ್ಧತೆ, ಮಾನವ ಆರೋಗ್ಯ ಮತ್ತು ಪರಿಸರದ ಸಮತೋಲನದ ದೃಷ್ಟಿಯಿಂದ ಅನಿವಾರ್ಯವಾಗಿದೆ. ಸರಕಾರ, ವಿಜ್ಞಾನಿಗಳು, ರೈತರು ಮತ್ತು ಗ್ರಾಹಕರು ಜತೆಯಾಗಿದ್ದರೆ ಸಾವಯವ ಕೃಷಿ ಭಾರತದಲ್ಲಿ ತನ್ನ ವೈಭವ ಮೆರೆಯಬಲ್ಲದು.

ಕ್ರಿಯಾಲೋಪ
ಅರುಣ ಜೋಶಿ
vveditoped@gmail.com

ಮತಗಳ್ಳತನದ ಆರೋಪ: ಇದರಲ್ಲಿದೆ ಪೊಳ್ಳುತನ

ಬೆಂಗಳೂರು ಲೋಕಸಭಾ ಕ್ಷೇತ್ರವೊಂದರ ವ್ಯಾಪ್ತಿಯ ಪ್ರದೇಶದಲ್ಲಿನ ಮತಗಳ್ಳತನದ ಆರೋಪವು ಈ ವಾರ ದೇಶಾದ್ಯಂತ ದೊಡ್ಡ ಸುದ್ದಿಯಾಗಿದೆ. ಇದು ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಗೆ ಸವಾಲಾಗಿರುವ ಪೊಳ್ಳು ಆರೋಪವಾಗಿದೆ. ಇಲ್ಲಿ ನಾವು ಆರೋಪದ ಸತ್ಯಾಸತ್ಯತೆಯನ್ನು, ಅದರ ಪರಿಣಾಮಗಳನ್ನು ವ್ಯಕ್ತಿ ಮತ್ತು ಪಕ್ಷಗಳ ಅಭಿಮಾನದಿಂದ ಮೇಲೆದ್ದು ವಿಶ್ಲೇಷಿಸಬೇಕಾಗಿದೆ.

ಮುಕ್ತ ಸಾರ್ವತ್ರಿಕ ಚುನಾವಣೆಗಳೇ ಪ್ರಜಾಪ್ರಭುತ್ವ ವ್ಯವಸ್ಥೆಯ ಮೂಲ ಜೀವಾಳ. ಚುನಾವಣೆಯಲ್ಲಿ ಮತ ಚಲಾವಣೆಯ ಹಕ್ಕಿನ ಮೂಲಕವೇ 'ಪ್ರಜೆ'ಯು 'ಪ್ರಭು'ವಾಗುತ್ತಾನೆ. ಮುಕ್ತ ಚುನಾವಣೆಗಳು ನಡೆದಲ್ಲಿ 'ಜನತಾ ಜನಾರ್ದನ'ನ ತೀರ್ಪಿಗೆ ಬೆಲೆಯಿರುತ್ತದೆ, ಇಲ್ಲವಾದರೆ ಅದು ಪ್ರಜಾಪ್ರಭುತ್ವದ ಅಣಕವಾಗುತ್ತದೆ, ಅವ್ಯವಹಾರ ಮಾಡುವುದು ಅಧಿಕಾರದ ಹೆದ್ದಾರಿಯಾಗುತ್ತದೆ. ವಿಶ್ವದಲ್ಲಿಯೇ ಅತಿದೊಡ್ಡ ಮತ್ತು ಸ್ವಚ್ಛ ಪ್ರಜಾಪ್ರಭುತ್ವವೆಂಬ ಹೆಗ್ಗಳಿಕೆ ಭಾರತಕ್ಕಿದೆ. ಆದರೆ, ಯಾವ ವ್ಯವಸ್ಥೆಯಲ್ಲೂ ಎಲ್ಲವೂ ಶತ–ಪ್ರತಿಶತ ಸರಿಯಾಗಿರಲು ಸಾಧ್ಯವಿಲ್ಲ, ನಡೆದ ಅಕ್ರಮಗಳಿಗೆ ಕಡಿವಾಣ ಹಾಕಲು ನ್ಯಾಯಾಂಗ ವ್ಯವಸ್ಥೆಯಿದೆ. ಭಾರತದಲ್ಲಿ ಚುನಾವಣೆ ನಡೆಯುವುದು ಪ್ರಜಾಪ್ರತಿನಿಧಿ ಕಾಯಿದೆಯ ಅಡಿಯಲ್ಲಿ. ಒಂದೊಮ್ಮೆ ಚುನಾವಣಾ ಅಕ್ರಮ ನಡೆದರೆ, ನ್ಯಾಯಾಲಯದಲ್ಲಿ ದಾಖಲೆ ಸಮೇತ ಸಾಕ್ಷಿ ನೀಡಿ ಅಂಥ ನಿದರ್ಶನವನ್ನು ಪ್ರಶ್ನಿಸಬೇಕು. ಆಗ ಮಾತ್ರವೇ ಸದರಿ ಚುನಾವಣೆಯನ್ನು ಅಸಿಂಧುಗೊಳಿಸಲು ಸಾಧ್ಯವೇ ಹೊರತು, ಪತ್ರಿಕಾ ಗೋಷ್ಠಿಯಲ್ಲಿ ಆರೋಪ ಮಾಡುವುದರಿಂದ, ಬೀದಿಹೋರಾಟಗಳಿಂದ ಏನನ್ನೂ ರುಜುವಾತುಪಡಿಸಲು ಅಥವಾ ಚುನಾವಣೆಯನ್ನು ರದ್ದುಗೊಳಿಸಲು ಯಾರಿಗೂ ಸಾಧ್ಯವಿಲ್ಲ.

ಈ ಹಿಂದೆ ದೇಶದ ಮೇಲೆ ತುರ್ತು ಪರಿಸ್ಥಿತಿಯನ್ನು ಹೇರಲು ಕಾರಣರಾದ ಇಂದಿರಾ ಗಾಂಧಿಯವರ ಲೋಕಸಭಾ ಸದಸ್ಯತ್ವದ ಆಯ್ಕೆಯನ್ನು, ಅಕ್ರಮಗಳ ಆರೋಪದ ಮೇಲೆ ರದ್ದುಗೊಳಿಸಿದ್ದು ಅಲಹಾಬಾದ್ ಹೈಕೋರ್ಟ್ ಎಂಬುದು ಗಮನಾರ್ಹ. ಚುನಾವಣೆಯಲ್ಲಿ ಏನೇ ಅಕ್ರಮ ನಡೆದರೂ, ಆ ಸಂಬಂಧದ ಆರೋಪದ ಇತ್ಯರ್ಥವು ನ್ಯಾಯಾಲಯದ ಮೂಲಕವೇ ಆಗಬೇಕು, ಇಲ್ಲವಾದಲ್ಲಿ ಅಧಿಕಾರದಲ್ಲಿರುವವರ ಆಜ್ಞೆಯಂತೆ ಚುನಾವಣೆ ತಕರಾರುಗಳ ವಿಲೇವಾರಿ ಆಗಬಹುದು. ನಕಲಿ ಮತದಾರರ ನೋಂದಣಿ, ಮತದಾರರ ಪಟ್ಟಿಯಲ್ಲಿನ ದೋಷ, ಮತದಾರರಿಗೆ ಪ್ರಲೋಭನೆಗಳನ್ನು ಒಡ್ಡುವಿಕೆ, ನಾಮಪತ್ರ ಪರಿಶೀಲನೆಯ ತಕರಾರುಗಳು, ಜಾತಿ ಮತ್ತು ಕೋಮು ಆಧಾರದ ಮೇಲೆ ಮತಯಾಚನೆ, ಮತದಾನದ ವೇಳೆ ಮತದಾರರಿಗೆ ಭಯ ಹುಟ್ಟಿಸುವುದು, ಅನ್ಯ ವ್ಯಕ್ತಿಯ/ಮೃತವ್ಯಕ್ತಿಯ ಮತವನ್ನು ಬೇರೊಬ್ಬ ಚಲಾಯಿಸುವುದು, ಕೆಲವರಿಗೆ ಮತದಾನಕ್ಕೆ ಅವಕಾಶವನ್ನು ನೀಡದಿರುವುದು ಮುಂತಾದ ಚುನಾವಣಾ ಅಕ್ರಮಗಳಿಂದ ಯಾರಾದರೂ ಚುನಾವಣೆಯನ್ನು ಗೆದ್ದಿದ್ದರೆ, ಅಂಥ ಸಂದರ್ಭಗಳಲ್ಲಿ ಸಂವಿಧಾನದ ಅನುಚ್ಛೇದ 321ರ ಪ್ರಕಾರ ಉಚ್ಚ ನ್ಯಾಯಾಲಯದಲ್ಲಿ, ಕಾಲಮಿತಿ ಮುಗಿಯುವುದರೊಳಗೆ ಚುನಾವಣಾ ತಕರಾರು ಅರ್ಜಿಯನ್ನು ಸಲ್ಲಿಸಬೇಕಾಗುತ್ತದೆ.

ಪ್ರಸ್ತುತ, ಲೋಕಸಭೆಯ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿಯವರು ತಮ್ಮ ಮಿತ್ರಪಕ್ಷಗಳ ಜತೆ ಸೇರಿಕೊಂಡು, ''ಬೆಂಗಳೂರಿನ ವಿಧಾನಸಭಾ ಕ್ಷೇತ್ರವೊಂದರಲ್ಲಿ ಸಾವಿರಾರು ಜನರ ಮತಗಳು ಅಕ್ರಮವಾಗಿ ಸೇರ್ಪಡೆಯಾಗಿವೆ, ಕೆಲವು ವ್ಯಕ್ತಿಗಳು ಸ್ವತಃ 2–3 ಬಾರಿ ಮತ ಚಲಾಯಿಸಿದ್ದಾರೆ, ಕೆಲವು ಮತದಾರರಿಗೆ ವಿಳಾಸವೇ ಇಲ್ಲ, ಮತದಾರರ ಪಟ್ಟಿಯಲ್ಲಿ ಕೆಲವು ನಕಲಿ ಹೆಸರುಗಳಿವೆ'' ಎಂದೆಲ್ಲ ಹೇಳಿ, ಗಾಭರಿ ಹುಟ್ಟಿಸುವಂತೆ ಆರೋಪ ಮಾಡಿದ್ದಾರೆ. ಆದರೆ ಅವರು ಕಾನೂನು ರೀತಿಯಲ್ಲಿ ಯಾವುದೇ ಪ್ರಕರಣವನ್ನು ದಾಖಲಿಸಿಲ್ಲ. ಹೀಗಾದರೆ ಈ ಆರೋಪದ ಸತ್ಯಾಸತ್ಯತೆ ಬಯಲಿಗೆ ಬರುವುದು ಹೇಗೆ? ಅಚ್ಚರಿಯ ಸಂಗತಿಯೆಂದರೆ, ಸದರಿ ಮತದಾರರ ಪಟ್ಟಿಯನ್ನು ಪರಿಷ್ಕರಣೆ ಮಾಡುವ ಸಂದರ್ಭದಲ್ಲಿ, ಸಂಬಂಧಿತ ಅಧಿಕಾರಿ ವರ್ಗವು ಕೆಲಸ ಮಾಡಿದ್ದು ಕಾಂಗ್ರೆಸ್ ಪಕ್ಷದ ಸರಕಾರದ ಅಡಿಯಲ್ಲಿ. ಯಾವ ಕಾರಣಕ್ಕಾಗಿ ಆಗಲೇ ಈ ಅಕ್ರಮಗಳನ್ನು ತಡೆಯಲಿಲ್ಲ? ಎಂಬುದು ಯಕ್ಷಪ್ರಶ್ನೆ.

ಅದರಲ್ಲೂ, ಚುನಾವಣೆ ಮುಗಿದ 2 ವರ್ಷಗಳ ನಂತರ ಹೀಗೆ ಬೀದಿಯಲ್ಲಿ ನಿಂತು ಬಾಯಿಮಾತಿನ ಮೂಲಕ ಆರೋಪ ಮಾಡುತ್ತಿರುವ ವಿಪಕ್ಷಗಳ ಉದ್ದೇಶವಾದರೂ ಏನು? ಈ ಹಿಂದೆಯೂ, ಇದೇ ರೀತಿಯಲ್ಲಿ ಮತ್ತು ಇದಕ್ಕಿಂತ ವ್ಯಾಪಕವಾಗಿ, ರಫೇಲ್ ಯುದ್ಧ ವಿಮಾನದ ಖರೀದಿಯನ್ನು 'ಅವ್ಯವಹಾರ' ಎಂಬಂತೆ ಬಿಂಬಿಸಲಾಯಿತು. ಸುಪ್ರೀಂ ಕೋರ್ಟ್‌ನಲ್ಲಿ ಈ ಬಗ್ಗೆ ಪ್ರಕರಣ ದಾಖಲಿಸಿದರು ಕೂಡ ಏನನ್ನೂ ಸಾಧಿಸಲು ಆಗಲಿಲ್ಲ ಎಂಬುದನ್ನು ದೇಶ ಮರೆತಿಲ್ಲ. ಆದರೆ ರಫೇಲ್ ಖರೀದಿ ವ್ಯವಹಾರದ ಬಗ್ಗೆ ಸಂಶಯಗಳನ್ನು ಉಂಟುಮಾಡುವಲ್ಲಿ ವಿಪಕ್ಷಗಳು ಕೊಂಚ ಮಟ್ಟಿಗೆ ಸಫಲವಾದವು. ಈ ರೀತಿಯಾಗಿ ಸುಳ್ಳು ಆರೋಪ ಮಾಡಿ, 'ಹಿಟ್ ಆ್ಯಂಡ್ ರನ್' ಪ್ರಕರಣಗಳಂತೆ ವರ್ತಿಸುವುದು ರಾಜಕೀಯದಲ್ಲಿ ಸಾಮಾನ್ಯವಾಗಿಬಿಟ್ಟಿದೆ.

ವಿಪಕ್ಷಗಳವರು, ಅದರಲ್ಲೂ ನಿರ್ದಿಷ್ಟವಾಗಿ ಕಾಂಗ್ರೆಸ್ಸಿಗರು ತಾವು ಗೆದ್ದ ರಾಜ್ಯಗಳ ಚುನಾವಣೆಯಲ್ಲಿ ವಿದ್ಯುನ್ಮಾನ ಮತಯಂತ್ರವನ್ನು (ಇವಿಎಂ) ಬಳಸಿದ್ದರೂ ಯಾವುದೇ ಆರೋಪವನ್ನು ಮಾಡುವುದಿಲ್ಲ; ಆದರೆ ಸೋತರೆ ಮಾತ್ರ ಇವಿಎಂ ಆಧಾರದ ಮೇಲೆ ಸೋಲಿಸಲಾಯಿತು ಎಂಬಂತೆ ಮಾತಾಡುವ ರೀತಿ ನಗೆಪಾಟಲಿಗೆ ದಾರಿಯಾಗಿದೆ. ಇಷ್ಟು ಸಾಲದೆಂಬಂತೆ, ಇದೇ ರಾಹುಲ್ ಗಾಂಧಿಯವರು ಕೆಲವು ತಿಂಗಳ ಹಿಂದೆ ವಿದೇಶಗಳಿಗೆ ತೆರಳಿ, ''ಭಾರತದ ಪ್ರಜಾಸತ್ತಾತ್ಮಕತೆಯನ್ನು ಉಳಿಸಲು ವಿದೇಶಿಯರು ಮುಂದಾಗಬೇಕು'' ಎಂಬ ಅತಿರೇಕದ ಹೇಳಿಕೆಯನ್ನು ನೀಡಿದರು. ಇಂಥ ಹೇಳಿಕೆಯನ್ನು ಯಾವ ಸಾರ್ವಭೌಮ ರಾಷ್ಟ್ರವೂ ಒಪ್ಪಲು ಸಾಧ್ಯವಿಲ್ಲ. ಈಗ ಅವರಿಗೆ ಬಹುಶಃ ಸರಕಾರದ ವಿರುದ್ಧ ಮಾತನಾಡಲು ಯಾವುದೇ ಪ್ರಬಲ ವಿಷಯಗಳಿಲ್ಲದ ಕಾರಣದಿಂದಾಗಿ ಇಂಥ ಸುಳ್ಳು ಆರೋಪವನ್ನು ಹರಿಬಿಟ್ಟಿರಬೇಕು!

ಚುನಾವಣಾ ತಕರಾರು ಅರ್ಜಿಯ ಬಗ್ಗೆ ಕಾಯಿದೆಬದ್ಧವಾಗಿ ನೋಡಿದಾಗ, ಇಂಥ ಆರೋಪಗಳನ್ನು ಕ್ರಿಮಿನಲ್ ಪ್ರಕರಣದಂತೆ ಪರಿಗಣಿಸಿ, ಆರೋಪ ಹೊರಿಸುವವರು ಅದನ್ನು ಕೋರ್ಟಿನಲ್ಲಿ ಸಿದ್ಧಪಡಿಸುವ ಜವಾಬ್ದಾರಿ ಹೊಂದಿರುತ್ತಾರೆ ಎಂಬುದನ್ನು 'ನಾರಾಯಣರಾವ್ ವರ್ಸಸ್ ಪುರುಷೋತ್ತಮ್' ಪ್ರಕರಣದಲ್ಲಿ ಸುಪ್ರೀಂಕೋರ್ಟ್ ನಿಖರವಾಗಿ ಹೇಳಿದೆ (ಎಐಆರ್ 1993 ಎಸ್‌ಸಿ 1698; ಪುಟಸಂಖ್ಯೆ 1698). ಅದೇ ರೀತಿಯಲ್ಲಿ, ಆರೋಪಗಳು ಸ್ಪಷ್ಟವಾಗಿರಬೇಕು, ಅವುಗಳನ್ನು ಸಂಶಯತೀತವಾಗಿ ಸಾಕ್ಷಿಯಿಂದ ಸಿದ್ಧಪಡಿಸಬೇಕು ಮತ್ತು ಚುನಾವಣಾ ತಕರಾರು ಅರ್ಜಿಯಲ್ಲಿ ಸಾಕ್ಷಿಯು ಕ್ರಿಮಿನಲ್ ಪ್ರಕರಣದಲ್ಲಿರುವಂತೆ ಎಲ್ಲ ಸಂಭವನೀಯತೆಗಳನ್ನೂ ಮೀರಿ ಸಿದ್ಧಗೊಳ್ಳುವಂತಿರಬೇಕು ಎಂಬುದನ್ನು 'ಮನೋಹರ್ ವರ್ಸಸ್ ಯಶ್' ಪ್ರಕರಣದಲ್ಲಿ ಸುಪ್ರೀಂಕೋರ್ಟ್ ಸ್ಪಷ್ಟವಾಗಿ ಹೇಳಿದೆ (ಎಐಆರ್ 1984 ಎಸ್‌ಸಿ 1161; ಪುಟ ಸಂಖ್ಯೆ 1161). ಇಂಥ ಅನೇಕ ಪ್ರಕರಣಗಳನ್ನು ಅವಲೋಕಿಸಿದಾಗ, ಚುನಾವಣಾ ತಕರಾರು ಪ್ರಕರಣಗಳನ್ನು ಕ್ರಿಮಿನಲ್ ಪ್ರಕರಣಗಳಂತೆ ನಡೆಸಿ ಸಾಬೀತುಪಡಿಸಬೇಕು ಎಂಬುದು ಅರಿವಾಗುತ್ತದೆ.

ಪ್ರಚಾರ ಗಿಟ್ಟಿಸುವ ಉದ್ದೇಶದ, ತೇಜೋವಧೆಗೆ ಕಾರಣವಾಗುವ ಯಾವುದೇ ಊಹಾತ್ಮಕ, ಕಲ್ಪನಾತ್ಮಕ ಹೇಳಿಕೆಗಳಿಗೆ ಚುನಾವಣಾ ತಕರಾರು ಅರ್ಜಿಗಳಲ್ಲಿ ಅವಕಾಶವಿಲ್ಲ. ಹೀಗಾಗಿ, 'ಬೆಂಗಳೂರು ಮತಗಳ್ಳತನದ ಪೊಳ್ಳು ಆರೋಪ' ಮಾಡಿರುವವರು ಬಹುಶಃ ಕೋರ್ಟ್ ಮೆಟ್ಟಿಲೇರಿಲ್ಲ ಮತ್ತು ಕಾಯಿದೆಬದ್ಧ ಪ್ರಮಾಣಪತ್ರದ ದೂರನ್ನು ನೀಡಿರುವುದಿಲ್ಲ ಎಂಬ ಸಂಶಯ ಸಾರ್ವಜನಿಕರಲ್ಲಿ ಮೂಡುತ್ತದೆ. ಏಕೆಂದರೆ, ಸುಳ್ಳು ಅಥವಾ ತಪ್ಪು ಪ್ರಮಾಣಪತ್ರ ನೀಡಿದರೆ ಅದೊಂದು ದಂಡನೀಯ ಅಪರಾಧ; ಈ ಭಯ ತಮಗಿಲ್ಲ ಎಂದು ತೋರಿಸಿಕೊಳ್ಳುವ ದೂರುದಾರರು ಕಾಯಿದೆಬದ್ಧವಾಗಿ ದೂರು ಸಲ್ಲಿಸಬೇಕು. ಇಲ್ಲವಾದಲ್ಲಿ, ಇಂಥ ಆಧಾರರಹಿತ ಆರೋಪಗಳಿಂದಾಗಿ ಚುನಾವಣಾ ಆಯೋಗ, ನ್ಯಾಯಾಂಗ ವ್ಯವಸ್ಥೆಯಂಥ ಸಾಂವಿಧಾನಿಕ ಮತ್ತು ಸ್ವಾಯತ್ತ ಸಂಸ್ಥೆಗಳ ಮೇಲೆ ಕರಿನೆರಳು ಬಿದ್ದಂತಾಗುತ್ತದೆ, ಅದು ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲಿನ ವಿಶ್ವಾಸವನ್ನು ಕುಗ್ಗಿಸುವ ಕೃತ್ಯವಾಗುತ್ತದೆ. ಒಂದೊಮ್ಮೆ ಹಾಗೆ ಚುನಾವಣಾ ಅಕ್ರಮ ನಡೆದಿರುವುದೇ ಹೌದಾದಲ್ಲಿ, ನಿಯಮಾನುಸಾರ ನ್ಯಾಯಾಂಗದ ಕದ ತಟ್ಟಲು ಏನು ಸಮಸ್ಯೆಯಿದೆ ಎಂಬುದೇ ಯಕ್ಷಪ್ರಶ್ನೆ. ಈ ಆರೋಪಗಳ ಪರಿಯನ್ನು ನೋಡಿದರೆ ಒಂದು ವಿನೋದಾತ್ಮಕ ಪ್ರಸಂಗ ನೆನಪಾಗುತ್ತದೆ. ತನ್ನ ಜೇಬಿನಿಂದ ಹಣ ಕಳವಾಯಿತೆಂದು ವ್ಯಕ್ತಿಯೊಬ್ಬ ಊರು ತುಂಬಾ ಡಂಗುರ ಸಾರುತ್ತಾನೆ, ಊರಿನಲ್ಲಿ ಕಳ್ಳರ ಹಾವಳಿ ಹೆಚ್ಚಾಗಿದೆಯೆಂದು ಭಯ ಹುಟ್ಟಿಸುತ್ತಾನೆ; ಆದರೆ ಪೊಲೀಸ್ ಠಾಣೆಗೆ ಹೋಗಿ ದೂರು ಕೊಡು ಎಂದರೆ ಸರ್ವಥಾ ಹೋಗುವುದಿಲ್ಲ. ಏಕೆಂದರೆ ಆತ ತನ್ನ ಜೇಬಿನಿಂದ ನಿಜಕ್ಕೂ ಹಣವನ್ನು ಕಳೆದುಕೊಂಡಿರುವುದಿಲ್ಲ! ಇಂಥ ಸ್ಥಿತಿ ಭಾರತದ ವಿಪಕ್ಷಗಳಿಗೆ ಬಂದಂತಿದೆ. ಇದು ಪ್ರಜಾಪ್ರಭುತ್ವದ ದುರಂತವೇ ಸರಿ. ಇದಕ್ಕೆ ಮತದಾರರೇ ಉತ್ತರಿಸಬೇಕು.

(ಲೇಖಕರು ಭಾರತ ಸರಕಾರದ ನಿಕಟಪೂರ್ವ ಸಹಾಯಕ ಸಾಲಿಸಿಟರ್ ಜನರಲ್)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ, ಮಂಗಳೂರು, ಬೆಳಗಾವಿ, ಕಲಬುರಗಿ, ದಾವಣಗೆರೆ
Vol:10, Issue:212

ಸಮಾಚಾರ ಸಣ್ಣದಲ್ಲ

ಶಬರಿಮಲೆ ಯಾತ್ರೆ ಲಂಕಾದಿಂದ ಮಾನ್ಯ

ಕೊಲಂಬೊ: ಕೇರಳದ ಶಬರಿಮಲೆಯಲ್ಲಿನ ಸ್ವಾಮಿ ಅಯ್ಯಪ್ಪ ದೇಗುಲಕ್ಕೆ ಶ್ರೀಲಂಕಾ ದೇಶದ ಪ್ರಜೆಗಳು ವಾರ್ಷಿಕ ಯಾತ್ರೆ ಕೈಗೊಳ್ಳಬಹುದು ಎಂದು ಲಂಕಾ ಸರಕಾರ ಪ್ರಕಟಿಸಿದೆ. ಸಚಿವ ಸಂಪುಟ ಸಭೆ ಕೈಗೊಂಡ ಈ ನಿರ್ಧಾರವನ್ನು ಮಂಗಳವಾರ ಹೇಳಿಕೆ ಮೂಲಕ ತಿಳಿಸಲಾಗಿದೆ. ಲಂಕಾ ಜನರೂ ಸ್ವಾಮಿ ಅಯ್ಯಪ್ಪನನ್ನು ಪೂಜಿಸುತ್ತಾರೆ. ಅಲ್ಲದೇ ಪ್ರತಿ ವರ್ಷ 15 ಸಾವಿರಕ್ಕೂ ಅಧಿಕ ಲಂಕಾ ಪ್ರಜೆಗಳು ಶಬರಿಮಲೆಗೆ ಭೇಟಿ ನೀಡುತ್ತಾರೆ. ಹೀಗಾಗಿ ಶಬರಿಮಲೆ ಯಾತ್ರೆಗೆ ಮಾನ್ಯತೆ ನೀಡಲಾಗಿದೆ ಎಂದು ಸರಕಾರ ತಿಳಿಸಿದೆ. ಶಬರಿಮಲೆ ಅಯ್ಯಪ್ಪ ದೇಗುಲದಲ್ಲಿ ವಾರ್ಷಿಕ ಮಂಡಲ ಪೂಜೆ ಉತ್ಸವ ನವೆಂಬರ್‌ನಿಂದ ಡಿಸೆಂಬರ್‌ವರೆಗೆ ನಡೆಯುತ್ತದೆ. ಜನವರಿಯಲ್ಲಿ ಮಕರವಿಳಕ್ಕು ಉತ್ಸವ ನಡೆಯುತ್ತದೆ.

ಕಂಟೇನರ್‌ಗೆ-ವ್ಯಾನ್ ಡಿಕ್ಕಿ: 11 ಮಂದಿ ಸಾವು

ಜೈಪುರ: ರಾಜಸ್ಥಾನದ ದೌಸಾ ಜಿಲ್ಲೆಯ ಬಾಪಿ ಬಳಿ ಹೆದ್ದಾರಿ ಪಕ್ಕದ ಸರ್ವಿಸ್ ರಸ್ತೆಯಲ್ಲಿ ನಿಲುಗಡೆಯಾಗಿದ್ದ ದೊಡ್ಡ ಕಂಟೇನರ್ ಟ್ರಕ್‌ಗೆ ಮಕ್ಕಳೂ ಸೇರಿ



ದಂತೆ 20ಕ್ಕೂ ಹೆಚ್ಚು ಜನರನ್ನು ಹೊತ್ತು ವೇಗವಾಗಿ ಸಾಗುತ್ತಿದ್ದ ಪಿಕಪ್ ವ್ಯಾನ್ ನೇರ ಡಿಕ್ಕಿ ಹೊಡೆದಿದೆ. ಪರಿಣಾಮ 7 ಮಕ್ಕಳು, 4ಮಹಿಳೆಯರು ಸೇರಿದಂತೆ 11 ಮಂದಿ ಸಾವನ್ನಪ್ಪಿದ್ದಾರೆ. 9 ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಗಾಯಾಳುಗಳಲ್ಲಿ ಒಬ್ಬರ ಸ್ಥಿತಿ ಗಂಭೀರವಾಗಿದೆ. ಖತುಶ್ಯಾಮ್ಜಿ ದೇವಸ್ಥಾನಕ್ಕೆ ಭೇಟಿ ನೀಡಿ ಭಕ್ತರು ಪಿಕಪ್ ವ್ಯಾನ್‌ನಲ್ಲಿ ಮನೆಗೆ ವಾಪಸಾಗುತ್ತಿದ್ದಾಗ ಬುಧವಾರ ನಸುಕಿನ 3.30ರಲ್ಲಿ ಅಪಘಾತವಾಗಿದೆ. ಮೃತರಲ್ಲಿ ಹೆಚ್ಚಿನವರು ಉತ್ತರ ಪ್ರದೇಶದ ಇಟಾವಾ ಜಿಲ್ಲೆಯ ವರು ಎಂದು ಅಧಿಕಾರಿಗಳು ವಿವರಿಸಿದ್ದಾರೆ.

ಬೀದಿನಾಯಿ ಸಮಸ್ಯೆ: ಆರ್‌ಡಬ್ಲ್ಯುಎ ಸಭೆ

ದೆಹಲಿ: ದೆಹಲಿ ರಾಷ್ಟ್ರ ರಾಜಧಾನಿ ಪ್ರದೇಶ(ಎನ್‌ಸಿಆರ್)ದ ಜನವಸತಿ ಪ್ರದೇಶಗಳಿಂದ ಎಲ್ಲಾ ಬೀದಿನಾಯಿಗಳನ್ನು ಹಿಡಿದು ಸ್ಥಳಾಂತರಿಸಿ ಆಶ್ರಯ ಕೇಂದ್ರದಲ್ಲಿ ಇರಿಸುವಂತೆ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠ ಮಂಗಳವಾರ ಆದೇಶಿದ ಬಳಿಕ ಬಿಜೆಪಿ ನಾಯಕ ವಿಜಯ್ ಗೋಯಲ್ ಅವರು ದೆಹಲಿಯ ನಿವಾಸಿಗಳ ಹಿತರಕ್ಷಣಾ ಸಂಘಗಳ(ಆರ್‌ಡಬ್ಲ್ಯುಎ) ಸಭೆಯನ್ನು ಕರೆದಿದ್ದಾರೆ. ಬೀದಿನಾಯಿ ಸಮಸ್ಯೆ ಪರಿಹಾರಕ್ಕಾಗಿ 'ಲೋಕ ಅಭಿಯಾನ' ಎನ್‌ಜಿಒ ಮೂಲಕ ಹೋರಾಟ ನಡೆಸುತ್ತಿದ್ದೇವೆ. ಟಾಲ್ಕಟೋರಾ ಕ್ರೀಡಾಂಗಣದ ಸಭೆಗೆ ಆರ್‌ಡಬ್ಲ್ಯುಎ ಪ್ರತಿನಿಧಿಗಳು ಹಾಜರಾಗಬೇಕೆಂದು ಮನವಿ ಮಾಡಿದ್ದಾರೆ.

ಸಚಿವ ಕೀರ್ತಿ ವಿರುದ್ಧ ಭೂವ್ಯಾಜ್ಯ ಎಫ್‌ಐಆರ್

ದೆಹಲಿ: ವಿದೇಶಾಂಗ ವ್ಯವಹಾರಗಳ ಖಾತೆ ಸಹಾಯಕ ಸಚಿವ ಕೀರ್ತಿವರ್ಧನ್ ಸಿಂಗ್ ಸೇರಿದಂತೆ ನಾಲ್ವರು ವಿರುದ್ಧ ಭೂವ್ಯಾಜ್ಯವೊಂದರ ಸಂಬಂಧ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಮಾಡುವಂತೆ ಉತ್ತರ ಪ್ರದೇಶದ ಗೊಂಡಾ ಜಿಲ್ಲೆಯಲ್ಲಿನ ಶಾಸಕರು-ಸಂಸದರ ಪ್ರಕರಣಗಳಿಗೆ ಸಂಬಂಧಿಸಿದ ವಿಶೇಷ ನ್ಯಾಯಾಲಯ ರಾಜ್ಯ ಪೊಲೀಸರಿಗೆ ನಿರ್ದೇಶನ ನೀಡಿದೆ. ಸಚಿವ ಕೀರ್ತಿವರ್ಧನ್ ಅವರ ಪ್ರತಿನಿಧಿ ರಾಜೇಶ್ ಸಿಂಗ್ ವಿರುದ್ಧವೂ ಎಫ್‌ಐಆರ್ ದಾಖಲಿಸಲು ನ್ಯಾಯಾಧೀಶರು ಆದೇಶಿಸಿದ್ದಾರೆ.

ಸುಪ್ರೀಂ ಅಂಗಳದಲ್ಲೇ ಶ್ವಾನಪ್ರಿಯನಿಗೆ ಪೆಟ್ಟು

ದೆಹಲಿ: ಬೀದಿನಾಯಿ ವಿಚಾರವಾಗಿ ಜಗಳ ತೆಗೆದ ಶ್ವಾನಪ್ರಿಯ ಹೋರಾಟಗಾರನಿಗೆ ಸುಪ್ರೀಂ ಕೋರ್ಟ್ ಆವರಣದಲ್ಲೇ ವಕೀಲರೊಬ್ಬರು ಕೆನ್ನೆಗೆ ಬಾರಿಸಿದ್ದಾರೆ. ದೆಹಲಿ ಬೀದಿನಾಯಿ ಸ್ಥಳಾಂತರ ಆದೇಶ ವಿಚಾರವಾಗಿ ಶ್ವಾನಪ್ರಿಯರು ವಕೀಲರ ಜತೆ ಜಗಳಕ್ಕಿಳಿದಿದ್ದಾರೆ. ವಕೀಲರನ್ನು ನಿಂದಿಸಿದ್ದಾರೆ. ಇದರಿಂದ ಕೋಪಗೊಂಡ ಹಿರಿಯ ವಕೀಲರೊಬ್ಬರು ಶ್ವಾನಪ್ರಿಯನ ಕೆನ್ನೆಗೆ ಬಾರಿಸಿದ್ದಾರೆ. ಸುಪ್ರೀಂ ಕೋರ್ಟ್ ದ್ವಿಸದಸ್ಯ ಪೀಠದ ಆದೇಶದಕ್ಕೆ ಪ್ರಾಣಿಪ್ರಿಯರು, ಸೆಲೆಬ್ರಿಟಿಗಳು ಆಕ್ಷೇಪ ವ್ಯಕ್ತಪಡಿಸಿದ್ದರು. ಮಾಜಿ ಕೇಂದ್ರ ಸಚಿವೆ ಮೇನಕಾ ಗಾಂಧಿ ಸಹ ತೀವ್ರವಾಗಿ ಟೀಕಿಸಿದ್ದಾರೆ. ದೆಹಲಿಯಲ್ಲಿ 3 ಲಕ್ಷಕ್ಕೂ ಅಧಿಕ ಬೀದಿನಾಯಿಗಳಿವೆ. ಅವನ್ನು ಆಶ್ರಯ ತಾಣಕ್ಕೆ ಸಾಗಿಸಲು, ನಿರ್ವಹಿಸಲು 15 ಸಾವಿರ ಕೋಟಿ ರು. ವೆಚ್ಚವಾಗುತ್ತದೆ ಎಂದು ಅಸಮಾಧಾನ ಹೊರಹಾಕಿದ್ದಾರೆ.

{ ಡೊನಾಲ್ಡ್ ಟ್ರಂಪ್ } ಅಮೆರಿಕ ಅಧ್ಯಕ್ಷ

ಭಾರತ ರಷ್ಯಾದ 2ನೇ ಅತಿದೊಡ್ಡ ತೈಲ ಖರೀದಿದಾರ. ರಷ್ಯಾ ತೈಲ ಖರೀದಿ ವಿರೋಧಿಸಿ ಭಾರತದ ಮೇಲೆ ಅಮೆರಿಕ ಶೇ.25ರಷ್ಟು ಪ್ರತಿಸುಂಕ ವಿಧಿಸಿದೆ. ಪರಿಣಾಮವಾಗಿ ಭಾರತ ರಷ್ಯಾದಿಂದ ತೈಲ ಖರೀದಿ ನಿಲ್ಲಿಸುತ್ತಿದೆ. ಪರಿಣಾಮ ರಷ್ಯಾ ಆರ್ಥಿಕತೆಗೆ ದೊಡ್ಡ ಹೊಡೆತ ಬೀಳಲಾರಂಭಿಸಿದೆ. ದೊಡ್ಡ ದೇಶ ರಷ್ಯಾದ ಆರ್ಥಿಕತೆ ಈಗಾಗಲೇ ತೀವ್ರ ಅಸ್ತವ್ಯಸ್ತಗೊಂಡಿದೆ.



ಉಕ್ಕು ಉತ್ಪಾದನೆಯ ಎಸ್‌ಎಂಇ ಕ್ಷೇತ್ರ ರಾಷ್ಟ್ರದ ಅಭಿವೃದ್ಧಿಯ ಬೆನ್ನೆಲುಬು: ಸಚಿವ ಎಚ್‌ಡಿಕೆ

2047ಕ್ಕೆ 50 ಕೋಟಿ ಟನ್ ಉಕ್ಕು ಗುರಿ

ದೆಹಲಿ: ದೇಶದಲ್ಲಿ 2047ರ ವೇಳೆಗೆ ವಾರ್ಷಿಕ 50 ಕೋಟಿ ಟನ್ ಉಕ್ಕು ಉತ್ಪಾದಿಸುವ ಗುರಿ ಇಟ್ಟುಕೊಳ್ಳಲಾಗಿದೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆಯ ಸಚಿವ ಎಚ್.ಡಿ ಕುಮಾರಸ್ವಾಮಿ ಹೇಳಿದರು.

'ಸಣ್ಣ ಪ್ರಮಾಣದ ಉಕ್ಕು ಕೈಗಾರಿಕೆಗಳ ಸವಾಲುಗಳು' ವಿಷಯ ಕುರಿತು ಉಕ್ಕು ಸಚಿವಾಲಯ ದೆಹಲಿಯ ವಿಜ್ಞಾನ ಭವನದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕಾರ್ಯಾಗಾರ ಉದ್ಘಾಟಿಸಿದ ಸಚಿವರು, ಸಣ್ಣ ಪ್ರಮಾಣದ ಉಕ್ಕು ಉತ್ಪಾದನೆಯ ಕ್ಷೇತ್ರವು ರಾಷ್ಟ್ರದ ಅಭಿವೃದ್ಧಿಯ ಬೆನ್ನೆಲುಬಿನಂತೆ ಕೆಲಸ ಮಾಡುತ್ತಿದೆ. 2030ರ ವೇಳೆಗೆ ವಾರ್ಷಿಕ 30 ಕೋಟಿ ಟನ್ ಮತ್ತು 2047ರ ವೇಳೆಗೆ ವಾರ್ಷಿಕ 50 ಕೋಟಿ ಟನ್ ಉಕ್ಕು ಉತ್ಪಾದನೆ ಕಾರ್ಯಸೂಚಿಯಲ್ಲಿ ಸಣ್ಣ ಪ್ರಮಾಣದ ಉಕ್ಕು ಉತ್ಪಾದಿತ ಕ್ಷೇತ್ರ ನಿರ್ಣಾಯಕ ಪಾತ್ರ ವಹಿಸುತ್ತಿದೆ ಎಂದು ಹೇಳಿದರು. ಸಣ್ಣ ಪ್ರಮಾಣದ ಉಕ್ಕು ಉತ್ಪಾದನಾ ಘಟಕಗಳ ಕೊಡುಗೆ ಅಪಾರ. ಭಾರತದ ಉಕ್ಕು ವಲಯದ ಒಟ್ಟು ಉತ್ಪಾದನೆಯ ಶೇ.50ರಷ್ಟು ಉಕ್ಕು ಈ ಸಣ್ಣ ವಲಯದಿಂದಲೇ ಉತ್ಪಾದನೆಯಾಗುತ್ತಿದೆ. ಆದರೆ, ಈ ಕೈಗಾರಿಕೆಗಳ ವಲಯವು ಹತ್ತಾರು ಸವಾಲುಗಳನ್ನು ಎದುರಿಸುತ್ತಿದೆ ಎಂದು ಎಚ್.ಡಿ.ಕುಮಾರಸ್ವಾಮಿ, ಈ ವಲಯಕ್ಕೆ ಆದಷ್ಟೂ ಹೆಚ್ಚು ಶಕ್ತಿ ತುಂಬುವ ಕೆಲಸವನ್ನು ಪ್ರಧಾನಿ ಮೋದಿ ಅವರ ನಾಯಕತ್ವದಲ್ಲಿ ಮಾಡಲಾಗುತ್ತಿದೆ ಎಂದು ವಿವರಿಸಿದರು.

ಮನೆಗಳು, ಬೃಹತ್ ಕಟ್ಟಡಗಳು, ಹೆದ್ದಾರಿ-ಸೇತುವೆ ನಿರ್ಮಾಣ, ವಾಹನಗಳು, ರೈಲು, ವಿಮಾನಗಳ ತಯಾರಿಕೆ ಸೇರಿದಂತೆ ದೇಶದ ಭವ್ಯ ಇತಿಹಾಸ ರೂಪಿಸಲು ಶ್ರಮಿಸುತ್ತಿರುವ ಉಕ್ಕು ಕ್ಷೇತ್ರವನ್ನು ನಾವು ಮತ್ತಷ್ಟು ಸಶಕ್ತಗೊಳಿಸಬೇಕಿದೆ. ನೀತಿ, ಉದ್ದೇಶ ಮತ್ತು ನಮ್ಮ ಜನರ ಉತ್ಸಾಹದೊಂದಿಗೆ ನಾವು ಭಾರತವನ್ನು ಜಾಗತಿಕ ಉಕ್ಕಿನ ಶಕ್ತಿ ಕೇಂದ್ರವನ್ನಾಗಿ ಮಾಡಲಿದ್ದೇವೆ ಎಂದು ಘೋಷಿಸಿದರು. ಭಾರತದ ಉಕ್ಕು ಉದ್ಯಮಕ್ಕೆ ಏಕೀಕೃತ ಗುರುತು ನೀಡುವ 'ಭಾರತ್ ಸ್ಟೀಲ್' ಲೋಗೋವನ್ನು ಸಚಿವರು ಅನಾವರಣಗೊಳಿಸಿದರು. 'ಭಾರತ್ ಸ್ಟೀಲ್' ವೆಬ್‌ಸೈಟ್‌ಗೆ ಚಾಲನೆ ನೀಡಿದರು.

ದೇಶದ ಕೈಗಾರಿಕೆಗಳ ಬೆನ್ನೆಲುಬು

ಈ ಉಕ್ಕು ತಯಾರಿಕಾ ವಲಯ ಪ್ರಮಾಣದಲ್ಲಿ ಸಣ್ಣದೇ ಆಗಿದ್ದರೂ ದೇಶಿಯ ಕೈಗಾರಿಕೆಗಳಿಗೆ ಬೆನ್ನೆಲುಬಿನಂತಿದೆ.

ದೇಶೀ ಆರ್ಥಿಕತೆಗೆ ಗಣನೀಯ ಪ್ರಮಾಣದಲ್ಲಿ ಶಕ್ತಿ ತುಂಬುತ್ತಿದೆ. ಜತೆಗೆ ಲಕ್ಷಾಂತರ ಉದ್ಯೋಗಗಳನ್ನು ಸೃಷ್ಟಿಸುತ್ತಿದೆ. ಸಮಗ್ರ ಬೆಳವಣಿಗೆಗೆ ಉತ್ತೇಜನ ನೀಡು ತ್ತಿದೆ ಎಂದು ಸಚಿವ ಕುಮಾರಸ್ವಾಮಿ ಬಣ್ಣಿಸಿದರು. ಪ್ರಧಾನಿ ಮೋದಿ ಅವರ ಮಾರ್ಗದರ್ಶನದಲ್ಲಿ ಭಾರತವನ್ನು ಶೂನ್ಯ ಇಂಗಾಲ ಬಿಡುಗಡೆಯ ದೇಶ ಹಾಗೂ ಉಕ್ಕು ವಲಯದಲ್ಲಿ ಜಾಗತಿಕ ಸುಸ್ಥಿರ ರಾಷ್ಟ್ರವನ್ನಾಗಿ ಸಲು ನಮ್ಮ ಸಚಿವಾಲಯ ದೃಢನಿಶ್ಚಯ ಮಾಡಿದೆ ಎಂದರು.

ಸರಕಾರದ ಹಲವು ಉಪಕ್ರಮ

ಹಸಿರು ಉಕ್ಕು ಪ್ರಮಾಣೀಕರಣದ ರೇಟಿಂಗ್ ವ್ಯವಸ್ಥೆ, ಹೈಡ್ರೋಜನ್ ಆಧಾರಿತ ಉಕ್ಕು ತಯಾರಿಕೆ ಯೋಜನೆಗಳು, ವಿಶೇಷ ಉಕ್ಕಿಗಾಗಿ ಪಿಎಲ್‌ಐ ಯೋಜನೆ ಮತ್ತು ಉಕ್ಕಿನ ವೇಸ್ಟೇಜ್ ಮರುಬಳಕೆ ನೀತಿ ಉಪಕ್ರಮಗಳನ್ನೂ ಎನ್‌ಡಿಎ ಸರಕಾರ ಕೈಗೊಂಡಿದೆ ಎಂದು ವಿವರಿಸಿದ ಸಚಿವ ಕುಮಾರಸ್ವಾಮಿ,ಉಕ್ಕು ಉತ್ಪಾದನೆ ಕ್ಷೇತ್ರದಲ್ಲಿ ಇಂಧನ ದಕ್ಷತೆ ವಿಷಯ ಇನ್ನು ಮುಂದೆ ಐಚ್ಛಿಕವಲ್ಲ. ಎಲ್ಲಾ ಘಟಕಗಳೂ ಇಂಧನ ದಕ್ಷತೆ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲೇ ಬೇಕಿದೆ. ತ್ಯಾಜ್ಯ ಶಾಖ ಹೆಚ್ಚಳ, ಅತ್ಯಾಧುನಿಕ ಮಾಲಿನ್ಯ ನಿಯಂತ್ರಣ ವ್ಯವಸ್ಥೆ ಮತ್ತು ನವೀಕರಿಸಬಹುದಾದ ಇಂಧನ ಏಕೀಕರಣ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವಲ್ಲಿ ನಾವು ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳನ್ನು (ಎಂಎಸ್‌ಎಂಇ) ಉತ್ತೇಜಿಸುತ್ತೇವೆ ಎಂದರು.

ಟ್ಯೂಬ್-ಪೈಪ್ಸ್, ಸ್ಟೇನ್‌ಲೆಸ್ ಸ್ಟೀಲ್!

ಭಾರತದಲ್ಲಿನ ಉಕ್ಕು ತಯಾರಿಕಾ ಕ್ಷೇತ್ರದಲ್ಲಿ ಸರಕಾರಿ ಒಡೆತನದ 'ಸ್ಟೀಲ್ ಅಥಾರಿಟಿ ಆಫ್ ಇಂಡಿಯ ಲಿ.'(ಎಸ್‌ಎಐಎಲ್) ಹಾಗೂ ಖಾಸಗಿ ಕ್ಷೇತ್ರದ ಟಾಟಾ ಸ್ಟೀಲ್, ಜೆಎಸ್‌ಡಬ್ಲು ಕಂಪನಿಗಳದ್ದೇ ದೊಡ್ಡ ಪಾಲು. ಹಾಗಿದ್ದೂ ಸಣ್ಣ ಮತ್ತು ಮಧ್ಯಮ ಪ್ರಮಾಣದ(ಎಸ್‌ಎಂಇ) ಉಕ್ಕು ತಯಾರಿಕಾ ಘಟಕಗಳ ಕೊಡುಗೆ ದೇಶದ ಒಟ್ಟಾರೆ ಉಕ್ಕು ಉತ್ಪಾದನೆಗೆ ಹೋಲಿಸಿದರೆ ಶೇ.33ರಿಂದ ಶೇ.35ರವರೆಗೂ ಇದೆ ಎಂಬ ಅಂಕಿ ಅಂಶವಿದೆ. ಉಕ್ಕಿನ ಟ್ಯೂಬ್ ಮತ್ತು ಪೈಪ್‌ಗಳ ಒಟ್ಟಾರೆ ತಯಾರಿಕೆಯಲ್ಲಿ ಎಸ್‌ಎಂಇ ಘಟಕಗಳ ಕೊಡುಗೆ ಶೇ.87.5ರಷ್ಟು ದೊಡ್ಡ ಪ್ರಮಾಣದ್ದಾಗಿದೆ. ಸ್ಟೇನ್‌ಲೆಸ್ ಸ್ಟೀಲ್ ತಯಾರಿಕೆಯಲ್ಲಿಯೂ ಎಸ್‌ಎಂಇಗಳದ್ದು ಶೇ.60ರಷ್ಟು ದೊಡ್ಡ ಪಾಲು ಇದೆ. ಏಕೆಂದರೆ ಬೃಹತ್ ಕಂಪನಿಗಳು ಈ ವಿಭಾಗಗಳತ್ತ ಹೆಚ್ಚು ಗಮನ ಹರಿಸುತ್ತಿಲ್ಲ.

ಟಿ ಶರ್ಟ್ 'ಮಿಂತಾದೇವಿ' ಪ್ರತ್ಯಕ್ಷ: ಕೈ ನಾಯಕರಿಗೆ ತರಾಟೆ

ದೆಹಲಿ: ಬಿಹಾರದಲ್ಲಿ ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರಣೆ'(ಎಸ್‌ಐಆರ್) ವಿರೋಧಿಸಿ ಸಂಸತ್ ಭವನ ಆವರಣದಲ್ಲಿ ಇಂಡಿ ಒಕ್ಕೂಟದ ಸಂಸದರು ಮಂಗಳವಾರ 'ಟಿ-ಶರ್ಟ್' ಪ್ರತಿಭಟನೆ ನಡೆಸಿದ್ದರು. ಟಿ ಶರ್ಟ್ ಮೇಲೆ ಮುದ್ರಿಸಿದ ಚಿತ್ರ 124 ವರ್ಷದ ಹಿರಿಯ ಮತದಾರ ಮಹಿಳೆ ಬಿಹಾರದ 'ಮಿಂತಾ ದೇವಿ'ಯದು ಎಂದು ಸುದ್ದಿಗಾರರ ಪ್ರಶ್ನೆಗೆ ಕಾಂಗ್ರೆಸ್ ಮುಖಂಡರು ಉತ್ತರಿಸಿದ್ದರು.

ಆದರೆ, ಈಗ ಮಿಂತಾ ದೇವಿಯೇ ಪ್ರತ್ಯಕ್ಷವಾಗಿ ಮಾಧ್ಯಮಗಳ ಜತೆ ಮಾತನಾಡಿದ್ದಾರೆ. 'ನಾನು ಗೃಹಿಣಿ, ನನಗೀಗ 35 ವರ್ಷ. 124 ವರ್ಷವಾಗಿದೆ ಎನ್ನುವುದಾದರೆ ನನಗೆ ವೃದ್ಧಾಪ್ಯ ಪಿಂಚಣಿ ಹಣ ಕೊಡಿಸಿ' ಎಂದು ಕಾಂಗ್ರೆಸ್ ನಾಯಕರ ನಡೆಯನ್ನು ಖಂಡಿಸಿದ್ದಾರೆ. ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿಯನ್ನು ತರಾಟೆ ತೆಗೆದುಕೊಂಡಿದ್ದಾರೆ. ಇದರಿಂದ ಇಂಡಿ ಒಕ್ಕೂಟಕ್ಕೆ ಮುಖಭಂಗವಾಗಿದೆ.

ಮಿಂತಾ ದೇವಿ ಅಳಲು: ಬಿಹಾರ ರಾಜ್ಯದ ಸಿವಾನ್‌ನ ದರೌಂಡಾ ವಿಧಾನಸಭಾ ಕ್ಷೇತ್ರದ ಮತದಾರರಾಗಿರುವ ಮಿಂತಾದೇವಿ ಪ್ರಸ್ತುತ ಛಪ್ರಾದ ಪ್ರಭುನಾಥ್ ನಗರದಲ್ಲಿ ನೆಲೆಸಿದ್ದಾರೆ. 'ನನ್ನ ಚಿತ್ರವನ್ನು ರಾಜಕೀಯ ಪ್ರತಿಭಟನೆಗೆ ಬಳಸಿರುವುದಕ್ಕೆ ಬೇಸರವಾಗಿದೆ. ನನ್ನ ಕುಟುಂಬದವರಿಗೂ ಮಾನಸಿಕ ಹಿಂಸೆಯಾಗಿದೆ. ನನ್ನ ಫೋಟೊ ಟೀ ಶರ್ಟ್ ಮೇಲೆ ಮುದ್ರಿಸಲು ಪ್ರಿಯಾಂಕಾ, ರಾಹುಲ್‌ಗೆ ಹಕ್ಕೇನಿದೆ? ಬೆಳಗ್ಗೆಯಿಂದ ತುಂಬಾ ಜನ ಕರೆ ಮಾಡಿ ಪ್ರಶ್ನಿಸುತ್ತಿದ್ದಾರೆ. ಮಾಧ್ಯಮದವರೂ ಎಲ್ಲಿ ಹೋದರು ಸುತ್ತುವರಿದು ಪ್ರಶ್ನಿಸುತ್ತಿದ್ದಾರೆ' ಎಂದು ಮಿಂತಾ ದೇವಿ ಕಿಡಿಕಾರಿದ್ದಾರೆ. ಮತದಾರರ ಪಟ್ಟಿಯಲ್ಲಿ ದೋಷ ಇದ್ದರೆ ಅದನ್ನು ಸರಿಪಡಿಸಬೇಕು. ಅದು ಬಿಟ್ಟು ಸುಮ್ಮನೇ ದೂಷಿಸುವುದೇಕೆ? ಆಧಾರ್‌ನಲ್ಲಿ ನನ್ನ ಜನ್ಮವರ್ಷ 1990 ಎಂದಿದೆ. ಮತದಾರರ ಗುರುತಿನ ಚೀಟಿಯಲ್ಲಿ 1900 ಎಂದಾಗಿದೆ. ಹಾಗಾಗಿ, ನನ್ನನ್ನ 124 ವರ್ಷದ ಹಿರಿಯ ಮತದಾರರು ಎಂದುಕೊಂಡಿದ್ದಾರೆ. ಈ ತಪ್ಪು ಕೆಲ ದಿನಗಳ ಹಿಂದಷ್ಟೇ ನನಗೆ ತಿಳಿಯಿತು. ಸರಿಪಡಿಸುವಂತೆ ಆಯೋಗಕ್ಕೆ ಮನವಿ ಮಾಡುವೆ ಎಂದಿದ್ದಾರೆ.

ಹರ್ ಘರ್ ತಿರಂಗಾ: ಅಮಿತ್ ಶಾ ಚಾಲನೆ

ದೆಹಲಿ: ಸ್ವಾತಂತ್ರ್ಯ ದಿನಾಚರಣೆ ಹಿನ್ನೆಲೆ ದೇಶಾದ್ಯಂತ 'ಹರ್ ಘರ್ ತಿರಂಗಾ'(ಪ್ರತಿ ಮನೆ ಮೇಲೂ ರಾಷ್ಟ್ರಧ್ವಜ) ಅಭಿಯಾನಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ತಮ್ಮದೇ ನಿವಾಸದ ಮೇಲೆ ಬುಧವಾರ ರಾಷ್ಟ್ರಧ್ವಜ ಹಾರಿಸುವ ಮೂಲಕ ಚಾಲನೆ ನೀಡಿದರು.

ದೆಹಲಿಯ ಕೃಷ್ಣ ಮೆನನ್ ಮಾರ್ಗದ ನಿವಾಸದ ತಾರಸಿ ಯಲ್ಲಿ ಪತ್ನಿ ಸೋನಲ್ ಶಾ ಜತೆಗೂಡಿ ಅಮಿತ್ ಶಾ ತ್ರಿವರ್ಣ ಧ್ವಜ ಹಾರಿಸಿದರು. 'ಆಜಾದಿ ಕಾ ಅಮೃತ್ ಮಹೋ ತ್ಸವ' ಘೋಷವಾಕ್ಯದೊಡನೆ ಆರಂಭಿಸಲಾದ ಹರ್ ಘರ್ ತಿರಂಗಾ ಅಭಿಯಾನ ಈ ವರ್ಷ 4ನೇ ಆವೃತ್ತಿಯಾಗಿದೆ. ಈ ವರ್ಷ 5 ಲಕ್ಷಕ್ಕೂ ಹೆಚ್ಚು ಮಂದಿ ಅಭಿಯಾನಕ್ಕೆ ನೋಂದಾಯಿಸಿ ಕೊಂಡಿದ್ದಾರೆ ಎಂದು ಕೇಂದ್ರದ ಸಂಸ್ಕೃತಿ ಸಚಿವಾಲಯ ಘೋಷಿ ಸಿದೆ. ದೇಶಾದ್ಯಂತದ ನಾಗರಿ ಕರು ತಮ್ಮ ಮನೆಗಳ ಮೇಲೆ ರಾಷ್ಟ್ರಧ್ವಜ ಹಾರಿಸುವಂತೆ ಕರೆ ನೀಡಿದೆ.ಇದು ಕೇವಲ ಅಭಿಯಾನವಲ್ಲ. ರಾಷ್ಟ್ರಧ್ವಜದ ಕಾಲಾತೀತ ಬಣ್ಣಗಳಡಿ 140 ಕೋಟಿ ಭಾರತೀಯರನ್ನು ಒಗ್ಗೂಡಿಸುವ ಭಾವನಾತ್ಮಕ ಚಳವಳಿ. ಇದು ದೇಶಭಕ್ತಿ ಮೂಡಿಸುವುದು, ನಾಗರಿಕ ಹೆಮ್ಮೆಯ ಭಾವ ತರು ವುದು, ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯದ ಜೀವಂತ ಸಂಕೇತವಾಗಿ ಜನಜಾಗೃತಿ ಮೂಡಿಸುವ ಗುರಿ ಹೊಂದಿದೆ ಎಂದು ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಹೇಳಿದ್ದಾರೆ.

ಮತಗಳವು ಆರೋಪಕ್ಕೆ ಬಿಜೆಪಿ ತಿರುಗೇಟು

ಪೌರತ್ವ ಮುನ್ನವೇ ಮತದಾರ ಪಟ್ಟಿಗೆ ಸೋನಿಯಾ ಹೆಸರು!

ದೆಹಲಿ: ಕಾಂಗ್ರೆಸ್ ಸಂಸದೀಯ ಪಕ್ಷದ ಮುಖ್ಯಸ್ಥೆ ಸೋನಿಯಾ ಗಾಂಧಿ 1980ರ ದಶಕದಲ್ಲಿಯೇ ದೇಶದ ಚುನಾವಣಾ ಕಾಯಿದೆಯ ನಿಯಮಗಳನ್ನು ಸ್ಪಷ್ಟವಾಗಿ ಉಲ್ಲಂಘಿಸಿದ್ದಾರೆ. ಭಾರತದ ಪೌರತ್ವ ಪಡೆಯುವುದಕ್ಕೂ 3 ವರ್ಷ ಮೊದಲೇ ಮತದಾರರ ಪಟ್ಟಿಗೆ ಹೆಸರು ಸೇರಿಸಿದ್ದಾರೆ. ಚುನಾವಣಾ ಆಯೋಗದ ಮತದಾರರ ಪಟ್ಟಿಯಲ್ಲಿ ಇಂದಿರಾ ಕುಟುಂಬದ ಜತೆ ಸೋನಿಯಾ ಹೆಸರೂ ಇದೆ ಎಂದು ಬಿಜೆಪಿ ಐಟಿ ಸೆಲ್ ಮುಖ್ಯಸ್ಥ ಅಮಿತ್ ಮಾಳವೀಯ ಬುಧವಾರ ಗಂಭೀರ ಆರೋಪ ಮಾಡಿದ್ದಾರೆ.

ಬಿಹಾರ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ವಿರುದ್ಧ ಹಾಗೂ ಕರ್ನಾಟಕದ ಲೋಕಸಭಾ ಕ್ಷೇತ್ರ ಮತ್ತು ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಮತಗಳವು ನಡೆದಿದೆ ಎಂದು ಚುನಾವಣಾ ಆಯೋಗ ಮತ್ತು ಬಿಜೆಪಿ ವಿರುದ್ಧ ಆರೋಪ ಮಾಡಿ ಕಾಂಗ್ರೆಸ್ ನಿರಂತರ ಪ್ರತಿಭಟನೆ ನಡೆಸುತ್ತಿರುವ ವೇಳೆಯಲ್ಲೇ ಕಾಂಗ್ರೆಸ್ ನಾಯಕಿ ವಿರುದ್ಧವೇ ಬಿಜೆಪಿ ಆರೋಪ ಹೊರಿಸಿದೆ.

1980ರಲ್ಲಿ ದೆಹಲಿ ಸಂಸತ್ ಕ್ಷೇತ್ರದ ಮತದಾರರ ಪಟ್ಟಿ ಪರಿಷ್ಕರಿಸಿದಾಗ ಸೋನಿಯಾ ಅವರ ಹೆಸರನ್ನು ಪಟ್ಟಿಗೆ ಸೇರಿಸಲಾಯಿತು. ಈ ಬಗ್ಗೆ ವಿರೋಧ ವ್ಯಕ್ತವಾಗಿದ್ದಕ್ಕೆ 1982ರಲ್ಲಿ ಪಟ್ಟಿಯಿಂದ ಸೋನಿಯಾ ಹೆಸರು ತೆಗೆಸಲಾಯಿತು. 1983ರ ಜ.1ರಂದು ಮತ್ತೆ ಮತದಾರರ ಪಟ್ಟಿಗೆ ಹೆಸರು ಸೇರಿಸಲಾಯಿತು. ಸೋನಿಯಾ ಗಾಂಧಿ ಹೆಸರು ಮತಗಟ್ಟೆ 140ರ ಕ್ರಮ ಸಂಖ್ಯೆ 236ರಲ್ಲಿ ಪಟ್ಟಿಗೆ ಸೇರಿದೆ. ಆದರೆ, ಅವರಿಗೆ ಭಾರತದ ಪೌರತ್ವ ಸಿಕ್ಕಿದ್ದು 1983ರ ಏ.30ರಂದು. ರಾಜೀವ್ ಗಾಂಧಿಯನ್ನು ವರಿಸಿದ ನಂತರವೂ ಸೋನಿಯಾ ಭಾರತದ ಪೌರತ್ವ ಪಡೆಯಲು 15 ವರ್ಷ ತಡ ಮಾಡಿದರು ಎಂದು ಮಾಳವೀಯ 'ಎಕ್ಸ್' ಖಾತೆಯಲ್ಲಿ 1980ರ ಮತದಾರರ ಪಟ್ಟಿಯ ನಕಲು ಪ್ರತಿ ಜತೆ ಮಾಹಿತಿ ಹಂಚಿಕೊಂಡಿದ್ದಾರೆ.

ಭಾರತ ಪ್ರಜೆ ಅಲ್ಲದವರಿಗೆ ಮತದಾರ ಪಟ್ಟಿಗೆ ಹೆಸರು ಸೇರಿಸಲು ಜನತಾ ಪ್ರಾತಿನಿಧ್ಯ ಕಾಯಿದೆ-1950ರ ಸೆಕ್ಷನ್ 16ರಡಿ ಅರ್ಹತೆ ಇರುವುದಿಲ್ಲ.

ಸಾರ್ವಜನಿಕರೇ ಧ್ವನಿ ಎತ್ತಿ ಎಂದ ಖರ್ಗೆ

ಮತ ಕಳವು: ಕಾಂಗ್ರೆಸ್ ಜನಜಾಗೃತಿ ವಿಡಿಯೊ

ದೆಹಲಿ: 'ನಕಲಿ ಮತ ಚಲಾವಣೆ' ಬಗ್ಗೆ ಕಾಂಗ್ರೆಸ್ ಬುಧವಾರ ವಿಡಿಯೊ ಬಿಡುಗಡೆ ಮಾಡಿದೆ. ಆ ಮೂಲಕ 'ವೋಟ್ ಚೋರಿ' ವಿರುದ್ಧದ ಹೋರಾಟಕ್ಕೆ ಹೊಸ ಆಯುಧ ಸೇರಿಸಿಕೊಂಡಿದೆ.

ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ 'ಎಕ್ಸ್' ಖಾತೆಯಲ್ಲಿ 1 ನಿಮಿಷದ ವಿಡಿಯೊ ಹಂಚಿಕೊಂಡು, 'ನಿಮ್ಮ ಮತದ ಕಳವು. ನಿಮ್ಮ ಹಕ್ಕು ಕಳವು, ನಿಮ್ಮ ಗುರುತು ಕಳವು' ಆಗುತ್ತಿದೆ ನೋಡಿ ಎಂದು ಮತದಾರರ ಗಮನ ಸೆಳೆಯಲೆತ್ನಿಸಿದ್ದಾರೆ. ಇನ್ನೊಂದೆಡೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ 'ಬೂತ್ ಪರ್ ವೋಟ್ ಚೋರಿ' ಜಾಹೀರಾತು ಚಿತ್ರ ಹಂಚಿಕೊಂಡಿದ್ದಾರೆ. 'ಸಾಂವಿಧಾನಿಕ ಸಂಸ್ಥೆಗಳನ್ನು ಬಿಜೆಪಿಯ ಹಿಡಿತದಿಂದ ರಕ್ಷಿಸಬೇಕಿದೆ. ಮತ ಕಳವು ಬಗ್ಗೆ ಜನರು ಧ್ವನಿ ಎತ್ತಬೇಕಿದೆ. ಈ ಬಾರಿ ಪ್ರಶ್ನೆ ಮಾಡಿ, ಉತ್ತರ ಪಡೆದುಕೊಳ್ಳಿ' ಎಂದು ಕರೆ ನೀಡಿದ್ದಾರೆ. ಕೇಸರಿ ಟವಲ್ ಹೆಗಲಿಗಿಟ್ಟುಕೊಂಡು ಹಣೆಗೆ ಕುಂಕುಮ ಧರಿಸಿದ ವ್ಯಕ್ತಿಗಳಿಬ್ಬರು ಮತಗಟ್ಟೆಗೆ ಬಂದ ದಂಪತಿಗೆ



'ನಿಮ್ಮ ಓಟು ಅದಾಗಲೆ ಚಲಾವಣೆ ಆಗಿದೆ. ಸುಮ್ಮನೆ ಮನೆಗೆ ಹೋಗಿ' ಎಂದು ಹೇಳಿ ಅವರಿಬ್ಬರನ್ನೂ ವಾಪಸ್ ಕಳುಹಿಸುತ್ತಾರೆ. ಬಳಿಕ ಮತಗಟ್ಟೆ ಅಧಿಕಾರಿಯತ್ತ ನೋಡಿ ನಗುತ್ತಾರೆ. ಮತಗಟ್ಟೆ ಅಧಿಕಾರಿಯೂ ಥಮ್ಸ್ ಅಪ್ ಸಂಕೇತ ತೋರುವುದು ವಿಡಿಯೊದಲ್ಲಿದೆ. ಸ್ವಾತಂತ್ರ್ಯ ದಿನದ ಮುನ್ನಾದಿನವಾದ ಗುರುವಾರ ಜಿಲ್ಲಾ ಕೇಂದ್ರಗಳಲ್ಲಿ 'ಲೋಕತಂತ್ರ ಬಚಾವೋ ಮಶಾಲ್ ಮೆರವಣಿಗೆ' ಹಮ್ಮಿಕೊಂಡಿರುವ ಕಾಂಗ್ರೆಸ್, ಆ.22ರಿಂದ ಸೆ.7ರವರೆಗೆ ರಾಜ್ಯಗಳಲ್ಲಿ 'ವೋಟ್ ಚೋರ್, ಗಡ್ಡಿ ಛೋಡ್' (ಮತ ಕಳ್ಳರೇ ಅಧಿಕಾರ ತ್ಯಜಿಸಿ) ಘೋಷಣೆಯೊಂದಿಗೆ ರ‍್ಯಾಲಿ ನಡೆಸಲು ನಿರ್ಧರಿಸಿದೆ.

ಅಸೀಮ್ ಬಳಿಕ ಪ್ರಧಾನಿ ಶೆಹಬಾಜ್ ಷರೀಫ್ ಗುಡುಗು

ಭಾರತಕ್ಕೆ ಎಂದೂ ಮರೆಯದಂಥ ಪಾಠ

ಇಸ್ಲಾಮಾಬಾದ್: ಪಾಕಿಸ್ತಾನಕ್ಕೆ ಬರಬೇಕಾದ ಸಿಂಧೂ ನದಿಯ ನೀರಿನಲ್ಲಿ ಒಂದು ಹನಿಯನ್ನಾದರೂ ಕಸಿದುಕೊಳ್ಳಲು ಶತ್ರು ದೇಶ ಭಾರತ ಸಾಧ್ಯವಿಲ್ಲ ಎಂದು ಪಾಕ್ ಪ್ರಧಾನಿ ಶೆಹಬಾಜ್ ಷರೀಫ್ ಗುಡುಗಿದ್ದಾರೆ.



ಇಸ್ಲಾಮಾಬಾದ್‌ನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತ ನಾಡಿದ ಷರೀಫ್, ಪಾಕಿಸ್ತಾನಕ್ಕೆ ನೀರು ಹರಿಯುವುದನ್ನು ತಡೆ ಯುವ ಪ್ರಯತ್ನ ಭಾರತ-ಪಾಕ್ ನಡುವಿನ 75 ವರ್ಷಗಳ ಹಿಂದಿನ ಸಿಂಧೂ ಜಲ ಒಪ್ಪಂದದ ಉಲ್ಲಂಘನೆಯಾಗುತ್ತದೆ. ಹಾಗೇನಾದರೂ ಭಾರತ ದುಸ್ಸಾಹಸ ಮಾಡಿದಲ್ಲಿ ಶತ್ರುದೇಶಕ್ಕೆ ಎಂದೆಂದೂ ಮರೆಯಲಾಗದಂತಹ ದೊಡ್ಡ ಪಾಠವನ್ನು ಪಾಕಿಸ್ತಾನ ಕಲಿಸಿಕೊಡಲಿದೆ ಎಂದು ಎಚ್ಚರಿಕೆ ನೀಡಿದ್ದಾರೆ.

ನೀವು ನಮ್ಮ ಪಾಲಿನ ನೀರು ಸಿಂಧೂ ನದಿಪಾತ್ರದಲ್ಲಿ ಹರಿಯುವುದನ್ನು ನಿಲ್ಲಿಸುವುದಾಗಿ ಹೇಳಿದ್ದೀರಿ. ನೀವು ಅಂತಹ ಕ್ರಮಕ್ಕೇನಾದರೂ ಯತ್ನಿಸಿದರೆ ಪಾಕಿಸ್ತಾನ ನಿಮಗೆ ಸರಿಯಾದ ಪಾಠ ಕಲಿಸುತ್ತದೆ ಎಂದು ವೀರಾವೇಶದಿಂದ ಮಾತನಾಡಿದ್ದಾರೆ. ಸಿಂಧೂ ನದಿಯ ನೀರು ಪಾಕಿಸ್ತಾನಕ್ಕೆ ಜೀವಸೆಲೆಯಾಗಿದೆ. ಅಂತಾರಾಷ್ಟ್ರೀಯ ಒಪ್ಪಂದಗಳಡಿ ದೇಶದ ಹಕ್ಕುಗಳ ರಕ್ಷಣೆಯಾಗಬೇಕಿದೆ. ಪಾಕ್ ಸಿಂಧೂ ನದಿ ನೀರು ಹಂಚಿಕೆ ವಿಚಾರದಲ್ಲಿ ಯಾವುದೇ ರಾಜಿ ಮಾಡಿಕೊಳ್ಳಲು ಸಿದ್ಧವಿಲ್ಲ ಎಂದು ಷರೀಫ್ ಹೇಳಿದ್ದಾರೆ.

ಸರಕಾರ ಮೌನ: ಒವೈಸಿ ಗುದ್ದು

ಪಾಕ್ ಪ್ರಧಾನಿಯ ಈ ಎಚ್ಚರಿಕೆ ಮಾತಿಗೆ ಭಾರತ ಸರಕಾರ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಆ ಮೂಲಕ ನೆರೆ ದೇಶದ ಪ್ರಧಾನಿಯ ಮಾತುಗಳನ್ನೇ ಅಲಕ್ಷ್ಯ ಮಾಡಿದೆ. ಆದರೆ, ಎಐಎಂಐಎಂ ಪಕ್ಷದ ನಾಯಕ, ಸಂಸದ ಅಸಾದುದ್ದೀನ್ ಒವೈಸಿ ಅವರು ಪಾಕ್ ಪ್ರಧಾನಿ ಶೆಹಬಾಜ್ ಷರೀಫ್‌ರ 'ತಕ್ಕಪಾಠ ಕಲಿಸುವ' ಮತ್ತು ಸೇನಾಧಿಕಾರಿ ಅಸೀಮ್ ಮುನೀರ್‌ರ 'ಅಣ್ವಸ್ತ್ರ ಬಳಕೆ' ಬೆದರಿಕೆ ಮಾತಿಗೆ, 'ನಮ್ಮ ಬಳಿ ಬ್ರಹ್ಮೋಸ್ ಕ್ಷಿಪಣಿಗಳಿವೆ, ನಿಮ್ಮ ಗೊಡ್ಡು ಬೆದರಿಕೆಗಳಿಗೆ ಭಾರತ ಹೆದರುವುದಿಲ್ಲ. ಅದಾಗಲೇ ಸಿಂಧೂ ನದಿ ಒಪ್ಪಂದ ಅಮಾನತಿನಲ್ಲಿ ಇರಿಸಲಾಗಿದೆ' ಎಂದು ತಿರುಗೇಟು ನೀಡಿದ್ದಾರೆ.

ಉತ್ತಮ ಸಂಬಂಧ: ವಿದೇಶಾಂಗ | ವ್ಯಾಪಾರ ಚರ್ಚೆಗೆ ಭಾರತ ಅಸಹಕಾರ: ವಿತ್ತ ಸಚಿವ

ಅಮೆರಿಕ ಇಬ್ಬಗೆ ನೀತಿ ಮುಂದುವರಿಕೆ

ವಾಷಿಂಗ್ಟನ್: ವ್ಯಾಪಾರ ಒಪ್ಪಂದ ಕುರಿತು ಚರ್ಚೆ ಮುಂದುವರಿಸುವುದಕ್ಕೆ ಭಾರತ ಅಸಹಕಾರ ತೋರುತ್ತಿದೆ. ಹಾಗಾಗಿಯೇ ಒಪ್ಪಂದ ಅಂತಿಮ ಹಂತಕ್ಕೆ ಬಂದಿಲ್ಲ ಎಂದು ಅಮೆರಿಕದ ವಿತ್ತ ಸಚಿವ ಸ್ಕಾಟ್ ಬೆಸೆಂಟ್ ಮಂಗಳವಾರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಉಭಯ ದೇಶಗಳ ಹಿತಾಸಕ್ತಿಯ ವ್ಯಾಪಾರ ಒಪ್ಪಂದ ಮಹತ್ವಾಕಾಂಕ್ಷೆಯದಾಗಿದೆ. ಈ ಮಾತುಕತೆ ಅಕ್ಟೋಬರ್ ಮಾಸಾಂತ್ಯಕ್ಕೆ ಪೂರ್ಣಗೊಳ್ಳುವ ನಿರೀಕ್ಷೆ ಇಟ್ಟುಕೊಂಡಿದ್ದೇವೆ ಎಂದೂ ಸ್ಕಾಟ್ ಹೇಳಿದ್ದಾರೆ. ಇದಕ್ಕೆ ಪ್ರತಿಯಾಗಿ ಭಾರತವನ್ನು ಸಮಾಧಾನಪಡಿಸುವಂತೆ ವಿದೇಶಾಂಗ ಸಚಿವಾಲಯದ ವಕ್ತಾರೆ ಟ್ಯಾನಿ ಬ್ರೂಸ್ ಪ್ರತಿಕ್ರಿಯಿಸಿದ್ದಾರೆ. ಭಾರತ-ಪಾಕಿಸ್ತಾನದ ಜತೆಗಿನ ನಮ್ಮ ಸಂಬಂಧ ಉತ್ತಮವಾಗಿಯೇ ಇದೆ. ಎರಡೂ ದೇಶಗಳ ಜತೆಗೆ ಮೊದಲಿನಂತೆಯೇ ನಂಟು ಮುಂದುವರಿಸಲು ಅಮೆರಿಕ ಇಚ್ಛಿಸುತ್ತದೆ ಎಂಬ ಹೇಳಿಕೆ ನೀಡಿದ್ದಾರೆ. ಭಾರತ ರಷ್ಯಾಗೆ ಬಲು ಆಪ್ತವಾಗಿದೆ, ರಷ್ಯಾದಿಂದ ಕಡಿಮೆ ಬೆಲೆ ಅಪಾರ ಪ್ರಮಾಣ ದಲ್ಲಿ ಕಚ್ಚಾತೈಲ ಖರೀದಿಸುತ್ತಿದೆ ಎಂಬ ಕಾರಣಕ್ಕೆ ಭಾರತದ ಮೇಲೆ ಮುನಿದಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ದಿಢೀರ್ ಎಂಬಂತೆ ಈಗ ಪಾಕಿಸ್ತಾನವನ್ನು ಅಪ್ಪಿ ಮುದ್ದಾಡಲಾರಂಭಿಸಿದ್ದಾರೆ. ಪಾಕ್ ಸೇನಾ ಮುಖ್ಯಸ್ಥ ಅಸೀಮ್ ಮುನೀರ್‌ರನ್ನು ಎರಡು ತಿಂಗಳ ಅವಧಿಯಲ್ಲಿ 2 ಬಾರಿ ಅಮೆರಿಕಕ್ಕೆ ಕರೆಸಿಕೊಂಡು ವಿಶೇಷ ಔತಣ ನೀಡಿದ್ದಾರೆ. ಪಾಕ್ ಕೋರಿಕೆಯಂತೆಯೇ ಬಲೂಚಿಸ್ತಾನ ಸ್ವಾತಂತ್ರ್ಯ ಹೋರಾಟಗಾರರ 'ಬಲೂಚ್ ಲಿಬರೇಷನ್ ಆರ್ಮಿ' (ಬಿಎಲ್‌ಎ)ಯನ್ನು ವಿದೇಶಿ ಉಗ್ರ ಸಂಘಟನೆ ಎಂದೂ ಮಂಗಳವಾರ ಘೋಷಿಸಿದ್ದಾರೆ.

ಇನ್ನೊಂದೆಡೆ, ಭಾರತದ ಮೇಲಿನ ಪ್ರತಿಸುಂಕವನ್ನು ಶೇ.25ರಿಂದ ಶೇ.50ಕ್ಕೆ ಏರಿಸಿದ್ದಾರೆ. ದಿನನಿತ್ಯ ಒಂದಲ್ಲಾ ಒಂದು ಕಾರಣಕ್ಕೆ ಭಾರತವನ್ನು ದೂಷಿಸುವ, ಭಾರತವನ್ನು ವೃಥಾ ಕೆರಳಿಸುವ ನಡೆ ಮುಂದುವರಿಸಿದ್ದಾರೆ. ಪಾಕ್ ಸೇನಾಧಿಕಾರಿ ಅಸೀಮ್ ಮುನೀರ್ ಅಮೆರಿಕ ನೆಲದಲ್ಲಿ ನಿಂತುಕೊಂಡೇ ಭಾರತ ವಿರುದ್ಧ ಅಣ್ವಸ್ತ್ರ ಪ್ರಯೋಗದ ಬೆದರಿಕೆ ಹಾಕುವುದಕ್ಕೂ ಅವಕಾಶ ಮಾಡಿಕೊಟ್ಟಿದ್ದಾರೆ.

ಅಮೆರಿಕ ಕೀಟಲೆ

ಭಾರತದ ಕುರಿತಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ನಿಲುವು 'ಮಗುವನ್ನೂ ಚಿವುಟುವ, ತೊಟ್ಟಿಲನ್ನೂ ತೂಗುವ' ಕೀಟಲೆ ಸ್ವಭಾವದಂತಿದೆ ಎಂದೇ ವಿಶ್ಲೇಷಿಸಲಾಗಿದೆ.

ಚೀನಾಕ್ಕೆ ನೇರ ವಿಮಾನ ಸಂಚಾರ ಮಾತುಕತೆ

ದೆಹಲಿ: ಭಾರತ-ಚೀನಾ ನಡುವೆ ನೇರ ವಿಮಾನ ಸಂಚಾರ ಪುನಾರಂಭ ಕುರಿತು ಮಾತುಕತೆ ಮುಂದುವರಿದಿವೆ. ಮಾಸಾಂತ್ಯದಲ್ಲಿ ಪ್ರಧಾನಿ ನರೇಂದ್ರ ಮೋದಿ 'ಶಾಂಘೈ ಸಹಕಾರ ಸಂಸ್ಥೆ'(ಎಸ್‌ಸಿಒ) ವಾರ್ಷಿಕ ಶೃಂಗಸಭೆಯಲ್ಲಿ ಭಾಗಿಯಾಗಲು ಚೀನಾದ ಟಿಯಾಂಜಿನ್ ನಗರಕ್ಕೆ ಭೇಟಿ ನೀಡಲಿರುವ ಹಿನ್ನೆಲೆ ಈ ಬೆಳವಣಿಗೆ ನಡೆದಿದೆ ಎಂದು ತಿಳಿದುಬಂದಿದೆ.

ಗಡಿಭಾಗದ 4 ಸಾರಿಗೆ ಸಂಚಾರ ಬಿಂದುಗಳಲ್ಲಿ ವ್ಯಾಪಾರ ಪುನಾರಂಭಕ್ಕೆ ಉಭಯ ದೇಶಗಳ ಮಧ್ಯೆ ಮಾತುಕತೆ ಸಕಾರಾತ್ಮಕವಾಗಿ ಸಾಗಿದೆ. ಹೊಸ ವಾಯು ಮಾರ್ಗ ಸೇವೆಗಳ ಒಪ್ಪಂದ ದೃಢೀಕರಿಸಲು ಎರಡೂ ದೇಶಗಳು ಎದುರು ನೋಡುತ್ತಿವೆ. ಚೀನಾಕ್ಕೆ ವಿಮಾನ ಸೇವೆ ಪುನಾರಂಭ ಸಾಧ್ಯತೆ ಬಗ್ಗೆ ಏರ್ ಇಂಡಿಯ ಸಂಸ್ಥೆಗೂ ತಿಳಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಜುಲೈನಲ್ಲಿ ಚೀನಾ ಪ್ರಜೆಗಳಿಗೆ ಪ್ರವಾಸಿ ವೀಸಾ ವಿತರಣೆ ಮತ್ತೆ ಆರಂಭಿಸಲಾಗಿದೆ.

ಕೋವಿಡ್-19ರ ಸಂದರ್ಭ 2020ರಲ್ಲಿ ಎರಡೂ ದೇಶಗಳ ನಡುವಿನ ವಿಮಾನ ಸಂಚಾರ ಸ್ಥಗಿತಗೊಂಡಿತು. ಪೂರ್ವ ಲಡಾಖ್ ಗಡಿ ಸಂಘರ್ಷದ ಬಳಿಕ ವಾಯು ಪ್ರದೇಶ ಬಳಕೆಗೂ ಅವಕಾಶ ನಿರಾಕರಿಸಲಾಗಿತ್ತು.

ಬಾಂಗ್ಲಾ ಉತ್ಪನ್ನಗಳಿಗೆ ಭಾರತ ಬಿಗಿ ನಿರ್ಬಂಧ

ದೆಹಲಿ: ಮಧ್ಯಂತರ ಸರಕಾರದ ಮುಖ್ಯಸ್ಥ ಮೊಹಮ್ಮದ್ ಯೂನುಸ್ ಆಡಳಿತ ಕಾಲದಲ್ಲಿ ಭಾರತದ ಜತೆಗಿನ ಬಾಂಗ್ಲಾದೇಶದ ಸಂಬಂಧ ಹದಗೆಟ್ಟಿದೆ. ಹಾಗಾಗಿ, ಬಾಂಗ್ಲಾದೇಶದಿಂದ ಭಾರತಕ್ಕೆ ಆಮದಾಗುವ ಸರಕುಗಳ ಮೇಲೆ ಕೇಂದ್ರ ಸರಕಾರ ಕಠಿಣ ನಿರ್ಬಂಧಗಳನ್ನು ವಿಧಿಸಿದೆ. ಗಡಿಯಲ್ಲಿನ ಭೂಮಾರ್ಗ ಮೂಲಕ ಆಮದು ಪ್ರಕ್ರಿಯೆ ಪೂರ್ಣ ನಿಷೇಧಿಸಿದೆ.

ಬಾಂಗ್ಲಾದಿಂದ ಭಾರತಕ್ಕೆ ರಫ್ತಾಗುವ ಎಲ್ಲಾ ಸರಕು ಮಹಾರಾಷ್ಟ್ರದ ಜವಾಹರಲಾಲ್ ನೆಹರು ಬಂದರು ಮೂಲಕವೇ ಬರತಕ್ಕದ್ದು ಎಂದು ಹೇಳಲಾಗಿದೆ. ಹಾಗಾಗಿ ಭಾರತಕ್ಕೆ ಸರಕು ಸಾಗಣೆ ಮಾಡುವ ಹಡಗುಗಳು ಬಂಗಾಲ ಕೊಲ್ಲಿಯಿಂದ ಹಿಂದೂ ಮಹಾಸಾಗರ ಮತ್ತು ಅರಬ್ಬಿ ಸಮುದ್ರದಲ್ಲಿ ಸಾವಿರಾರು ನಾಟಿಕಲ್ ಮೈಲು ಸಂಚರಿಸಿ ಮಹಾರಾಷ್ಟ್ರದ ಬಂದರು ತಲುಪ ಬೇಕಿದೆ. ಜವಾಹರಲಾಲ್ ನೆಹರು ಬಂದರಿನಲ್ಲಿ ಕಟ್ಟುನಿಟ್ಟಾದ ತಪಾಸಣೆ ಮತ್ತು ಕಸ್ಟಮ್ಸ್ ಪ್ರಕ್ರಿಯೆ ಜಾರಿಗಾಗಿ ಈ ಕ್ರಮ ಕೈಗೊಳ್ಳಲಾಗಿದೆ. ಇದರಿಂದ, ಬಾಂಗ್ಲಾ ವರ್ತಕರು, ರಫ್ತುದಾರರಿಗೆ ಸಾರಿಗೆ ವೆಚ್ಚವೇ ಹೆಚ್ಚಾಗಲಿದೆ ಎಂದು ತಿಳಿದುಬಂದಿದೆ. ಬಾಂಗ್ಲಾ ದಿಂದ ಜವಳಿ, ಕೃಷಿ ಉತ್ಪನ್ನ ಭಾರತಕ್ಕೆ ರಫ್ತಾಗುತ್ತವೆ. ಈ ನಿರ್ಧಾರ ಹಿಂದಿನ ಕಾರಣದ ಬಗ್ಗೆ ಸರಕಾರ ವಿವರ ಬಹಿರಂಗಪಡಿಸಿಲ್ಲ. ಆದರೆ, ಗಡಿ ಭದ್ರತೆ, ಕಳ್ಳಸಾಗಣೆ ನಿಯಂತ್ರಣಕ್ಕಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿದುಬಂದಿದೆ.

ಉರಿ ಭಾಗ ನುಸುಳುವಿಕೆ ತಡೆ: ಯೋಧ ಹುತಾತ್ಮ

ಉರಿ: ಭಾರತದ 'ಆಪರೇಷನ್ ಸಿಂದೂರ್' ಸೇನಾ ಕಾರ್ಯಾಚರಣೆ ಬಳಿಕ ಹೆದರಿ ಸುಮ್ಮನಾಗಿದ್ದ ಪಾಕಿಸ್ತಾನ ಮೂಲದ ಭಯೋತ್ಪಾದಕರು, ಈಗ ಮತ್ತೆ ಭಾರತದೊಳಕ್ಕೆ ನುಸುಳುವ ಪ್ರಯತ್ನ ಆರಂಭಿಸಿದ್ದಾರೆ. ಜಮ್ಮು-ಕಾಶ್ಮೀರದ ಉರಿ ಸೆಕ್ಟಾರ್‌ನಲ್ಲಿ ಗಡಿ ನಿಯಂತ್ರಣ ರೇಖೆ(ಎಲ್‌ಒಸಿ) ಉದ್ದಕ್ಕೂ ಪಾಕ್ ಮೂಲದ ಉಗ್ರರು ಗಡಿದಾಟಿ ಭಾರತದೊಳಕ್ಕೆ ನುಸುಳುವುದಕ್ಕೆ ಹೊಂಚು ಹಾಕುತ್ತಲೇ ಇದ್ದಾರೆ. ಉತ್ತರ ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯ ಉರಿ ಭಾಗದ ಚುರುಂಡಾ ಎಂಬ ಸ್ಥಳದಲ್ಲಿ ಆ.12ರ ತಡರಾತ್ರಿಯಿಂದಲೂ ಪಾಕ್ ಕಡೆಯಿಂದ ಹಲವರು ಭಾರತದ ಗಡಿಯೊಳಗೆ ನುಸುಳಲು ಯತ್ನಿಸುತ್ತಲೇ ಇದ್ದರು. ಒಳನುಸುಳುವಿಕೆ ಯತ್ನ ಬುಧವಾರ ಬೆಳಗ್ಗೆ ನಡೆದಾಗ ಆ ಯತ್ನವನ್ನು ಭಾರತೀಯ ಸೇನೆ ಬುಧವಾರ ವಿಫಲಗೊಳಿಸಿದೆ. ಈ ವೇಳೆ ನಡೆದ ಗುಂಡಿನ ಚಕಮಕಿಯಲ್ಲಿ ಭಾರತೀಯ ಯೋಧರೊಬ್ಬರು ಹುತಾತ್ಮರಾಗಿ ದ್ದಾರೆ. ಭಾರತೀಯ ಸೇನೆಯ ಬಲವಾದ ಪ್ರತಿರೋಧಕ್ಕೆ ಅಂಜಿ ಪಾಕ್ ಉಗ್ರರು ಜಾಗ ಖಾಲಿ ಮಾಡಿದ್ದಾರೆ. ಸ್ಥಳದಲ್ಲಿ ಗಡಿ ಭದ್ರತಾ ಪಡೆ ಕಟ್ಟೆಚ್ಚರ ವಹಿಸಿದೆ ಎಂದು ಸೇನೆಯ ಅಧಿಕಾರಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಆ.11ರಂದು ಕೂಡಾ ಗಡಿ ಬಳಿ ಅನುಮಾನಾಸ್ಪದ ಚಲನವಲನ ವನ್ನು ಗಡಿ ಭದ್ರತಾ ಪಡೆ(ಬಿಎಸ್‌ಎಫ್) ಸಿಬ್ಬಂದಿ ಗಮನಿಸಿ ಗುಂಡು ಹಾರಿಸಿತ್ತು. ಆಗ ಒಬ್ಬ ಗಾಯಗೊಂಡಿದ್ದ.

ಬೇಹು: ಡಿಆರ್‌ಡಿಒ ಗೆಸ್ಟ್‌ಹೌಸ್ ನೌಕರ ಸೆರೆ

ಜೈಪುರ: ರಕ್ಷಣಾ ಕ್ಷೇತ್ರದ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ(ಡಿಆರ್‌ಡಿಒ)ಯ ಅತಿಥಿಗೃಹದಲ್ಲಿ ಕೆಲಸ ಮಾಡುತ್ತಲೇ ಪಾಕಿಸ್ತಾನದ ಪರ ಬೇಹುಗಾರಿಕೆ ನಡೆಸುತ್ತಿದ್ದ ಗೆಸ್ಟ್‌ಹೌಸ್ ಮ್ಯಾನೇಜರ್ (ವ್ಯವಸ್ಥಾಪಕ) ನನ್ನು ರಾಜಸ್ಥಾನ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಡಿಆರ್‌ಡಿಒ ವಿಜ್ಞಾನಿಗಳ ಚಲನವಲನ ಮೇಲೆ ನಿಗಾ ಇರಿಸಿ ಆ ಮಾಹಿತಿಯನ್ನು ಪಾಕ್‌ಗೆ ದಾಟಿಸಿ ಹಣ ಪಡೆಯುತ್ತಿದ್ದ ಆರೋಪದ ಮೇಲೆ ಜೈಸಲ್ಮೇರ್‌ನ ಡಿಆರ್‌ಡಿಒ ಅತಿಥಿಗೃಹದ ವ್ಯವಸ್ಥಾಪಕ ಮಹೇಂದ್ರ ಪ್ರಸಾದ್(32)ನನ್ನು ಬಂಧಿಸಲಾಗಿದೆ. ಉತ್ತರಾಖಂಡ ಮೂಲದ ಪ್ರಸಾದ್, ಅತಿಥಿ ಗೃಹದಲ್ಲಿ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದ. ಈತ ಉನ್ನತ ಶ್ರೇಣಿ ವಿಜ್ಞಾನಿಗಳ ಇ-ಮೇಲ್ ಮತ್ತು ದೂರವಾಣಿ ಸಂಖ್ಯೆ ಮೊದಲಾದ ವೈಯಕ್ತಿಕ ಮಾಹಿತಿಗಳನ್ನು ಸಂಗ್ರಹಿಸಿ ಪಾಕ್‌ಗೆ ರವಾನಿಸಿದ್ದ. ಬಂಧಿತನಿಂದ 2 ಮೊಬೈಲ್ ಫೋನ್ ವಶಪಡಿಸಿಕೊಂಡಿದ್ದು, ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿಕೊಡಲಾಗಿದೆ.

ಗವಿಸಿದ್ದಪ್ಪ ಹತ್ಯೆ ಪ್ರಕರಣ: 50 ಲಕ್ಷ ಪರಿಹಾರ, ಕುಟುಂಬ ಸದಸ್ಯರಿಗೆ ನೌಕರಿ ಕೊಡಲು ವಿಜಯೇಂದ್ರ ಒತ್ತಾಯ

ಎನ್‌ಐಎ ತನಿಖೆಗೆ ಆಗ್ರಹ

ಗವಿಸಿದ್ದಪ್ಪ ನಾಯಕ ಕೊಲೆ ಪ್ರಕರಣ ಎನ್‌ಐಎ ತನಿಖೆಗೆ ವಹಿಸಬೇಕೆಂದು ಬಿಜೆಪಿ–ಜೆಡಿಎಸ್ ನಿಯೋಗ ರಾಜ್ಯಪಾಲರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು.

ಬೆಂಗಳೂರು: ಕೊಪ್ಪಳದ ಗವಿಸಿದ್ದಪ್ಪ ನಾಯಕ ಕೊಲೆ ಪ್ರಕರಣವನ್ನು ಎನ್‌ಐಎಗೆ ವಹಿಸಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆಗ್ರಹಿಸಿದ್ದಾರೆ.

ಮುಸ್ಲಿಂ ಮತಾಂಧರಿಂದ ಹತ್ಯೆಯಾದ ಕೊಪ್ಪಳದ ಗವಿಸಿದ್ದಪ್ಪ ನಾಯಕ ಅವರ ಪ್ರಕರಣ ಎನ್‌ಐಎ ತನಿಖೆಗೆ ವಹಿಸಬೇಕೆಂದು ಬಿಜೆಪಿ–ಜೆಡಿಎಸ್ ನಿಯೋಗ ರಾಜ್ಯಪಾಲರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಕಾನೂನಿನಲ್ಲಿ ಈ ಬಡ ಕುಟುಂಬಕ್ಕೆ ಕನಿಷ್ಠ 50 ಲಕ್ಷ ಪರಿಹಾರ ನೀಡಬೇಕು. ಎರಡು ಎಕರೆ ಜಮೀನು ನೀಡಬೇಕು. ಕುಟುಂಬದ ಸದಸ್ಯರಿಗೆ ಸರಕಾರಿ ನೌಕರಿ ಕೊಡಬೇಕು ಎಂದು ಆಗ್ರಹಿಸಿದರು.

ಸದನದಲ್ಲಿ ಈ ವಿಷಯ ಪ್ರಸ್ತಾಪಿಸಿದ್ದೇನೆ. ಮಾಜಿ ಸಚಿವ ಶ್ರೀರಾಮುಲು, ರಾಜು ಗೌಡ, ಶಿವನಗೌಡ ನಾಯಕ, ಜನಾರ್ದನ ರೆಡ್ಡಿ ಸಂತ್ರಸ್ತನ ಕುಟುಂಬದವರನ್ನು ಭೇಟಿ ಮಾಡಿದ್ದಾರೆ. ಇಂಥ ಕೊಲೆಗಡುಕರಿಗೆ ಈ ಕಾಂಗ್ರೆಸ್ ಸರಕಾರದ ಬಗ್ಗೆ ವಿಪರೀತ ವಿಶ್ವಾಸ ಇದೆ. ಇದರಿಂದ ಮಂಗಳೂರು ಸೇರಿ ವಿವಿಧೆಡೆ ಸರಣಿ ಕೊಲೆಗಳು ನಡೆಯುತ್ತಿವೆ. ಹೀಗಾಗಿ ರಾಜ್ಯಪಾಲರನ್ನು ಭೇಟಿ ಮಾಡಿದ್ದು, ಸರಕಾರದ ಮೇಲೆ ಒತ್ತಡ ಹೇರುವಂತೆ ಮನವಿ ಮಾಡಿದ್ದೇವೆ ಎಂದರು. ಮೃತರು ಬಿಜೆಪಿ, ಕಾಂಗ್ರೆಸ್ ಅಥವಾ ಜೆಡಿಎಸ್ ಕಾರ್ಯಕರ್ತನೇ ಇರಲಿ. ಬೇರೆ ಪಕ್ಷದಲ್ಲಿ ಹಿಂದೂ ಕಾರ್ಯಕರ್ತ ಇರಬಾರದು ಎಂದೇನಿಲ್ಲ. ಇದು ಬಹಳ ಗಂಭೀರವಾದ ವಿಚಾರ. ಇಡೀ ರಾಜ್ಯದಲ್ಲಿ ಮಾತ್ರವಲ್ಲದೇ ದೇಶದಲ್ಲೇ ಸುದ್ದಿಯಾಗಿದೆ. ಇದಕ್ಕಾಗಿ ರಾಜ್ಯ ಸರಕಾರ ಇದನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಒತ್ತಡ ಹೇರುವುದಾಗಿ ತಿಳಿಸಿದರು.

ವಿರೋಧ ಪಕ್ಷದ ನಾಯಕ ಆರ್.ಅಶೋಕ ಸೇರಿದಂತೆ ಬಿಜೆಪಿ–ಜೆಡಿಎಸ್ ಶಾಸಕರು ಮತ್ತು ವಿಧಾನಪರಿಷತ್ ಸದಸ್ಯರು ಉಪಸ್ಥಿತರಿದ್ದರು.

ಹಿಂದೂ ಪರ ಕಾರ್ಯಕರ್ತರ ಹತ್ಯೆ ಆದಾಗ ಗೃಹ ಸಚಿವರು, ನನಗೆ ಗೊತ್ತಿಲ್ಲ. ನನಗೆ ಮಾಹಿತಿ ಇಲ್ಲ. ಇದು ಆಗಬಾರದಿತ್ತು ಎಂದು ಹಾರಿಕೆಯ ಉತ್ತರ ನೀಡುತ್ತಾರೆ. ಗೃಹ ಸಚಿವರು ಏನು ಮಾಡುತ್ತಿದ್ದಾರೆ? ಈ ಸರಕಾರ ನಮ್ಮ ಭಾಗದಲ್ಲಿ ದ್ವೇಷ ಬೆಳೆಸುವ ಕೆಲಸ ಮಾಡುತ್ತಿದೆ. ಮುಸ್ಲಿಂ ಹುಡುಗಿಯೊಬ್ಬಳನ್ನು ಪ್ರೀತಿ ಮಾಡಿದ ಕಾರಣಕ್ಕೆ ಗವಿಸಿದ್ದಪ್ಪ ನಾಯಕ ಹತ್ಯೆಯಾಗಿದ್ದಾನೆ. ಯಾರೂ ಪ್ರೀತಿ ಮಾಡಬಾರದೇ?

– **ಶ್ರೀರಾಮುಲು** ಮಾಜಿ ಶಾಸಕ

ಮುಖ್ಯಮಂತ್ರಿ ರಾಜೀನಾಮೆಗೆ ಬಿ.ಶ್ರೀರಾಮುಲು ಆಗ್ರಹ

ಮಾಜಿ ಸಚಿವ ಬಿ.ಶ್ರೀರಾಮುಲು ಮಾತನಾಡಿ, ಬೀದರ್, ಕಲಬುರಗಿ, ರಾಯಚೂರು, ಬಳ್ಳಾರಿ, ಕೊಪ್ಪಳದ ಜನತೆ ಜಾತ್ಯತೀತವಾಗಿ ಎಲ್ಲರನ್ನೂ ಪ್ರೀತಿಸುವವರು. ಈ ಗ್ಯಾರಂಟಿ ಸರಕಾರ ಬಂದ ಬಳಿಕ ಬಡವರ, ಹಿಂದೂಪರ ಕಾರ್ಯಕರ್ತರ ಪ್ರಾಣಕ್ಕೆ ಗ್ಯಾರಂಟಿ ಇಲ್ಲದ ಪರಿಸ್ಥಿತಿ ಬಂದಿದೆ ಎಂದು ಟೀಕಿಸಿದರು. ಈ ಹತ್ಯೆ ಹಿನ್ನೆಲೆಯಲ್ಲಿ ಗುಪ್ತಚರ ಇಲಾಖೆ ಜವಾಬ್ದಾರಿ ಹೊತ್ತ ಮುಖ್ಯಮಂತ್ರಿ ರಾಜೀನಾಮೆ ನೀಡಬೇಕು. ಗುಪ್ತಚರ ಇಲಾಖೆ ವಿಫಲತೆಗೆ ಮುಖ್ಯಮಂತ್ರಿಗಳೇ ಹೊಣೆಗಾರರು. ಕಾಂಗ್ರೆಸ್ ಸರಕಾರ ನಿದ್ದೆ ಮಾಡುತ್ತಿದೆಯೇ ಎಂದು ಪ್ರಶ್ನಿಸಿದರಲ್ಲದೆ, ಮುಖ್ಯಮಂತ್ರಿಗಳು ಕುರ್ಚಿ ಉಳಿಸಿಕೊಳ್ಳುವುದನ್ನು ಬಿಟ್ಟು ಬೇರೇನೂ ಮಾಡುತ್ತಿಲ್ಲ ಎಂದು ದೂರಿದರು.

ಸದನದಲ್ಲಿಯೂ ಗದ್ದಲ

ಇದೇ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ಶಾಸಕ ಬಿ.ವೈ. ವಿಜಯೇಂದ್ರ, ಮುಸ್ಲಿಂ ಧರ್ಮದ ಯುವತಿಯನ್ನು ಪ್ರೀತಿಸಿದ್ದಾನೆ ಎಂಬ ಕಾರಣಕ್ಕಾಗಿ, ಹಿಂದೂ ಕಾರ್ಯಕರ್ತನಾಗಿದ್ದ ವಾಲ್ಮೀಕಿ ಸಮುದಾಯದ ಗವಿಸಿದ್ದಪ್ಪ ಎಂಬ ಯುವಕನನ್ನು ಸೈಯದ್ ಎಂಬ ವ್ಯಕ್ತಿ ಮಚ್ಚಿನಿಂದ ಕೊಚ್ಚಿ ಕೊಲೆ ಮಾಡಿದ್ದಾನೆ. ಕೊಲೆಗೆ ಹಿಂದಿನ ದಿನ ಸೈಯದ್ ಮಚ್ಚು ಹಿಡಿದುಕೊಂಡು ಇನ್‌ಸ್ಟಾದಲ್ಲಿ ಪೋಸ್ಟ್ ಹಾಕಿದ್ದ, ಪೊಲೀಸರು ಮುಂಜಾಗ್ರತೆಯಾಗಿ ಆರೋಪಿಯ ವಿರುದ್ಧ ಕ್ರಮ ಕೈಗೊಂಡಿದ್ದರೆ ಹತ್ಯೆಯನ್ನು ತಪ್ಪಿಸಬಹುದಿತ್ತು ಎಂದು ಹೇಳಿದರು. ಗವಿಸಿದ್ದಪ್ಪ ಬಡ ಕುಟುಂಬದವರಾಗಿದ್ದು ಅವರ ಕುಟುಂಬಕ್ಕೆ ರಾಜ್ಯ ಸರಕಾರ 50 ಲಕ್ಷ ರು. ಪರಿಹಾರ, ಎರಡು ಎಕರೆ ಭೂಮಿ ಹಾಗೂ ಕುಟುಂಬದ ಸದಸ್ಯರಿಗೆ ಸರಕಾರಿ ಉದ್ಯೋಗ ನೀಡಬೇಕು. ಇದು ಸುಹಾಸ್‌ಶೆಟ್ಟಿ ಮಾದರಿಯಲ್ಲೇ ನಡೆದಿರುವ ಕೊಲೆಯಾಗಿದ್ದು, ಸ್ಥಳೀಯ ಪೊಲೀಸರ ಮೇಲೆ ಜನ ವಿಶ್ವಾಸ ಕಳೆದುಕೊಂಡಿದ್ದಾರೆ ಹೀಗಾಗಿ ಎನ್‌ಐಎ ತನಿಖೆಗೆ ಒಪ್ಪಿಸಬೇಕು ಎಂದು ಆಗ್ರಹಿಸಿದರು.

ಇನ್ನೊಂದು ವಾರ ಭಾರೀ ಮಳೆ

ಬೆಂಗಳೂರು: ಬಂಗಾಳಕೊಲ್ಲಿಯಲ್ಲಿ ಚಂಡಮಾರುತ ಹಾಗೂ ವಾಯುಭಾರ ಕುಸಿತದಿಂದಾಗಿ ರಾಜ್ಯಾದ್ಯಂತ ಧಾರಾಕಾರ ಮಳೆ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ನಗರದ ವಿವಿಧ ಭಾಗಗಳಲ್ಲಿ ಮೂರು ದಿನಗಳಿಂದ ಮಳೆ ಮುಂದುವರಿದಿದ್ದು, ಕೆಲವು ತಗ್ಗು ಪ್ರದೇಶಗಳು ಭಾರಿ ಮಳೆಯಿಂದ ಜಲಾವೃತವಾಗಿದೆ. ಚಂಡಮಾರುತದ ಪರಿಣಾಮ ರಾಜ್ಯದ ಮೇಲಾಗಿದ್ದು, ಬಹುತೇಕ ಜಿಲ್ಲೆಗಳಲ್ಲಿ ಮಳೆಯಾಗುತ್ತಿದೆ. ಕರಾವಳಿ ಮತ್ತು ಕಲ್ಯಾಣ ಕರ್ನಾಟಕದ ಜಿಲ್ಲೆಗಳು ಸೇರಿದಂತೆ ರಾಜ್ಯದ ಹಲವಡೆ ಗುರುವಾರ ಭಾರಿ ಮಳೆಯಾಗುವ ಸಾಧ್ಯತೆಯಿದ್ದು, ಆಗಸ್ಟ್ 15 ರಿಂದ 19 ರವರೆಗೆ ರಾಜ್ಯದ ಉತ್ತರ ಒಳನಾಡಿನಲ್ಲಿ ಜಿಲ್ಲೆಗಳಲ್ಲಿ ಹೆಚ್ಚು ಮಳೆಯಾಗುವ ಸಾಧ್ಯತೆ ಇದೆ. ಈ ಹಿನ್ನೆಲೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಚಂಡಮಾರುತ ಪ್ರಭಾವ ಹಾಗೂ ವಾಯುಭಾರ ಕುಸಿತ ಕಾರಣದಿಂದಾಗಿ ಕರ್ನಾಟಕವೂ ಸೇರಿದಂತೆ ದಕ್ಷಿಣ ಭಾರತದ ವಿವಿಧ ಭಾಗದಲ್ಲಿ ಮಳೆ ಆರ್ಭಟ ಮುಂದುವರಿದಿದ್ದು, ಬಂಗಾಳಕೊಲ್ಲಿಯ ಪಶ್ಚಿಮ–ಮಧ್ಯ ಮತ್ತು ಅದಕ್ಕೆ ಹೊಂದಿಕೊಂಡಿರುವ ವಾಯುವ್ಯ ಭಾಗದಲ್ಲಿ ವಾಯುಭಾರ ಕುಸಿತ, ಕಡಿಮೆ ತೀವ್ರತೆ ಎದುರಾಗಿದೆ.

ಯೆಲ್ಲೋ ಅಲರ್ಟ್: ಉ.ಕನ್ನಡ, ಉಡುಪಿ, ದ.ಕನ್ನಡ, ಬಾಗಲಕೋಟೆ, ಬೆಳಗಾವಿ, ಬೀದರ್, ಧಾರವಾಡ, ಗದಗ, ಹಾವೇರಿ, ಕಲಬುರಗಿ, ಕೊಪ್ಪಳ, ರಾಯಚೂರು, ವಿಜಯಪುರ, ಯಾದಗಿರಿ, ಬಳ್ಳಾರಿ, ಬೆಂಗಳೂರು ಗ್ರಾ.., ಬೆಂ. ನಗರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ಕೊಡಗು, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ, ತುಮಕೂರು, ಜಿಲ್ಲೆಗಳಿಗೆ 19ರವರೆಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ANAGHA Credit Co-Operative Society Ltd.

ಅನಘ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್

ನಂ. 1600, ಪ್ರಭು ಎನ್‌ಕ್ಲೇವ್, ನೆಲಮಹಡಿ, 5ನೇ ಹಂತ, 80 ಅಡಿ ರಸ್ತೆ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿನಗರ, ಬೆಂಗಳೂರು – 98.
E-mail: info@anaghacredit.com | www.anaghacredit.com
Phone no. +91 80 2860 8360 / +91 80 4959 0528
(Reg. No.: UBC-7/31/RGN/47965/2016-17) ISO 9001:2015 CERTIFIED

ಸರ್ವ ಸದಸ್ಯರ ವಾರ್ಷಿಕ ಮಹಾ ಸಭೆಯ ಸೂಚನಾ ಪತ್ರ

ಆತ್ಮೀಯ ಸದಸ್ಯ ಬಾಂಧವರೇ,

ಅನಘ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾ ಸಭೆಯನ್ನು **31 ಆಗಸ್ಟ್ 2025** ರಂದು **ಭಾನುವಾರ ಬೆಳಿಗ್ಗೆ 11.00ಕ್ಕೆ** ಸರಿಯಾಗಿ, ವಾಸವಿ ಮಹಲ್ #606, ಐಡಿಯಲ್ ಹೋಮ್ಸ್ ಟೌನ್‌ಷಿಪ್, ರಾಜರಾಜೇಶ್ವರಿನಗರ, ಬೆಂಗಳೂರು–560098. ಇಲ್ಲಿ ಸಂಘದ ಅಧ್ಯಕ್ಷರಾದ ಶ್ರೀ **ಅಡಿಕೆ ವೆಂಕಟೇಶುಲು** ರವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯರುಗಳೆಲ್ಲರೂ ಸಕಾಲಕ್ಕೆ ಆಗಮಿಸಿ, ಸಭೆಯ ಕಾರ್ಯ ಕಲಾಪಗಳಲ್ಲಿ ಭಾಗವಹಿಸಲು ಕೋರಿದೆ.

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ,
ಸಹಿ/–
(ಶ್ರೀಮತಿ ಲತಾ ವಿ ಎ)
ಮು.ಕಾ.ನಿ ಅಧಿಕಾರಿ

ಸ್ಥಳ: ಬೆಂಗಳೂರು
ದಿನಾಂಕ: 12.08.2025

BEFORE THE HON'BLE XII ADDL CITY CIVIL & SESSIONS JUDGE, CITY CIVIL COURTS COMPLEX, BENGALURU. [CCH-27]
I.A. NO. 1/2025
IN
P & SC NO. 352/2025

BETWEEN:

1) **SMT. ASMITA SANTOSH,** Wife of late Shri Santosh Kumar V J, Aadhaar Number: 9871 8958 8440 Aged about 44 Years, Residing at Cedar A Wing 1001, Godrej Woodsman Estate, Bellary Road, Hebbal, Bengaluru-560 024. **...PETITIONER NO. 1**

2) **MISS VEEKSHA S JUMANI,** Daughter of late Shri Santosh Kumar V J, Aged about 20 Years, Residing at Cedar A Wing 1001, Godrej Woodsman Estate, Bellary Road, Hebbal, Bengaluru-560 024 **...PETITIONER NO. 2**

3) **MISS AVANTIKA JUMANI,** Daughter of late Shri Santosh Kumar V J, Aged about 10 Years (Minor), Residing at Cedar A Wing 1001, Godrej Woodsman Estate, Bellary Road, Hebbal, Bengaluru-560 024
Represented by her mother and natural guardian, Smt. Asmita Santosh. **... PETITIONER NO. 3**

4) **SMT. MAALTI V J,** Mother of late Shri Santosh Kumar V J, Aged about 73 Years, Residing at Cedar A Wing 1001, Godrej Woodsman Estate, Bellary Road, Hebbal, Bengaluru-560 024 **... PETITIONER NO. 4**

AND:
NIL ...RESPONDENT

PUBLIC NOTICE

Whereas, the above-named Petitioners being the wife, daughters and mother-in-law, have made Petition to this Court under Section 372 of the Indian Succession Act, 1925 for grant of Succession Certificate in favour of the Petitioner No. 1, i.e., wife of deceased herein, in respect of the schedule mentioned hereinbelow. The below mentioned schedule was held by late Shri Santosh Kumar Jumani, who expired on 13.11.2024.

Interested parties are hereby called upon to appear before this Court in person or by pleader, duly instructed on 30/8/2025 at 11:00 AM to show cause against the Petitioners, failing which the Petition will be heard and declared ex parte.

SCHEDULE-I: DETAILS OF ASSETS:

1) SHARES HELD IN THE NAME OF LATE SANTOSH KUMAR V J-IN FOREIGN COMPANY.

Sl. No.	Particulars	Value
1.	500 Shares (Stock Plan; Asset Class: Equities) in **RUBRIK INC CL A (RBRK)** having a share price of $60.980	$ 30,490.00 (Value as on June 2024 as per Dollar to INR Exchange Rate: **Rs. 26,07,968/-)**

2) CASH, BANK DEPOSIT PROGRAM, MONEY MARKET FUNDS -IN FOREIGN BANK ACCOUNT WITH MORGAN STANLEY:

Sl. No.	Particulars	Value
2.	Cash, BDPs, MMFS	$ 517.65 (Value as on June 2025 as per Dollar to INR Exchange Rate: **Rs. 44,277.31/-)**

Given under my hand the seal of the Court this the **6/8/2025.**

By Order of the Court,
Senior Sheristedar
City Civil Court, Bangalore.
Advocate for the Petitioner:
ADDRESS FOR SERVICE:
Harish Jayakumar, Advocate
Law Chambers of Harish Jayakumar,
No. 116/6, 1st Floor, Next to Union Bank of India (Opp: New Mangalore Stores), 11th Cross, Malleshwaram, Bengaluru 560003

Anthem® BioSciences

ಆಂಥೆಮ್ ಬಯೋಸೈನ್ಸಸ್ ಲಿಮಿಟೆಡ್

ಸಿಐಎನ್: U24233KA2006PLC039703
ನೋಂದಾಯಿತ ಕಚೇರಿ: F1 & F2, ಕೆನರಾ ಬ್ಯಾಂಕ್ ರಸ್ತೆ, ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ, ಹಂತ I, ಬೊಮ್ಮಸಂದ್ರ, ಬೆಂಗಳೂರು, ಕರ್ನಾಟಕ, ಭಾರತ – 560099
ಇಮೇಲ್: compliance.abl@anthembio.com | **ವೆಬ್‌ಸೈಟ್:** https://www.anthembio.com/

ಪೋಸ್ಟಲ್ ಬ್ಯಾಲೆಟ್ ಸೂಚನೆ

ಆಂಥೆಮ್ ಬಯೋಸೈನ್ಸಸ್ ಲಿಮಿಟೆಡ್ (**'ಕಂಪನಿ'**) ನ ಷೇರುದಾರರಿಗೆ (''ಸದಸ್ಯರು'') ಈ ಮೂಲಕ ಸೂಚನೆ ನೀಡಲಾಗಿದೆ, ವಿಭಾಗ 108 ಮತ್ತು 110 ರ ನಿಬಂಧನೆಗಳು ಮತ್ತು ಕಂಪನಿಗಳ ಕಾಯ್ದೆ, 2013 ರ ಇತರ ಅನ್ವಯವಾಗುವ ನಿಬಂಧನೆಗಳನ್ನು ತಿದ್ದುಪಡಿ ಮಾಡಿದಂತೆ (**''ಕಾಯ್ದೆ''**), ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014, ತಿದ್ದುಪಡಿ ಮಾಡಿದಂತೆ (**''ನಿರ್ವಹಣಾ ನಿಯಮಗಳು''**), ಮತ್ತು ಇತರ ಸಂಬಂಧಿತ ನಿಯಮಗಳೊಂದಿಗೆ ಓದಲಾಗಿದೆ, ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಲಿಸ್ಟಿಂಗ್ ಆಬ್ಲಿಗೇಷನ್ಸ್ ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು, 2015 ರ ನಿಯಮ 44 (**''ಲಿಸ್ಟಿಂಗ್ ರೆಗ್ಯುಲೇಷನ್ಸ್''**), ಏಪ್ರಿಲ್ 8, 2020 ರ ಸಾಮಾನ್ಯ ಸುತ್ತೋಲೆ ಸಂಖ್ಯೆ 14/2020, ಏಪ್ರಿಲ್ 13, 2020 ರ 17/2020, ಮೇ 5, 2020 ರ 20/2020, ಜೂನ್ 15, 2020 ರ 22/2020, ಸೆಪ್ಟೆಂಬರ್ 28, 2020 ರ 33/2020, ಡಿಸೆಂಬರ್ 31, 2020 ರ 39/2020, ಜೂನ್ 23, 2021 ರ 10/2021, ಡಿಸೆಂಬರ್ 8, 2021 ರ 20/2021, ಮೇ 5, 2022 ರ 03/2022, ಡಿಸೆಂಬರ್ 28, 2022 ರ 11/2022 ಮತ್ತು ಸೆಪ್ಟೆಂಬರ್ 25, 2023 ರ 09/2023 ಮತ್ತು ಸೆಪ್ಟೆಂಬರ್ 19, 2024 ರ 09/2024 ಭಾರತ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ (**''MCA ಸುತ್ತೋಲೆಗಳು''**) ಹೊರಡಿಸಿದ, ಅಕ್ಟೋಬರ್ 07, 2023 ರ ಸುತ್ತೋಲೆ ಸಂಖ್ಯೆ SEBI/HO/CFD/CFD-PoD-2/P/CIR/2023/167 ಮತ್ತು ಅಕ್ಟೋಬರ್ 3, 2024 ರ SEBI/HO/CFD/CFD-PoD-2/P/CIR/2024/133 ರೊಂದಿಗೆ ಓದಲಾದ, ಡಿಸೆಂಬರ್ 31, 2021 ರ 10/2021, ಜೂನ್ 8, 2021 ರ 3/2022, ಮೇ 5, 2022, ಡಿಸೆಂಬರ್ 28, 2022 ರ 11/2022 ಮತ್ತು ಸೆಪ್ಟೆಂಬರ್ 25, 2023 ರ 09/2023 ಮತ್ತು ಸೆಪ್ಟೆಂಬರ್ 19, 2024 ರ 09/2024 ಮತ್ತು ಅಕ್ಟೋಬರ್ 07, 2023 ರ ಸುತ್ತೋಲೆ ಸಂಖ್ಯೆ SEBI/HO/CFD/CFD-PoD-2/P/CIR/2023/167 ಮತ್ತು ಅಕ್ಟೋಬರ್ 3, 2024 ರ SEBI/HO/CFD/CFD-PoD-2/P/CIR/2024/133 ಮತ್ತು ಭಾರತೀಯ ಕಂಪನಿ ಕಾರ್ಯದರ್ಶಿಗಳ ಸಂಸ್ಥೆ (**''SS-2''**) ಹೊರಡಿಸಿದ ಸಾಮಾನ್ಯ ಸಭೆಗಳ ಮೇಲಿನ ಕಾರ್ಯದರ್ಶಿ ಮಾನದಂಡ ಮತ್ತು ಯಾವುದೇ ಇತರ ಅನ್ವಯವಾಗುವ ಕಾನೂನು, ನಿಯಮಗಳು, ಸುತ್ತೋಲೆಗಳು, ಅಧಿಸೂಚನೆಗಳು ಮತ್ತು ನಿಬಂಧನೆಗಳು (ಯಾವುದೇ ಶಾಸನಬದ್ಧ ಮಾರ್ಪಾಡು(ಗಳು) ಅಥವಾ ಅವುಗಳ ಮರು–ಜಾರಿಗೊಳಿಸುವಿಕೆ(ಗಳು) ಸೇರಿದಂತೆ, ಕೆಳಗೆ ಸೇರಿಸಲಾದ ವಿಶೇಷ ವ್ಯವಹಾರಗಳನ್ನು ಕಂಪನಿಯ ಸದಸ್ಯರು (ಕಟ್–ಆಫ್ ದಿನಾಂಕದಂದು), ಅಂಚೆ ಮತಪತ್ರದ ಮೂಲಕ (**''ಪೋಸ್ಟಲ್ ಬ್ಯಾಲೆಟ್''**) ರಿಮೋಟ್ ಇ–ಮತದಾನ (**''ಇ-ಮತದಾನ''**) ಮೂಲಕ ಮಾತ್ರ ಅಂಗೀಕರಿಸಲು ಪ್ರಸ್ತಾಪಿಸಲಾಗಿದೆ.

ರೆಸಲ್ಯೂಶನ್ ನಂ.	ವಿವರಗಳು	ರೆಸಲ್ಯೂಶನ್ ಪ್ರಕಾರ
1	ಆಂಥೆಮ್ ಉದ್ಯೋಗಿ ಸ್ಟಾಕ್ ಆಯ್ಕೆ ಯೋಜನೆ 2024 ರ ಅನುಮೋದನೆ	ವಿಶೇಷ ರೆಸಲ್ಯೂಶನ್
2	ಆಂಥೆಮ್ ಉದ್ಯೋಗಿ ಸ್ಟಾಕ್ ಆಯ್ಕೆ ಯೋಜನೆ 2024 ರ ಪ್ರಯೋಜನಗಳನ್ನು ಕಂಪನಿಯ ಅಂಗಸಂಸ್ಥೆ ಕಂಪನಿ(ಗಳು) ಗಳ ಉದ್ಯೋಗಿಗಳಿಗೆ ವಿಸ್ತರಿಸುವ ಅನುಮೋದನೆ	ವಿಶೇಷ ರೆಸಲ್ಯೂಶನ್
3	ಸಂಬಂಧಿತ ಪಕ್ಷಗಳಿಗೆ ಪಾವತಿಸಲು ಪ್ರಸ್ತಾಪಿಸಲಾದ ಸಂಭಾವನೆಯನ್ನು ಅನುಮೋದಿಸಲು	ಸಾಮಾನ್ಯ ರೆಸಲ್ಯೂಶನ್

ಎಂಸಿಎ ಸುತ್ತೋಲೆಗಳಿಗೆ ಅನುಸಾರವಾಗಿ, ಕಂಪನಿ/ಡಿಪಾಸಿಟರಿಗಳಲ್ಲಿ ಇ–ಮೇಲ್ ವಿಳಾಸಗಳು ನೋಂದಾಯಿಸಲ್ಪಟ್ಟಿರುವ ಮತ್ತು ಸದಸ್ಯರ/ಲಿಸ್ಟ್ ಲೇವಣಿದಾರರ ರಿಜಿಸ್ಟರ್‌ನಲ್ಲಿ ಹೆಸರುಗಳು ಕಾಣಿಸಿಕೊಳ್ಳುವ ಸದಸ್ಯರಿಗೆ ಮಾತ್ರ ಎಲೆಕ್ಟ್ರಾನಿಕ್ ಮೋಡ್‌ನಲ್ಲಿ **ಅಗಸ್ಟ್ 13, 2025** ರಂದು ವಿವರಣಾತ್ಮಕ ಹೇಳಿಕೆ ಮತ್ತು ಇ–ಮತದಾನದ ಸೂಚನೆಗಳೊಂದಿಗೆ ಪೋಸ್ಟಲ್ ಬ್ಯಾಲೆಟ್ ನೋಟಿಸ್‌ನ ರವಾನೆಯನ್ನು ಕಂಪನಿ ಪೂರ್ಣಗೊಳಿಸಿದೆ. **ಅಗಸ್ಟ್ 08, 2025** (**''ಕಟ್–ಆಫ್ ದಿನಾಂಕ''**). ಪೋಸ್ಟಲ್ ಬ್ಯಾಲೆಟ್ ನೋಟಿಸ್‌ನಲ್ಲಿ ಸೂಚಿಸಲಾದ ವ್ಯವಹಾರದ ವಿಷಯಗಳ ಬಗ್ಗೆ ಸದಸ್ಯರ ಒಪ್ಪಿಗೆ/ಭಿನ್ನಾಭಿಪ್ರಾಯದ ಸಂವಹನವು ರಿಮೋಟ್ ಇ–ವೋಟಿಂಗ್ ವ್ಯವಸ್ಥೆಯ ಮೂಲಕ ಮಾತ್ರ ನಡೆಯುತ್ತದೆ.

ಕಂಪನಿಯು ಈ ಕೆಳಗಿನ ಅವಧಿಯಲ್ಲಿ ರಿಮೋಟ್ ಇ–ವೋಟಿಂಗ್ ಸೌಲಭ್ಯವನ್ನು ಒದಗಿಸಲು ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್ **('NSDL')** ನ ಸೇವೆಗಳನ್ನು ಏಜೆನ್ಸಿಯಾಗಿ ತೊಡಗಿಸಿಕೊಂಡಿದೆ:

ರಿಮೋಟ್ ಇ–ವೋಟಿಂಗ್ ಆರಂಭ:	*ಅಗಸ್ಟ್ 14, 2025 ರಂದು ಬೆಳಿಗ್ಗೆ 9:00 ಗಂಟೆಗೆ*
ರಿಮೋಟ್ ಇ–ವೋಟಿಂಗ್ ಅಂತ್ಯ:	*ಸೆಪ್ಟೆಂಬರ್ 12, 2025 ರಂದು ಸಂಜೆ 5:00 ಗಂಟೆಗೆ*

ಮೇಲೆ ತಿಳಿಸಿದ ಅವಧಿಯಲ್ಲಿ, ಕಂಪನಿಯ ಸದಸ್ಯರು, ಕಟ್–ಆಫ್ ದಿನಾಂಕದಂದು, ಅಂದರೆ **ಶುಕ್ರವಾರ, ಅಗಸ್ಟ್ 08, 2025** ರಂದು ಭೌತಿಕ ರೂಪದಲ್ಲಿ ಅಥವಾ ಡಿಮೆಟಿರಿಯಲೈಸ್ಡ್ ರೂಪದಲ್ಲಿ ಷೇರುಗಳನ್ನು ಹೊಂದಿರುವವರು ತಮ್ಮ ಮತವನ್ನು ವಿದ್ಯುನ್ಮಾನವಾಗಿ ಚಲಾಯಿಸಬಹುದು. ಕಟ್–ಆಫ್ ದಿನಾಂಕದಂದು ಸದಸ್ಯರಲ್ಲದ ಯಾವುದೇ ವ್ಯಕ್ತಿ ಈ ಸೂಚನೆಯನ್ನು ಮಾಹಿತಿ ಉದ್ದೇಶಗಳಿಗಾಗಿ ಮಾತ್ರ ಪರಿಗಣಿಸಬೇಕು. ಒಮ್ಮೆ ಸದಸ್ಯರಾಗಿ, ರಿಮೋಟ್ ಇ–ವೋಟಿಂಗ್ **ಶುಕ್ರವಾರ, ಸೆಪ್ಟೆಂಬರ್ 12, 2025 ರಂದು ಸಂಜೆ 5.00** ಗಂಟೆಗೆ ಕೊನೆಗೊಳ್ಳುತ್ತದೆ ನಂತರ ರಿಮೋಟ್ ಇ–ವೋಟಿಂಗ್ ಮಾಡ್ಯೂಲ್ ಅನ್ನು ರಿಮೋಟ್ ಇ–ವೋಟಿಂಗ್ ಅನ್ನು ನಿಷ್ಕ್ರಿಯಗೊಳಿಸಲಾಗುತ್ತದೆ ಮತ್ತು ಸದಸ್ಯರು ಹೇಳಿದ ದಿನಾಂಕ ಮತ್ತು ಸಮಯವನ್ನು ಮೀರಿ ವಿದ್ಯುನ್ಮಾನವಾಗಿ ಮತ ಚಲಾಯಿಸಲು ಅನುಮತಿಸಲಾಗುವುದಿಲ್ಲ. ಸದಸ್ಯರು ನಿರ್ಣಯ(ಗಳ) ಮೇಲೆ ಮತ ಚಲಾಯಿಸಿದ ನಂತರ, ಸದಸ್ಯರು ಅದನ್ನು ನಂತರ ಬದಲಾಯಿಸಲು ಅನುಮತಿಸಲಾಗುವುದಿಲ್ಲ. ಸದಸ್ಯರ ಮತದಾನದ ಹಕ್ಕುಗಳು ಕಟ್–ಆಫ್ ದಿನಾಂಕದಂದು ಕಂಪನಿಯ ಪಾವತಿಸಿದ ಈಕ್ವಿಟಿ ಷೇರು ಬಂಡವಾಳದಲ್ಲಿ ಅವರ ಷೇರುಗಳ ಅನುಪಾತದಲ್ಲಿರುತ್ತದೆ. ಪೋಸ್ಟಲ್ ಬ್ಯಾಲೆಟ್ ನೋಟಿಸ್‌ನ ಭಾಗವಾಗಿ ರಿಮೋಟ್ ಇ–ವೋಟಿಂಗ್ ಮೂಲಕ ಮತ ಚಲಾಯಿಸಲು ಟಿಪ್ಪಣಿಗಳು ಮತ್ತು ಸೂಚನೆಗಳಲ್ಲಿ ವಿವರಿಸಿದಂತೆ ಕಾರ್ಯವಿಧಾನವನ್ನು ಅನುಸರಿಸಲು ಸದಸ್ಯರನ್ನು ವಿನಂತಿಸಲಾಗಿದೆ.

ಪೋಸ್ಟಲ್ ಬ್ಯಾಲೆಟ್ ನೋಟಿಸ್‌ನ ಪ್ರತಿಯು ಕಂಪನಿಯ ವೆಬ್‌ಸೈಟ್ https://www.anthembio.com/investor.html, BSE ಲಿಮಿಟೆಡ್‌ನ ವೆಬ್‌ಸೈಟ್ www.bseindia.com ಮತ್ತು NDSL www.evoting.nsdl.com ವೆಬ್‌ಸೈಟ್‌ನಲ್ಲಿ ಲಭ್ಯವಿದೆ.

ಮಂಡಳಿಯು CS ಪ್ರಮೋದ್ SM ಅವರನ್ನು ನೇಮಿಸಿದೆ ಅಥವಾ ಅವರನ್ನು ವಿಫಲಗೊಳಿಸಲಾಗಿದೆ, CS ಬಿಸ್ವಜಿತ್ ಘೋಷ್, M/s ನ ಪಾಲುದಾರರು. BMP Co. LLP, ಪ್ರಾಕ್ಟೀಸಿಂಗ್ ಕಂಪನಿ ಕಾರ್ಯದರ್ಶಿಗಳು, ಅಂಚೆ ಮತಪತ್ರ ಪ್ರಕ್ರಿಯೆಯನ್ನು ನ್ಯಾಯೋಚಿತ ಮತ್ತು ಪಾರದರ್ಶಕ ರೀತಿಯಲ್ಲಿ ರಿಮೋಟ್ ಇ–ವೋಟಿಂಗ್ ಮೂಲಕ ಪರಿಶೀಲಿಸಲು ಸ್ಕ್ರುಟಿನೈಸರ್ ಆಗಿ. ಈ ಪೋಸ್ಟಲ್ ಬ್ಯಾಲೆಟ್‌ಗೆ ಸ್ಕ್ರುಟಿನೈಸರ್ ಆಗಿ ಕಾರ್ಯನಿರ್ವಹಿಸಲು ಸ್ಕ್ರುಟಿನೈಸರ್ ಸಮ್ಮತಿಸಿದ್ದಾರೆ.

ಪೋಸ್ಟಲ್ ಬ್ಯಾಲೆಟ್ ನೋಟೀಸ್ ಅನ್ನು ಸ್ವೀಕರಿಸದ ಯಾವುದೇ ಸದಸ್ಯರು, ಲೋಕೇಶ್ ಎರ್ರವೆಲ್ಲಿಗೆ einward.ris@kfintech.com ಗೆ ಪ್ರತಿಯ ಅಡಿಯಲ್ಲಿ ವಿನಂತಿಯನ್ನು ಕಳುಹಿಸುವ ಮೂಲಕ ಅದನ್ನು ಪಡೆಯಬಹುದು: compliance.abl@anthembio.com. ಪೋಸ್ಟಲ್ ಬ್ಯಾಲೆಟ್‌ನ ಫಲಿತಾಂಶವನ್ನು ಸೋಮವಾರ, ಸೆಪ್ಟೆಂಬರ್ 15, 2025 ರಂದು ಅಥವಾ ಮೊದಲು ಸ್ಟಾಕ್ ಎಕ್ಸ್‌ಚೇಂಜ್‌ಗಳಿಗೆ ಘೋಷಿಸಲಾಗುತ್ತದೆ ಮತ್ತು ಪ್ರಸಾರ ಮಾಡಲಾಗುತ್ತದೆ ಮತ್ತು ಸ್ಕ್ರುಟಿನೈಸರ್ ವರದಿಯೊಂದಿಗೆ ಘೋಷಿತ ಫಲಿತಾಂಶಗಳು ಕಂಪನಿಯ ವೆಬ್‌ಸೈಟ್‌ನಲ್ಲಿ ಮತ್ತು NSDL ನ ವೆಬ್‌ಸೈಟ್ evoting@nsdl.com ನಲ್ಲಿ ಲಭ್ಯವಿರುತ್ತವೆ.

ರಿಮೋಟ್ ಇ–ವೋಟಿಂಗ್‌ಗೆ ಸಂಬಂಧಿಸಿದಂತೆ ಯಾವುದೇ ಪ್ರಶ್ನೆಗಳು/ಕುಂದುಕೊರತೆಗಳಿದ್ದಲ್ಲಿ, ನೀವು ಷೇರುದಾರರಿಗಾಗಿ ಪದೇ ಪದೇ ಕೇಳಲಾಗುವ ಪ್ರಶ್ನೆಗಳನ್ನು **('FAQs')** ಮತ್ತು ಷೇರುದಾರರಿಗಾಗಿ ಇ–ಮತದಾನದ ಬಳಕೆದಾರರ ಕೈಪಿಡಿಯನ್ನು www.evoting.nsdl.com ನ 'ಡೌನ್‌ಲೋಡ್' ವಿಭಾಗದಲ್ಲಿ ಲಭ್ಯವಿರಬಹುದು ಅಥವಾ ಸಂ. 022 - 4886 7000 ಕ್ಕೆ ಕರೆ ಮಾಡಿ. ಚಕ್ರವರ್ತಿ, ಸಹಾಯಕ ವ್ಯವಸ್ಥಾಪಕರು–ಎನ್‌ಎಸ್‌ಡಿಎಲ್ ಅವರ ಗೊತ್ತುಪಡಿಸಿದ ಇ–ಮೇಲ್ ವಿಳಾಸಗಳಲ್ಲಿ: evoting@nsdl.com.

ಆಂಥೆಮ್ ಬಯೋಸೈನ್ಸಸ್ ಲಿಮಿಟೆಡ್ ಗಾಗಿ
(ಹಿಂದೆ ಆಂಥೆಮ್ ಬಯೋಸೈನ್ಸಸ್ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
Sd/-
ದಿವ್ಯ ಪ್ರಸಾದ್
ಕಂಪನಿ ಕಾರ್ಯದರ್ಶಿ ಮತ್ತು ಅನುಸರಣಾ ಅಧಿಕಾರಿ
ಸದಸ್ಯತ್ವ ಸಂಖ್ಯೆ: **A41438**

ಅಗಸ್ಟ್ 14, 2025
ಬೆಂಗಳೂರು, ಭಾರತ

Adfactors 385/25

Denta Water Revitalizing Experts

DENTA WATER AND INFRA SOLUTIONS LIMITED

CIN: U70109KA2016PLC09786
Regd. Off.: # 40, 3rd Floor, Sri Lakshminarayana Mansion, South End Road, Basavanagudi Bangalore, South Bangalore- 560 004 Karnataka, India, **Email:** cs@denta.co.in, **Web:** www.denta.co.in

STATEMENT OF UNAUDITED CONSOLIDATED FINANCIAL RESULTS FOR THE QUARTER ENDED JUNE 30, 2025

(Rs. In Millions, unless otherwise stated)

Sl. No	Particulars	Quarter Ended			Year Ended
		June 30 2025 (Unaudited)	March 31 2025 (Unaudited)	June 30 2024 (Unaudited)	March 31 2025 (Audited)
1	Total Income from Operations (including other income)	698.14	572.18	500.6	2,080.30
2	Net Profit / (Loss) for the period (before Tax, Exceptional and/or Extraordinary items)	247.9	192.47	180.32	715.56
3	Net Profit / (Loss) for the period before Tax (after Exceptional and/or Extraordinary items)	247.9	192.47	180.32	715.56
4	Net Profit / (Loss) for the period after Tax (after Exceptional and/or Extraordinary items)	185.5	137.2	131.5	528.85
5	Total Comprehensive Income for the period [Comprising Profit for the period (after tax) and Other Comprehensive Income(after tax)]	185.46	137.19	131.47	528.65
6	Equity Share Capital	267	267	192	267
7	Earnings Per Equity Share				
	a) Basic	6.95	6.7	6.85	25.83
	b) Diluted	6.95	6.7	6.85	25.83

Key highlights of standalone financial results is as follows:

(Rs. In Millions, unless otherwise stated)

Sl. No	Particulars	Quarter Ended			Year Ended
		June 30 2025 (Unaudited)	March 31 2025 (Unaudited)	June 30 2024 (Unaudited)	March 31 2025 (Audited)
1	Total Income from Operations (including other income)	698.14	572.18	500.60	2080.30
2	Net Profit / (Loss) for the period (before Tax, Exceptional and/or Extraordinary items)	247.90	192.47	180.32	715.63
3	Net Profit / (Loss) for the period before Tax (after Exceptional and/or Extraordinary items)	247.90	192.47	180.32	715.63
4	Net Profit / (Loss) for the period after Tax (after Exceptional and/or Extraordinary items)	185.50	137.23	131.50	528.93
5	Total Comprehensive Income for the period [Comprising Profit / (Loss) for the year (after tax) and Other Comprehensive Income(after tax)]	185.46	137.21	131.47	528.72

Notes:-

1) The above unaudited standalone financial results of the Company approved by the Board of Directors at their meetings held on Tuesday, August 12, 2025.
2) The above is an extract of the detailed format of the standalone and consolidated financial results for the quarter ended June 30, 2025 filed with the stock exchange(s) under Regulation 33 of the Securities and Exchange Board of India (Listing Obligations and Disclosure Requirements) Regulations, 2015, as amended. The full format of the standalone and consolidated financial results for the quarter ended June 30, 2025 is available for investors at (https://www.nseindia.com/) (https://www.bseindia.com/) and the companies website (https://www.denta.co.in/)
3) In compliance with Regulation 47 of the Listing Regulations, we hereby notify that the same can also be accessed by scanning the following Quick Response (QR) Code:

For and on behalf of the Board of Directors of Denta Water And Infra Solutions Limited
Sd/-
Manish J Shetty
Managing Director

Date: August 12, 2025
Place: Bangalore, Karnataka

CONCEPT

Anthem® BioSciences

ANTHEM BIOSCIENCES LIMITED

CIN: U24233KA2006PLC039703
Regd Office: No.49, F1 & F2, Canara Bank Road, Bommasandra Industrial Area, Phase I, Bommasandra, Bengaluru - 560 099
Tel: +91 080 6672 4000 | **Email**: investors.abl@anthembio.com | **Website**: www.anthembio.com

EXTRACT OF THE UNAUDITED FINANCIAL RESULTS FOR THE QUARTER ENDED JUNE 30, 2025

(Amt in INR Mn)

Particulars	Consolidated Financial Results			
	Quarter ended		Year ended	
	June 30, 2025	June 30, 2024	March 31, 2025	March 31, 2024
Total Income from operations	5,402.09	3,385.94	18,445.53	14,193.70
Net profit for the period (Attributable to owners of the company) (before tax, exceptional and/or extraordinary items)	1,862.48	1,179.76	6,568.68	4,773.18
Net profit for the period before tax (Attributable to owners of the company) (after exceptional and/or extraordinary items)	1,862.48	1,179.76	6,568.68	4,773.18
Net profit for the period after tax (after exceptional and/or extraordinary items)	1,357.91	823.79	4,512.59	3,673.10
Total comprehensive income for the period [comprising profit for the period (after tax) and Other Comprehensive Income (after tax)]	1,373.18	821.91	4,508.63	3,670.62
Equity share capital	1,123.22	1,118.15	1,118.15	1,118.15
Other Equity (excluding revaluation reserve) as at June 30, 2025	24,657.77	18,950.30	22,980.48	18,128.39
Earnings per share (nominal value of share Rs.2) (Not annualised)				
Basic (Rs):	2.43	1.47	8.07	6.47
Diluted (Rs):	2.42	1.47	8.04	6.47

(Amt in INR Mn)

Particulars	Standalone Financial Results			
	Quarter ended		Year ended	
	June 30, 2025	June 30, 2024	March 31, 2025	March 31, 2024
Total Income from operations	5,380.11	3,385.39	18,406.49	14,175.39
Net profit for the period (Attributable to owners of the company) (before tax, exceptional and/or extraordinary items)	1,989.38	1,217.06	7,114.23	4,847.73
Net profit for the period before tax (Attributable to owners of the company) (after exceptional and/or extraordinary items)	1,989.38	1,217.06	7,114.23	4,847.73
Net profit for the period after tax (after exceptional and/or extraordinary items)	1,483.40	853.36	5,061.88	3,747.81
Total comprehensive income for the period [comprising profit for the period (after tax) and Other Comprehensive Income (after tax)]	1,498.43	851.47	5,057.91	3,745.33
Equity share capital	1,123.22	1,118.15	1,118.15	1,118.15
Other Equity (excluding revaluation reserve) as at June 30, 2025	25,416.35	19,064.07	23,613.97	18,212.59
Earnings per share (nominal value of share Rs.2) (Not annualised)				
Basic (Rs):	2.65	1.53	9.05	6.61
Diluted (Rs):	2.64	1.53	9.01	6.61

Notes:

1. The above results for the quarter and year ended June 30, 2025, of the Company have been reviewed and recommended by the Audit Committee and approved by the Board of Directors of the Company at their meeting held on August 13, 2025.
2. The full format of the quarter and year ended financial results along with the limited review report of the Statutory Auditors thereon are available on https://www.anthembio.com/investors

For **ANTHEM BIOSCIENCES LIMITED**
Sd/-
Ajay Bhardwaj
Managing Director & CEO
(DIN 00333704)

Place: Bangalore
Date: August 14, 2025

Adfactors 401/25

6,589 ಜೂನಿಯರ್ ಅಸೋಸಿಯೇಟ್ಸ್‌ಗೆ ಆಹ್ವಾನ

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಜೂನಿಯರ್ ಅಸೋಸಿಯೇಟ್ ಹುದ್ದೆಗಳ ನೇಮಕಕ್ಕೆ ಅಧಿಸೂಚನೆ ಹೊರಡಿಸಿದೆ. ಬ್ಯಾಂಕ್ ಗ್ರಾಹಕರ ಸಹಾಯ ಮತ್ತು ಮಾರಾಟ ವಿಭಾಗದಲ್ಲಿ ಒಟ್ಟು 6,589 ಹುದ್ದೆಗಳಿಗೆ ನೇಮಕ ನಡೆಯಲಿದೆ. ಇದರಲ್ಲಿ ಕರ್ನಾಟಕದಲ್ಲಿ 198 ಬ್ಯಾಕ್‌ಲ್ಯಾಗ್ ಹುದ್ದೆಗಳೂ ಸೇರಿದಂತೆ ಒಟ್ಟು 270 ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲಾಗುತ್ತದೆ. ರಾಜ್ಯದ ಅಭ್ಯರ್ಥಿಗಳು ಕನ್ನಡದಲ್ಲಿಯೇ ಪೂರ್ವಭಾವಿ ಮತ್ತು ಮುಖ್ಯ ಪರೀಕ್ಷೆ ಬರೆಯುವ ಅವಕಾಶ ಇದೆ.

ಅಧಿಸೂಚನೆಯ ಪ್ರಕಾರ, ಒಬ್ಬ ಅಭ್ಯರ್ಥಿಯು ಒಂದು ರಾಜ್ಯಕ್ಕೆ ಮಾತ್ರ ಅರ್ಜಿ ಸಲ್ಲಿಸಬಹುದು. ನೇಮಕಗೊಂಡ ಅಭ್ಯರ್ಥಿಗಳಿಗೆ ಆರು ತಿಂಗಳ ಪ್ರೊಬೇಷನರಿ ಅವಧಿ ಇರುತ್ತದೆ. ಈ ವೇಳೆ ಬ್ಯಾಂಕ್ ನೀಡುವ ಇ-ಕೋರ್ಸ್‌ಗಳನ್ನು ಪೂರ್ಣಗೊಳಿಸತಕ್ಕದ್ದು, ಇಲ್ಲದಿದ್ದಲ್ಲಿ ನಿರೀಕ್ಷಣಾ ಅವಧಿ ಮುಂದುವರೆಯಲಿದೆ.

ಭಾಷಾ ಪರೀಕ್ಷೆಗೆ ಬ್ಯಾಂಕ್ ಸೂಚಿಸಿದ ಸ್ಥಳದಿಂದಲೇ ಹಾಜರಾಗತಕ್ಕದ್ದು. ಮೆರಿಟ್ ಪಟ್ಟಿಯನ್ನು ರಾಜ್ಯವಾರು, ವರ್ಗವಾರು ತಯಾರಿಸಲಾಗುತ್ತದೆ. ನೇಮಕ ಸಂಬಂಧ ಎಲ್ಲಾ ಮಾಹಿತಿಯನ್ನು ಎಸ್.ಬಿ.ಐ ವೆಬ್‌ಸೈಟ್‌ನಲ್ಲೇ ಪ್ರಕಟಿಸುತ್ತದೆ. ಈಗಾಗಲೇ ಎಸ್‌ಬಿಐ ಕ್ಲೆರಿಕಲ್ ಕೇಡರ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವವರು ಅರ್ಜಿ ಸಲ್ಲಿಸಲು ಅವಕಾಶವಿಲ್ಲ.

ಸ್ಥಳೀಯ ಭಾಷಾ ಪರೀಕ್ಷೆ ನಡೆಸುವಾಗ ನಾನ್ ವರ್ಬಲ್ ಅಬ್ಜೆಕ್ಟಿವ್-3 ಪ್ಯಾಸೇಜ್‌ಗೆ 15 ಪ್ರಶ್ನೆಗಳು ಹಾಗೂ ಸಬ್ಜೆಕ್ಟಿವ್ 3-ಪ್ಯಾಸೇಜ್‌ಗಳಿಗೆ 15 ಪ್ರಶ್ನೆಗಳಿದ್ದು ಒಟ್ಟಾರೆ 30 ಅಂಕಗಳ ಪ್ರಶ್ನೆಗಳು ಮತ್ತು ವರ್ಬಲ್ ವಿಭಾಗದಲ್ಲಿ 20 ಅಂಕಗಳ ಪ್ರಶ್ನೆಗಳಿಗೆ ಅಭ್ಯರ್ಥಿಗಳು ಉತ್ತರಿಸಬೇಕು. ಅಭ್ಯರ್ಥಿಗಳಿಗೆ ಮುದ್ರಿತ ಪ್ರವೇಶಪತ್ರ ಕಳಿಸಲಾಗುವುದಿಲ್ಲ, ಹಾಗಾಗಿ ಬ್ಯಾಂಕ್ ವೆಬ್‌ಸೈಟ್‌ನಿಂದಲೇ ಪ್ರವೇಶಪತ್ರ ಡೌನ್‌ಲೋಡ್ ಮಾಡಿಕೊಳ್ಳಬೇಕು. ಈ ವರ್ಷದ ಸೆಪ್ಟೆಂಬರ್ ಮತ್ತು ನವೆಂಬರ್‌ನಲ್ಲಿ ಕ್ರಮವಾಗಿ ಪೂರ್ವಭಾವಿ ಮತ್ತು ಮುಖ್ಯ ಪರೀಕ್ಷೆ ನಡೆಸಲು ನಿರ್ಧರಿಸಲಾಗಿದೆ.

ಪರೀಕ್ಷಾ ಕೇಂದ್ರಗಳು: ಬೆಂಗಳೂರು,ಬೆಳಗಾವಿ, ದಾವಣಗೆರೆ, ಕಲಬುರಗಿ, ಹುಬ್ಬಳ್ಳಿ-ಧಾರವಾಡ, ಮಂಗಳೂರು,ಮೈಸೂರು, ಶಿವಮೊಗ್ಗ ಹಾಗೂ ಉಡುಪಿ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಆಗಸ್ಟ್ 26.2025.

ಶೈಕ್ಷಣಿಕ ಅರ್ಹತೆಗಳು: ಅರ್ಜಿ ಸಲ್ಲಿಸಲು, ಅಭ್ಯರ್ಥಿಗಳು ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪದವಿ ಹೊಂದಿರಬೇಕು. ಇದಲ್ಲದೆ, ಪದವಿ ಅಂತಿಮ ವರ್ಷದ ವಿದ್ಯಾರ್ಥಿಗಳೂ ಸಹ ಈ ನೇಮಕಾತಿಗೆ ಅರ್ಜಿ ಸಲ್ಲಿಸಬಹುದು, ಆದರೆ ಡಿಸೆಂಬರ್ 31,2025ರೊಳಗಾಗಿ ಉತ್ತೀರ್ಣರಾಗಿರಬೇಕು.

ವಯೋಮಿತಿ ಎಷ್ಟು: ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು 20ರಿಂದ 28 ವರ್ಷ ವಯಸ್ಸಿನವರಾಗಿರಬೇಕು, ಅಂದರೆ ಅಭ್ಯರ್ಥಿಗಳು 1997ರ ಏಪ್ರಿಲ್ 2 ಮತ್ತು 2005ರ ಏಪ್ರಿಲ್ 1ರ ನಡುವೆ ಜನಿಸಿರಬೇಕು, ಸರಕಾರಿ ನಿಯಮಾನುಸಾರ, ಮೀಸಲಾತಿ ವರ್ಗದ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿಯಲ್ಲಿ ಸಡಿಲಿಕೆ ನೀಡಲಾಗುವುದು. ಒಬಿಸಿ ವರ್ಗದ ಅಭ್ಯರ್ಥಿಗಳಿಗೆ 3 ವರ್ಷದ ಸಡಿಲಿಕೆ ಮತ್ತು ಎಸ್‌ಸಿ-ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷ ಸಡಿಲಿಕೆ ನೀಡಲಾಗುತ್ತದೆ.

ಅರ್ಜಿ ಶುಲ್ಕ: ಸಾಮಾನ್ಯ, ಇಡಬ್ಲ್ಯೂಎಸ್ ಮತ್ತು ಒಬಿಸಿ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳು 750 ರು. ಅರ್ಜಿಶುಲ್ಕವನ್ನು ಪಾವತಿಸಬೇಕಾಗುತ್ತದೆ, ಆದರೆ ಎಸ್.ಸಿ, ಎಸ್.ಟಿ ಮತ್ತು ವಿಶೇಷಚೇತನ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಗೆ ಅರ್ಜಿಶುಲ್ಕವನ್ನು ಪಾವತಿಸುವುದರಿಂದ ವಿನಾಯಿತಿ ಇದೆ. ಅರ್ಜಿಶುಲ್ಕವನ್ನು ಡೆಬಿಟ್ ಕಾರ್ಡ್, ಕ್ರೆಡಿಟ್ ಕಾರ್ಡ್ ಅಥವಾ ಇಂಟರ್ನೆಟ್ ಬ್ಯಾಂಕಿಂಗ್ ಮೂಲಕ ಪಾವತಿಸಬಹುದು.

ಪರೀಕ್ಷಾ ಪೂರ್ವ ತರಬೇತಿ: ಎಸ್‌ಸಿ/ಎಸ್‌ಟಿ/ ಒಬಿಸಿ/ವಿಶೇಷ ಚೇತನರು ಮತ್ತು ಮಾಜಿ ಸೈನಿಕ ಅಭ್ಯರ್ಥಿಗಳಿಗೆ ಬ್ಯಾಂಕ್ ವತಿಯಿಂದ ಪರೀಕ್ಷಾಪೂರ್ವ ತರಬೇತಿ ನೀಡಲಾಗುತ್ತದೆ. ಆನ್‌ಲೈನ್ ಮೂಲಕವೇ ತರಬೇತಿ ಕಾರ್ಯಕ್ರಮ ನಡೆಯುತ್ತದೆ, ಅದರ ಅಗತ್ಯವಿದ್ದರೆ ಅರ್ಜಿ ಭರ್ತಿ ಮಾಡುವಾಗಲೇ ಮಾಹಿತಿ ಸಲ್ಲಿಸಬೇಕು.

ಆಯ್ಕೆ ಪ್ರಕ್ರಿಯೆ: ಎಸ್‌ಬಿಐ ಕ್ಲರ್ಕ್ ಆಗಲು, ಅಭ್ಯರ್ಥಿಗಳು ಮೂರು ಹಂತದ ಆಯ್ಕೆ ಪ್ರಕ್ರಿಯೆಯ ಇರತ್ತದೆ. ಮೊದಲ ಹಂತದಲ್ಲಿ ಪ್ರಾಥಮಿಕ ಪರೀಕ್ಷೆ ಇರುತ್ತದೆ, ಅದರಲ್ಲಿ ಉತ್ತೀರ್ಣರಾದ ನಂತರ ಅಭ್ಯರ್ಥಿಗಳು ಎರಡನೇ ಹಂತದಲ್ಲಿ ಮುಖ್ಯ ಪರೀಕ್ಷೆಗೆ ಹಾಜರಾಗಲು ಸಾಧ್ಯವಾಗುತ್ತದೆ. ಮುಖ್ಯ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಸ್ಥಳೀಯ ಭಾಷೆಯ ಪರೀಕ್ಷೆಯನ್ನು ನೀಡಬೇಕಾಗುತ್ತದೆ. ಆದಾಗ್ಯೂ, ಈ ಪರೀಕ್ಷೆಯು 10 ಅಥವಾ 12ನೇ ಹಂತದಲ್ಲಿ ರಾಜ್ಯದ ಸ್ಥಳೀಯ ಭಾಷೆಯನ್ನು ಅಧ್ಯಯನ ಮಾಡದ ಅಭ್ಯರ್ಥಿಗಳಿಗೆ ಮಾತ್ರ ಇರುತ್ತದೆ.

ವೇತನ : 24,050-64,480 ರೂ. ವೇತನ ಶ್ರೇಣಿ. ಆರಂಭಿಕ ಮೂಲ ವೇತನ 26,730 ರು. (24,050 ರು. ಎರಡು ಮುಂಗಡ ವೇತನ ಹೆಚ್ಚಳ (ಪದವೀಧರರಿಗೆ ಅನುಮತಿಸಲಾಗಿದೆ) ನೀಡಲಾಗುತ್ತದೆ. ಮುಂಬೈನಂತಹ ಮಹಾನಗರಗಳಲ್ಲಿ ಆರಂಭಿಕ ವೇತನವು ಡಿ.ಎ ಹಾಗೂ ಇತರ ಭತ್ಯೆಗಳನ್ನು ಒಳಗೊಂಡು 46,000 ರು.ವರೆಗೆ ಇರಲಿದೆ, ಇತರ ಭತ್ಯೆಗಳಿಗೂ ಅರ್ಹರಾಗಿರುತ್ತಾರೆ.

ಕಾಯ್ದಿರಿಸುವ ಪಟ್ಟಿ (ವೈಟ್‌ಲಿಸ್ಟ್): ಖಾಲಿ ಹುದ್ದೆಗಳ (ರಾಜ್ಯ-ವರ್ಗವಾರು) 50% ವರೆಗಿನ ವೈಟ್‌ಲಿಸ್ಟ್ ತಯಾರಿಸಲಿದ್ದು. ಅಭ್ಯರ್ಥಿಗಳು ಅಭ್ಯರ್ಥಿಗಳು ಪ್ರಸ್ತುತ ಬ್ಯಾಚ್‌ಗೆ ಸೇರದಿದ್ದರೆ ಮತ್ತು ರಾಜೀನಾಮೆ ನೀಡಿದ್ದರೆ ಮಾತ್ರ ಈ ಪಟ್ಟಿಯಿಂದ ತ್ರೈಮಾಸಿಕ ಆಧಾರದ ಮೇಲೆ ಬಿಡುಗಡೆ ಮಾಡಲಾಗುವುದು.

ಅಧಿಕೃತ ಜಾಲ ತಾಣ:https://sbi.co.in

ಅರ್ಜಿ ಸಲ್ಲಿಕೆಗೆ ಲಿಂಕ್: https://bank.sbi/web/careers/current-openings ಅಥವಾ https://www.sbi.co.in/web/careers/current-openings-Recruitment of Junior Associates 2025

ಸಹಾಯವಾಣಿ: 022-22820427

ಅರ್ಜಿ ಸಲ್ಲಿಸುವ ಮುನ್ನ ಅಭ್ಯರ್ಥಿಗಳು ಸಂಪೂರ್ಣ ಅಧಿಸೂಚನೆಯನ್ನು ಓದಿಕೊಂಡು ಮುಂದುವರೆಯಿರಿ.

ಪರೀಕ್ಷೆ ಹೇಗಿರುತ್ತದೆ?

ಎಸ್‌ಬಿಐ ಕ್ಲರ್ಕ್ ಪೂರ್ವಭಾವಿ ಪರೀಕ್ಷೆಯು ಒಂದು ಗಂಟೆಯದ್ದಾಗಿದ್ದು, ಒಟ್ಟು 100 ವಸ್ತುನಿಷ್ಠ ಪ್ರಶ್ನೆಗಳನ್ನು 100 ಅಂಕಗಳಿಗೆ ಕೇಳಲಾಗುತ್ತದೆ. ಇದು ಸಂಖ್ಯಾತ್ಮಕ ಸಾಮರ್ಥ್ಯದ 35 ಪ್ರಶ್ನೆಗಳು, ತಾರ್ಕಿಕ ಸಾಮರ್ಥ್ಯದ 35 ಪ್ರಶ್ನೆಗಳು ಮತ್ತು ಇಂಗ್ಲಿಷ್ ಭಾಷೆಯ 30 ಪ್ರಶ್ನೆಗಳನ್ನು ಒಳಗೊಂಡಿರುತ್ತದೆ, ಆಯಾ ವರ್ಗಗಳಿಗೆ ಮೀಸಲಾಗಿರುವ ಹುದ್ದೆಗಳಿಗೆ ಅನುಗುಣವಾಗಿ 10 ಪಟ್ಟು ಅಭ್ಯರ್ಥಿಗಳನ್ನು ಮುಖ್ಯ ಪರೀಕ್ಷೆಗೆ ಪರಿಗಣಿಸಲಾಗುತ್ತದೆ. ಮುಖ್ಯ ಪರೀಕ್ಷೆಯು ಒಟ್ಟು 200 ಅಂಕಗಳಿಗೆ ಆಗಿರುತ್ತದೆ. ಇದರಲ್ಲಿ ಒಟ್ಟು 190 ಪ್ರಶ್ನೆಗಳನ್ನು ಕೇಳಲಾಗುತ್ತದೆ. ಈ ಪರೀಕ್ಷೆಯು 2 ಗಂಟೆ 40 ನಿಮಿಷಗಳಾಗಿರುತ್ತದೆ. ಇದರಲ್ಲಿ ಸಾಮಾನ್ಯ ಹಾಗೂ ಹಣಕಾಸಿನ ಜ್ಞಾನಕ್ಕೆ ಸಂಬಂಧಿಸಿದ 50 ಪ್ರಶ್ನೆಗಳಿಗೆ 50 ಅಂಕಗಳಿರುತ್ತವೆ. ಜನರಲ್ ಇಂಗ್ಲಿಷ್‌ನ 40 ಪ್ರಶ್ನೆಗಳಿಗೆ 40 ಅಂಕ, ಕ್ವಾಂಟಿಟೇಟಿವ್ ಆಪ್ಟಿಟ್ಯೂಡ್‌ನ 50 ಪ್ರಶ್ನೆಗಳಿಗೆ 50 ಹಾಗೂ ರೀಸನಿಂಗ್ ಎಬಿಲಿಟಿ ಹಾಗೂ ಕಂಪ್ಯೂಟರ್ ಆಪ್ಟಿಟ್ಯೂಡ್‌ಗೆ ಸಂಬಂಧಿಸಿದ 50 ಪ್ರಶ್ನೆಗಳಿಗೆ 60 ಅಂಕಗಳಿರುತ್ತದೆ. ಅಭ್ಯರ್ಥಿಗಳು ಸರಾಸರಿ ಅಂಕಗಳಲ್ಲಿ ಕನಿಷ್ಠ ಶೇಕಡಾವಾರು ಅಂಕಗಳನ್ನು ಗಳಿಸಬೇಕಾಗುತ್ತದೆ ((SC/ST/OBC/PwBD/XS/DXS ಅಭ್ಯರ್ಥಿಗಳಿಗೆ ಅದರಲ್ಲಿ 5% ವಿನಾಯಿತಿ ಲಭ್ಯವಿದೆ).

ಕಾನೂನು ಪದವೀಧರರಿಗೆ ಜೆಎಜಿ ಕೋರ್ಸ್

ಭಾರತೀಯ ಸೇನೆಯು ಜಡ್ಜ್ ಅಡ್ವಕೇಟ್ ಬ್ರಾಂಚ್‌ನಲ್ಲಿ (ಜೆಎಜಿ) ಅಧಿಕಾರಿಗಳ ನೇಮಕಾತಿಗೆ ಅರ್ಹ ಅವಿವಾಹಿತ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಸೆಪ್ಟೆಂಬರ್ 3.

ವಯಸ್ಸಿನ ವಯೋಮಿತಿ : 21ರಿಂದ 27 ವರ್ಷದ ಒಳಗಿನ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸಲು ಅವಕಾಶವಿದೆ.

ವಿದ್ಯಾರ್ಹತೆಗಳು: ಅಭ್ಯರ್ಥಿಗಳು ಕನಿಷ್ಠ ಶೇಕಡಾ 55 ಅಂಕಗಳೊಂದಿಗೆ ಎಲ್.ಎಲ್.ಬಿ ಪೂರ್ಣಗೊಳಿಸಿರಬೇಕು. ಅದರೊಂದಿಗೆ ಕ್ಲಾಟ್ ಪಿ.ಜಿ ಸ್ಕೋರ್ ಕೂಡ ನೇಮಕಾತಿಗೆ ಪರಿಗಣಿಸಲಾಗುತ್ತದೆ. ಅಭ್ಯರ್ಥಿಗಳು ರಾಜ್ಯ/ದೇಶದ ಬಾರ್ ಕೌನ್ಸಿಲ್‌ನಲ್ಲಿ ಹೆಸರು ನೋಂದಾಯಿಸಿರಬೇಕು.

ಎಲ್ಲೆಲ್ಲಿ ಅವಕಾಶ: ಬೆಂಗಳೂರು ಸೇರಿದಂತೆ ದೇಶದ ವಿವಿಧ ಕಡೆ ನೇಮಕ ನಡೆಯಲಿವೆ.

ತರಬೇತಿ: ನೇಮಕ ಪ್ರಕ್ರಿಯೆ ಮುಗಿದ ಬಳಿಕ ಆಯ್ಕೆಯಾದವರಿಗೆ 49 ವಾರಗಳ ತರಬೇತಿ ಇರುತ್ತದೆ. ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದರೆ ಪೋಸ್ಟ್ ಗ್ರಾಜುಯೇಟ್ ಡಿಪ್ಲೊಮಾ ಇನ್ ಡಿಫೆನ್ಸ್ ಮ್ಯಾನೇಜ್‌ಮೆಂಟ್ ಮತ್ತು ಸ್ಟ್ರಾಟಜಿಕ್ ಸ್ಟಡೀಸ್ ಎಂಬ ಪ್ರಮಾಣ ಪತ್ರವನ್ನು ಮದ್ರಾಸ್ ಯೂನಿವರ್ಸಿಟಿಯಿಂದ ನೀಡಲಾಗುತ್ತದೆ.

ನಿರೀಕ್ಷಣಾ ಅವಧಿ: 6 ತಿಂಗಳು ಪ್ರೊಬೆಷನರಿ ಅವಧಿ ಬಳಿಕ ನಂತರ 10 ವರ್ಷಗಳ ಅವಧಿಗೆ ನೇಮಕ ಮಾಡಿಕೊಂಡು, ತದನಂತರದಲ್ಲಿ 4 ವರ್ಷ ಸೇವಾವಧಿ ವಿಸ್ತರಿಸಲಾಗುತ್ತದೆ.

ಪದೋನ್ನತಿ: ಈ ಹುದ್ದೆಯಲ್ಲಿ ಅಭ್ಯರ್ಥಿಗಳ ಕಾರ್ಯದಕ್ಷತೆಗೆ ಅನುಗುಣವಾಗಿ ಲೆಫ್ಟಿನೆಂಟ್‌ನಿಂದ ಬ್ರಿಗೇಡಿಯರ್, ಮೇಜರ್ ಜನರಲ್ ತನಕವೂ ಬಡ್ತಿ ಪಡೆಯಬಹುದು.

ಐಒಸಿಎಲ್‌ನಲ್ಲಿ ಅಪ್ರೆಂಟಿಸ್‌ಶಿಪ್

ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್ (ಐಒಸಿಎಲ್) ಉದ್ಯೋಗ ತರಬೇತಿ ನೀಡುತ್ತಿದೆ. ವಿವಿಧ ಟ್ರೇಡ್, ಡಿಪ್ಲೊಮಾ ಹಾಗೂ ಪದವೀಧರ ಅಭ್ಯರ್ಥಿಗಳು ಅಪ್ರೆಂಟಿಸ್‌ಶಿಪ್‌ಗಾಗಿ ಅರ್ಜಿ ಸಲ್ಲಿಸಬಹುದು.

ಹುದ್ದೆಗಳ ಸಂಖ್ಯೆ: ಐಒಸಿಎಲ್‌ನ ದಕ್ಷಿಣ ಭಾರತದ ವಿವಿಧ ಘಟಕಗಳು ಹಾಗೂ ಕಛೇರಿಗಳಲ್ಲಿ ಒಟ್ಟು 475 ಅಭ್ಯರ್ಥಿಗಳಿಗೆ ಅವಕಾಶವಿದ್ದು, ರಾಜ್ಯದಲ್ಲಿ 42 ಅಭ್ಯರ್ಥಿಗಳಿಗೆ ಅವಕಾಶವಿದೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಅರ್ಜಿ ಸಲ್ಲಿಕೆಗೆ ಅವಕಾಶವಿರುವ ರಾಜ್ಯಗಳು: ಕರ್ನಾಟಕ, ಕೇರಳ, ತಮಿಳುನಾಡು, ಪುದುಚೇರಿ, ತೆಲಂಗಾಣ ಹಾಗೂ ಆಂಧ್ರ ಪ್ರದೇಶದ ಅಭ್ಯರ್ಥಿಗಳು ಕೂಡ ಅರ್ಜಿ ಸಲ್ಲಿಸಬಹುದು.

ಅರ್ಹತಾ ಮಾನದಂಡಗಳು: ಟ್ರೇಡ್‌ವಾರು ಅರ್ಹತಾ ಮಾನದಂಡಗಳನ್ನು ಅಧಿಸೂಚನೆಯಲ್ಲಿ ನೀಡಲಾಗಿದೆ. ಟ್ರೇಡ್ ಅಪ್ರೆಂಟಿಸ್‌ಶಿಪ್‌ಗೆ ಎಸ್.ಎಸ್.ಎಲ್.ಸಿ ಉತ್ತೀರ್ಣರಾಗಿದ್ದು, ಅದರ ಜೊತೆಗೆ ಆಯಾ ಟ್ರೇಡ್‌ನಲ್ಲಿ ಐ.ಟಿ.ಐ ಉತ್ತೀರ್ಣರಾಗಿರಬೇಕು ಅಥವಾ ರಾಷ್ಟ್ರೀಯ ಕೌಶಲ ಪ್ರಮಾಣಪತ್ರ ಪಡೆದಿರಬೇಕು. ಡಿಪ್ಲೊಮಾದವರು ಮೂರು ವರ್ಷಗಳ ವ್ಯಾಸಂಗವನ್ನು ಶೇ.50 ಅಂಕಗಳೊಂದಿಗೆ ಮುಗಿಸಿರಬೇಕು. ಪದವೀಧರ ಅಪ್ರೆಂಟಿಸ್‌ಶಿಪ್‌ಗಾಗಿ ಬಿ.ಬಿ.ಎ, ಬಿ.ಎ, ಬಿ.ಕಾಂ, ಬಿ.ಎಸ್.ಸಿ ಪದವೀಧರರು ಅರ್ಹರಾಗಿದ್ದಾರೆ. ಕನಿಷ್ಠ ಶೇ.50 ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು. 2025ರ ಅ.31ಕ್ಕೆ ಅನ್ವಯವಾಗುವಂತೆ ಹಿಂದಿನ ಐದು ವರ್ಷಗಳಲ್ಲಿ ಅಗತ್ಯ ಶೈಕ್ಷಣಿಕ ಅರ್ಹತೆಯನ್ನು ಪೂರ್ಣಗೊಳಿಸಿದವರು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿದ್ದಾರೆ ಎಂಬ ಷರತ್ತು ವಿಧಿಸಲಾಗಿದೆ.

ಅರ್ಜಿ ಸಲ್ಲಿಕೆಯ ಪ್ರಕ್ರಿಯೆ: ಆಸಕ್ತರು ಎನ್‌ಎಟಿಎಸ್ ಪೋರ್ಟಲ್‌ನಲ್ಲಿ ನೊಂದಾಯಿಸಿಕೊಂಡು, ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್ ಕಂಪನಿಯನ್ನು ಆಯ್ಕೆ ಮಾಡಿಕೊಂಡು ಅರ್ಜಿ ಸಲ್ಲಿಸಬೇಕಿದೆ. ಟ್ರೇಡ್, ಟೆಕ್ನಿಷಿಯನ್ ಹಾಗೂ ಪದವೀಧರ ಅಪ್ರೆಂಟಿಸ್‌ಶಿಪ್‌ಗಾಗಿ ಪ್ರತ್ಯೇಕ ಲಿಂಕ್ ನೀಡಲಾಗಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಸೆಪ್ಟೆಂಬರ್ 5, 2025

ಸ್ಟೈಪೆಂಡ್: ಅಪ್ರೆಂಟಿಸ್‌ಶಿಪ್ ಕಾಯ್ದೆ ಪ್ರಕಾರ ನಿಗದಿಪಡಿಸಿದ ಸ್ಟೈಪೆಂಡ್ ನೀಡಲಾಗುತ್ತದೆ. ಅಪ್ರೆಂಟಿಸ್‌ಶಿಪ್ ಮಂಡಳಿಯು ಶೇ.50 ಭಾಗವನ್ನು ಹಾಗೂ ಐಒಸಿಎಲ್‌ನಿಂದ ಇನ್ನುಳಿದ ಮೊತ್ತ ಪಾವತಿಸಲಾಗುತ್ತದೆ.

ಆಯ್ಕೆ ಪ್ರಕ್ರಿಯೆ

ಆಯಾ ಅಪ್ರೆಂಟಿಸ್‌ಶಿಪ್‌ಗೆ ನಿಗದಿಯಾಗಿರುವ ಶೈಕ್ಷಣಿಕ ಅರ್ಹತೆಯಲ್ಲಿ ಅತ್ಯಧಿಕ ಅಂಕಗಳ ಆಧಾರದಲ್ಲಿ, ಮೀಸಲಾತಿಯನ್ನು ಅನ್ವಯಿಸಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಯಾವುದೇ ಸಂದರ್ಶನ ಅಥವಾ ಲಿಖಿತ ಪರೀಕ್ಷೆ ಇರುವುದಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ.

ಬಿಎಸ್‌ಎಫ್‌ನಿಂದ 3,588 ಹುದ್ದೆಗಳಿಗೆ ನೇಮಕಾತಿ

ಭಾರತೀಯ ಗಡಿ ಭದ್ರತಾ ಪಡೆಯು (ಬಿ.ಎಸ್.ಎಫ್) ಕರ್ನಾಟಕ ಸೇರಿದಂತೆ ದೇಶಾದ್ಯಂತ ತನ್ನ ವಿವಿಧ ಘಟಕಗಳಲ್ಲಿ ಖಾಲಿ ಇರುವ 3,588 ಕಾನ್ಸ್‌ಟೇಬಲ್ ಹುದ್ದೆಗಳ ನೇಮಕಾತಿಗೆ ಅರ್ಜಿ ಆಹ್ವಾನಿಸಿದೆ. ಆಸಕ್ತರು ಆಗಸ್ಟ್-23ರ ಒಳಗೆ ಅರ್ಜಿ ಸಲ್ಲಿಸಲು ಕೋರಲಾಗಿದೆ.

ಅಂಗೀಕೃತ ವಿದ್ಯಾಸಂಸ್ಥೆಗಳಿಂದ 10ನೇ ತರಗತಿ ಜತೆಗೆ ಐ.ಟಿ.ಐ ವಿದ್ಯಾರ್ಹತೆ ಹೊಂದಿರುವವರು ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಹುದು. ಕನಿಷ್ಠ 18 ವರ್ಷ, ಗರಿಷ್ಠ 25 ವರ್ಷದ ಒಳಗಿನ ಅಭ್ಯರ್ಥಿಗಳಿಗೆ ಅವಕಾಶವಿದೆ, ಅಂದರೆ ಆಗಸ್ಟ್ 23ರ ವೇಳೆಗೆ ಅಭ್ಯರ್ಥಿಗಳ ವಯೋಮಿತಿ 25 ವರ್ಷ ಮೀರಿರಬಾರದು. ಮೀಸಲಾತ್ತಿ ವ್ಯಾಪ್ತಿಗೆ ಒಳಪಡುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಐದು ವರ್ಷ, ಇತರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಮೂರು ವರ್ಷ ಗರಿಷ್ಠ ವಯೋಮಿತಿಯಲ್ಲಿ ಸಡಿಲಿಕೆ ನೀಡಲಾಗುತ್ತದೆ.

ಅರ್ಜಿ ಶುಲ್ಕ: ಮಹಿಳೆಯರು, ಎಸ್.ಸಿ, ಎಸ್.ಟಿ, ಮಾಜಿ ಸೈನಿಕ, ಬಿ.ಎಸ್.ಎಫ್ ಸರ್ವಿಂಗ್, ಪರ್ಸನಲ್ ಅಭ್ಯರ್ಥಿಗಳಿಗೆ ಶುಲ್ಕದಿಂದ ಸಂಪೂರ್ಣ ವಿನಾಯಿತಿ ನೀಡಲಾಗಿದೆ.

ಉಳಿದಂತೆ ಸಾಮಾನ್ಯ, ಆರ್ಥಿಕ ದುರ್ಬಲ ವರ್ಗ ಹಾಗೂ ಒಬಿಸಿ ಅಭ್ಯರ್ಥಿಗಳು 100 ರೂ.ಅರ್ಜಿ ಶುಲ್ಕ ಪಾವತಿಸಬೇಕು. ಎಲ್ಲ ವರ್ಗದ ಅಭ್ಯರ್ಥಿಗಳು ಆನ್‌ಲೈನ್ ಮೂಲಕ 50 ರು. ಸೇವಾ ಶುಲ್ಕ ಪಾವತಿಸುವುದು ಖಡ್ಡಾಯ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಅಗಸ್ಟ್-23, 2025.

ಇಂಗ್ಲಿಷ್/ಹಿಂದಿಯಲ್ಲಿ ಪರೀಕ್ಷೆ ಬರೆಯಲು ಅವಕಾಶ

ವೇತನ ರು. 21,700ರಿಂದ-69100 ವರೆಗೆ

ಹೆಚ್ಚಿನ ವಿವರಗಳಿಗೆ rectt.bsf.gov.in

ರಾಜ್ಯದಲ್ಲಿ ನೇಮಕ ಪ್ರಕ್ರಿಯೆ ನಡೆಯುವ ಸ್ಥಳ: FTR HQ BSF (SPL-OPS) Bangalore, Post AFS Yelahanka, Bangalore-&63

ಗಮನಕ್ಕೆ

ಈ ಅಂಕಣದಲ್ಲಿ ಪ್ರಸ್ತುತಪಡಿಸಿದ ಮಾಹಿತಿಯ ನಿಖರತೆಯನ್ನು ಖಚಿತಪಡಿಸಿಕೊಳ್ಳಲು ಲೇಖಕರು ಎಲ್ಲ ಪ್ರಯತ್ನಗಳನ್ನು ಮಾಡಿದ್ದಾರೆ. ಆದಾಗ್ಯೂ, ವಿಷಯದ ಸಂಪೂರ್ಣತೆ, ನಿಖರತೆ ಅಥವಾ ಸಮಯೋಚಿತತೆಯನ್ನು ಖಾತರಿಪಡಿಸು ವುದಿಲ್ಲ. ಹಾಗಾಗಿ ಅರ್ಜಿ ಸಲ್ಲಿಸುವ ಮೊದಲು ಆಯಾಯ ವೈಬ್‌ಸೈಟ್ ನೋಡಿ ಖಚಿತಪಡಿಸು ವುದು ಉತ್ತಮ. ಯಾವುದೇ ಲೋಪದೋಷಗಳಿಗೆ ಪತ್ರಿಕೆ ಇಲ್ಲವೇ ಲೇಖಕರು ಜವಾಬ್ದಾರರಲ್ಲ.



ಆರ್. ಕೆ. ಬಾಲಚಂದ್ರ
ಲೇಖಕರು, ಬ್ಯಾಂಕಿಂಗ್ ತರಬೇತುದಾರರು ಹಾಗೂ ವೃತ್ತಿ ಮಾರ್ಗದರ್ಶಕರು, ಬೆಂಗಳೂರು.

ಕಲ್ಪಿತ ಕತೆ ಕಟ್ಟಿದ್ದ ದುಷ್ಟಶಕ್ತಿಗಳ ಅನಾವರಣ | ಗುಡ್ಡ ಅಗೆದು ಇಲಿಯನ್ನೂ ಹಿಡಿಯಲಿಲ್ಲ

ಧರ್ಮಸ್ಥಳ: 18 ದಿನ, 18 ಕಡೆ ವ್ಯರ್ಥ ಉತ್ಖನನ

ಜಿತೇಂದ್ರ ಕುಂದೇಶ್ವರ, ಮಂಗಳೂರು

ಹೆಣ್ಣಿನ ಅವಮಾನ ತೀರಿಸಲು ಮಹಾಭಾರತ ಯುದ್ಧ 18 ದಿನ ನಡೆಯಿತು. ಅನುಮಾನ ಇದೆ ಎಂಬ ಕಾರಣಕ್ಕಾಗಿ ಧರ್ಮಸ್ಥಳದಲ್ಲಿ ಅಸ್ಥಿಪಂಜರ ಉತ್ಖನನ 18 ಕಡೆ ನಡೆಯಿತು. 13 ದಿನಗಳ ಕಾಲ ನಡೆದ ಕಾರ್ಯಾಚರಣೆಯಲ್ಲಿ 13ನೇ ಪಾಯಿಂಟ್‌ನಲ್ಲಿ ಎರಡು ದಿನಗಳ ಕಾಲ ಎರಡು ಕಡೆ ಉತ್ಖನನ ನಡೆಸಿದರೂ ಸಿಕ್ಕಿದ್ದು ಬರೀ ಮಣ್ಣು!

ಹೆಣ್ಣಿನ ಕಳೇಬರ ಸಿಗಲಿಲ್ಲ: ಒಟ್ಟು 18 ಕಡೆಗಳಲ್ಲಿಯೂ ಯಾವುದೇ ಹೆಣ್ಣಿನ ಕಳೇಬರ ಸಿಗಲೇ ಇಲ್ಲ. ಒಂದು ಕಡೆ ಭೂಪದರದ ಮೇಲ್ಭಾಗದಲ್ಲಿ ಆತ್ಮಹತ್ಯೆ ಮಾಡಿಕೊಂಡ ಗಂಡಸಿನ ಕಳೇಬರ, ಇನ್ನೊಂದು ಕಡೆ 6ನೇ ಪಾಯಿಂಟ್‌ನಲ್ಲಿ 6 ಅಡಿ ಆಳದಲ್ಲಿ 50 ವರ್ಷ ಹಳೆಯದಾದ ಗಂಡಸಿನ ಎಲುಬುಗಳು ಎಂಬಲ್ಲಿಗೆ ಅನಾಮಿಕ ದೂರುದಾರ ಬಾಲಕಿಯರ, ಯುವತಿಯರ ಅತ್ಯಾಚಾರಗಳಾಗಿವೆ, ಕೊಲೆಗಳಾಗಿವೆ ಸಾವಿರಕ್ಕೂ ಹೆಚ್ಚು ಹೆಣ ಹೂತಿದ್ದೇನೆ ಎಂಬ ಆಪಾದನೆ ಕೇವಲ ದೂರು ಅಲ್ಲ ಇದರ ಹಿಂದೆ ಬಹುದೊಡ್ಡ ಷಡ್ಯಂತ್ರ ಇದೆ ಎನ್ನುವ ಖಚಿತ ಅನುಮಾನ, ಆಕ್ರೋಶ ರಾಜ್ಯಾದ್ಯಂತ ಎಬ್ಬಿದೆ.

ಸೌಜನ್ಯ ಪರ ಹೋರಾಟದ ನೆಪದಲ್ಲಿ ಬೀದಿಗಿಳಿದಿರುವ ತಂಡವು ಹಿಂದೂ ಪುಣ್ಯಕ್ಷೇತ್ರಗಳ ವಿರುದ್ಧ ಆಗಾಗ ಕತ್ತಿ ಮಸೆಯುತ್ತ ಬಂದಿದೆ. ಈ ಮೂಲಕ ಈ ತಂಡದ ಹಿಂದಿನ ಹುನ್ನಾರಗಳು ಸ್ಪಷ್ಟವಾಗುತ್ತಿವೆ. ಧರ್ಮಸ್ಥಳಕ್ಕೆ ನುಗ್ಗುವ ಬೆದರಿಕೆಗಳ ಹಿಂದೆ ಕೇವಲ ಸ್ಥಳೀಯ ಹೋರಾಟಗಾರರು ಮಾತ್ರ ಇಲ್ಲ. ಎಡಚಿಂತನೆಯ ದೊಡ್ಡ ಲಾಬಿ ಜತೆ ಹಿಂದೂ ವಿರೋಧಿ ಮತಾಂತರದ ಜಾಲವೂ ಗೋಚರಿಸುತ್ತಿದೆ. ಹಿಂದುಳಿದ ವರ್ಗದ ಮತಾಂತರಗೊಂಡ ಕೆಲವು ವ್ಯಕ್ತಿಗಳು ಈ ಪ್ರಕರಣದಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಇರುವ ನಿಗೂಢ ಮಾಹಿತಿಗಳು ಲಭ್ಯವಾಗಿದೆ. ಮುಸುಕು ಹಾಕಿದ ವ್ಯಕ್ತಿ ತನ್ನ ಕಾನೂನಿನಡಿ ಮುಸುಕನ್ನು ತೆಗೆಯುವ ಪ್ರಕ್ರಿಯೆ ಆರಂಭವಾಗುವ ವೇಳೆ ಸಂಪೂರ್ಣ ಕಥಾನಕ ಮತ್ತು ಆತ ಮಾಡಿದ ಮಸಲತ್ತು ಕೂಡಾ ಜಗತ್ತಿಗೆ ತೆರೆದುಕೊಳ್ಳಲಿದೆ. 10ನೇ ಪಾಯಿಂಟ್‌ನಿಂದ ಉಪವಿಭಾಗಾಧಿಕಾರಿ ಸ್ಟೆಲ್ಲಾ ಅವರು ಅನಾಮಿಕನ ದೂರಿನಂತೆ ಎಸ್‌ಐಟಿಯವರ ಬಳಿ ಅನುಮತಿ ಕೇಳದೆ ನೇರವಾಗಿ ತೆರಳುವಾಗಲೇ ಇದರ ಹಿಂದೆ ಅಧಿಕಾರಿ ವರ್ಗ, ಪ್ರಭಾವಿಗಳು ಮಾರ್ಗದರ್ಶನ ಮಾಡುತ್ತಿರುವ ಸಂಶಯ ಕಾಡಿತ್ತು.

ಧರ್ಮಸ್ಥಳಕ್ಕೆ ಖೆಡ್ಡಾ : ಎಲ್ಲ ದಿಕ್ಕಿನಲ್ಲಿಯೂ ಧರ್ಮಸ್ಥಳ ಕಟ್ಟಿಹಾಕಲು ಸಂಪೂರ್ಣ ಸಿದ್ಧತೆ ನಡೆಸಲಾಗಿತ್ತು. ಯೂಟ್ಯೂಬ್ ನಲ್ಲಿ ಕಾಲ್ಪನಿಕ ವೀಡಿಯೋಗಳ ಮೂಲಕ, ಅಪಪ್ರಚಾರ ಬಳಿಕ ಮಾಧ್ಯಮಗಳಿಗೆ ಸುಳ್ಳು ಸುದ್ದಿಯನ್ನು ಸುಜಾತ ಪರ ವಕೀಲರ ಲೆಟರ್ ಹೆಡ್ ಮೂಲಕ ಕಳುಹಿಸಿ ನ್ಯಾಷನಲ್ ಮಟ್ಟದ ವಾಹಿನಿಗಳಲ್ಲಿಯೂ ಅಧಿಕೃತಮುದ್ರೆ ಮೂಲಕ ಸುಳ್ಳು ಸುದ್ದಿ ಪ್ರಸಾರ ಮಾಡಲಾಗುತ್ತಿತ್ತು.

ಇದರ ಜತೆಯಲ್ಲಿ ಪ್ರಮುಖ ಪಾತ್ರಧಾರಿ ಅನಾಮಿಕ ಭೀಮನ ಮೇಲೆ ವೈಯಕ್ತಿಕ ದಾಳಿ, ಅವಮಾನ ಆಗದಿರಲು ಮುಸುಕು ಹಾಕಿದ ವ್ಯಕ್ತಿಯ ಚಹರೆ, ಹೆಸರು ಊರು, ಆತನ ಕೆಲಸಗಳ ಬಗ್ಗೆ ತಿಳಿಯದಂತೆ ಕಾನೂನು ಮೂಲಕವೇ ಆರೋಪಿ ರಕ್ಷಣೆಗೆ ಪ್ಲಾನ್ ಮಾಡಲಾಗಿತ್ತು. ಆರಂಭದ 10 ದಿನಗಳ ವರೆಗೆ ಇದೂ ಗುಣಾತ್ಮಕವಾಗಿತ್ತು.

ಯೂಟ್ಯೂಬರ್ ಪರ ವಕಾಲತ್ತು: ಹಿಂದುತ್ವ ನಾಯಕರ ವಿರುದ್ಧ ಉಚಿತವಾಗಿ ವಾದ ಮಾಡುವ ಪ್ರಬಲ ವಕೀಲರ ಜತೆಯಲ್ಲಿ ಅನೇಕ ವಕೀಲರುಗಳ ತಂಡವೂ ಇತ್ತು. ಯೂಟ್ಯೂಬರ್‌ಗಳ ಪರ ವಾದಿಸುವ ನುರಿತ ವಕೀಲರ ತಂಡವೂ ಇತ್ತು. ಸೋಶೀಯಲ್ ಮೀಡಿಯಾದಲ್ಲಿ ಬಂದದ್ದು ಯಾವುದು ಸತ್ಯ ಯಾವುದು ಸುಳ್ಳು ಎಂಬ ಗೊಂದಲದಲ್ಲಿ ಜನ ಇರುವಾಗ ಎಸ್‌ಐಟಿ ತನಿಖೆ ನಡೆಯಲಿ ಆಮೇಲೆ ನೋಡೋಣ ಎಂಬ ವರ್ಗವೇ ಶೇ.80ರಷ್ಟಿತ್ತು.

ಹಿಂದುತ್ವ ಕೋಟೆ ಹುನ್ನಾರ: ಎಸ್‌ಐಟಿ ಪ್ರಕರಣವನ್ನು ಮುಂದಿನ ಚುನಾವಣೆವರೆಗೂ ಬಳಸಿಕೊಂಡು ಹಿಂದುತ್ವ ಶಕ್ತಿಯನ್ನು ವಿಭಜಿಸುವ ಯೋಚನೆಯೂ ಇದ್ದಂತ್ತಿತ್ತು. ಹಾಗಾಗಿಯೇ ಸೌಜನ್ಯ ಅತ್ಯಾಚಾರ ಪ್ರಕರಣ ಬಳಸಿಕೊಳ್ಳಲಾಗಿತ್ತು. ಈ ಪ್ರಕರಣ ಜೀವಂತವಾಗಿಟ್ಟು ಆರೋಪಿಗೆ ಶಿಕ್ಷೆಯಾಗದಂತೆ ಉಲ್ಟಾ ಸಾಕ್ಷಿ ಹೇಳುವ ಮೂಲಕ ಪ್ರಕರಣ ನ್ಯಾಯ ಸಿಗದೆ ಮುಗಿದಿತ್ತು. ಜನರು ಆಕ್ರೋಶದ ಸಂದರ್ಭವನ್ನೇ ಬಳಸಿಕೊಂಡು ಧರ್ಮಾಧಿಕಾರಿ ಕುಟುಂಬಕ್ಕೆ ದಾಳಿ ಮಾಡಿ, ಕ್ಷೇತ್ರ ಕೈ ವಶ ಮಾಡಿಕೊಳ್ಳುವ ದುರಾಸೆ ಇತ್ತು. ಆದರೆ ಮಂಜುನಾಥ ಮತ್ತು ಅಣ್ಣಪ್ಪನ ಆಟವೇ ಬೇರೆ ಇತ್ತು. ಬಹುಷಃ ಇಷ್ಟು ವರ್ಷ ಕೊಳಕು ಬಾಯಿಗಳಲ್ಲಿ ಆಡಿಕೊಂಡ

ಅಪವಾದಗಳೆಲ್ಲ ಮುಕ್ತವಾಗಲು ಇದೊಂದು ದೇವರ ಆಟವೂ, ಅವಕಾಶವೋ ಇರಬಹುದು.

ಹೊಸ ಕಥೆ, ಹೊಸ ಪಾತ್ರ: ಎಸ್‌ಐಟಿ ಮಾಡಲು ಮತ್ತು ಅದನ್ನು ದೀರ್ಘವಾಗಿ ಮುನ್ನಡೆಸಲು ಹೊಸ ಹೊಸ ಪಾತ್ರಗಳು ಈ ಮಾಸ್ಟರ್ ಮೈಂಡ್ ತಂಡದಲ್ಲಿ ಇದ್ದವು. ಅದಕ್ಕಾಗಿ ಹೊಸ ಹೊಸ ಕಥೆಗಳು ಸೃಷ್ಟಿಯಾಗಿದ್ದವು. ಈ ಆರೋಪ, ಅಪವಾದಗಳಿಗೆಲ್ಲ ತಳಪಾಯ, ಅಡಿಪಾಯ ಆಗಿರೋದು ಸೌಜನ್ಯ ಎಂಬ 17ರ ಹರೆಯ ಮುಗ್ಧ ಹೆಣ್ಣಿನ ಭೀಕರ ಅತ್ಯಾಚಾರ, ಕೊಲೆ ಪ್ರಕರಣ. 2012ರಲ್ಲಿ ನಡೆದ ಈ ದುರಂತದಲ್ಲಿ ಅಮಾಯಕ ಬಾಲಕಿ ಸೌಜನ್ಯ ಬಲಿಯಾಗಿ ಹೋದಳು. ಇಡೀ ಊರಿಗೆ ಊರೇ ಮರುಗಿತ್ತು. ಪೊಲೀಸ್ ಇಲಾಖೆ, ಸಿಐಡಿ, ಸಿಬಿಐ ಆರೋಪಿ ಸಂತೋಷ್ ರಾವ್ ಅತ್ಯಾಚಾರ ನಡೆಸಿರುವುದಾಗಿ 8 ಸಾವಿರ ಪುಟಗಳ ಆರೋಪ ಪಟ್ಟಿ ಸಲ್ಲಿಸಿದರು. ಆದರೆ ಹೋರಾಟಗಾರರು ಆತ ಆರೋಪಿ ಅಲ್ಲ ಎಂದರು. ಹಾಗಾದರೆ ಆರೋಪಿಗಳು ಯಾರು ಎಂದು ಹೋರಾಟಗಾರರಲ್ಲಿ ಸೌಜನ್ಯ ತಾಯಿ ಬಳಿ ಕೇಳಿದಾಗ ಕುಸುಮಾವತಿ ನನಗೆ ಅವರ ಪರಿಚಯವೇ ಇಲ್ಲ, ನಾಲ್ಕು ಮಂದಿಯ ಹೆಸರು ಹೇಳಿಸಿದರು ಎಂಬ ವಿಚಿತ್ರ ಹೇಳಿಕೆ ನೀಡಿದರು.

ನಾಲ್ವರ ಮಂಪರು ಪರೀಕ್ಷೆ: ಇವರ ಆರೋಪದಂತೆ ಧರ್ಮಸ್ಥಳ ಸಿಬ್ಬಂದಿ ನಾಲ್ವರ ಮಂಪರು ಪರೀಕ್ಷೆ, ನಾರ್ಕೊ ಅನಾಲಿಸಿಸ್ ಪರೀಕ್ಷೆಗೆ ಒಪ್ಪಿ ಎಲ್ಲ ಮುಗಿದ ಮೇಲೆ ಈ ಪ್ರಕರಣದಲ್ಲಿ ಅವರ ಯಾವುದೇ ಪಾತ್ರ ಇಲ್ಲ ಎಂದಾಯಿತು. ಆದರೆ ಅತ್ಯಾಚಾರ ನಡೆಸಿದ ಆರೋಪಿ ಕುಕ್ಕುಂದೂರಿನ ಸಂತೋಷ್, ಆತನ ಮರ್ಮಾಂಗದ ಮೇಲೆ ಆದ ಗಾಯ, ಬೆನ್ನ ಮೇಲೆ ಆದ ಗಾಯ, ಸಂತ್ರಸ್ತೆ ಸೌಜನ್ಯ ಮೇಲೆ ಆದ ಅತ್ಯಾಚಾರ ಯತ್ನದ ಸಂದರ್ಭ ನಡೆದ ಗಾಯಗಳು ಆತನೇ ಆರೋಪಿ ಎಂಬುದಾಗಿ ಸಾರಿ ಸಾರಿ ಹೇಳುತ್ತಿದ್ದರೂ ಹೋರಾಟಗಾರರು ಆತನ ಮಂಪರು ಪರೀಕ್ಷೆ ಮಾಡಲು ವಿರೋಧಿಸಿದರು. ಆರೋಪಿಯನ್ನು ಬಚಾವ್ ಮಾಡಲು ದುಬಾರಿ, ಒಳ್ಳೆಯ ವಕೀಲರ ನೇಮಿಸಲಾಯಿತು. ಅತ್ಯಾಚಾರ ನಡೆಸಿದ್ದಾನೆ ಎಂದು ಹೇಳಬೇಕಿದ್ದ 7 ಸಾಕ್ಷಿಗಳು ಅದೂ ಕೂಡಾ ಸೌಜನ್ಯ ರಕ್ತ ಸಂಬಂಧಿಗಳು. ತಂದೆ, ತಾಯಿ, ಮಾವ.. ಅವರೆಲ್ಲ ಉಲ್ಟಾ ಸಾಕ್ಷಿ ಹೊಡೆದರು. ಮತ್ತೆ ಆರೋಪಿಗೆ ಹೇಗೆ ಶಿಕ್ಷೆಯಾಗಲು ಸಾಧ್ಯ?

ಸೌಜನ್ಯ ಪ್ರಕರಣ ತೀರ್ಪು: ಸೌಜನ್ಯ ಪ್ರಕರಣ ಇಷ್ಟ ವರ್ಷ ನಡೆಯಿತು. ತೀರ್ಪು ಹೊರ ಬಂತು. ಪೊಲೀಸ್ ಇಲಾಖೆ, ಸರಕಾರ ಮತ್ತು ಬಹುತೇಕ ಜನರು ಸಂತೋಷ್ ರಾವ್ ಒಬ್ಬನೇ ಆರೋಪಿ ಎಂದು ಆರಂಭದಿಂದ ಕೊನೆ ವರೆಗೂ ಆ ನಿಟ್ಟಿನಲ್ಲೆ ತನಿಖೆ ನಡೆಯಿತು. ಇನ್ನೊಂದು ಗುಂಪು ಮೊದಲ ಒಂದು ವರ್ಷ ಸಂತೋಷ್ ರಾವ್ ಆರೋಪಿ, ಜತೆಗೆ ಇತರರೂ ಇದ್ದಾರೆ ಇದಕ್ಕೆ ಸಾಕ್ಷಿ ಇದೆ ಅಂದರು. ಬಳಿಕ 10 ವರ್ಷಗಳಿಂದ ಒಂದು ಧರ್ಮಕ್ಷೇತ್ರ ಗುರಿಯಾಗಿಟ್ಟುಕೊಂಡು ಅವರೇ ಮಾಡಿಸಿದ್ದಾರೆ ಎಂದು ಹೋರಾಟ, ಪ್ರತಿಭಟನೆ ಮಾಡುತ್ತಿದ್ದರು. ಹೋರಾಟ ತೀವ್ರಗೊಳಿಸಿ ತೀರ್ಪು ಕೂಡಾ ನೀಡತೊಡಗಿದರು. ಇನ್ನೊಂದೆಡೆ ಮಾಧ್ಯಮಗಳು, ಪತ್ರಿಕೆಗಳು, ಪೊಲೀಸ್ ಇಲಾಖೆ, ಸಿಐಡಿ, ಸಿಬಿಐ, ಕೋರ್ಟ್ ನೀಡಿದ ಅಧಿಕೃತ ವಿಚಾರಗಳನ್ನು ಆದ್ಯತೆಯಲ್ಲಿ ಪ್ರಕಟಿಸುತ್ತಾ ಬಂದವು.

ಸಾಕ್ಷಿ ಇದೆ, ಮೊಬೈಲ್‌ನಲ್ಲಿದೆ, ದಾಖಲೆಯಲ್ಲಿ ಭದ್ರವಾಗಿದೆ, ನೀಡುತ್ತೇವೆ, ಸಿಕ್ಕಿ ಬೀಳ್ತಾರೆ ಎಂದು ಹೇಳುತ್ತಾ ಇದುವರೆಗೂ ಒಂದೇ ಒಂದು ಸಾಕ್ಷಿ ಪೊಲೀಸ್ ಇಲಾಖೆಗೆ, ಕೋರ್ಟ್‌ಗೆ ನೀಡಿಲ್ಲ, ಬದಲಾಗಿ ಇದ್ದ ಸಾಕ್ಷಿಗಳೇ (8 ಮಂದಿ) ಉಲ್ಟಾ ಹೊಡೆದಿದ್ದರು. ಇತ್ತ ದಾಖಲೆ ಕೊಡುತ್ತೇನೆ ಎಂದವರು 10 ವರ್ಷಗಳಿಂದಲೂ ದಾಖಲೆ ಕೊಡಲೇ ಇಲ್ಲ. ಯೂಟ್ಯೂಬರ್‌ಗಳು ಸಂಪಾದನೆ ಮಾಡಿದ್ದಷ್ಟೇ ಬಂತು. ಆದರೆ ಸರಕಾರ, ವಿಧಿ ವಿಜ್ಞಾನ ತಜ್ಞರು (ಅಧಿಕೃತ), ಪೊಲೀಸ್ ಇಲಾಖೆ, ಸರಕಾರ ಹೇಳಿರುವ ದಾಖಲೆಗಳನ್ನು ವರದಿ ಮಾಡಿದ ಮಾಧ್ಯಮಗಳಿಗೆ ಮಾರಾಟವಾದ ಪತ್ರಕರ್ತರು ಎಂಬ ಆರೋಪದ ದಾಳಿ. ಹಾಗಾದರೆ ಈ ಪತ್ರಕರ್ತರು ಯಾವುದೇ ದಾಖಲೆ ಇಲ್ಲದೆ

ಯಾರೋ ಹೇಳಿದ್ದು ಬರೆದು ಕಲ್ಪಿತ ವರದಿ ಮಾಡಬೇಕೇ? ಈಗ ಹಾಗೆ ಮಾಡಿದ ಯೂಟ್ಯೂಬರ್‌ಗಳನ್ನು ಒಂದು ವರ್ಗ ಹೀರೋಗಳಂತೆ ವಿಜೃಂಭಿಸಿದವು.

ಇತ್ತೀಚೆಗಂತೂ ಸೌಜನ್ಯ ಪರ ಸಾಕ್ಷಿಗಳನ್ನು ಕೊಲ್ಲಲಾಯಿತು ಎಂಬ ಕಪೋಲ ಕಲ್ಪಿತ ಕತೆಗಳನ್ನು ಕಟ್ಟಿದ ಆರೋಪಿ ಸಂತೋಷ್ ಪರ ಹೋರಾಟಗಾರರು ಸಾಮಾಜಿಕ ಜಾಲತಾಣದಲ್ಲಿ ಹರಿಯ ಬಿಟ್ಟರು. ಸಮೀರ ಎಂಬಾತನ ಕಾಲ್ಪನಿಕ ವೀಡಿಯೋಗಳಿಗೆ ಮಿಲಿಯಗಟ್ಟಲೆ ವೀವ್ ಬರತೊಡಗಿದವು. ಇದನ್ನು ನೋಡಿದ ವೀಕ್ಷಕರು ಸ್ವಾರ್ಥಿಗಳಂತೆ ಈ ಭಾಗದಲ್ಲಿ ಅತ್ಯಾಚಾರ ಕೊಲೆ ಸಾಮಾನ್ಯ ಎಂಬಂತೆ ಹೇಳತೊಡಗಿದರು. ಎಡಪಂಥೀಯರು, ಕಮ್ಯುನಿಸ್ಟರು ತಮ್ಮ ಹಳೆಯ ವೈರಿ ಧರ್ಮಸ್ಥಳ ಕ್ಷೇತ್ರದ ಮೇಲೆ ದೂರು ನೀಡುತ್ತಾ ಮುಂದಿನ ಚುನಾವಣೆ ವರೆಗೆ ವಿಚಾರಣೆ ನಡೆಸಬಹುದಾದಷ್ಟು ದೂರುಗಳನ್ನು ಸಿದ್ಧಪಡಿಸಿ ಒಂದೊಂದಾಗಿ ಬಿಡತೊಡಗಿದರು. ಸಮೀರ ಎಂಬಾತ ಧರ್ಮಾಧಿಕಾರಿಯನ್ನು ತೀರಾ ಕೆಟ್ಟದಾಗಿ ನಿಂದಿಸಿ ಆರೋಪ ಹೊರಿಸಿದಾಗ ಹಿಂದುತ್ವವಾದಿಗಳು ದನಿ ಗೂಡಿಸದಿರುವುದು ಕೆಟ್ಟ ಬೆಳವಣಿಗೆ.

ತೆಂಗು ಬೆಳೆಗಾರ ಕಂಗಾಲು | 1 ತಿಂಗಳಲ್ಲಿ 5 ಸಾವಿರ ರು.ಗೆ ಇಳಿಕೆ

ಕಲ್ಪವೃಕ್ಷ ನಾಡು: ಕುಸಿತದ ಹಾದಿ ಹಿಡಿದ ಉಂಡೆ ಕೊಬ್ಬರಿ ಬೆಲೆ

ಜಿಲ್ಲಾ ನೋಟ

ರಂಗನಾಥ ಕೆ. ಹೊನ್ನಮರಡಿ

ತುಮಕೂರು: ಕೊಬ್ಬರಿ ಮಾರುಕಟ್ಟೆಯೂ ಷೇರು ಮಾರುಕಟ್ಟೆಯಂತೆ ಆಗಿದ್ದು, ಇತ್ತೀಚಿನ ಕೆಲ ವಾರಗಳಿಂದ ಉಂಡೆ ಕೊಬ್ಬರಿ ಬೆಲೆಯೂ ಗಣನೀಯವಾಗಿ ಕುಸಿತ ಕಂಡಿದ್ದು ತೆಂಗು ಬೆಳೆಗಾರರು ಆತಂಕಕ್ಕೆ ಒಳಗಾಗಿದ್ದಾರೆ.

ತಿಪಟೂರು ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಗರಿಷ್ಠ ದರ ಕ್ವಿಂಟಾಲ್‌ಗೆ 26,500ಕ್ಕೆ ಇಳಿಕೆ ಆಗಿದೆ. ಕಳೆದ ವಾರ ಕನಿಷ್ಠ 24,000 ರು., ಮಾದರಿ 25,500ರು.ಗಳಿಗೆ ಟೆಂಡರ್ ಆಗಿದೆ. ಮಾರುಕಟ್ಟೆಗೆ 1,186 ಕ್ವಿಂಟಾಲ್ (4,224 ಚೀಲ) ಉಂಡೆ ಕೊಬ್ಬರಿ ಆವಕವಾಗಿತ್ತು.

ದಿಢೀರ್ ದರ ಇಳಿಕೆ

ಕಳೆದ ಒಂದು ವಾರದ ಅಂತರದಲ್ಲಿ ಕ್ವಿಂಟಾಲ್‌ಗೆ 1,606 ರು., ಒಂದು ಟೆಂಡರ್ ಅಂತರದ ಹರಾಜಿಗೆ ಒಂದು ಸಾವಿರ ರುಪಾಯಿ ಕಡಿಮೆಯಾಗಿದೆ. ಒಂದು ತಿಂಗಳ ಅಂತರದಲ್ಲಿ ಕ್ವಿಂಟಾಲ್‌ಗೆ 5 ಸಾವಿರ ರೂ. ಕುಸಿತ ಕಂಡಂತಾಗಿದೆ. ಕ್ವಿಂಟಾಲ್ ಬೆಲೆ 31,606 ರು.ಗೆ ಏರಿಕೆಯಾಗುವ ಮೂಲಕ ಸಾರ್ವಕಾಲಿಕ ದಾಖಲೆ ಬರೆದಿತ್ತು. ಜೂನ್ ತಿಂಗಳ ಕಡೆಯವರೆವಿಗೂ ಬೆಲೆಯೂ ಸತತವಾಗಿ ಏರಿಕೆ ಆಗುತ್ತಲೇ ಇತ್ತು. ನಂತರದ ದಿನಗಳಲ್ಲಿ ಸ್ವಲ್ಪ ಪ್ರಮಾಣದಲ್ಲಿ ಇಳಿಕೆಯಾಗಿ, ಜುಲೈ ತಿಂಗಳ ಮಧ್ಯದ ವೇಳೆಗೆ 28 ಸಾವಿರದಿಂದ 30 ಸಾವಿರದ ನಡುವೆ ಮಾರಾಟವಾಗುತ್ತಿತ್ತು.

ಕುಸಿದು ಬಿದ್ದ ಬೆಲೆ ಸ್ಥಿರತೆ

ಕೆಲ ದಿನಗಳಂತೂ ಎರಡು ಸಾವಿರದ ಆಸುಪಾಸಿನಲ್ಲಿಯೇ ಸ್ಥಿರತೆ ಕಂಡುಕೊಂಡಿತ್ತು. ಇದರಿಂದಾಗಿ ಬೆಲೆ ಸ್ಥಿರತೆ ಕಂಡುಕೊಳ್ಳುವ ಸಾಧ್ಯತೆಯಿದೆ ಎಂದು ರೈತರು,ವರ್ತಕರು, ದಲ್ಲಾಳಿಗಳು ಭಾವಿಸಿದ್ದರು. ಆದರೆ ಮಾರುಕಟ್ಟೆಯ ಲೆಕ್ಕ ಬಲ್ಲವರಾರು ಜುಲೈ ತಿಂಗಳ ಮಧ್ಯ ಭಾಗದಿಂದಲೇ ಬೆಲೆ ಕುಸಿತ ಪ್ರಾರಂಭವಾಗಿ ಆಗಸ್ಟ್ ತಿಂಗಳಿನಲ್ಲಿಯೂ ನಿಲ್ಲುವಂತೆ ಕಾಣುತ್ತಿಲ್ಲ. ಮುಂದಿನ ದಿನಗಳಲ್ಲಿ 25 ಸಾವಿರಕ್ಕೆ ಸ್ಥಿರವಾಗಬಹುದು ಎಂಬುದು ಕೆಲವಾರ ವಾದವಾಗಿದೆ. ಆದರೆ ಸಗಟು ವರ್ತಕರು ಇದಕ್ಕಿಂತ ಕುಸಿತ ಕಾಣುವ ಸಾಧ್ಯತೆ ಇದೆ ಎಂದು ಅಂದಾಜಿಸಿದ್ದಾರೆ.

ದರ ಏರಿಳಿತದ ಹೊಡೆತ

ಈ ಹಿಂದೆ ಉಂಡೆ ಕೊಬ್ಬರಿಗೆ ಇದ್ದ ಹೆಚ್ಚಿನ ಬೇಡಿಕೆಯ ಹಿನ್ನೆಲೆ ದರವೂ ಏರಿಕೆಯತ್ತ ಸಾಗಿತ್ತು. ಕಳೆದ ಮಾರ್ಚ್ ತಿಂಗಳಿಂದ ಜೂನ್ ಕೊನೆಯವರೆಗೆ ಗೂಳಿಯಂತೆ ಸಾಗಿದ್ದ ಬೆಲೆ ಕರಡಿಯ ನೃತ್ಯಕ್ಕೆ ನಲುಗಿದ್ದು ರೈತರ ಆತಂಕ ಹೆಚ್ಚಾಗಿದೆ. ಈಗಾಗಲೇ ಒಂದು ಹಂತದವರಗೆ ಬೆಲೆ ಇಳಿಕೆ ಕಂಡಿದ್ದು, ರೈತರ ಬಳಿ ಇರುವಂತಹ ಕೊಬ್ಬರಿಯೂ ಶೇಕಡವಾರು ಕಡಿಮೆ ಆಗಿದ್ದು ಮುಂದಿನ ದಿನಗಳಲ್ಲಿ ಯಾವುದೇ ವ್ಯತ್ಯಾಸಗಳು ಕಾಣುವುದಿಲ್ಲ. ಅತ್ಯಂತ ಕಡಿಮೆ ಏರಿಳಿತವನ್ನು ನಿರೀಕ್ಷಿಸಬಹುದು ಹೊರೆತು ಕುಸಿಯುವ ಸಾಧ್ಯತೆ ಕಡಿಮೆ ಆಗಬಹುದು ಎನ್ನುವುದು ಮಾರುಕಟ್ಟೆ ವಿಶ್ಲೇಷಕರ ಮಾತು. ಇದರಿಂದಾಗಿ ರೈತರು ಬೆಲೆ ಇಳಿಕೆಯ ಆತಂಕದಲ್ಲಿ ಇದ್ದು ಕೊಬ್ಬರಿಯನ್ನು ಮಾರುಕಟ್ಟೆಗೆ ತರಲು ಆತುರತೆ ತೋರಿಸುತ್ತಿದ್ದಾರೆ.

ಕೊಬ್ಬರಿ ಎಣ್ಣೆಗೆ ನಮ್ಮ ಕೊಬ್ಬರಿ ಬಳಕೆ ಕುಸಿತ

ಉಂಡೆ ಕೊಬ್ಬರಿಯ ಬೆಲೆ ಏರಿಕೆಯಿಂದಾಗಿ ಉತ್ತರ ಭಾರತದ ರಾಜ್ಯಗಳಲ್ಲಿ ಬೇಡಿಕೆಯೂ ಕಡಿಮೆಯಾಗಿದೆ. ಆ ಭಾಗದ ವರ್ತಕರೂ ಖರೀದಿಯನ್ನು ಕಡಿಮೆ ಮಾಡಿದ್ದು ಧಾರಣೆ ಕುಸಿಯುವಂತೆ ಮಾಡಿದೆ. ತಮಿಳುನಾಡು, ಕೇರಳ ಭಾಗದಲ್ಲಿ ತೆಂಗಿನಕಾಯಿ ಇಳುವರಿಯ ಪ್ರಾರಂಭವಾಗಿದ್ದು ಮಾರುಕಟ್ಟೆ ಪ್ರವೇಶಿಸಿವೆ. ಕೊಬ್ಬರಿ ದುಬಾರಿಯಾದ ಕಾರಣಕ್ಕೆ ತಮಿಳುನಾಡು, ಕೇರಳದಲ್ಲಿ ಕಡಿಮೆ ಬೆಲೆಗೆ ಸಿಗುವ ತೆಂಗಿನಕಾಯಿಗಳನ್ನೇ ಖರೀದಿಸಿ ಅದರ ಮೂಲಕವೇ ತೆಂಗಿನ ಎಣ್ಣೆ ಉತ್ಪಾದನೆ ಮಾಡಲಾಗುತ್ತಿದೆ. ಇದರಿಂದಾಗಿ ಎಣ್ಣೆ ಉತ್ಪಾದನೆಗೆ ನಮ್ಮ ರಾಜ್ಯದ ಕೊಬ್ಬರಿ ಬಳಕೆ ಕಡಿಮೆಯಾಗಿದೆ. ಹಾಗಾಗಿ ಬೆಲೆಯಲ್ಲಿ ಇಳಿಕೆ ಕಂಡಿರಬಹುದು ಎನ್ನುವುದು ಮಾರುಕಟ್ಟೆ ಮೂಲದ ಮಾಹಿತಿ.

» ಕಡಿಮೆ ಬೆಲೆಗೆ ಸಿಗುವ ಕೇರಳದ ತೆಂಗಿನಕಾಯಿ

» ಮಾರುಕಟ್ಟೆ ಮೇಲೆ ಬೃಹತ್ ಕಂಪನಿಗಳ ಹಿಡಿತ

ಕೊಬ್ಬರಿ ದಾಸ್ತಾನಿನ ಗುಮಾನಿ

ಪ್ರತಿಷ್ಠಿತ ಕೊಬ್ಬರಿ ವಹಿವಾಟು ಕೇಂದ್ರವಾದ ತಿಪಟೂರು ಮಾರುಕಟ್ಟೆಯಲ್ಲಿ ದಲ್ಲಾಳಿಗಳು, ರವಾನೆದಾರರು ಹಿಡಿತ ಸಾಧಿಸಿದ್ದು, ಕಡಿಮೆ ಬೆಲೆಯನ್ನು ನಿಗದಿ ಮಾಡಿ ಉಂಡೆ ಕೊಬ್ಬರಿಯನ್ನು ಖರೀದಿಸಿ ದಾಸ್ತಾನು ಮಾಡಲಾಗುತ್ತಿದೆ ಎಂಬ ಗುಮಾನಿ ಮಾರುಕಟ್ಟೆ ವಲಯದಲ್ಲಿ ಹರಿದಾಡುತ್ತಿದೆ. ಕೊಬ್ಬರಿ ಮಾರುಕಟ್ಟೆ ಮೇಲೆ ದೊಡ್ಡ ದೊಡ್ಡ ಕಂಪನಿಗಳು ತಮ್ಮ ಹಿಡಿತ ಸಾಧಿಸಲು ಮುಂದಾಗಿದ್ದು ಇದರಿಂದಾಗಿ ಬೆಲೆಯಲ್ಲಿ ದಿಢೀರ್ ಏರಿಕೆ ಮತ್ತು ಅಷ್ಟೇ ಬೇಗ ಇಳಿಕೆಗಳಿಗೆ ಕಾರಣ ಎಂದು ವಿಶ್ಲೇಷಿಸಲಾಗುತ್ತಿದೆ.

ಚಿತ್ತವಿಹಾರ

ಶಕ್ತಿಯ ಪೂರ್ಣ ಉಪಯೋಗ

● ಮಾಯಾ ಬಾಲಚಂದ್ರ

ಸೂರ್ಯನ ಕಿರಣಗಳು ಭೂ ಸ್ಪರ್ಶ ಮಾಡಲಾರದಷ್ಟು ದಟ್ಟ ಕಾಡು, ಮುಸಲಧಾರೆಯ ಸತತ ಮಳೆ, ಇಕ್ಕಟ್ಟಾದ, ಆಳವಾದ ಕಣಿವೆಗಳು, ಅಸಂಖ್ಯ ವನ್ಯಮೃಗಗಳು ಎಲ್ಲವೂ ಮೇಳೈಸಿದ ಪಶ್ಚಿಮ ಘಟ್ಟಗಳ ಸಾಲಿನ 9ನೇ ಶತಮಾನದ ದೃಶ್ಯ ಕಲ್ಪನೆಯೇ ರುದ್ರರಮಣೀಯ. ಅಲ್ಲಿನ ಅಭೇದ್ಯ ಬೆಟ್ಟವೊಂದರ ಮೇಲೆ ಕೋಟೆ ಕಟ್ಟಬೇಕಾದ ಅನಿವಾರ್ಯತೆ ಅಂದಿನ ರಾಜನಿಗಿತ್ತು. ನಿರ್ಮಾಣ ಕಾರ್ಯದಲ್ಲಿ ತೊಡಗಿದ ಎಲ್ಲರಿಗೂ ಕೋಟೆಯ ಅವಶ್ಯಕತೆ, ಅಶಕ್ಯವಾದುದನ್ನು ಶಕ್ಯವಾಗಿಸಬಲ್ಲ ಛಾತಿಯೊದಗಿಸಿತ್ತು. ಇಂದು ದೊರೆಯುವ ಯಾವ ಸೌಲಭ್ಯ – ಸಲಕರಣೆಗಳೂ ಅಂದು ಇರಲಿಲ್ಲ. ಜಿಗಣೆಯಿಂದ ರಕ್ಷಿಸುವ ಬೂಟು, ಭಾರವೆತ್ತಲು ಕ್ರೇನ್ ಗಳು, ಸರಕು ಸಾಗಿಸಲು ವಾಹನಗಳು ಯಾವುದೂ ಇಲ್ಲದ ಪರಿಸ್ಥಿತಿಯಲ್ಲಿ, ಕಾರ್ಮಿಕರು ಸ್ವಯಂಪ್ರೇರಣೆಯಿಂದ ಕಾರ್ಯಯೋನ್ಮುಖ ರಾಗಿದ್ದರು. ಮಾನವ ಶಕ್ತಿಯಿಂದಲೇ ಬಂಡೆಗಳನ್ನು ಕತ್ತರಿಸಿ, ಮೇಲಕ್ಕೆ ಸಾಗಿಸಿ, ಜೋಡಿಸಿ, ಅಂದು ದುರ್ಗಗಳನ್ನು ನಿರ್ಮಿಸಿದ್ದರು. ಸೌಕರ್ಯಗಳು ಕನಿಷ್ಠವಾಗಿದ್ದಾಗ ಗರಿಷ್ಠವಾದದ್ದನ್ನು ಸಾಧಿಸಲು ಅವರಿಂದ ಸಾಧ್ಯವಾಗಿತ್ತು. ಅವರಿಗೆ ತಮ್ಮ ಸ್ವಂತ ಶಕ್ತಿಯ ಬಗ್ಗೆ ಇದ್ದ ಅಪರಿಮಿತ ವಿಶ್ವಾಸ, ಬೃಹತ್ ನಿರ್ಮಾಣಕ್ಕೆ ಕಾರಣವಾಗಿತ್ತು. ಆ ವಿಶ್ವಾಸವೇ ಅವರ ಸ್ವಾಭಿಮಾನದ ಮೂಲವಾಗಿ, ಪರಾಧೀನವಾಗುವುದನ್ನು ನಿರಾಕರಿಸಿತ್ತು. ಸ್ವತಂತ್ರ ಜೀವನಕ್ಕಾಗಿ ಹಂಬಲಿಸಿದ ಮನಸ್ಸು ಕಷ್ಟ ಸಾಧ್ಯ ಎನಿಸುವುದನ್ನು ಲೀಲಾಜಾಲವಾಗಿ ಮಾಡಿಬಿಟ್ಟಿತ್ತು.

ಇಂತಹ ಅಂತರಂಗದ ತುಡಿತ, ಸೌಲಭ್ಯ ಕಡಿಮೆ ಇದ್ದಾಗ್ಯೂ ಸಾಹಸ ಪ್ರವೃತ್ತಿಯಲ್ಲಿ ತೊಡಗಿಸಿಬಿಡುತ್ತದೆ. ಸಾಹಸ ಪ್ರವೃತ್ತಿ ಹೆಚ್ಚಾದಷ್ಟೂ ಶಾರೀರಿಕದ ದಾರ್ಢ್ಯತೆ ವರ್ಧಿಸುತ್ತದೆ. ಶಾರೀರಿಕ ಕ್ಷಮತೆ ಹೆಚ್ಚಾದಷ್ಟೂ ಮಾನಸಿಕ ಸ್ವಾಸ್ಥ್ಯ ಉಚ್ಚಮಟ್ಟದಾಗಿರುತ್ತದೆ. ಇಂತಹ ವಿಕಸಿತ ಮನಸ್ಸಿನ ಕಲ್ಪನಾ ಶಕ್ತಿಯು ವಿಸ್ತರಿಸುತ್ತಾ ಹೋಗುತ್ತದೆ. ಮಾನವ ತನ್ನ ಸಾಮರ್ಥ್ಯದ ಎಲ್ಲೆಯನ್ನು ಮೀರಿ, ಕ್ರಿಯಾಶೀಲನಾಗಲು ಉದ್ದೀಪಿಸುವುದು ಅವನ ಕಲ್ಪನಾ ಶಕ್ತಿಯೇ.

ಇಂದಿನ ಜನರ ಸಾಧನೆ ಅಪಾರವಾದದ್ದಾದರೂ, ಮಾನವನಿಗೆ ಪ್ರಕೃತಿದತ್ತವಾಗಿ ದೊರೆತ ದೈಹಿಕ ಸಾಮರ್ಥ್ಯದ ಪೂರ್ಣ ಪ್ರಮಾಣದ ಬಳಕೆಯಾಗುತ್ತಿಲ್ಲ. ಅದನ್ನು ಸಂಪೂರ್ಣವಾಗಿ ಬಳಸಿದಾಗಲೇ ಇನ್ನಷ್ಟು ಸಾಮರ್ಥ್ಯ ವಿಸ್ತರಣೆಯ ಕಡೆಗೆ ಮನಸ್ಸು ಕಾರ್ಯ ಪ್ರವೃತ್ತವಾಗುತ್ತದೆ. ಮನುಷ್ಯನ ದೈಹಿಕ ಮತ್ತು ಮಾನಸಿಕ ಕ್ಷಮತೆ ಹೆಚ್ಚಾದಷ್ಟೂ ಪರಾವಲಂಬನೆ ಇಲ್ಲದೆ, ಸ್ವತ್ವದಿಂದಲೇ ಹೆಚ್ಚಿನ ಸಾಧನೆ ಸಾಧ್ಯ. ಹಾಗೆಯೇ ಸ್ವತ್ವ ಅಥವಾ ಸ್ವಂತಿಕೆಯಿಂದಲೇ ಮಾನವ ತನ್ನ ಸಾಮರ್ಥ್ಯದ ಗರಿಷ್ಠ ಮಿತಿಯನ್ನು ದಾಟಿ ಸಾಧನೆ ಮಾಡಲು ಸಾಧ್ಯ.

ಕೃಷ್ಣನ ನೆನಪಿನಲ್ಲಿ ಮೊಸರು ಕುಡಿಕೆ ಹಬ್ಬ!

ಮೊಸರು ಕುಡಿಕೆ ಒಡೆಯುವುದು ಕೇವಲ ಹಬ್ಬವಲ್ಲ, ಬದಲಾಗಿ ಚೈತನ್ಯ, ಧೈರ್ಯ ಮತ್ತು ಸಂಪ್ರದಾಯದ ಸಂಕೇತವಾಗಿದೆ. ಗೋವಿಂದ ತಂಡದ ಸದಸ್ಯನು 6 ರಿಂದ 9 ಅಡಿ ಎತ್ತರಕ್ಕೆ ಏರಿದಾಗ, ಅವನು ಕೇವಲ ಮೊಸರಿನ ಮಡಕೆಯನ್ನು ಒಡೆಯುವುದಿಲ್ಲ, ಅವನು ಧೈರ್ಯ, ಏಕತೆ ಮತ್ತು ವಿಶ್ವಾಸದ ಸಾಕಾರನಾಗುತ್ತಾನೆ.

● ಶ್ರೀನಿವಾಸ ಜೋಕಟ್ಟೆ

ದಹಿ ಹಂಡಿ ಎಂಬುದು ಶ್ರೀಕೃಷ್ಣನ ಚೇಷ್ಟೆಯ ಬಾಲ್ಯವನ್ನು ಆಧರಿಸಿದ ಹಬ್ಬ. ಇದನ್ನು ಕೆಲವು ಪ್ರದೇಶಗಳಲ್ಲಿ ಗೋಪಾಲ ಕಲಾ ಎಂದೂ ಕರೆಯಲಾಗುತ್ತದೆ. ಈ ದಿನದಂದು, ಗೋವಿಂದಾ ಎಂದು ಕರೆಯಲ್ಪಡುವ ಯುವಕರ ಗುಂಪುಗಳು ನೇತಾಡುವ ದಹಿಹಂಡಿ (ಮೊಸರಿನ ಮಡಕೆ) ಯನ್ನು ಒಡೆಯಲು ಪ್ರಯತ್ನಿಸಲು ಮಾನವ ಪಿರಮಿಡ್‌ಗಳನ್ನು ರೂಪಿಸುತ್ತವೆ. ಹಂಡಿಯು ದಹಿ (ಮೊಸರು), ಬೆಣ್ಣೆ (ಬೆಣ್ಣೆ) ಮುಂತಾದ ಕೊಡುಗೆಗಳಿಂದ ತುಂಬಿರುತ್ತದೆ.

ದೇಶದೆಲ್ಲೆಡೆ ಶ್ರೀ ಕೃಷ್ಣಜನ್ಮಾಷ್ಟಮಿಯನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದ್ದರೂ ಮಹಾರಾಷ್ಟದಲ್ಲಿ ಅದರಲ್ಲೂ ಮುಂಬೈನಲ್ಲಿ ಈ ಹಬ್ಬವನ್ನು ಆಚರಿಸುವ ರೀತಿ ಸಂಪೂರ್ಣ ವಿಭಿನ್ನ ಮತ್ತು ರೋಚಕವಾಗಿದೆ. ಮರಾಠಿ ಶೈಲಿಯ 'ಗೋವಿಂದಾ ಆಲಾ ರೆ...' ಹಾಡು ಗೋಕುಲಾಷ್ಟಮಿಯ ಮರುದಿನ ಮುಂಬಯಿಯ ಗಲ್ಲಿಗಲ್ಲಿಗಳಲ್ಲಿ ಕೇಳಿಸಿಕೊಳ್ಳುತ್ತೇವೆ. ಈ ವರ್ಷ ಆಗಸ್ಟ್ 16 ರಂದು ಮುಂಬಯಿಯಲ್ಲಿ ಗೋವಿಂದಾ ಸಂಭ್ರಮ. ದಹಿಹಂಡಿಗೆ ಸಾಹಸ ಕ್ರೀಡೆಯ ಸ್ಥಾನಮಾನ ಮಹಾರಾಷ್ಟ್ರಸರಕಾರಿಂದ ಘೋಷಿಸಲಾಗಿದೆ.

ಮಾನವ ಮಿನಾರ್ ಎಂದರೆ ಮರಾಠಿ ತರುಣರಿಗೆ ಎಲ್ಲಿಲ್ಲದ ಉತ್ಸಾಹ. ಗುರುಪೂರ್ಣಿಮೆಯ ದಿನದಿಂದ ಮಾನವ ಮಿನಾರ್ ನಿರ್ಮಿಸುವ ತರಬೇತಿಯನ್ನು ಪಡೆದು ಅದನ್ನು ವಿಟ್ಲಪಿಂಡಿಯ ದಿನ ಪ್ರದರ್ಶಿಸುವ ಅವಕಾಶ. ಅಂದು ಮುಂಬಯಿಯ ಗಲ್ಲಿ ಗಲ್ಲಿಗಳಲ್ಲಿ ಗೋವಿಂದಾ ತಂಡಗಳ ಸಂಭ್ರಮದ ಓಡಾಟ. ಅವರ ಕಣ್ಣುಗಳು ಕಟ್ಟಡದಿಂದ ಕಟ್ಟಡಕ್ಕೆ ಹಗ್ಗದಲ್ಲಿ ಕಟ್ಟಿದ ಮೊಸರಿನ ಮಡಕೆಗಳನ್ನು ಹುಡುಕುತ್ತಿರುತ್ತವೆ.

ಜನ್ಮಾಷ್ಟಮಿಯ ಸಂದರ್ಭದಲ್ಲಿ ಸೊಸೈಟಿಗಳು, ಸಂಸ್ಥೆಗಳು ರಸ್ತೆಗಳಲ್ಲಿ, ಜಂಕ್ಷನ್‌ಗಳಲ್ಲಿ ಮತ್ತು ಸಾರ್ವಜನಿಕ ಮೈದಾನಗಳಲ್ಲಿ ಹೂವಿನಿಂದ ಅಲಂಕರಿಸಿದ ದಹಿಹಂಡಿಗಳನ್ನು ಕಟ್ಟುತ್ತಾರೆ. ಆಯಾಯ ಆಯೋಜಕ ಸಂಸ್ಥೆಗಳ ಬಣ್ಣಬಣ್ಣದ ಉಡುಗೆ ತೊಟ್ಟ ನಾನಾಗೋವಿಂದಾ ತಂಡಗಳು ದಿನವಿಡೀ ಟ್ರಕ್, ಟೆಂಪೋ, ಬಸ್, ದ್ವಿಚಕ್ರ ವಾಹನಗಳಲ್ಲಿ ಸಂಚರಿಸುತ್ತಿರುವ ದೃಶ್ಯ ಕಾಣುವುದೇ ಸಂಭ್ರಮ.

ಮಹಾರಾಷ್ಟ್ರದ ಪ್ರಮುಖ ಉತ್ಸವಗಳಲ್ಲಿ ಗಣೇಶೋತ್ಸವ ಹೊರತುಪಡಿಸಿದರೆ ಶ್ರೀಕೃಷ್ಣ ಜನ್ಮಾಷ್ಟಮಿಯ ಮರುದಿನದ 'ದಹಿಹಂಡಿ'ಗೆ ತನ್ನದೇ ಆದ ಮಹತ್ವವಿದೆ. ಮಾನವ ಪಿರಮಿಡ್ಡುಗಳ ಮೂಲಕ ಎತ್ತರದಲ್ಲಿ ಕಟ್ಟಿದ್ದ ಈ ಮೊಸರಿನ ಮಡಕೆಯನ್ನು ತಲುಪಿ ಅದನ್ನು ಒಡೆಯುವ ದೃಶ್ಯವನ್ನು ವೀಕ್ಷಿಸಲು ದೇಶ ವಿದೇಶಗಳಿಂದ ಪ್ರವಾಸಿಗರೂ ಆ ದಿನಗಳಲ್ಲಿ ಇಲ್ಲಿಗೆ ಬರುವುದಿದೆ.

ಆಗಸ್ಟ್ 16 ರಂದು 'ಗೋವಿಂದ ಆಲಾ ರೇ ಆಲ' ಎಂಬ ಪ್ರತಿಧ್ವನಿ ನಗರದಾದ್ಯಂತ ಕೇಳಿ ಬರಲಿದೆ. ಈ ದಹಿ ಹಂಡಿ ಉತ್ಸವದಲ್ಲಿ ರಾಜಕೀಯ ಪಕ್ಷಗಳೂ ಇತ್ತೀಚಿನ ವರ್ಷಗಳಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುತ್ತಿವೆ. 30–40 ಅಡಿಗಳಷ್ಟು ಎತ್ತರದಲ್ಲಿ ನೇತಾಡುವ ಮೊಸರು ಮತ್ತು ಅರಿಶಿನ ತುಂಬಿದ ಮಡಕೆಗಳನ್ನು ತಂಡಗಳು ಒಡೆಯುತ್ತವೆ. ಇಂತಹ ತಂಡಗಳು 9 ಅಥವಾ 10 ಅಂತಸ್ತುಗಳ ಮಾನವ ಗೋಪುರಗಳನ್ನು ನಿರ್ಮಿಸಲೂ ಪ್ರಯತ್ನಿಸುತ್ತವೆ.

ದಹಿಹಂಡಿ ಆಟಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ತನ್ನದೇ ಆದ ಮಾರ್ಗಸೂಚಿಗಳನ್ನು ಹೊರಡಿಸುತ್ತದೆ. ಈ ಹಿಂದೆ, ಕ್ರೀಡೆಗಳಲ್ಲಿ ಭಾಗವಹಿಸುವ ಮಕ್ಕಳ ವಯಸ್ಸು ಮತ್ತು ಭದ್ರತಾ ವ್ಯವಸ್ಥೆಗಳ ಬಗ್ಗೆ ನ್ಯಾಯಾಲಯಗಳು ಮಾರ್ಗಸೂಚಿಗಳನ್ನು ಸಹ ನೀಡಿವೆ. ಹಗ್ಗದಲ್ಲಿ ಕಟ್ಟಿದ ದಹಿಹಂಡಿ ತಲುಪುವ ತನಕ ಎಂಟು – ಹತ್ತು ಸ್ತರದ ಮಾನವ ಮಿನಾರ್ ಕಟ್ಟುವ 'ಗೋವಿಂದಾ ತಂಡ'ಗಳ ಜೊತೆ ಇತ್ತೀಚಿನ ವರ್ಷಗಳಲ್ಲಿ ಗೋಪಿಕೆಯರ ತಂಡವೂ ಸಕ್ರಿಯವಾಗಿದೆ.

ಐದು, ಏಳು, ಒಂಭತ್ತು .... ಸ್ತರದ ಮಾನವ ಪಿರಮಿಡ್ಡುಗಳ ಮೂಲಕ ಹಗ್ಗದಲ್ಲಿ ಕಟ್ಟಿದ ಮೊಸರಿನ ಮಡಕೆಯನ್ನು ತಲುಪುವ ಈ ತರಬೇತಿ ಗುರುಪೂರ್ಣಿಮೆಯ ಮುಹೂರ್ತದಿಂದ ಆರಂಭಗೊಳ್ಳುತ್ತದೆ.

ಮಹಾರಾಷ್ಟ್ರದ ರಾಜಕೀಯ ಮುಖಂಡರು ತಮ್ಮದೇ ಆದ ಗೋವಿಂದಾ ಪ್ರತಿಷ್ಠಾನಗಳನ್ನು ಸ್ಥಾಪನೆ ಮಾಡಿದ್ದಾರೆ. ದೊಡ್ಡ ಮೊತ್ತದ ನಗದು ಬಹುಮಾನವನ್ನು ನೀಡುತ್ತಾರೆ. ಪ್ರಮುಖ ಆಯೋಜಕರು ತಮ್ಮದಾದ 'ದಹಿಹಂಡಿ' ಪ್ರತಿಷ್ಠಾನದ ಹೆಸರನ್ನು ಮುದ್ರಿಸಿದ ಯುನಿಫಾರ್ಮ್‌ನ್ನು ಗೊವಿಂದಾ ತಂಡದ ಸದಸ್ಯರಿಗೆ ನೀಡುತ್ತಾರೆ

ನೂರಾರು ತಂಡಗಳು!: ದಹಿಹಂಡಿಯನ್ನು ಮಾನವ ಪಿರಮಿಡ್ಡುಗಳ ಮೂಲಕ ತಲುಪಲು ಮುಂಬಯಿಯಲ್ಲಿ ನೂರಾರು 'ಗೋವಿಂದಾ' ತಂಡಗಳಿವೆ. ಆ ದಿನ ಬೆಳಿಗ್ಗೆಯಿಂದ ತಮ್ಮ ವಿಶೇಷ ಬಸ್ಸು ಅಥವಾ ಲಾರಿ, ಟೆಂಪೋಗಳಲ್ಲಿ ಈ ತಂಡ ಬ್ಯಾಂಡ್ ಬಾರಿಸುತ್ತಾ, ರಸ್ತೆಗಳಲ್ಲಿ ಓಡಾಡುತ್ತಿರುತ್ತಾರೆ. ಎಲ್ಲಿ ದಹಿಹಂಡಿ ಕಟ್ಟಲಾಗಿದೆಯೋ ಅಲ್ಲಿ ತಮ್ಮ ವಾಹನ ನಿಲ್ಲಿಸುತ್ತಾರೆ ಮತ್ತು ಅದನ್ನು ಒಡೆಯಲು ಮಾನವ ಮಿನಾರ್ ಕಟ್ಟಿ ಪ್ರಯತ್ನಿಸುತ್ತಾರೆ. ಕೆಲವು ತಂಡದಲ್ಲಿ ಇನ್ನೂರು ಮುನ್ನೂರು ಸದಸ್ಯರೂ ಇರುತ್ತಾರೆ.

ಹೆಚ್ಚಿನವರು ಐದು ಅಥವಾ ಆರು ಸ್ತರಕ್ಕೇ ಮಾನವ ಮಿನಾರ್ ಕಟ್ಟುವುದರಲ್ಲೇ ತೃಪ್ತಿ ಪಡುತ್ತಾರೆ. ಹಾಗೂ ತಮ್ಮ ಉಪಸ್ಥಿತಿ ಮಾತ್ರ ತೋರಿಸುತ್ತಾರೆ. ಆದರೆ ಮಿನಾರ್ ಕಟ್ಟಲು ಪ್ರಯತ್ನಿಸಿದ ಪ್ರತೀ ತಂಡಕ್ಕೂ ಆಯೋಜಕರು ಟ್ರೋಫಿ, ಒಂದಿಷ್ಟು ನಗದು ಹಣನೀಡುತ್ತಾರೆ. ಮುಂಬಯಿಯಲ್ಲಿ ನಾಲ್ಕುನೂರು, ಐನೂರು ಸದಸ್ಯರಿರುವ ದೊಡ್ಡ ದೊಡ್ಡ ಗೋವಿಂದಾ ಪಥಕ್‌ಗಳೂ ಇವೆ.

ಕಾರ್ಪೊರೇಟ್‌ನಿಂದ ಪಿರಮಿಡ್‌ವರೆಗೆ: ಮುಂಬಯಿನ ಬೀದಿಗಳಲ್ಲಿ ದಹಿ ಹಂಡಿಗಾಗಿ ನಡೆದಿರುವ ಸಿದ್ಧತೆಗಳು ನಮ್ಮ ಹಳೆಯ ಸಂಪ್ರದಾಯಗಳು ಇಂದಿನ ಡಿಜಿಟಲ್ ಯುಗದ ಯುವಕರ ಹೃದಯಗಳಲ್ಲಿ ಇನ್ನೂ ಜೀವಂತವಾಗಿವೆ ಎಂಬುದಕ್ಕೆ ಸಾಕ್ಷಿಯಾಗಿದೆ. ಇಂದಿನ ಗೋವಿಂದರಲ್ಲಿ ಆಧುನಿಕ ಯುಜನತೆಯೂ ಇದೆ! ವಿಟ್ಲಪಿಂಡಿ ದಿನ ಅವರು ಗೋವಿಂದಾ ತಂಡಗಳಲ್ಲಿ ಸೇರಿಕೊಳ್ಳುತ್ತಾರೆ. ತಮ್ಮ ತಂಡದಲ್ಲಿ ಐಟಿ ಎಂಜಿನಿಯರ್‌ಗಳು, ಸಿಎಗಳು (ಚಾರ್ಟರ್ಡ್ ಅಕೌಂಟೆಂಟ್‌ಗಳು), ಪೊಲೀಸ್ ಸಿಬ್ಬಂದಿ, ಸರ್ಕಾರಿ ಅಧಿಕಾರಿಗಳು ಮತ್ತು ಕಾರ್ಪೊರೇಟ್ ವೃತ್ತಿಪರರು ಇದ್ದಾರೆ ಎಂದು ಕೆಲವು ಪ್ರಮುಖ ತಂಡದ ಅಧ್ಯಕ್ಷರು ಹೇಳುತ್ತಾರೆ. ಈ ಎಲ್ಲಾ ಸದಸ್ಯರು ಪ್ರತಿದಿನ ರಾತ್ರಿ 8 ಗಂಟೆಗೆ ಕಚೇರಿಯಲ್ಲಿ ಕೆಲಸ ಮಾಡಿದ ನಂತರ ಅಥವಾ ದಿನವಿಡೀ ಫೀಲ್ಡ್ ಡ್ಯೂಟಿ ಮಾಡಿದ ನಂತರ ಅಭ್ಯಾಸ ಮಾಡಲು ಅರ್ಥಾತ್ ತರಬೇತಿಗೆ ಮೈದಾನಕ್ಕೆ ಬರುತ್ತಾರೆ.

ಮುಂಬಯಿಯಲ್ಲಿ ಕೃಷ್ಣಾಷ್ಟಮಿಯ ಸಮಯದಲ್ಲಿ ನಡೆಯುವ 'ದಹಿ ಹಂಡಿ' ಸ್ಪರ್ಧೆಯು, ಕೇವಲ ಬಹುಮಾನಗಳನ್ನು ಗೆಲ್ಲುವ ಮಾಧ್ಯಮ ಮಾತ್ರವಲ್ಲ, ಅದು ಒಂದು ಸಾಂಸ್ಕೃತಿಕ ಪರಂಪರೆ ಎನಿಸಿದೆ; ಹಬ್ಬ, ಧರ್ಮ, ಮಾನವೀಯತೆ ಮತ್ತ ಏಕತೆಯನ್ನು ಪ್ರತಿಬಿಂಬಿಸುತ್ತದೆ.

ಅವಘಡಗಳು

ಮಾನವ ಮಿನಾರ್ ಕಟ್ಟುವಾಗ 'ದಹಿಹಂಡಿ' ತಲುಪುವ ಪ್ರಯತ್ನದಲ್ಲಿ ಅನೇಕ ಬಾರಿ ಹಲವರು ಕೆಳಗೆ ಬಿದ್ದು ಗಾಯಗೊಂಡದ್ದೂ ಇದೆ. ಆದ್ದರಿಂದಲೇ ಇತ್ತೀಚಿನ ವರ್ಷಗಳಲ್ಲಿ ಗೋವಿಂದಾ ತಂಡದ ಸದಸ್ಯರಿಗೆ ವಿಮೆಯ ಸೌಲಭ್ಯವನ್ನು ಮಾಡಲಾಗುತ್ತಿದೆ. ಆಡಳಿತದವರಿಂದ ಅಂಬ್ಯುಲೆನ್ಸ್ ಸೇವೆ, ಸೇಫ್ಟಿ ಬೆಲ್ಟ್, ಹ್ಯಾಟ್.. ಇತ್ಯಾದಿ ಸೇವೆಗಳ ಬಗ್ಗೆ ಗಮನಹರಿಸಲಾಗಿದೆ.

ಮಹಿಳೆಯರ ಉತ್ಸಾಹ!

ಜನ್ಮಾಷ್ಟಮಿಯ ಮರುದಿನ ಮುಂಬಯಿಯಲ್ಲಿ ಆ ಮೊಸರಿನ ಮಡಕೆಯನ್ನು ಒಡೆಯಲು ಆಕಾಶದೆತ್ತರಕ್ಕೆ ತಲುಪುವ ಅನೇಕ ಮಾನವ ಪಿರಮಿಡ್‌ಗಳಲ್ಲಿ, ಮಹಿಳೆಯರೂ ಪಾಲ್ಗೊಳ್ಳುತ್ತಾರೆ! ಮಹಿಳಾ ಮೊಸರು ಕುಡಿಕೆ ಮಂಡಲಗಳ ಸಂಖ್ಯೆ ಕಡಿಮೆಯಿರಬಹುದು, ಆದರೆ ಅವರ ಉತ್ಸಾಹಕ್ಕೆ ಸಾಟಿಯಿಲ್ಲ.

ರಾಜಕೀಯದವರಿಗೂ ಇಷ್ಟ!

ಮುಂಬಯಿಯಲ್ಲಿ ಜನ್ಮಾಷ್ಟಮಿ ಹಬ್ಬದ ಸಮಯದಲ್ಲಿ ದಹಿ ಹಂಡಿ ಸ್ಪರ್ಧೆಯನ್ನು ಆಯೋಜಿಸುವ ಸಮಿತಿಗಳು ಅನೇಕ ಚಲನಚಿತ್ರ ಗಣ್ಯರನ್ನು ಆಹ್ವಾನಿಸುತ್ತವೆ. ಈ ಕಾರಣಗಳಿಂದ ಈ ಹಬ್ಬದ ಪ್ರಖರತೆ ಇನ್ನಷ್ಟು ಹೆಚ್ಚುತ್ತದೆ. ಇದಕ್ಕಾಗಿ ಕೋಟಿಗಟ್ಟಲೆ ಹಣ ನೀರಿನಂತೆ ಖರ್ಚು ಮಾಡುತ್ತಾರೆ. ಈ ಹಬ್ಬದ ಜನಪ್ರಿಯತೆಯನ್ನು ಕಂಡು ರಾಜಕಾರಣಿಗಳೂ ಈ ಅವಕಾಶವನ್ನು ಸಂಪೂರ್ಣವಾಗಿ ಬಳಸಿಕೊಳ್ಳುತ್ತಾರೆ. ರಾಜಕಾರಣಿಗಳು ಪ್ರಾಯೋಜಿಸಿದ ಅನೇಕ ದಹಿ ಹಂಡಿಗಳನ್ನು ಮುಂಬೈ ಮತ್ತು ಥಾಣೆಯಲ್ಲಿ ಕಾಣಬಹುದು.

ನಿಸ್ವಾರ್ಥ ಸೇವೆಯೇ ಗುರಿಯಾಗಲಿ

ಅಕ್ಕಿಯೊಳಗನ್ನವನು ಮೊದಲಾರು ಕಂಡವನು
ಅಕ್ಕರದ ಬರಹಕ್ಕೆ ಮೊದಲಿಗನದಾರು
ಲೆಕ್ಕವಿರಿಸಿಲ್ಲ ಜಗ ತನ್ನಾದಿಬಂಧುಗಳ
ದಕ್ಕುವುದೆ ನಿನಗೆ ಜಸ – ಮಂಕುತಿಮ್ಮ॥

ಭತ್ತವನ್ನು ಬೆಳೆದು, ಭತ್ತದಿಂದ ಅಕ್ಕಿಯನ್ನು ತಗೆದು, ಆ ಅಕ್ಕಿಯಿಂದ ಅನ್ನವನು ತಯಾರಿಸುವುದನ್ನು ಕಂಡುಹಿಡಿದವರಾದರೂ ಯಾರು? ನಮ್ಮ ಜೀವನಕ್ಕಾಧಾರವಾದ ಅಕ್ಷರಗಳನ್ನಾದರೂ ಕಂಡು ಹಿಡಿದವರಾದರೂ ಯಾರು? ಈ ಜಗತ್ತಾದರೂ ಈ ಪುಣ್ಯಕಾರ್ಯ ಮಾಡಿದ ಬಂಧುಗಳ ಹೆಸರನ್ನೇನಾದರೂ ಲೆಕ್ಕವಿರಿಸಿಕೊಂಡು ನೆನಸುತ್ತದೆಯೇ? ಜೀವನಾಧಾರವಾದ ಅನ್ನ ಮತ್ತು ಅಕ್ಷರಗಳನ್ನು ಕಂಡು ಹಿಡಿದವರ ಹೆಸರನ್ನೇ ಈ ಜಗತ್ತು ಲೆಕ್ಕದಲ್ಲಿರಿಸಿಕೊಂಡಿಲ್ಲ ಎಂದ ಮೇಲೆ ನಾವೂ ನೀವು ಮಾಡುವ ಕೆಲಸಗಳನ್ನು ಈ ಜಗತ್ತು ನೆನಸುತ್ತದೆಯೇ ಇಲ್ಲ. ಆದುದರಿಂದ ಜಗತ್ತು ನಿನ್ನನ್ನು ನೆನಸಿಕೊಳ್ಳಲಿ ಅಥವಾ ನೆನಸದೆ ಇರಲಿ ನಿನ್ನ ಕರ್ತವ್ಯವನ್ನು ಪ್ರಾಮಾಣಿಕವಾಗಿ ನೀನು ಮಾಡುವುದು ಒಳಿತು.

ಶುಭೋದಯಕ್ಕೊಂದು ಕಗ್ಗ

ರವೀ ಚಿಕ್ಕನಾಯಕನಹಳ್ಳಿ

ಮಾನವನ ಬುದ್ಧಿಮತ್ತೆ ಬೆಳೆದಂತೆಲ್ಲಾ, ಹೊಸ ಹೊಸ ಆವಿಷ್ಕಾರಗಳನ್ನೂ, ಹೊಸ ಪ್ರಯತ್ನಗಳಮೂಲಕ ಹೊಸ ಪ್ರಯೋಗಗಳನ್ನು ಮಾಡುತ್ತಲೇ ಇರುತ್ತಾನೆ. ಈ ಪ್ರಯೋಗಗಳು ಸಫಲವಾದಾಗ ಹೊಸ ಅವಿಷ್ಕಾರಗಳನ್ನು ತನ್ನ ಹೆಸರಲ್ಲಿ ನೊಂದಾಯಿಸಿಬಿಡುತ್ತಾನೆ. ಆದರೆ, ಈ ಅವಿಷ್ಕಾರಗಳು ನಡೆಯುವ ಮುನ್ನವೂ ಸಹ ಈ ಜಗತ್ತಿನ ಜನರು ಜೀವನ ಮಾಡಿದ್ದಾರೆ; ಜೊತೆಗೆ ಅವುಗಳು ಇಲ್ಲದಿದ್ದರೂ ಜೀವನ ಮಾಡುತ್ತಾರೆ. ಆದರೆ ಅನ್ನವಿಲ್ಲದೆ ಜೀವನ ನಡೆಸಲು ಸಾಧ್ಯವೇ? ಸಾಧ್ಯವೇ ಇಲ್ಲ. ಭತ್ತದಿಂದ ಅಕ್ಕಿಯನ್ನು ತಗೆದು, ಅಕ್ಕಿಯನ್ನು ನೀರಿನೊಂದಿಗೆ ಬೆರೆಯಿಸಿ, ಅದನ್ನು ಬೇಯಿಸಿದಾಗ ದೊರಕುವ ಅನ್ನವು ನಮಗೆ ದೇವರಾಗಿ ಅದನ್ನು ಸೇವಿಸಿದಾಗ ಅದು ಈ ದೇಹದಲ್ಲಿ ಪಚನಕ್ರಿಯೆಯೊಂದಿಗೆ ಪಿಷ್ಟವನ್ನು ನೀಡಿ ಸಲಹುತ್ತದೆ.

ಈ ಜೀವನಾಧಾರವಾದ ಅನ್ನವನು ಮೊದಲಿಗೆ ಯಾರು ಕಂಡು ಹಿಡಿದವರು? ಗೊತ್ತಿಲ್ಲ. ನಾವು ಕಲಿತಿರುವ ಅಕ್ಷರಗಳನ್ನಾದರೂ ಯಾರು ಕಂಡು ಹಿಡಿದವರು ಎಂದರೆ ಅದಕ್ಕೂ ಸಹ ನಮ್ಮ ಉತ್ತರ 'ಗೊತ್ತಿಲ್ಲ' ಎಂಬುದೇ ಆಗಿರುತ್ತದೆ. ಈ ಅನ್ನ ಮತ್ತು ರನ್ನಗಳನ್ನು ಕಂಡು ಹಿಡಿದವರು ಹೆಸರೇ ಅರಿಯದ ನಮ್ಮ ಆದಿಬಂಧುಗಳೇ ಆಗಿದ್ದರೂ ಅವರ ಹೆಸರು ನಮಗೆ ಗೊತ್ತಿಲ್ಲ. ಏಕೆಂದರೆ ವ್ಯವಸ್ಥೆಯಾದರೂ ಅವರುಗಳ ಹೆಸರನ್ನು ಈ ಜಗತ್ತಿನಲ್ಲಿ ನಮೂದಿಸದ ಕಾರಣ ಅನ್ನ – ರನ್ನ ವನ್ನು ಕಂಡು ಹಿಡಿದವರು ಯಾರು ಎಂದು ನಮಗೆ ತಿಳಿದಿಲ್ಲ. ಇಂತಹ ಮಹಾತ್ಕಾರ್ಯ ಮಾಡಿ ಹೆಸರನ್ನು ನಮೂದಿಸದೆ ಜಗತ್ತಿಗೆ ಕೊಡುಗೆ ಕೊಟ್ಟು ನಮ್ಮ ಜೀವನವನ್ನು ಪಾವನ ಮಾಡಿರುವ ವ್ಯಕ್ತಿಗಳ ಹೆಸರುಗಳೇ ಈ ಜಗತ್ತಿನಲ್ಲಿ ಅಚ್ಚೊತ್ತಿಲ್ಲ, ನೆನಪಿಲ್ಲ, ಗೊತ್ತಿಲ್ಲ ಎನ್ನುವುದಾದರೆ ಇನ್ನು ನಾನೂ ಹಾಗೂ ನೀವು ಮಾಡುವ ಕಾರ್ಯಗಳನ್ನು ಈ ಜಗತ್ತು ನೆನಪಿಸುತ್ತದೆಯೇ? ಖಂಡಿತವಾಗಿಯೂ ಇಲ್ಲ. ಆದುದರಿಂದ ಈ ಜಗತ್ತು ನೆನಸಲಿ, ನೆನಸದೆ ಇರಲಿ ಮಹಾತ್ಕಾರ್ಯಗಳನ್ನು ಉತ್ತಮ ಗುರಿಗಳೊಂದಿಗೆ ನೀನು ಮಾಡುತ್ತಲೇ ಇರು ಎಂಬುದೇ ಈ ಪದ್ಯದ ಹೂರಣವೆನಿಸುತ್ತದೆ.

ಹನಿ ಮಳೆ

ಬೆಣ್ಣೆ ಕದ್ದ ಕೃಷ್ಣ!

ಮತ್ತೆ ಬಂದಿಹನು ಬಾಲಕೃಷ್ಣ
ಹೊತ್ತು ತಂದಿಹನು ಬೆಣ್ಣೆ ಮುದ್ದೆ
ಮೊಸರು ಕುಡಿಕೆ ಒಡೆಯಲು ಬಾ
ಅಷ್ಟಮಿಗೆ ರಂಗೇರಿಸೋಣ ಬಾ!

● ಅಜಯ್ ಅಂಚೆಪಾಳ್ಯ

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಮೂರಕ್ಷರದ ಹೂವು (3)
3. ನಾಪತ್ತೆಯಾದನೇ ಕ್ಷೌರಿಕ (3)
5. ರೋಮ (3)
6. ಕೆಂಬಣ್ಣದ ರಕ್ತ (3)
7. ಮಿರ ಮಿರ ಹೊಳಪು (3)
9. ಮನುಷ್ಯನೆನ್ನಲು ಎರಡಕ್ಷರ ಸಾಕು (2)
11. ಗಿಡ ನೆಡಲು ಮಾಡಿದ ಮಡಿ (2)
12. ಮರದ ರೆಂಬೆಯ ಟಿಸಿಲು (3)
13. ಸದ್ದೇ ಇಲ್ಲ, ಮೌನ (3)
14. ಹೆಸರನ್ನು ಹೀಗೆ ಹೇಳಬಹುದು (2)
15. ಬಾಗಿಲು (2)
18. ನಿವಾಸಸ್ಥಾನ (3)
20. ಸ್ವರ (3)
21. ಹಾರುವ ಹುಳು (3)
22. ಕತೆಯಲ್ಲ, ಪದ್ಯ (3)
23. ದೊಡ್ಡದಾದ ಪಟ್ಟಣ (3)

ಮೇಲಿಂದ ಕೆಳಕ್ಕೆ

1. ಕಮ್ಮಾರನ ಅಗ್ಗಿಷ್ಟಿಕೆ (3)
2. ಅನ್ಯರ ಬಗ್ಗೆ ಕನಿಕರ ಪಡು (3)
3. ತ್ರಿಲೋಕಸಂಚಾರಿ ಮುನಿಗಳು (3)
4. ನಿರ್ದಿಷ್ಟ ವಿಷಯದಲ್ಲಿ ಪಳಗಿಸುವಿಕೆ (4)
5. ಹಕ್ಕಿಗಳ ಧ್ವನಿ (3)
8. ತಲೆಗೆ ಸುತ್ತಿಕೊಳ್ಳುತ್ತಾರೆ (3)
10. ತಿರುಗಿ ಬಂದಿರುವ ಮೊಸಳೆ (3)
11. ಪಾಕ ಹದವಾಗಿ ಬೇಯಿಸಲು ಬೇಕು ಬೆಂಕಿ (3)
13. ಸಾರಹೀನವಾದದ್ದು (3)
14. ಸರ್ಪಗಳ ಜಗತ್ತು (4)
16. ಕಾರ್ಯಕ್ಷಮತೆ (3)
17. ಮಹಿಳೆ, ಮಾನಿನಿ (3)
18. ವನದ ನಡುವೆ ಇದೆ ಮುಖ (3)
19. ಕತ್ತಲೆ ಅಥವಾ ಅಜ್ಞಾನ (3)

ಏಕ ಶ್ಲೋಕಿ ಮಜ್ಜಿಗೆ ರಾಮಾಯಣದ ಸಾರ

ಒಮ್ಮೆ ಪಂಡಿತನೊಬ್ಬ ಮತ್ತೊಂದು ಹಳ್ಳಿಗೆ ನಡೆದುಹೋಗುತ್ತಾ ಇರುತ್ತಾನೆ. ದಾರಿಯಲ್ಲಿ ವಿಪರೀತ ಬಾಯಾರಿಕೆಯಾಗುತ್ತದೆ. ಮೊದಲು ಸಿಕ್ಕ ಮನೆಯ ಕದ ಬಡಿಯುತ್ತಾನೆ. ಪುಟ್ಟ ಹುಡುಗಿಯೊಬ್ಬಳು ಬಾಗಿಲು ತೆಗೆಯುತ್ತಾಳೆ. 'ಆಸರೆಗೆ ಏನಾದರೂ ಕೊಡು' ಅನ್ನುತ್ತಾನೆ ಪಂಡಿತ.

ಹುಡುಗಿ ಅಡುಗೆಮನೆ ತಡಕಾಡಿ, ಒಂದು ಲೋಟ ಮಜ್ಜಿಗೆ ಹಿಡಿದು ಬರುತ್ತಾಳೆ 'ಮಜ್ಜಿಗೆ ಹೊರತಾಗಿ ನಿಮಗೆ ಕೊಡಲು ಬೇರೇನೂ ಇಲ್ಲ. ಇದನ್ನು ಕುಡಿದು ನೀವು ನನಗೆ ರಾಮಾಯಣ ಅಥವಾ ಮಹಾಭಾರತದ ಕಥೆ ಹೇಳಬೇಕು' ಅನ್ನುತ್ತಾಳೆ.

ಪಂಡಿತ ಆಗಲೆನ್ನುತ್ತಾನೆ. ಮಜ್ಜಿಗೆ ಕುಡಿದು ಈ ಕೆಳಗಿನ ಶ್ಲೋಕ ಹೇಳುತ್ತಾನೆ :

ರಾಮತಪೋವನಾಭಿಗಮನಂ ಹತ್ವಾ ಮೃಗಂ ಕಾಂಚನಂ
ವೈದೇಹಿ ಹರಣಂ ಜಟಾಯು ಮರಣಂ ಸುಗ್ರೀವ ಸಂಭಾಷಣಂ।
ವಾಲೀ ನಿರ್ದಲನಂ ಸಮುದ್ರ ತರಣಂ ಲಂಕಾಪುರೇ ದಾಹನಂ
ಪಶ್ಚಾದ್ರಾವಣ ಕುಂಭಕರ್ಣ ಹನನಂ ಏತದ್ಧಿ ರಾಮಾಯಣಂ॥

ಕನ್ನಡದಲ್ಲಿ: ಕಾಡಿಗೆ ಹೋದ ರಾಮ, ಚಿನ್ನದ ಜಿಂಕೆಯನ್ನು ಕೊಂದ. ವೈದೇಹಿಯ ಅಪಹರಣವಾಯಿತು, ತಡೆಯಲು ಹೋದ ಜಟಾಯುವಿನ ಮರಣವಾಯಿತು. ರಾಮನಿಗೆ ಸುಗ್ರೀವ ಸಿಕ್ಕು ಮಾತುಕತೆ ನಡೆಸಲಾಯಿತು. ವಾಲಿಯ ವಧೆಯಾಯಿತು. ಸಮುದ್ರವನ್ನು ಜಿಗಿದು, ಲಂಕೆಯನ್ನು ಸುಡಲಾಯಿತು. ಆಮೇಲೆ ರಾವಣ ಕುಂಭಕರ್ಣರ ಸಂಹಾರ ನಡೆಯಿತು. ಇದು ರಾಮಾಯಣದ ಕಥೆ.

ಒಂದು ಲೋಟ ಮಜ್ಜಿಗೆಯ ಮೌಲ್ಯಕ್ಕೆ ಸರಿದೂಗುವಂತೆ ಇಡಿಯ ರಾಮಾಯಣವನ್ನು ಒಂದೇ ಶ್ಲೋಕದಲ್ಲಿ ಹೇಳುತ್ತಾನೆ ಪಂಡಿತ. ಈ ಕಥನವನ್ನು ಆಧರಿಸಿ ಏಕಶ್ಲೋಕಿ ರಾಮಾಯಣವನ್ನು ಮಜ್ಜಿಗೆ ರಾಮಾಯಣವೆಂದು ಕರೆಯುವ ರೂಢಿ ಮೊದಲಾಯಿತು!

ಮೂಲ ರಾಮಾಯಣದ ಅನಂತರ ನೂರಾರು ರಾಮಾಯಣಗಳು ಬರೆಯಲ್ಪಟ್ಟಿದ್ದು, ಭಾರತ ಮಾತ್ರವಲ್ಲ, ದಕ್ಷಿಣ ಪೂರ್ವ ಏಷ್ಯಾದ ಹಲವು ದೇಶಗಳು ತಮ್ಮದೇ ಆದ ರಾಮಾಯಣ ಕಥನವನ್ನು ಹೇಳುತ್ತವೆ. ಆದಿಕವಿ ಎಂಬ ಖ್ಯಾತಿ ಪಡೆದ ವಾಲ್ಮೀಕಿಯು ರಚಿಸಿದ ಮೂಲ ರಾಮಾಯಣವು 24,000 ಶ್ಲೋಕಗಳಿಂದ ಕೂಡಿದ್ದು, 7 ಕಾಂಡಗಳಲ್ಲಿ ನಿರೂಪಿಸಲ್ಪಟ್ಟಿದೆ. ರಾಮಾಯಣದ ಕಥೆ ವಾಲ್ಮೀಕಿಯು ಕಾವ್ಯ ರೂಪದಲ್ಲಿ ರಚಿಸುವ ಮೊದಲೇ ಜನಜನಿತವಾಗಿತ್ತೆಂದು ತೋರುತ್ತದೆ. ಇದು ಕೇವಲ ಕಲ್ಪಿತ ಕಾವ್ಯವಾಗಿರದೆ, ಐತಿಹಾಸಿಕ ಸತ್ಯ ಎಂದೂ ಹೇಳಲಾಗುತ್ತದೆ. ರಾಮಾಯಣದಲ್ಲಿ ಉಲ್ಲೇಖಗೊಂಡಿರುವ ಅಯೋಧ್ಯೆ, ಮಿಥಿಲೆ, ಚಿತ್ರಕೂಟ, ಗೋಮತಿ, ತಮಸಾನದಿ, ದಂಡಕಾರಣ್ಯ, ಕಿಷ್ಕಿಂಧೆ ಮುಂತಾದ ಸ್ಥಳಗಳು, ಕಾಡು ಕಣಿವೆ ಮತ್ತು ನದಿಗಳು ಇಂದಿಗೂ ಪ್ರಸಿದ್ಧ ಯಾತ್ರಾಸ್ಥಳಗಳು. ರಾಮಾಯಣವನ್ನು 7 ಭಾಗಗಳಾಗಿ ವಿಂಗಡಿಸಿ ಕಾಂಡಗಳಾಗಿ ಮಾಡಿದ್ದಾರೆ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಬಾಲ ಕಾಂಡದಲ್ಲಿ ರಾಮನ ಬಾಲ್ಯ, ಸೀತಾ ಸ್ವಯಂವರ ಮುಂತಾದ ವಿವರಗಳಿವೆ. ಅಯೋಧ್ಯಾ ಕಾಂಡದಲ್ಲಿ ಕೈಕೇಯಿ ಕೇಳುವ 3 ವರಗಳು ಮತ್ತು ಪುತ್ರಯೋಗ ತಾಳಲಾರದೆ ದಶರಥನ ಸಾವು. ಅರಣ್ಯ ಕಾಂಡದಲ್ಲಿ ಕಾಡಿನಲ್ಲಿ ರಾಮ ಸೀತೆಯರ ದಿನಗಳು ಮತ್ತು ಸೀತಾಪಹರಣ. ಕಿಷ್ಕಿಂಧಾ ಕಾಂಡದಲ್ಲಿ ಸೀತೆಯನ್ನರಸುತ್ತಾ ರಾಮ ಕಿಷ್ಕಿಂದೆಗೆ ಬಂದು ಸುಗ್ರೀವ ಹನುಮಂತ ಮುಂತಾದ ವಾನರರ ಸ್ನೇಹ ಮಾಡಿ ಸೀತಾನ್ವೇಷಣೆಗೆ ಹೊರಡುವುದು. ಸುಂದರ ಕಾಂಡದಲ್ಲಿ ಹನುಮಂತನ ಬಗೆಗಿನ ವಿವರಗಳು. ಅವನ ಸಾಗರೋಲ್ಲಂಘನ. ಯುದ್ಧ ಕಾಂಡದಲ್ಲಿ ರಾಮ ರಾವಣರ ಯುದ್ಧ. ರಾವಣನ ಸಂಹಾರ ಮತ್ತು ಅಯೋಧ್ಯೆಗೆ ಮರಳಿದ ರಾಮನ ಪಟ್ಟಾಭಿಷೇಕ. ಉತ್ತರ ಕಾಂಡದಲ್ಲಿ, ಅಗಸನ ಮಾತು ಕೇಳಿ ರಾಮ ಸೀತೆಯ ವಿಯೋಗ.

ಹೀಗೆ ರಾಮಾಯಣವು ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯ ಒಂದು ಅವಿಭಾಜ್ಯ ಅಂಗವೇ ಆಗಿದೆ. ಇದನ್ನು ಓದಿ ಅರ್ಥೈಸುವುದರಿಂದ ನಮ್ಮ ಸಾಂಸ್ಕೃತಿಕ ಹಿನ್ನೆಲೆ, ಮೌಲ್ಯಗಳ ಪರಿಚಯ ಎಳೆಯ ವಯಸ್ಸಿನಿಂದ ನಮಗೆ ಆಗುತ್ತಾ ಹೋಗುತ್ತದೆ. ಕಷ್ಟಕರ ಸಂದರ್ಭಗಳಲ್ಲಿ ಹೇಗೆ ಧೈರ್ಯದಿಂದ ವರ್ತಿಸಬೇಕು. ಉತ್ತಮ ನಡವಳಿಕೆಯ ಆದರ್ಶ ವ್ಯಕ್ತಿತ್ವದ ಮಹತ್ವ. ಬದುಕಿನ ಸವಾಲುಗಳನ್ನು ಸ್ವೀಕರಿಸುವ ಮನೋಭಾವ ಎಲ್ಲವನ್ನೂ ವಿವಿಧ ಪಾತ್ರಗಳ ಮೂಲಕ ನಮ್ಮ ಧರ್ಮ ಗ್ರಂಥವಾದ ರಾಮಾಯಣ ಹಂತ ಹಂತವಾಗಿ ಅನೇಕ ಸಂದರ್ಭಗಳ ಮೂಲಕ ರಾಮನ ಜೀವನಗಾಥೆಯ ಮೂಲಕ ನಮಗೆ ತಿಳಿಸುತ್ತಾ ಹೋಗುತ್ತದೆ.

ನಮ್ಮ ಹಿರಿಯರು ನಮ್ಮ ಸಂಸ್ಕೃತಿ ಜೀವನ ಮೌಲ್ಯಗಳನ್ನೆಲ್ಲ ಈ ಧರ್ಮ ಗ್ರಂಥಗಳ ಮೂಲಕ ನಮಗೆ ಧಾರೆ ಎರೆದು ಹೋಗಿದ್ದಾರೆ. ಇದನ್ನು ಸರಿಯಾಗಿ ಬಳಸಿಕೊಳ್ಳುವ ಕಲೆ ನಮಗೆ ತಿಳಿದಿರಬೇಕಷ್ಟೆ.

ನಾಳೆ ಸ್ವಾತಂತ್ರ್ಯದ ಹಬ್ಬ!

● ಶಿಶಿರ್ ಮುದೂರಿ

ನಮ್ಮ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ಕಾಂಗ್ರೆಸ್ ಪಕ್ಷವು, ಸಂಪೂರ್ಣ ಸ್ವಾತಂತ್ರ್ಯ (ಪೂರ್ಣ ಸ್ವರಾಜ್) ಬೇಕು ಎಂದು ಘೋಷಣೆ ಹೊರಡಿಸಿದ್ದು 1929ರಲ್ಲಿ ಮತ್ತು 26.1.1930ರಂದು ಮೊದಲ ಸ್ವಾತಂತ್ರ್ಯೋತ್ಸವವನ್ನೂ ಆಚರಿಸಿತು. 1947ರ ತನಕ ಜನವರಿ 26 ರಂದು ಸ್ವಾತಂತ್ರ್ಯ ದಿನವನ್ನು ಸಾಂಕೇತಿಕವಾಗಿ ಆಚರಿಸುತ್ತಾ ಬರಲಾಗಿತ್ತು. ಎರಡನೆಯ ಮಹಾಯುದ್ಧ (1940–44) ಮುಗಿದ ನಂತರ, ಆರ್ಥಿಕ ಮುಗ್ಗಟ್ಟನ್ನು ಎದುರಿಸಿದ ಬ್ರಿಟಿಷ್ ದೇಶವು, ದೂರದ ಭಾರತವನ್ನು ನಿಯಂತ್ರಿಸಲು ತನ್ನಿಂದ ಆಗದು ಎಂದು ನಿರ್ಧರಿಸಿ, ಅಧಿಕಾರ ಹಸ್ತಾಂತರಕ್ಕೆ ಸಿದ್ಧತೆ ನಡೆಸಿತು. 20.2.1947ರಂದು ಬ್ರಿಟಿಷ್ ಪ್ರಧಾನಿ ಕ್ಲೆಮೆಂಟ್ ಆ್ಯಟ್ಲಿ ಒಂದು ಘೋಷಣೆ ಹೊರಡಿಸಿ, ಜೂನ್ 1948ಕ್ಕಿಂತ ಮುಂಚೆ, ಭಾರತವನ್ನು ತೊರೆಯುವುದಾಗಿ ಹೇಳಿದ.

ಆದರೆ, ಅಧಿಕಾರ ಹಸ್ತಾಂತರಕ್ಕಾಗಿ ನಿಯುಕ್ತಿಗೊಂಡ ಮೌಂಟ್ ಬ್ಯಾಟನ್‌ನು, 15.8.1947 ರಂದೇ ಅಧಿಕಾರ ಹಸ್ತಾಂತರ ಎಂದು ನಿರ್ಧರಿಸಿ,





ಅನುಮತಿ ಪಡೆದ. ಬ್ರಿಟಿಷ್ ಭಾರತವನ್ನು, ಭಾರತ ಮತ್ತು ಪಾಕಿಸ್ತಾನ ಎಂಬ ಎರಡು ಡೊಮಿನಿಯನ್ ದೇಶಗಳನ್ನಾಗಿಸಿ, ಇಂಡಿಯನ್ ಇಂಡೆಪೆಂಡೆನ್ಸ್ ಆ್ಯಕ್ಟ್ 1947 ರೂಪುಗೊಂಡಿತು.

15.8.1945ರಂದು ಜಪಾನ್ ಶರಣಾಗತಿ ಘೋಷಿಸಿದ ದಿನದ ಎರಡನೆಯ ವಾರ್ಷಿಕೋತ್ಸವದಂದು, ಅಧಿಕಾರದ ಹಸ್ತಾಂತರ ಎಂದು ನಿರ್ಧರಿಸಲಾಯಿತು. ಆದರೆ, ಪಾಕಿಸ್ತಾನವು 14.8.1947ರಂದು ಸ್ವಾತಂತ್ರ್ಯ ಪಡೆಯಲು ನಿರ್ಧರಿಸಿತು; ಮಹಮದ್ ಆಲಿ ಜಿನ್ನಾನು ಮೊದಲ ಗವರ್ನರ್ ಜನರಲ್ ಆದ. ನಮ್ಮ ದೇಶವು 15.8.1947ರಂದು ಸ್ವಾತಂತ್ರವನ್ನು ಪಡೆದಾಗ, ಮೊದಲ ಪ್ರಧಾನಿಯಾಗಿ ನೆಹರೂ ಮತ್ತು ಮೊದಲ ಗವರ್ನರ್ ಜನರಲ್ ಆಗಿ ಮೌಂಟ್‌ಬ್ಯಾಟನ್ ಅಧಿಕಾರ ಸ್ವೀಕರಿಸಿದರು. ಆದರೆ ಮೊದಲ ಸ್ವಾತಂತ್ರ್ಯದಿನದ ಸಂಭ್ರಮ ಆಚರಿಸಲು ಗಾಂಧೀಜಿಯವರು ದೆಹಲಿಯಲ್ಲಿರಲಿಲ್ಲ, ಬದಲಿಗೆ ದೂರದ ಕೊಲ್ಕೊತ್ತಾದಲ್ಲಿ ಶಾಂತಿಯಾತ್ರೆ ನಡೆಸುತ್ತಿದ್ದರು!

ಸ್ವಾತಂತ್ರ್ಯೋತ್ಸವದ ಹಬ್ಬ ಮತ್ತೊಮ್ಮೆ ಬಂದಿದೆ; ಸಂಭ್ರಮದಿಂದ ಆಚರಿಸೋಣ ಬನ್ನಿ!

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು–560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಮಹಿಳಾ ಕ್ರಿಕೆಟ್: ಭಾರತಕ್ಕೆ ಸರಣಿ ಮುನ್ನಡೆ

ಬ್ರಿಸ್ಬೇನ್: ಅರ್ಧಶತಕ ಗಳಿಸಿದ ಯಸ್ತಿಕಾ ಭಾಟಿಯಾ ಮತ್ತು ನಾಯಕಿ ರಾಧಾಯಾದವ್ ಅವರ ಪರಿಣಾಮಕಾರಿ ಬೌಲಿಂಗ್ ದಾಳಿಯ ಬಲದಿಂದ ಭಾರತ-ಎ ತಂಡವು ಇಲ್ಲಿ ನಡೆಯುತ್ತಿರುವ ಆಸ್ಟ್ರೇಲಿಯಾ-ಎ ಎದುರಿನ ಏಕದಿನ ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿ ಜಯಿಸುವ ಮೂಲಕ ಮೂರು ಪಂದ್ಯಗಳ ಸರಣಿಯಲ್ಲಿ 1-0 ಮುನ್ನಡೆ ಗಳಿಸಿತು. ಇಲ್ಲಿನ ಇಯಾನ್ ಹಿಲಿ ಓವಲ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಆಸ್ಟ್ರೇಲಿಯಾ-ಎ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ರಚೆಲ್ ಟ್ರೆನಮ್ಯಾನ್ (51) ಮತ್ತು ಅನಿಕಾ ಲಿರಾಯ್ಡ್ (ಅಜೇಯ 92) ಅವರ ಅಮೋಘ ಬ್ಯಾಟಿಂಗ್ ಬಲದಿಂದ ತಂಡವು 47.5 ಓವರ್‌ಗಳಲ್ಲಿ 214 ರನ್ ಗಳಿಸಿತು. ಭಾರತದ ನಾಯಕಿ, ಸ್ಪಿನ್ನರ್ ರಾಧಾ ಯಾದವ್ (45ಕ್ಕೆ 3) ಅವರ ಉತ್ತಮ ಬೌಲಿಂಗ್‌ನಿಂದ ಆತಿಥೇಯ ತಂಡಕ್ಕೆ ದೊಡ್ಡ ಮೊತ್ತ ಗಳಿಸಲು ಸಾಧ್ಯವಾಗಲಿಲ್ಲ. ಏಳು ಬ್ಯಾಟರ್‌ಗಳು ಎರಡಂಕಿ ಕೂಡ ತಲುಪಲಿಲ್ಲ, ಮಧ್ಯಮವೇಗಿ ತಿತಾಸ್ ಸಾಧು ಕೂಡ ಎರಡು ವಿಕೆಟ್ ಪಡೆದರು. ಗುರಿ ಬೆನ್ನಟ್ಟಿದ ಭಾರತ ತಂಡವು ಯಸ್ತಿಕಾ (59) ಮತ್ತು ಶಿಫಾಲಿ ವರ್ಮಾ ಅವರ ಆಕರ್ಷಕ ಬ್ಯಾಟಿಂಗ್ ನೆರವಿನಿಂದ 42 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ ಗುರಿ ತಲುಪಿತು.

ಸುಶೀಲ್ ಜಾಮೀನು: ಸುಪ್ರೀಂನಿಂದ ರದ್ದು

ದೆಹಲಿ: ಇಲ್ಲಿನ ಛತ್ರಸಾಲ್ ಕ್ರೀಡಾಂಗಣದಲ್ಲಿ ಮಾಜಿ ಜೂನಿಯರ್ ರಾಷ್ಟ್ರೀಯ ಕುಸ್ತಿ ಚಾಂಪಿಯನ್ ಸಾಗರ್ ಧನಕರ್ ಅವರ ಕೊಲೆ ಪ್ರಕರಣದಲ್ಲಿ ಒಲಿಂಪಿಕ್ ಪದಕ ವಿಜೇತ ಸುಶೀಲ್

ಕುಮಾರ್ ಅವರಿಗೆ ನೀಡಲಾಗಿದ್ದ ಜಾಮೀನನ್ನು ಸುಪ್ರೀಂ ಕೋರ್ಟ್ ಬುಧವಾರ ರದ್ದುಗೊಳಿಸಿದೆ. ಸಂಜಯ್ ಕರೋಲ್ ಮತ್ತು ಪ್ರಶಾಂತ್ ಕುಮಾರ್ ಮಿಶ್ರಾ ಅವರನ್ನು ಒಳಗೊಂಡ ನ್ಯಾಯಪೀಠವು, ಸುಶೀಲ್ ಜಾಮೀನು ಮಂಜೂರು ಮಾಡಿದ ದೆಹಲಿ ಹೈಕೋರ್ಟ್‌ನ ಮಾರ್ಚ್-4ರ ಆದೇಶವನ್ನು ತಳ್ಳಿಹಾಕಿತು. ಒಂದು ವಾರದೊಳಗೆ ಶರಣಾಗುವಂತೆ ಸುಶೀಲ್ ಅವರಿಗೆ ಸೂಚಿಸಲಾಗಿದೆ. ಜಾಮೀನು ಮಂಜೂರು ಮಾಡಿದ ದೆಹಲಿ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಸಾಗರ್ ಅವರ ತಂದೆ ಅಶೋಕ್ ಧನಕರ್ ಅವರು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. 2021ರ ಮೇ 4ರಂದು ಸಾಗರ್ ಅವರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ ಆರೋಪ ಸುಶೀಲ್ ಕುಮಾರ್ ಮತ್ತು ಇತರರ ಮೇಲೆ ಇದೆ. ಈ ಘಟನೆ ವೇಳೆ ಸಾಗರ್ ಅವರ ಇಬ್ಬರು ಗೆಳೆಯರೂ ಗಾಯಗೊಂಡಿದ್ದರು.

ಪಾಕ್ ತಂಡ ಕೇವಲ 92 ರನ್‌ಗಳಿಗೆ ಆಲೌಟ್ | ಏಕದಿನ ಸರಣಿ ಗೆದ್ದ ವೆಸ್ಟ್ ಇಂಡೀಸ್

ವಿಂಡೀಸ್ ಎದುರು ಪಾಕ್‌ಗೆ ಹೀನಾಯ ಸೋಲು

ಟ್ರಿನಿಡಾಡ್: ಶೇಯ್ ಹೋಪ್ ಬಾರಿಸಿದ ಆಕರ್ಷಕ ಶತಕ ಹಾಗೂ ಜೇಡನ್ ಸೀಲ್ಸ್ ಅವರ ಮಾರಕ ಬೌಲಿಂಗ್ ನೆರವಿನಿಂದ ವೆಸ್ಟ್ ಇಂಡೀಸ್ ತಂಡವು ಮೂರನೇ ಹಾಗೂ ಕೊನೆಯ ಏಕದಿನ ಪಂದ್ಯದಲ್ಲಿ ಪಾಕಿಸ್ತಾನ ತಂಡದ ವಿರುದ್ಧ 202 ರನ್‌ಗಳ ಭರ್ಜರಿ ಗೆಲುವು ಪಡೆಯಿತು. ಆ ಮೂಲಕ ಮೂರು ಪಂದ್ಯಗಳ ಏಕದಿನ ಸರಣಿಯನ್ನು ವೆಸ್ಟ್ ಇಂಡೀಸ್ 2-1 ಅಂತರದಲ್ಲಿ ತನ್ನದಾಗಿಸಿಕೊಂಡಿತು.

ಇಲ್ಲಿನ ಬ್ರಿಯಾನ್ ಲಾರಾ ಕ್ರೀಡಾಂಗಣದಲ್ಲಿ ನಡೆದಿದ್ದ ಮೂರನೇ ಹಾಗೂ ಏಕದಿನ ಸರಣಿ ನಿರ್ಣಾಯಕ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ್ದ ವೆಸ್ಟ್ ಇಂಡೀಸ್ ತಂಡವು ಶೇಯ್ ಹೋಪ್ (120) ಅವರ ಶತಕದ ನೆರವಿನಿಂದ 6 ವಿಕೆಟ್‌ಗಳ ನಷ್ಟಕ್ಕೆ 294 ರನ್‌ಗಳನ್ನು ಕಲೆ ಹಾಕಿತು.

ವೆಸ್ಟ್ ಇಂಡೀಸ್‌ಗೆ ಉತ್ತಮ ಆರಂಭ ಸಿಕ್ಕಿರಲಿಲ್ಲ, ಆದರೆ ನಾಲ್ಕನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದಿದ್ದ ಶೇಯ್ ಹೋಪ್ ಭರ್ಜರಿ ಬ್ಯಾಟಿಂಗ್ ಪ್ರದರ್ಶನವನ್ನು ತೋರಿದರು. ಆಡಿದ 94 ಎಸೆತಗಳಲ್ಲಿ 5 ಸಿಕ್ಸರ್ ಹಾಗೂ 10 ಬೌಂಡರಿಗಳೊಂದಿಗೆ ಅಜೇಯ 120 ರನ್‌ಗಳನ್ನು ಕಲೆ ಹಾಕಿ, ತಮ್ಮ ಏಕದಿನ ಕ್ರಿಕೆಟ್ ವೃತ್ತಿ ಜೀವನದಲ್ಲಿ 18ನೇ ಶತಕವನ್ನು ಪೂರ್ಣಗೊಳಿಸಿದರು.

ಜೇಡನ್ ಸೀಲ್ಸ್ ಮಾರಕ ಬೌಲಿಂಗ್: ಗುರಿಯನ್ನು ಹಿಂಬಾಲಿಸಿದ ಪಾಕಿಸ್ತಾನ ತಂಡಕ್ಕೆ ಆರಂಭದಲ್ಲಿಯೇ ಜೇಡನ್ ಸೀಲ್ಸ್ ಆಘಾತ ನೀಡಿದ್ದರು. ಪಾಕ್ ತಂಡದ ಆರಂಭಿಕರಾದ ಸೈಯಮ್ ಆಯುಬ್ ಹಾಗೂ ಅಬ್ದುಲ್ಲಾ ಶಫಿಕ್ ಅವರನ್ನು ಶೂನ್ಯಕ್ಕೆ ವಿಕೆಟ್ ಕಿತ್ತ ಸೀಲ್ಸ್, ನಂತರ ಕ್ರಮವಾಗಿ ಮೊಹಮ್ಮದ್ ರಿಝ್ವಾನ್ ಹಾಗೂ ಬಾಬರ್ ಆಝುಮ್ (9) ಅವರನ್ನು ಔಟ್ ಮಾಡಿದಾಗ ಕೇವಲ 24 ರನ್‌ಗಳಿಗೆ ಪಾಕಿಸ್ತಾನ ತಂಡ 4 ವಿಕೆಟ್‌ಗಳನ್ನು ಕಳೆದುಕೊಂಡಿತು. ಆದರೆ 49 ಎಸೆತಗಳಲ್ಲಿ 30 ರನ್ ಗಳಿಸಿ ಕೆಲಕಾಲ ವಿಂಡೀಸ್ ಬೌಲಿಂಗ್ ದಾಳಿಯನ್ನು ಸಮರ್ಥವಾಗಿ ಎದುರಿಸಿದ್ದ ಸಲ್ಮಾನ್ ಅಘಾ ಅವರನ್ನು ಗುಡಕೇಶ್ ಮೋಟಿ ಔಟ್ ಮಾಡಿದರು. ಮೊಹಮ್ಮದ್ ನವಾಝ್ ಅವರು 23 ರನ್ ಗಳಿಸಿ ಬಹಳ ಹೊತ್ತು ಕ್ರೀಸ್‌ನಲ್ಲಿದ್ದರೂ, 29.2 ಓವರ್‌ಗಳಿಗೆ 92 ರನ್‌ಗಳಿಗೆ ಆಲ್ ಔಟ್ ಆಗಿ ದೊಡ್ಡ ಅಂತರದಲ್ಲಿ ಸೋತು ಮುಖಭಂಗ ಅನುಭವಿಸಿತು. ಜೇಡನ್ ಸೀಲ್ಸ್ ಮಾರಕ ಬೌಲಿಂಗ್ ನಡೆಸಿ ಪಾಕ್ ತಂಡದ 6 ವಿಕೆಟ್ ಪಡೆದರು.

ಶೇಯ್ ಹೋಪ್: 18ನೇ ಶತಕ

ವೆಸ್ಟ್ ಇಂಡೀಸ್ ತಂಡದ ಬ್ಯಾಟ್ಸ್‌ಮನ್ ಶೇಯ್ ಹೋಪ್ ತಮ್ಮ ಏಕದಿನ ವೃತ್ತಿ ಜೀವನದ 18ನೇ ಶತಕ ವನ್ನು ಸಿಡಿಸಿ ವೆಸ್ಟ್ ಇಂಡೀಸ್ ಕ್ರಿಕೆಟ್ ದಿಗ್ಗಜ ದೆಸ್ಮಂಡ್ ಹೇನ್ಸ್ ಅವರನ್ನು ಹಿಂದಿಕ್ಕುವ ಮೂಲಕ ಬ್ಯಾಟಿಂಗ್ ದಂತಕತೆ ಬ್ರಿಯಾನ್ ಲಾರಾ (19) ಅವರ ಸನಿಹದಲಿದ್ದಾರೆ. ವೆಸ್ಟ್ ಇಂಡೀಸ್ ಪರ ಅತಿ ಹೆಚ್ಚು ಏಕದಿನ ಶತಕಗಳನ್ನು ಸಿಡಿಸಿದ ಬ್ಯಾಟ್ಸ್‌ಮನ್‌ಗಳ ಸಾಲಿನಲ್ಲಿ ಕ್ರಿಸ್ ಗೇಲ್ ಅಗ್ರ ಸ್ಥಾನದಲ್ಲಿದ್ದರೆ, ಎರಡನೇ ಸ್ಥಾನಕ್ಕೆ ಬ್ರಿಯಾನ್ ಲಾರಾ ಇದ್ದಾರೆ. ಇದೀಗ ಮೂರನೇ ಸ್ಥಾನಕ್ಕೆ ಶೇಯ್ ಹೋಪ್ ಲಗ್ಗೆ ಇಟ್ಟಿದ್ದಾರೆ.

ತಿರುವನಂತಪುರಕ್ಕೆ ಪಂದ್ಯ ಸ್ಥಳಾಂತರ?

ಬೆಂಗಳೂರು: ಜೂನ್‌ನಲ್ಲಿ ಆರ್‌ಸಿಬಿ ಸಂಭ್ರಮಾಚರಣೆ ವೇಳೆ ಉಂಟಾದ ಕಾಲ್ತುಳಿತ 11 ಜೀವಗಳನ್ನು ಬಲಿ ತೆಗೆದುಕೊಂಡ ಬಳಿಕ ಎಂ.ಚಿನ್ನಸ್ವಾಮಿ ಕ್ರೀಡಾಂಗಣದ ಕುರಿತಾಗಿ ರಾಜ್ಯ ಸರಕಾರ ಹಾಗೂ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ನಡುವಿನ ಬಿಕ್ಕಟ್ಟು ಮತ್ತಷ್ಟು ತೀವ್ರಗೊಂಡಿದ್ದು ಮಹಿಳೆಯರ ಏಕದಿನ ವಿಶ್ವಕಪ್ 13ನೇ ಆವೃತ್ತಿಯ ಪಂದ್ಯಗಳು ಚಿನ್ನಸ್ವಾಮಿ ಸ್ಟೇಡಿಯಂನಿಂದ ಬೇರೆಡೆಗೆ ಸ್ಥಳಾಂತರಗೊಳ್ಳುವ ಸಾಧ್ಯತೆ ಇದೆ.

ಕಾಲ್ತುಳಿತ ನಡೆದ ಕೆಲ ದಿನಗಳಲ್ಲೇ ಭಾರತ-ದಕ್ಷಿಣ ಆಫ್ರಿಕಾ ಎ ತಂಡಗಳ ನಡುವಿನ 3 ಪಂದ್ಯಗಳ ಏಕದಿನ ಸರಣಿಯನ್ನು ಚಿನ್ನಸ್ವಾಮಿಯಿಂದ ರಾಜ್‌ಕೋಟ್‌ಗೆ ಸ್ಥಳಾಂತರಿಸಿ ಬಿಸಿಸಿಐ ಆದೇಶಿಸಿತ್ತು. ಚೊಚ್ಚಲ ಆವೃತ್ತಿಯ ಕೆಎಸ್‌ಸಿಎ ಮಹಾರಾಣಿ ಟ್ರೋಫಿ ಪಂದ್ಯಗಳನ್ನು ಚಿನ್ನಸ್ವಾಮಿ ಬದಲು ಆಲೂರಿನಲ್ಲಿ ನಡೆಸಲಾಯಿತು. ಅಲ್ಲದೆ ಮಹಾರಾಜ ಟ್ರೋಫಿ ಟೂರ್ನಿಯನ್ನು ಚಿನ್ನಸ್ವಾಮಿಯಿಂದ ಮೈಸೂರಿಗೆ ಸ್ಥಳಾಂತರಿಸಲಾಗಿತ್ತು.

ಇದೀಗ ಮಹಿಳೆಯರ ಏಕದಿನ ವಿಶ್ವಕಪ್ ಪಂದ್ಯಗಳನ್ನು ಆಯೋಜಿಸಲು ರಾಜ್ಯ ಸರಕಾರ ಅನುಮತಿ ನೀಡಲು ನಿರಾಕರಿಸಿದೆ. ಇದರಿಂದ ಟೂರ್ನಿಯ ಉದ್ಘಾಟನಾ ಹಾಗೂ ಫೈನಲ್ ಪಂದ್ಯಗಳ ಜತೆಗೆ ಒಟ್ಟು 5 ಪಂದ್ಯಗಳು ಬೇರೆ ನಗರಕ್ಕೆ ಸ್ಥಳಾಂತರಗೊಳ್ಳುವುದು ಖಾತ್ರಿಗೊಂಡಿದ್ದು, ಬಿಸಿಸಿಐ ಮತ್ತು ಐಸಿಸಿ ಶೀಘ್ರದಲ್ಲಿಯೇ ಪರಿಷ್ಕೃತ ವೇಳಾಪಟ್ಟಿ ಬಿಡುಗಡೆಗೊಳಿಸುವ ನಿರೀಕ್ಷೆಯಿದೆ.

ಮಹಿಳಾ ವಿಶ್ವಕಪ್ ಪಂದ್ಯಗಳ ಆಯೋಜನೆಗೆ ತಿರುವನಂತಪುರದ ಗ್ರೀನ್‌ಫೀಲ್ಡ್ ಕ್ರೀಡಾಂಗಣದ ಹೆಸರು ಮುಂಚೂಣಿಯಲ್ಲಿದ್ದು, ಬಿಸಿಸಿಐ ತನ್ನ ಅಂತಿಮ ನಿರ್ಧಾರವನ್ನು ಇನ್ನಷ್ಟೇ ಘೋಷಿಸಬೇಕಿದೆ. ಟೂರ್ನಿಯ ಕೆಲ ಅಭ್ಯಾಸ ಪಂದ್ಯಗಳು ಇದೇ ಮೈದಾನದಲ್ಲಿ ನಡೆಯಲಿವೆ ಎನ್ನಲಾಗಿದೆ. ತಿರುವನಂತಪುರದಲ್ಲಿ ಆಗಸ್ಟ್- 21ರಿಂದ ಸೆಪ್ಟೆಂಬರ್-7ರ ವರೆಗೆ ಕೇರಳ ಕ್ರಿಕೆಟ್‌ಲೀಗ್ ನಿಗದಿಯಾಗಿದ್ದರೂ, ಅದನ್ನು ಬೇರೆ ತಾಣಕ್ಕೆ ಸ್ಥಳಾಂತರಿಸಲು ಕೇರಳ ಕ್ರಿಕೆಟ್ ಸಂಸ್ಥೆ ಮುಂದಾಗಿದೆ ಎನ್ನಲಾಗಿದೆ.

ಮುಂದಿನ ವಾರ ತಂಡ ಘೋಷಣೆ

ಆ. 19 ಅಥವಾ 20ಕ್ಕೆ ಏಷ್ಯಾಕಪ್ ಭಾರತ ತಂಡ ಪ್ರಕಟ

ಮುಂಬೈ: ಮುಂದಿನ ತಿಂಗಳು ನಡೆಯಲಿರುವ ಏಷ್ಯಾಕಪ್ ಟಿ20 ಟೂರ್ನಿಗೆ ಅಜಿತ್ ಅಗರ್ಕರ್ ನೇತೃತ್ವದ ಆಯ್ಕೆ ಸಮಿತಿಯು ಆಗಸ್ಟ್ 19 ಅಥವಾ 20ರಂದು ಮುಂಬೈನಲ್ಲಿ ಸಭೆ ಸೇರಿ ಭಾರತ ತಂಡವನ್ನು ಪ್ರಕಟಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

ಸದ್ಯ ಬೆಂಗಳೂರಿನ ಎನ್‌ಸಿಎಯಲ್ಲಿರುವ ನಾಯಕ ಸೂರ್ಯಕುಮಾರ್ ಯಾದವ್ ಸೇರಿ ಕೆಲ ಆಟಗಾರರ ಫಿಟ್ನೆಸ್ ವರದಿ ಸಿಕ್ಕ ತಕ್ಷಣ ಆಯ್ಕೆ ಸಮಿತಿ ಸಭೆ ನಡೆಸಲಿದೆ. ರಿಷಭ್ ಪಂತ್ ಗಾಯಗೊಂಡಿರುವ ಕಾರಣ ಸಂಜು ಸ್ಯಾಮ್ಸನ್ ಜತೆಗೆ 2ನೇ ವಿಕೆಟ್ ಕೀಪರ್ ಸ್ಥಾನಕ್ಕೆ ಜಿತೇಶ್ ಶರ್ಮಾ ಮತ್ತು ಧ್ರುವ್ ಜುರೆಲ್ ಮಧ್ಯೆ ಸ್ಪರ್ಧೆ ಏರ್ಪಟ್ಟಿದೆ ಎನ್ನಲಾಗಿದೆ.

ಪ್ರಧಾನ ವೇಗಿ ಜಸ್‌ಪ್ರೀತ್ ಬುಮ್ರಾ ಏಷ್ಯಾಕಪ್‌ನಲ್ಲಿ ಆಡುವ ಸಾಧ್ಯತೆ ಹೆಚ್ಚಿದ್ದು, ಅರ್ಷದೀಪ್ ಸಿಂಗ್ ಜತೆ 3ನೇ ವೇಗದ ಬೌಲರ್ ಸ್ಥಾನಕ್ಕೆ ಪ್ರಸಿದ್ಧ್ ಕೃಷ್ಣ ಮತ್ತು ಹರ್ಷಿತ್ ರಾಣಾ ನಡುವೆ ಪೈಪೋಟಿ ಇದೆ. ಮೊಹಮ್ಮದ್ ಸಿರಾಜ್ ಮತ್ತು ಶಮಿ ಇಬ್ಬರಿಗೂ ಅವಕಾಶ ಸಿಗುವುದು ಅನುಮಾನ.

ಇಂಗ್ಲೆಂಡ್ ಟೆಸ್ಟ್ ಸರಣಿಯಲ್ಲಿ ಗಾಯಗೊಂಡ ನಿತೀಶ್ ಕುಮಾರ್ ಫಿಟ್ ಆಗುವ ಸಾಧ್ಯತೆ ಇಲ್ಲ, ಹೀಗಾಗಿ ಹಾರ್ದಿಕ್ ಪಾಂಡ್ಯ ಜತೆ ಮತ್ತೋರ್ವ ಆಲ್‌ರೌಂಡರ್ ಆಗಿ ಶಿವಂ ದುಬೆ ಅವಕಾಶ ಪಡೆಯಬಹುದು, ಕಳೆದ ವರ್ಷ ನಡೆದಿದ್ದ ಟಿ20 ವಿಶ್ವಕಪ್‌ನಲ್ಲಿ ದುಬೆ ಆಡಿದ್ದರು.

ಭಾರತ: ಸಂಭಾವ್ಯ ತಂಡ

ಸೂರ್ಯಕುಮಾರ್ ಯಾದವ್ (ನಾಯಕ), ಶುಭಮನ್ ಗಿಲ್, ಅಭಿಷೇಕ್ ಶರ್ಮಾ, ಸಂಜು ಸ್ಯಾಮ್ಸನ್ (ಕೀಪರ್), ತಿಲಕ್ ವರ್ಮಾ, ಹಾರ್ದಿಕ್ ಪಾಂಡ್ಯ, ಶಿವಂ ದುಬೆ, ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್, ಕುಲದೀಪ್ ಯಾದವ್, ವರುಣ್ ಚಕ್ರವರ್ತಿ, ಜಸ್‌ಪ್ರೀತ್ ಬುಮ್ರಾ, ಅರ್ಷ್‌ದೀಪ್ ಸಿಂಗ್, ಹರ್ಷಿತ್ ರಾಣಾ/ಪ್ರಸಿದ್ಧ್ ಕೃಷ್ಣ, ಜಿತೇಶ್ ಶರ್ಮಾ/ಧ್ರುವ್ ಜುರೆಲ್.

ಆರಂಭಿಕ ಆಟಗಾರ ಯಶಸ್ವಿ ಜೈಸ್ವಾಲ್‌ಗೆ ವಿಂಡೀಸ್ ವಿರುದ್ಧದ ಟೆಸ್ಟ್ ಸರಣಿಯ ಕಾರಣದಿಂದ ಬಿಸಿಸಿಐ ವಿಶ್ರಾಂತಿ ನೀಡಲು ನಿರ್ಧರಿಸಿದೆ ಎನ್ನಲಾಗಿದೆ.

ಆನ್‌ಲೈನ್ ಬೆಟ್ಟಿಂಗ್ ಆ್ಯಪ್ ಸಂಬಂಧ ಹಣ ವರ್ಗಾವಣೆ ಪ್ರಕರಣ

ಇ.ಡಿ ಎದುರು ರೈನಾ ಹಾಜರು

ದೆಹಲಿ: ಮಾಜಿ ಕ್ರಿಕೆಟಿಗ ಸುರೇಶ್ ರೈನಾ ಬುಧವಾರ ದೆಹಲಿಯಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ) ಮುಂದೆ ಅಕ್ರಮ ಬೆಟ್ಟಿಂಗ್ ಅಪ್ಲಿಕೇಶನ್ ಸಂಬಂಧಿತ ಹಣ ವರ್ಗಾವಣೆ ಪ್ರಕರಣದಲ್ಲಿ ವಿಚಾರಣೆಗೆ ಹಾಜರಾದರು. ಅಕ್ರಮ ಬೆಟ್ಟಿಂಗ್ ಆ್ಯಪ್‌ಗೆ ಸಂಬಂಧಿಸಿದಂತೆ ದಾಖಲಾಗಿರುವ ಅಕ್ರಮ ಹಣ ವರ್ಗಾವಣೆ ಪ್ರಕರಣದ ಕುರಿತು ನಡೆಯುತ್ತಿರುವ ತನಿಖೆಯ ಭಾಗವಾಗಿ ಹಾಜರಾದ ಸುರೇಶ್ ರೈನಾ ಅವರಿಂದ ಜಾರಿ ನಿರ್ದೇಶನಾಲಯ ಹೇಳಿಕೆ ದಾಖಲಿಸಿಕೊಂಡಿತು ಎಂದು ಮೂಲಗಳು ಹೇಳಿವೆ.

38 ವರ್ಷದ ಮಾಜಿ ಭಾರತೀಯ ಕ್ರಿಕೆಟಿಗರಾದ ಸುರೇಶ್ ರೈನಾ ಈ ಆ್ಯಪ್‌ಗೆ ಸಂಬಂಧಿಸಿದ ಕೆಲ ಪ್ರಚಾರಗಳಲ್ಲಿ ಭಾಗಿಯಾಗಿದ್ದರು. ವಿಚಾರಣೆಯ ವೇಳೆ ಈ ಆ್ಯಪ್ ನೊಂದಿಗೆ ಅವರಿಗಿರುವ ಸಂಬಂಧದ ಕುರಿತು ಮಾಹಿತಿ ಸಂಗ್ರಹಿಸುವ ಸಲುವಾಗಿ ಜಾರಿ ನಿರ್ದೇಶನಾಲಯ ವಿಚಾರಣೆಗೊಳಪಡಿಸಿತು ಎನ್ನಲಾಗಿದೆ.

ಅಸಂಖ್ಯಾತ ಜನರಿಗೆ ಹಾಗೂ ಹೂಡಿಕೆದಾರರಿಗೆ ನೂರಾರು ಕೋಟಿ ರೂಪಾಯಿ ವಂಚನೆ ಎಸಗಿ, ಭಾರಿ ಪ್ರಮಾಣದ ತೆರಿಗೆ ವಂಚನೆ ಮಾಡಿರುವ ಆರೋಪ ಎದುರಿಸುತ್ತಿರುವ ಇಂತಹ ಅಕ್ರಮ ಬೆಟ್ಟಿಂಗ್ ಆ್ಯಪ್‌ಗಳ ಕುರಿತು ದಾಖಲಾಗಿರುವ ವಿವಿಧ ಪ್ರಕರಣಗಳ ಕುರಿತು ಜಾರಿ ನಿರ್ದೇಶನಾಲಯ ತನಿಖೆ ನಡೆಸುತ್ತಿದೆ.

ಸೋಮವಾರವಷ್ಟೇ ಆನ್‌ಲೈನ್‌ನಲ್ಲಿ ಬೆಟ್ಟಿಂಗ್ ಹಾಗೂ ಜೂಜಾಟಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ನಟ ರಾಣಾ ದಗ್ಗುಬಾಟಿ ಕೂಡ ಜಾರಿ ನಿರ್ದೇಶನಾಲಯದ (ಇ.ಡಿ) ಎದುರು ಸೋಮವಾರ ವಿಚಾರಣೆಗೆ ಹಾಜರಾಗಿದ್ದರು. ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ನಟ ವಿಜಯ್ ದೇವರಕೊಂಡ ಆಗಸ್ಟ್-6ರಂದು ವಿಚಾರಣೆಗೆ ಹಾಜರಾಗಿದ್ದರು. ಪ್ರಕಾಶ್ ರಾಜ್ ಅವರು ಜುಲೈ 30ರಂದು ವಿಚಾರಣೆಗೆ ಹಾಜರಾಗಿದ್ದರು. ಇವರೊಂದಿಗೆ ನಟಿ ಲಕ್ಷ್ಮಿ ಮಂಚು ಅವರಿಗೂ ವಿಚಾರಣೆಗೆ ಹಾಜರಾಗುವಂತೆ ಇ.ಡಿ ನೋಟಿಸ್ ನೀಡಲಾಗಿದೆ.

ಬೆಟ್ಟಿಂಗ್ ಆ್ಯಪ್‌ಗಳ ಪ್ರಚಾರಕ್ಕೆ ಸಂಬಂಧಿಸಿ ಕ್ರಿಕೆಟಿಗರು, ನಟರು ಹಾಗೂ ಸೋಷಿಯಲ್ ಮೀಡಿಯಾ ಇನ್‌ಫ್ಲುಯೆನ್ಸರ್‌ಗಳ ವಿರುದ್ಧ 5 ರಾಜ್ಯಗಳಲ್ಲಿ ದಾಖಲಾಗಿರುವ ಎಫ್‌ಐಆರ್‌ಗಳ ಆಧಾರದ ಮೇಲೆ ಇ.ಡಿ ವಿಚಾರಣೆ ನಡೆಸುತ್ತಿದೆ.

ವಿಟಾಕೀಸ್

ಅನಿಲ್ ಕುಮಾರ್ ನಿರ್ಮಿಸಿ, ನಟಿಸಿರುವ ನೋಡಿದ್ದು ಸುಳ್ಳಾಗಬಹುದು ಚಿತ್ರ ಸದ್ದಿಲ್ಲದೆ ಶೂಟಿಂಗ್ ಮುಗಿಸಿದ್ದು ತೆರೆಗೂ ಸಿದ್ಧವಾಗಿದೆ. ಸದ್ಯ ಚಿತ್ರದ ಮೊದಲ ಹಾಡು ಬಿಡುಗಡೆಯಾಗಿದೆ. ಕನಸುಗಳ ಮೆರವಣಿಗೆ.. ಎಂಬ ಲಿರಿಕಲ್ ಸಾಂಗ್ ಇದಾಗಿದ್ದು, ಕೇಳಲು ಮಧುರವಾಗಿದೆ. ಅನಿರುದ್ಧ್ ಶಾಸ್ತ್ರಿ ಸಾಹಿತ್ಯದ ಈ ಹಾಡಿಗೆ ಗುಮ್ಮಿನೇನಿ ವಿಜಯ್ ಸಂಗೀತ ಸಂಯೋಜಿಸಿದ್ದಾರೆ. ಅನಿರುದ್ಧ್ ಶಾಸ್ತ್ರಿ ಮತ್ತು ಪೃಥ್ವಿ ಭಟ್ ಹಾಡಿಗೆ ದನಿಯಾಗಿದ್ದು, ಇಂಪಾಗಿ ಮೂಡಿಬಂದಿದೆ. ಈ

ನೋಡಿದ್ದು ಸುಳ್ಳಾಗಬಹುದು ಹಾಡು ಬಿಡುಗಡೆ

ಹಾಡನ್ನು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ನರಸಿಂಹಲು, ಉಪಾಧ್ಯಕ್ಷ ಶಿಲ್ಪ ಶ್ರೀನಿವಾಸ್ ಹಾಗೂ ಕನ್ನಡ ಚಲನಚಿತ್ರ ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಕೋರಿದರು. ವಿಜಯ್ ಚಲಪತಿ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ.

ನನಗೆ ಮೊದಲಿನಿಂದಲೂ ನಟನೆಯಲ್ಲಿ ಆಸಕ್ತಿ, ಉಷಾ ಭಂಡಾರಿ ಅವರ ನಟನಾ ಶಾಲೆಯಲ್ಲಿ ತರಬೇತಿ ಪಡೆದಿದ್ದೇನೆ. ಈ ಚಿತ್ರದ ಮೂಲಕ ನಟನಾಗುವ ಕನಸು ನನಸಾಗಿದೆ. ಗೆಳೆಯ ಅಕ್ಷಯ್ ಮೂಲಕ ನಿರ್ದೇಶಕ ವಿಜಯ್ ಚಲಪತಿ ಪರಿಚಯವಾದರು. ಈ ಚಿತ್ರದ ಕಥೆ ಹೇಳಿದರು. ಕಥೆ ಹಾಗೂ ಶೀರ್ಷಿಕೆ ಎರಡು ಇಷ್ಟವಾಯಿತು. ನಾನೇ ನಾಯಕನಾಗಿ ನಟಿಸುವುದರ ಜತೆಗೆ ನಿರ್ಮಾಣ ಕೂಡ ಮಾಡಿದ್ದೇನೆ ಎಂದು ನಿರ್ಮಾಪಕ ಅನಿಲ್ ಕುಮಾರ್ ತಿಳಿಸಿದರು. ಶ್ರೀಕಾಂತ್, ಪ್ರಿಯಾ ತರುಣ್, ಮುಂತಾದವರು ತಾರಾಗಣದಲ್ಲಿದ್ದಾರೆ.

ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು, ಗುಮ್ಮಿನೇನಿ ವಿಜಯ್ ಎರಡು ಹಾಡುಗಳಿಗೆ ಹಾಗೂ ಮಿಹಿರಾಮ್ಸ್ ಎರಡು ಹಾಡುಗಳಿಗೆ ಸಂಗೀತ ಸಂಯೋಜನೆ ಮಾಡಿದ್ದಾರೆ. ಕೆ.ವಿ.ಕಿರಣ್ ಛಾಯಾಗ್ರಹಣ, ಶ್ರೀನಿವಾಸ್ ಕಲಾಲ್ ಸಂಕಲನ, ಪ್ರಭು ನೃತ್ಯ ನಿರ್ದೇಶನ ಹಾಗೂ ನರಸಿಂಹ ಮಾಗಡಿ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ.

ನೋಡಿದ್ದು ಸುಳ್ಳಾಗಬಹುದು, ಚಿತ್ರಕ್ಕೆ ಇದೇ ಶೀರ್ಷಿಕೆ ಯಾಕೆ ಎಂಬುದಕ್ಕೆ ಸಿನಿಮಾ ನೋಡಿದ ಮೇಲೆ ಉತ್ತರ ಸಿಗಲಿದೆ. ಇದೊಂದು ನೈಜ ಘಟನೆ ಆಧಾರಿತ ಚಿತ್ರ. ಈಗಾಗಲೇ ಚಿತ್ರೀಕರಣ ಪೂರ್ಣಗೊಂಡಿದ್ದು, ಪೋಸ್ಟ್ ಪ್ರೊಡಕ್ಷನ್‌ನಲ್ಲಿ ಕೆಲಸಗಳು ನಡೆಯುತ್ತಿವೆ. ಕನ್ನಡ ಹಾಗೂ ತೆಲುಗಿನಲ್ಲಿ ಚಿತ್ರ ನಿರ್ಮಾಣವಾಗಿದೆ.

-ವಿಜಯ್ ಛಲಪತಿ ನಿರ್ದೇಶಕ

ಸತ್ಯ ನುಡಿಯಲು ಸಿದ್ಧವಾದ ನಿರೂಪ್ ಭಂಡಾರಿ

ರಂಗಿತರಂಗ ಖ್ಯಾತಿಯ ನಟ ನಿರೂಪ್ ಭಂಡಾರಿ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದಾರೆ. ತಮ್ಮ ನೆಚ್ಚಿನ ನಟನ ಹುಟ್ಟುಹಬ್ಬಕ್ಕೆ ಅಭಿಮಾನಿಗಳು ಶುಭಕೋರಿ ಸಂಭ್ರಮಿಸುತ್ತಿದ್ದಾರೆ. ರಂಗಿತರಂಗ ಬಳಿಕ ಬೇಡಿಕೆಯ ನಟನಾಗಿ ಗುರುತಿಸಿಕೊಂಡಿರುವ ನಿರೂಪ್, ರಾಜರಥ ಸಿನಿಮಾದಲ್ಲಿ ಲವ್ವರ್ ಬಾಯ್ ಆಗಿ ಮಿಂಚಿದರು, ಅಷ್ಟೇ ಅಲ್ಲ ಕಾಮಿಡಿ ಕಮಾಲ್ ಮಾಡಿದರು. ಆ ಬಳಿಕ ವಿಕ್ರಾಂತ್ ರೋಣ ಚಿತ್ರದಲ್ಲಿ ಕಿಚ್ಚನ ಜತೆಗೆ ಮಿಂಚಿದರು. ವಿಕ್ರಾಂತ್ ರೋಣ ಚಿತ್ರದಲ್ಲಿ ನೆಗೆಟಿವ್ ಶೇಡ್‌ನಲ್ಲಿ ಡಿಫರೆಂಟ್



ಲುಕ್‌ನಲ್ಲಿ ಕಂಗೊಳಿಸಿದರು. ಈ ಚಿತ್ರ ನಿರೂಪ್‌ಗೆ ಹೊಸ ವರ್ಚಸ್ಸು ತಂದುಕೊಟ್ಟಿತು. ಈ ಎಲ್ಲಾ ಸಿನಿಮಾಗಳ ಬಳಿಕ ಸತ್ಯ ಹೇಳಲು ಸಿದ್ಧವಾಗಿದ್ದಾರೆ. ಹೌದು ನಿರೂಪ್ ಭಂಡಾರಿ, ಸತ್ಯ ಸನ್ ಆಫ್ ಹರಿಶ್ಚಂದ್ರ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಈ ಸಿನಿಮಾ ಆರಂಭದಿಂದಲೂ ಕುತೂಹಲ ಮೂಡಿಸಿದೆ.

ಈ ಚಿತ್ರದಲ್ಲಿ ನಿರೂಪ್ ಪಾತ್ರದಲ್ಲಿ ನಿರೂಪ್ ವಿಭಿನ್ನ ಪಾತ್ರದಲ್ಲಿ ಬಣ್ಣಹಚ್ಚಿದ್ದು, ಹೊಸ ಲುಕ್‌ನಲ್ಲಿ ಮಿಂಚಿದ್ದಾರೆ. ಹಿರಿಯ ನಟ ಸಾಯಿ ಕುಮಾರ್ ಹರಿಶ್ಚಂದ್ರನಾಗಿ ಮಿಂಚಿದ್ದಾರೆ. ಈಗಾಗಲೇ ಶೂಟಿಂಗ್ ಮುಗಿಸಿರುವ ಈ ಚಿತ್ರದ ಪೋಸ್ಟರ್ ರಿಲೀಸ್ ಆಗಿದೆ. ನಮ್ಮೂರ ಕಾಯುವ ಸರದಾರ ನ್ಯಾಯಕ್ಕೆ ಇವನೆ ಹರಿಕಾರ ಎಂಬ ಬರಹ ಪೋಸ್ಟರ್‌ನಲ್ಲಿ ಕಂಗೊಳಿಸುತ್ತಿದೆ. ಈ ಮೂಲಕ ಚಿತ್ರದ ಕಂಟೆಂಟ್ ಏನು ಅನ್ನೋದನ್ನೂ ಚಿಕ್ಕದಾಗಿಯೇ ರಿವೀಲ್ ಮಾಡಿದ್ದಾರೆ. ಇದು ಅಪ್ಪ ಮಗನ ಬಾಂಧವ್ಯದ ಕಥೆಯಾಗಿದ್ದು ನಿರೂಪ್ ಹೊಸ ಲುಕ್‌ನಲ್ಲಿ ಪ್ರೇಕ್ಷಕರ ಮುಂದೆ ಪ್ರತ್ಯಕ್ಷವಾಗಲಿದ್ದಾರೆ.

ಇದರ ಜತೆಗೆ ನಿರೂಪ್ ಭಂಡಾರಿ ಹಲವು ಸಿನಿಮಾಗಳಲ್ಲಿ ಅಭಿನಯಿಸುತ್ತಿದ್ದಾರೆ. ಅದರಲ್ಲಿ ಅತಿಕಾಯ ಸಿನಿಮಾವೂ ಒಂದು. ಅತಿಕಾಯ ಶೀರ್ಷಿಕೆಯಲ್ಲಿಯೇ ಕ್ಯೂರಿಯಾಸಿಟಿ ಮೂಡಿಸಿದೆ. ಈ ಚಿತ್ರದ ಟೀಸರ್ ಕೂಡ ರಿಲೀಸ್ ಆಗಿದ್ದು, ಆ ಮೂಲಕ ಚಿತ್ರತಂಡ ನಿರೂಪ್‌ಗೆ ಹುಟ್ಟುಹಬ್ಬದ ಶುಭಾಶಯ ಕೋರಿದೆ. ನಾಗರಾಜ್ ಪೀಣ್ಯ ಈ ಚಿತ್ರವನ್ನ ನಿರ್ದೇಶನ ಮಾಡುತ್ತಿದ್ದಾರೆ. ಅತಿಕಾಯ ಆ್ಯಕ್ಷನ್ ಸಿನಿಮಾವಾಗಿದ್ದು ನಿರೂಪ್ ಮಾಸ್ ಅಂಡ್ ಕ್ಲಾಸ್ ಆಗಿ ಅಬ್ಬರಿಸಲಿದ್ದಾರೆ. ಅತಿಕಾಯ ಚಿತ್ರದ ಶೂಟಿಂಗ್ ಭರದಿಂದ ಸಾಗಿದೆ. ಇದರ ಜತೆಗೆ ಮತ್ತಷ್ಟು ಸಿನಿಮಾಗಳಲ್ಲಿಯೂ ನಿರೂಪ್ ನಟಿಸಲಿದ್ದಾರೆ. ಸದ್ಯ ಅನೂಪ್ ಭಂಡಾರಿ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಬಿಲ್ಲ ರಂಗ ಭಾಷ ಚಿತ್ರದಲ್ಲಿಯೂ ನಿರೂಪ್ ವಿಶೇಷ ಪಾತ್ರದಲ್ಲಿ ಅಭಿನಯಿಸಲಿದ್ದಾರೆ.

ಈ ಹಿಂದೆ ರಾಜಮೌಳಿ ನಿರ್ದೇಶನದ ಆರ್‌ಆರ್‌ಆರ್ ತೆರೆಗೆ ಬಂದು ಭರ್ಜರಿ ಯಶಸ್ಸು ಗಳಿಸಿತ್ತು. ಈಗ ಕನ್ನಡದಲ್ಲಿಯೂ ಆರ್‌ಆರ್‌ಆರ್ ಸೆಟ್ಟೇರುವ ನಿರೀಕ್ಷೆ ಇದೆ. ಹಾಗಂತ ಇದು ಜಕ್ಕಣ್ಣನ ಸಿನಿಮಾ ಅಲ್ಲ, ಬದಲಾಗಿ ಇದು ಅಪ್ಪಟ ಕನ್ನಡದ, ಈ ನಾಡಿನ ಮಣ್ಣಿನ ಕಥೆಯ ಸಿನಿಮಾ. ಹೌದು, ಆರ್‌ಆರ್‌ಆರ್ ಅಂದ್ರೆ ರಾಜ್ .ಬಿ.ಶೆಟ್ಟಿ, ರಿಷಬ್ ಶೆಟ್ಟಿ, ರಕ್ಷಿತ್ ಶೆಟ್ಟಿ. ಈ ಮೂವರು ಕರಾವಳಿ ತೀರದಿಂದ ಬಂದವರು. ಕನ್ನಡದಲ್ಲಿ ಸೂಪರ್ ಹಿಟ್ ಸಿನಿಮಾಗಳನ್ನು ನೀಡುವ ಮೂಲಕ ತಮ್ಮದೇ ಆದ ಛಾಪನ್ನು ಮೂಡಿಸಿದವರು. ರಾಜ್ ಶೆಟ್ಟಿ ಗರುಡ ಗಮನ ವೃಷಭ ವಾಹನದಂತಹ ಹಿಟ್ ಸಿನಿಮಾವನ್ನು ನೀಡಿದರೆ, ರಿಷಬ್, ಕಿರಿಕ್ ಪಾರ್ಟಿ, ಚಾರ್ಲಿ 777 ನಂತಹ ಅದ್ಭುತ ಚಿತ್ರಗಳನ್ನು ನಿರ್ಮಿಸಿ ಮನಗೆದ್ದವರು. ಅಂತೆಯೇ ರಿಷಬ್ ಇಡೀ ಭಾರತೀಯ ಚಿತ್ರರಂಗವೇ ಮೆಚ್ಚಿಕೊಂಡಾಡಿದ ಕಾಂತಾರದಂತಹ ದಂತಕಥೆನ್ನು ಚಂದನವನಕ್ಕೆ ಕೊಡುಗೆಯಾಗಿ ನೀಡಿದವರು. ಹೀಗಿರುವಾಗ ಈಗ ಮೂವರು ಒಂದೇ ಸಿನಿಮಾದಲ್ಲಿ ಯಾವಾಗ ನಟಿಸುತ್ತಾರೆ ಎಂಬ ಕಾತರ ಎಲ್ಲರಲ್ಲಿಯೂ ಇದೆ. ಅದು ಶೀಘ್ರವೇ ಈಡೇರುವ ನಿರೀಕ್ಷೆಯೂ ಇದೆ.

ಈ ಹಿಂದೆಯೇ ರಕ್ಷಿತ್ ಶೆಟ್ಟಿ ಒಂದು ಕಥೆ ಹೆಣೆದಿದ್ದರು. ಮಿಡ್ ವೇ ಟು ಮೋಕ್ಷ ಶೀರ್ಷಿಕೆಯಲ್ಲಿ ಸಿನಿಮಾವನ್ನು ತೆರೆಗೆ

ಚಂದನವನದಲ್ಲಿ ಆರ್‌ಆರ್‌ಆರ್

ತರಲು ತಯಾರಿ ನಡೆಸಿದ್ದರು. ಇದರಲ್ಲಿ ಮೂರು ಪಾತ್ರಗಳಿದ್ದವು. ರಕ್ಷಿತ್, ರಿಷಬ್, ಹಾಗೂ ರಾಜ್.ಬಿ.ಶೆಟ್ಟಿ ಈ ಪಾತ್ರಗಳನ್ನು ನಿರ್ವಹಿಸಲಿದ್ದರು. ಆ ಸಮಯಕ್ಕೆ ಕೋವಿಡ್ ವಕ್ಕರಿಸಿತು. ಹಾಗಾಗಿ ಈ ಸಿನಿಮಾ ಸೆಟ್ಟೇರಲೇ ಇಲ್ಲ, ಆ ನಡುವೆ ಮೂವರು ಬೇರೆ ಬೇರೆ ಸಿನಿಮಾಗಳಲ್ಲಿ ಬ್ಯುಸಿಯಾದರು. ಹಾಗಾಗಿ ಸಿನಿಮಾ ಅಲ್ಲಿಯೇ ನಿಂತಿತು. ಈಗ ಮತ್ತೆ ಮಿಡ್ ವೇ ಟು ಮೋಕ್ಷ ಸಿನಿಮಾಗೆ ಮರುಜೀವ ಸಿಗುವ ನಿರೀಕ್ಷೆ ಇದೆ. ಆದರೆ ಅದೂ ಇನ್ನೂ ತಡವಾಗಲಿದೆ. ಯಾಕೆಂದರೆ ರಾಜ್, ರಕ್ಷಿತ್, ರಿಷಬ್ ಈ ಮೂವರು ಬೇರೆ ಬೇರೆ ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ.

ರಿಷಬ್ ಶೆಟ್ಟಿ ಪ್ಯಾನ್ ಇಂಡಿಯಾ ಸ್ಟಾರ್ ಆಗಿದ್ದು, ಕಾಂತಾರ ಚಾಪ್ಟರ್ 1 ಚಿತ್ರದ ಬಿಡುಗಡೆಯಲ್ಲಿ ಬ್ಯುಸಿಯಾಗಿದ್ದಾರೆ. ಅದರ ಜತೆಗೆ ಪರಭಾಷೆಯ ಸಿನಿಮಾಗಳಲ್ಲಿ ನಟಿಸಲು ಸಿದ್ಧತೆ ನಡೆಸಿದ್ದಾರೆ. ಇತ್ತ ರಕ್ಷಿತ್ ಶೆಟ್ಟಿ, ತಮ್ಮ ಬಹುನಿರೀಕ್ಷಿತ ರಿಚರ್ಡ್ ಆಂಟನಿ ಸಿನಿಮಾದ ಕೆಲಸದಲ್ಲಿಯೇ ನಿರತರಾಗಿದ್ದಾರೆ. ಅದಕ್ಕಾಗಿ ಉಡುಪಿಯಲ್ಲಿಯೇ ಬೀಡು ಬಿಟ್ಟಿದ್ದಾರೆ. ಸಿನಿಮಾದ ಕೆಲಸವೂ ಇಲ್ಲಿಯೇ ನಡೆಯುತ್ತಿದ್ದು, ಇನ್ನೇನು ಶೂಟಿಂಗ್ ಕೂಡ ಆರಂಭವಾಗಲಿದೆ. ಸು ಫ್ರಮ್ ಸೋ ಸಿನಿಮಾದ ಮೂಲಕ ದೇಶ, ವಿದೇಶಗಳಲ್ಲಿಯೂ ಸದ್ದು ಮಾಡುತ್ತಿರುವ ರಾಜ್ ಶೆಟ್ಟಿ ಮತ್ತೊಂದು ಸಿನಿಮಾದ ನಿರ್ದೇಶನಕ್ಕೆ ಸಿದ್ಧವಾಗಿದ್ದಾರೆ. ಈ ಎಲ್ಲಾ ಸಿನಿಮಾಗಳು ಮುಗಿದ ಬಳಿಕ ಈ ಮೂವರು ಒಂದಾಗಲಿದ್ದಾರೆ. ಅದಕ್ಕಾಗಿ ಇನ್ನೂ ಒಂದಷ್ಟು ವರ್ಷ ಕಾಯಲೇಬೇಕಾಗಿದೆ.

ಕಟಕದ ಭಾವನಾತ್ಮಕ ಗಾನ

ರವಿ ಬಸ್ರೂರು ನಿರ್ದೇಶಿಸಿದ ಕಟಕ, ಎಂಟು ವರ್ಷಗಳ ಹಿಂದೆಯೇ ತೆರೆ ಕಂಡಿತ್ತು, ಪ್ರೇಕ್ಷಕರ ಮೆಚ್ಚುಗೆ ಪಡೆದುಕೊಂಡಿತ್ತು. ಇದೀಗ ಮತ್ತೆ ಕಟಕ ಸಿನಿಮಾದ ಮುಂದುವರಿದ ಭಾಗ ರಿಲೀಸ್‌ಗೆ ಸಜ್ಜಾಗಿದೆ. ಸದ್ಯ ಕಟಕ 2 ಸಿನಿಮಾದ ಹಾಡು ರಿಲೀಸ್ ಆಗಿದ್ದು, ಸಂಗೀತ ಪ್ರಿಯರ ಮನಗೆದ್ದಿದೆ. ಇದು ತಂದೆ ಮಗಳ ನಡುವಿನ ಎಮೋಷನಲ್ ಸಾಂಗ್ ಆಗಿದ್ದು, ರವಿ ಬಸ್ರೂರು ಅವರೇ ಸಂಗೀತ ಸಂಯೋಜಸಿದ್ದು, ಅಯಿರಾ ಉಡುಪಿ ದನಿಯಾಗಿದ್ದಾರೆ. ಹಾಡು ಕೇಳಲು ಮಧುರವಾಗಿದೆ. ಕಟಕ ಹಾರರ್ ಸ್ಟೋರಿಯ ಸಿನಿಮಾವಾಗಿದ್ದು, ಕರಾವಳಿ ಭಾಗದಲ್ಲಿ ನಡೆದ ನೈಜ ಘಟನೆಯನ್ನು ಆಧರಿಸಿ ಕಥೆಯನ್ನು ಹೆಣೆಯಲಾಗಿದೆ. ಕಟಕ ಮೊದಲ ಭಾಗದಲ್ಲಿ ತಂದೆ ಮಗಳನ್ನ ಹೇಗೆ ಉಳಿಸಿಕೊಳ್ಳುತ್ತಾನೆ, ಮಗಳಿಗಾಗಿ ಎಷ್ಟೆಲ್ಲ ಕಷ್ಟ ಪಡುತ್ತಾರೆ ಎಂಬುದನ್ನ ತೋರಿಸಲಾಗಿತ್ತು.

ಕಟಕ 2 ಸಿನಿಮಾದಲ್ಲಿ ಹೋಗಿದ್ದ ಆತ್ಮ ಮತ್ತೆ ಬಾಲಕಿ ಮೇಲೆ ಬರೋದು ಯಾಕೆ, ಅನ್ನೋದನ್ನು ಥ್ರಿಲ್ಲಿಂಗ್ ಆಗಿ ಕಟ್ಟಿಕೊಡಲಾಗಿದೆ. ವಿಶೇಷ ಎಂದರೆ ಕಟಕ ಸಿನಿಮಾ 2017ರಲ್ಲಿ ತೆರೆಕಂಡಿದ್ದು, ಇಂಗ್ಲಿಷ್ ಭಾಷೆಗೆ ಡಬ್ ಆದ ಮೊದಲ ಸಿನಿಮಾ ವಾಗಿದೆ. ಹದಿನೈದು ಭಾಷೆಗಳಲ್ಲಿ ಕಟಕ ಸಿನಿಮಾ ತೆರೆಕಂಡು ಯಶಸ್ವಿಯಾಗಿತ್ತು. ಹಾಗಾಗಿ ಕಟಕ 2 ಬಗ್ಗೆಯೂ ಸಹಜವಾಗಿ ನಿರೀಕ್ಷೆ ಹೆಚ್ಚಾಗಿದೆ. ಅಶೋಕ್ ರಾಜ್, ಸ್ಪಂದನಾ ಪ್ರಸಾದ್, ಉಗ್ರ ಮಂಜು, ಸೇರಿದಂತೆ ಹಲವರು ಚಿತ್ರದಲ್ಲಿ ನಟಿಸಿದ್ದಾರೆ.